1959

M. K. Srinivasa Rao

॥ ಶ್ರೀ ಶೈಲ ಮಲ್ಲಿಕಾರ್ಜುನ ಪ್ರಸನ್ನ ॥ Sundar Cafe Boarding House.

ಭಯಂಕರ ಭೂತ

ಭೀಕರ ಸಾಹಸ ಪತ್ತೇದಾರಿ ಕಾದಂಬರಿ.

ಪುರುಷೋತ್ತಮನ ತೊಂಬತ್ತನೆಯ ಸಾಹಸ.

ಎ೯. ನರಸಿಂಹಯ್ಯ

ಗೀತಾ ಪಬ್ಲಿಕೇಷನ್ಸ್
ಬೆಂಗಳೂರು-2.

ಪ್ರಥಮ ಮುದ್ರಣ ೧೯೫೯ ಮೇ.

ಬೆಲೆ: ಇನ್ನೂರು ನಯೇ ಪೈಸೆ.

ಅಧಿಕೃತ ಮಾರಾಟಗಾರರು:
ಗೀತಾ ಏಜನ್ಸೀಸ್,
ಸೌರಾಷ್ಟ್ರಪೇಟೆ, ಬೆಂಗಳೂರು-೨.

ಮುಖಚಿತ್ರ ಶಿಲ್ಪಿ:
ಜಿ. ಕೆ. ಮೂರ್ತಿ,
ಧಾರವಾಡ.

ಮುಖಚಿತ್ರ ಮುದ್ರಣ:
ಶ್ರೀ ರಾಮಕೃಷ್ಣ ಪ್ರೆಸ್,
ಬೆಂಗಳೂರು-೨.

ಮುದ್ರಕರು:
ಶ್ರೀ ಕಾವೇರಿ ಪ್ರೆಸ್,
ಬೆಂಗಳೂರು-೨.

ಮು ನ್ನು ಡಿ

—

ಕನ್ನಡ ಪತ್ತೇದಾರಿ ಸಾಹಿತ್ಯದಲ್ಲಿ ಅತ್ಯಂತ ಹೆಚ್ಚಿನ ಕಾದಂಬರಿಗಳನ್ನು ಬರೆದು ಪ್ರಸಿದ್ಧರಾಗಿರುವ ಶ್ರೀವರ್ಮಾ ಎಲ್. ನರಸಿಂಹಯ್ಯನವರು ತಮ್ಮ ಈ ಕಾದಂಬರಿ ಭಯಂಕರ ಭೂತಕ್ಕೆ ಮುನ್ನುಡಿಯನ್ನು ಅಪೇಕ್ಷಿಸಿದರು. ಹಸ್ತ ಪ್ರತಿಯನ್ನು ಓದಿ ಮುನ್ನುಡಿಯನ್ನು ಬರೆಯಬೇಕಾದ ಕಷ್ಟವನ್ನು ತಪ್ಪಿಸಿ ಕೊಳ್ಳಲು ನಾನು ಇವರಿಗೆ, 'ನರಸಿಂಹಯ್ಯನವರೇ, ಯಾರಾದರೂ ಪ್ರಖ್ಯಾತ ಸಾಹಿತಿಗಳಿಂದ ಅಥವಾ ಹಿರಿಯರಿಂದ ಮುನ್ನುಡಿ ಬರೆಯಿಸಿ. ಆಗ ಕಾದಂಬರಿಗೂ ಬೆಲೆ; ನಿಮಗೂ ಗೌರವ' ಎಂದು ಹೇಳಿದೆ. ಅದಕ್ಕೆ ಅವರು, 'ಸಾಹಿತಿಗಳೆಂದರೆ ಬರಿಯ ಕತೆ, ಕಾದಂಬರಿಗಳನ್ನು ಬರೆಯುವವರು ಮಾತ್ರವೇ ಅಲ್ಲ, ಸಾಹಿತ್ಯವನ್ನು ಮುತುವರ್ಜಿಯಿಂದ ಓದುವವರೂ ಸಾಹಿತಿಗಳೇ. ನೀವು ಕನ್ನಡದಲ್ಲಿ ಅಚ್ಚಾಗಿರುವ ಅನೇಕ ಕಾದಂಬರಿಗಳನ್ನು ಓದಿರುವಿರಿ. ಆಮೇಲೆ ಹಿರಿಯರ ಸಮಾಚಾರ, ನಿಮ್ಮ ಮನಸ್ಸೂ, ಹೃದಯ ಹಿರಿದಾದು ದೆಂದೇ ನನ್ನ ಭಾವನೆ. ಆದ್ದರಿಂದ ನೀವು ಮುನ್ನುಡಿಯನ್ನು ಬರೆಯಲೇ ಬೇಕು' ಎಂದು ಆದರಪೂರ್ವಕವಾಗಿ ಒತ್ತಾಯ ಪಡಿಸಿದ್ದರಿಂದ ಅವರಲ್ಲಿ ಮತ್ತೆ ಹೆಚ್ಚಿನ ವಾದವಿವಾದಕ್ಕೆ ಹೋಗದೆ ಈ ಮುನ್ನುಡಿಯನ್ನು ಬರೆಯ ಬೇಕಾಯಿತು.

ನನ್ನದು ವಕೀಲವೃತ್ತಿ. ವಕೀಲರಿಗೂ ಸಾಹಿತ್ಯಕ್ಕೂ ಅಷ್ಟಾಗಿ ಹೊಂದಾಣಿಕೆಯಿರುವುದಿಲ್ಲ. ಆದರೂ ಕನ್ನಡದಲ್ಲಿ ಪ್ರಕಟವಾಗುವ ಎಲ್ಲವಲ್ಲ ದಿದ್ದರೂ, ಅನೇಕ ಕಥೆ, ಕಾದಂಬರಿಗಳನ್ನು ಹೇಗಾದರೂ ಬಿಡುವು ಮಾಡಿ

ಕೊಂಡು ಓದುತ್ತೇನೆ. ನನಗೆ ತಿಳಿದಮಟ್ಟಿಗೆ ಕನ್ನಡ ಸಾಹಿತ್ಯದಲ್ಲಿ ಪತ್ತೇದಾರಿ ಕಾದಂಬರಿಗಳು ಮೊದಲು ಬಹಳ ವಿರಳವಾಗಿದ್ದುವು. ಆದರೇ! ಈಚಿನ ಕೆಲವು ವರ್ಷಗಳಲ್ಲಿ ಕನ್ನಡದ ಅಗ್ಗದ ಕೈಹೊತ್ತಿಗೆಗಳು ಪ್ರಾರಂಭವಾದಮೇಲೆ ಶ್ರೀಮಾನ್ ಎನ್. ನರಸಿಂಹಯ್ಯನವರು ಮತ್ತು ಶ್ರೀಯುತ ಎಂ. ರಾಮಮೂರ್ತಿ ಯವರು ಮತ್ತಿತರರು ಪತ್ತೇದಾರಿ ಕಾದಂಬರಿಗಳನ್ನು ಹೇರಳವಾಗಿ ರಚಿಸಿರು ವರು. ಅದರಲ್ಲೂ ಶ್ರೀಮಾನ್ ಎನ್. ನರಸಿಂಹಯ್ಯನವರ ಕಾದಂಬರಿಗಳು ಇತರರಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ಮುದ್ರಣಗೊಂಡಿವೆ.

ಶ್ರೀಯುತರ ಭಾಷಾಶೈಲಿಯು ಸರಳವಾಗಿದ್ದು ಸಾಮಾನ್ಯ ಓದುಗರಿಗೂ ಸುಲಭವಾಗಿ ಅರ್ಥವಾಗುವಂತಿದೆ. ಇವರ ಕಾದಂಬರಿಗಳು ಅನೇಕ ಬುದ್ಧಿ ವಂತರಿಗೂ ಹಿಡಿಸಿವೆ ಆದರೇ! ತಾವೇ ಅತಿ ಬುದ್ಧಿವಂತರೆಂದು ತಿಳಿದು ಕೊಂಡಿರುವವರು ಕೆಲವರು ಶ್ರೀಯುತರ ಕಾದಂಬರಿಗಳನ್ನು ತೆಗಳುವುದನ್ನು ಕೇಳಿದ್ದೇನೆ. ಅಂತಹವರಿಗೆ ನಾನು ಹೇಳುವುದೇನೆಂದರೆ, ಕಥೆ, ಕಾದಂಬರಿ, ಸಾಹಿತ್ಯವನ್ನು ರಚಿಸುವುದಕ್ಕಿಂತಲೂ, ಪತ್ತೇದಾರಿ ಸಾಹಿತ್ಯವನ್ನು ರಚಿಸು ವುದು ಹೆಚ್ಚಿನ ಶ್ರಮದಾಯಕವೆಂದು. ಪತ್ತೇದಾರಿ ಸಾಹಿತ್ಯ ರಚಿಸಬೇಕಾದರೆ ಮೆದುಳಿಗೆ ಹೆಚ್ಚಿನ ಕಸರತ್ತನ್ನು ಕೊಡಬೇಕು. ಅಪರಾಧಿಯು ಅನೇಕ ರೀತಿ ಚಮತ್ಕಾರಗಳಿಂದ ಅಕೃತ್ಯಗಳನ್ನು ಮಾಡುತ್ತಾರೆ. ಅದನ್ನು ಪತ್ತೇದಾರರು ಯಾವ ರೀತಿ ಅನೇಕ ತರಹ ಯೋಚನೆ ಕಾರ್ಯಕ್ರಮಗಳಿಂದ ಅಕೃತ್ಯಗಳನ್ನು ಪತ್ತೇ ಮಾಡುತ್ತಾರೆ? ಹೇಗೆ ಅಪರಾಧಿಗಳನ್ನು ಕಂಡುಹಿಡಿಯುತ್ತಾರೆ? ಇವೆಲ್ಲವನ್ನೂ ಯೋಚಿಸಿ ಪತ್ತೇದಾರಿ ಸಾಹಿತ್ಯವನ್ನು ರಚಿಸುವುದು, ಆ ರೀತಿ ರಚಿಸಿದವರನ್ನು ತೆಗಳುವಷ್ಟೇ ಸುಲಭವಲ್ಲವೆಂದು ನನ್ನ ಭಾವನೆ.

ಯಾವುದಾದರೂ ಬೇರೆ ಭಾಷೆಯ ಶ್ರೇಷ್ಠ ಪತ್ತೇದಾರಿ ಕಾದಂಬರಿ ಗಳನ್ನು ಓದಿ ಅದರ ಸಾರಾಂಶದಿಂದ ಅಲ್ಲಿನ ಸಂಯೋಜನೆ, ತಂತ್ರವನ್ನು ಎರವಲಾಗಿ ಪಡೆದು ಕನ್ನಡದಲ್ಲಿ ಅದೇ ರೀತಿ ಕಾದಂಬರಿಗಳನ್ನು ಬರೆದು, ತಾವು ಶ್ರೇಷ್ಠ ಪತ್ತೇದಾರಿ ಕಾದಂಬರಿಕಾರರೆಂದು ತಿಳಿದುಕೊಂಡು, ಅವರ ಹಿಂಬಾಲಕರಿಂದ ಹೊಗಳಿಸಿಕೊಳ್ಳುವಂತವರ ಗುಂಪಿಗೆ ಶ್ರೀಯುತರು ಸೇರಿಲ್ಲ ವೆಂದರೆ ಅತಿಶಯೋಕ್ತಿಯಾಗದು. ಶ್ರೀಯುತರದು ಸರಳ, ಸ್ವತಂತ್ರ ಮಾರ್ಗ

ವಾದರೂ ತಮ್ಮ ಕಾದಂಬರಿಗಳಲ್ಲಿ ಓದುಗರ ಕುತೂಹಲವನ್ನು ಕೆರಳಿಸಿ, ಅವರು ವಿಚಾರಪರರಾಗುವಂತೆ ಬರೆಯತಕ್ಕವರು. ಶ್ರೀಯುತರ ಬಹು ಕಾದಂಬರಿಗಳ ಪ್ರಕಟಣೆ, ಮತ್ತು ಅವುಗಳಿಗೆ ಓದುಗರಿಂದ ದೊರೆಯುತ್ತಿರುವ ಪ್ರೋತ್ಸಾಹವೇ ಇದಕ್ಕೆ ನಿದರ್ಶನವಾಗಿದೆ. ಇವರ ಹಲವು ಕಾದಂಬರಿಗಳು ಪ್ರಥಮಬಾರಿ ಮುದ್ರಣಗೊಂಡ ಹಲವು ತಿಂಗಳಲ್ಲಿಯೇ ಪುನರ್ಮುದ್ರಣದ ಸುಯೋಗವನ್ನು ಕಂಡಿವೆ.

ಇತ್ತೀಚೆಗೆ ಪ್ರಖ್ಯಾತ ಸಾಹಿತಿಗಳೊಬ್ಬರು ಪತ್ತೇದಾರಿ ಕಾದಂಬರಿಗಳ ವಿಚಾರವಾಗಿ ವಿಡಂಬನಾತ್ಮಕವಾದ ಒಂದು ಕಾದಂಬರಿಯನ್ನು ಬರೆದು, ತಾವೇ ಬರೆದುಕೊಂಡ ಅದರ ಮುನ್ನುಡಿಯಲ್ಲಿ ಪತ್ತೇದಾರಿ ಕಾದಂಬರಿ ಬರೆಯುವುದು ಅದರಲ್ಲೂ ಕನ್ನಡದಲ್ಲಿ ಅಪಮಾನ ಎಂಬುದಾಗಿ, ಬರಹಗಾರರ ಮತ್ತು ಓದುಗರ ಅಭಿಪ್ರಾಯ ಎಂದು ಬರೆದಿರುವರು. ಆದರೇ! ಓದುಗರಲ್ಲಿ ಒಬ್ಬನಾಗಿ ನಾನು ಆ ರೀತಿ ಹೇಳಲಾರೆ. ಅದೇ ರೀತಿ ಅವರು ಹಿನ್ನುಡಿಯಲ್ಲಿ ಬರೆದಿರುವಂತೆ ಪತ್ತೇದಾರಿ ಕಾದಂಬರಿಗಳು ಖರ್ಚಾಗುವುದಕ್ಕೆ ಅವುಗಳಲ್ಲಿ ಅನೇಕ ಕೊಲೆ, ಅವುಗಳ ರಕ್ಷಾಪತ್ರದ ಮೇಲೆ ಹೆಣ್ಣಿನ ಚಿತ್ರಗಳಿದ್ದರೇ ಖರ್ಚಾಗುವುದೆಂಬ ಅಭಿಪ್ರಾಯ ಅಷ್ಟು ಸಮಂಜಸವಾಗಿಲ್ಲವೆಂದು ನನ್ನ ಭಾವನೆ. ಈಚೆಗೆ ನಾನು ಅನೇಕ ಸಾಮಾಜಿಕ ಕಾದಂಬರಿಗಳನ್ನು (ಕಾಗದಂ!ಬರಿ ಎಂದರೂ ಅವುಗಳಲ್ಲಿ ಅನೇಕವುಗಳಿಗೆ ಸಲ್ಲುವುದೇನೋ!) ಬರೀ ಮುಖಚಿತ್ರದ ಆಕರ್ಷಣೆಗಳಿಂದ ಕೊಂಡು ಓದಿ ಮರುಕ ಪಟ್ಟಿದ್ದೇನೆ. ಆದುದರಿಂದ ಯಾರೊಬ್ಬರೂ ಬರೀ ಪತ್ತೇದಾರಿ ಕಾದಂಬರಿಗಳಲ್ಲಿಯೇ ಈ ಅವಲಕ್ಷಣಗಳಿವೆ ಎಂದು ಹೇಳಬಾರದು. ಅದರಲ್ಲೂ ಸಾಹಿತ್ಯದ ಒಂದು ಭಾಗದಲ್ಲಿ ಸೇವೆ ಮಾಡುತ್ತಿರುವವರು, ಬೇರೊಂದು ವಿಭಾಗದಲ್ಲಿ ತಮ್ಮೊಂದಿಗೆ ಸೇವೆ ಮಾಡುತ್ತಿರುವವರ ವಿಚಾರವಾಗಿ ಅಷ್ಟೊಂದು ತಿರಸ್ಕಾರವಾಗಿ ಬರೆಯಬಾರದಲ್ಲವೇ? ಶ್ರೀಯುತರು ಪತ್ತೇದಾರಿ ಕಾದಂಬರಿಯನ್ನು ತೆಗಳಿ ಬರೆದಿರುವ ಕಾದಂಬರಿಯಲ್ಲಿ ಪತ್ತೇದಾರಿ ಕಾದಂಬರಿಯ ಕಳಂಕವನ್ನು ಬಯಲಿಗೆಳೆಯಲು ಪ್ರಯತ್ನಪಟ್ಟಿದ್ದಾರೆ. ಆದರೇ! ಅವರ ಪತ್ತೇದಾರಿ ಕಾದಂಬರಿಯನ್ನು ಓದಿದರೆ ಅದು ಪತ್ತೇದಾರಿ ಕಾದಂಬರಿಯನ್ನು ತೆಗಳದೆ ಆ ಕಾದಂಬರಿಯಲ್ಲಿ ಹಲವು ಪೋಲೀಸ್ ಅಧಿಕಾರಿ

ಗಳೂ, ಯಾವ ರೀತಿ ಕೃತಕ ಕೇಸುಗಳನ್ನು ಸೃಷ್ಟಿಸಿ, ಕೃತಕ ತನಿಖೆ ಮಾರ್ಗ ಗಳಿಂದ (CONCOCTED INVESPIDAKION) ನಿರಪರಾಧಿಗಳನ್ನು ಅಪರಾಧಿಗಳನ್ನಾಗಿ ಮಾಡುತ್ತಾರೆಂದು ಮಾತ್ರ ತೋರಿಸುತ್ತದೆ. ಆ ರ ಆ ಕಾದಂಬರಿಯಿಂದ ಪತ್ತೇದಾರಿ ಕಾದಂಬರಿಗಳಿಗೆ ಅವಮಾನವಾಗದೆ, ಪೋಲೀಸ್ ಇಲಾಖೆಗೇ ಅಗೌರವವಾಗಿದೆಯೆಂದು ನನ್ನ ಅಭಿಪ್ರಾಯ. ಗಾಜಿನ ಮನೆಯಲ್ಲಿರುವವರು ಹೆಂಚಿನ ಮನೆಯಲ್ಲಿರುವವರಿಗೇಕೆ ಕಲ್ಲೆಸೆಯಬೇಕು? ಹೋಗಲಿ ಬಿಡಿ, ಈ ವಿಚಾರ ಓದುಗರಾದ ನಮಗೇನು ಸಂಬಂಧ? ಎಂದು ಯಾರಾದರೂ ಅನ್ನಬಹುದು? ಆದರೇ! ಸಾಹಿತ್ಯ ಸೃಷ್ಟಿಸುವುದು ಬರೀ ಅವರ ಆತ್ಮಸಂತೋಷಕ್ಕಲ್ಲ, ನಮ್ಮಂತಹ ಓದುಗರಿಗಾಗಿ. ಅದರ ಬೆಲೆಯನ್ನು ಕಟ್ಟುವವರು ನಾವು. ಸಾಹಿತಿಗಳು ಸೋದರ ಸಾಹಿತ್ಯದ ವಿಚಾರ, ಅದನ್ನು ಬರೆಯುವವರ ವಿಚಾರ, ಅಷ್ಟು ಲಘುವಾಗಿ ಬರೆಯಬಾರದಲ್ಲವೇ?

ಪ್ರಸ್ತುತ ಕಾದಂಬರಿ 'ಭಯಂಕರ ಭೂತ' ಶ್ರೀಯುತ ಎನ್. ನರ ಸಿಂಹಯ್ಯನವರ ಹಿಂದಿನ ಕಾದಂಬರಿಗಳಿಗಿಂತ ಎಲ್ಲಾ ವಿಧದಲ್ಲಿಯೂ ಪರಿಣಾಮಕಾರಿಯಾಗಿದೆ. ರಾಜಗೋಪಾಲ, ಡಾಕ್ಟರ್ ರಾಘವಾಚಾರ್ಯ, ರಂಗಯ್ಯಶೆಟ್ಟಿ, ಮತ್ತು ಕೇಶವ ಇವರನ್ನೆಲ್ಲಾ ಕೊಲೆ ಮಾಡಿದವರಾರೆಂದು ಓದುಗರಿಗೆ ಅಂತ್ಯದವರೆವಿಗೆ ತಿಳಿಯುವುದೇ ಇಲ್ಲ. ಅಂತ್ಯದಲ್ಲಿ ಕೌತುಕ ಕೆರಳಿಸುವಂತೆ ಪುರುಷೋತ್ತಮನ ಕೌಶಲ್ಯವನ್ನು ತೋರಿಸಿ, ಅಪರಾಧಿಯನ್ನು ಕಂಡುಹಿಡಿದಿರುವರು. ಈ ಕಾದಂಬರಿಯಲ್ಲಿನ ಸೌಧಾಮಿನಿ, ಸರಸಳಿಗೆ ಒದಗಿದ ದುರಂತಗಳಿಗಾಗಿ ನಮಗೆ ಮರುಕ ಬರುವುದು. ಲೇಖಕರು ಈ ಕಾದಂಬರಿಯಲ್ಲಿ ರಾಜಗೋಪಾಲನ ಮೂಲಕ ಇಂಗ್ಲೇಂಡ್ ದೇಶದ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಅಲ್ಲಿನ ಲೈಬ್ರರಿಗಳು, ಮ್ಯೂಸಿಯಂಗಳ ಮತ್ತು ಜನಜೀವನದ ವಿವರಣೆಗಳಿವೆ. ನಮ್ಮ ದೇಶದ ಈ ಸಂಸ್ಥೆಗಳಿಗೂ, ಅಲ್ಲಿನವು ಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಅಲ್ಲಿನ ಎಗ್ಜಿಬಿಷನ್‌ಗಳು ಜನಜೀವನ ಉತ್ತಮವಾಗಲು ಸಹಕಾರಿಯಾದರೆ ನಮ್ಮ ದೇಶಗಳ ಎಗ್ಜಿಬಿಷನ್‌ಗಳು ಅವು ಗಳನ್ನು ನಡೆಯಿಸುವವರ ಅನುಕೂಲಕ್ಕಾಗಿಯೇ ಇವೆಯೆಂದು ಹೇಳಬಹುದು. ನನ್ನ ಸ್ನೇಹಿತರೊಬ್ಬರು ನಮ್ಮ ದೇಶದ ಎಗ್ಜಿಬಿಷನ್‌ಗಳನ್ನು ನಲ್ಲನಲ್ಲೆಯರ ಕೂಟ,

ಭೇಟಿಯ ಸ್ಥಳ, ಆ ಕೂಟ, ಭೇಟಿಗಳನ್ನು ನೋಡುವವರ ವಿಹಾರ ಸ್ಥಳಗಳೆಂದು ಹೇಳಿದ್ದು ಅತಿಶಯೋಕ್ತಿಯಾದರೂ ಆಶ್ಚರ್ಯವೇನಲ್ಲ.

ಈ ಕಾದಂಬರಿಯಲ್ಲಿ 'ಸ್ಕಾಟ್‌ಲೆಂಡ್‌ಯಾರ್ಡ್' ಪೋಲೀಸ್ ತನಿಖಾ ಕ್ರಮವನ್ನು ವಿವರಿಸಿರುವರು. ಅಲ್ಲಿ ಯಾವುದಾದರೂ, ಅಕೃತ್ಯ, ಕೊಲೆ ನಡೆದರೆ, ಆ ಕೃತ್ಯ ನಡೆದ ಹಲವಾರು ನಿಮಿಷಗಳಲ್ಲಿಯೇ ತನಿಖಾಧಿಕಾರಿಗಳು ಬಂದು ಕ್ರಮ ಜರುಗಿಸುವರೆಂದು ಕೇಳುತ್ತೇನೆ. ಆದರೇ! ನಮ್ಮ ದೇಶದಲ್ಲಿ ಅಕೃತ್ಯಗಳು ಜರುಗಿದರೆ ಅದನ್ನು ಪೋಲೀಸಿನವರಿಗೆ ತಿಳಿಸುವುದೇ ಪ್ರಯಾಸಕರವಾಗಿರುತ್ತದೆ. ಆ ಮೇಲಿನ ಅವರ ತನಿಖಾಕ್ರಮಗಳಲ್ಲಿಯಂತೂ, ಅನೇಕ ನ್ಯೂನತೆಗಳಿದ್ದು ಅಪರಾಧಿಯಾದವನು ಕಾನೂನು ದಂಡನೆಯಿಂದ ತಪ್ಪಿಸಿಕೊಳ್ಳಲು ಅನೇಕ ಅವಕಾಶಗಳುಂಟಾಗುತ್ತವೆ. ನಮ್ಮ ದೇಶದ ಪೋಲೀಸಿನ ದಕ್ಷತೆ ವಿಚಾರವಾಗಿ ಒಂದು ದಂತ ಕಥೆ ಇದೆ.

ಹಿಂದೆ ಒಬ್ಬರ ಮನೆಯಲ್ಲಿ ಕಳ್ಳತನವಾಯಿತಂತೆ. ಅವರು ಪೋಲೀಸಿಗೆ ದೂರು ಕೊಡಲು ಠಾಣೆಗೆ ಹೋದರಂತೆ. ಪೋಲೀಸ್‌ಠಾಣೆಯ ಆಫೀಸರಿಗೆ ಕಳ್ಳತನದ ವಿಚಾರ ಹೇಳಿದರಂತೆ. ಅವರು ಇವರ ಹೆಸರು, ವಿಳಾಸ, ಕಳೆದು ಹೋದ ಮಾಲಿನ ವಿಚಾರ, ಕಿಮ್ಮತ್ತು ಇತ್ಯಾದಿಗಳನ್ನು ವಿಚಾರಿಸಿ ಬರೆದು ಕೊಂಡು, ಹಾಗೇ ಕಳ್ಳತನ ಮಾಡಿದವರ ಹೆಸರು ವಿಳಾಸಗಳನ್ನೂ ಕೇಳಿದರಂತೆ. ಅದಕ್ಕೆ ದೂರು ಕೊಟ್ಟವರು ಕಕ್ಕಾಬಿಕ್ಕಿಯಾಗಿ ಏನು ಉತ್ತರ ಕೊಡುವುದೆಂದು ಯೋಚಿಸುತ್ತಿರುವಂತೆಯೇ ಆ ಅಧಿಕಾರಿಗಳು 'ಏನ್ರೀ! ಕಳ್ಳತನ ಮಾಡಿದವರ ಹೆಸರು, ವಿಳಾಸ ಕೊಡದೆ ಹೋದ್ರೆ ಹೇಗ್ರಿ ಪತ್ತೇಮಾಡೋದು?' ಎಂದು ಕೇಳಿದರಂತೆ. ಆಗ ಇವರು ಚಿಪ್ಪಾಗಿ 'ಆಗ್ಲಿ ಸಾರ್, ಅವರ ಹೆಸರು ವಿಳಾಸ ತಿಳಿಸುತ್ತೇನೆ. ಆಮೇಲೆ ಮಾಲು ಹುಡುಕಿ ಕೊಡಿ' ಎಂದು ಹೇಳಿ ಹಿಂದಿರುಗಿದರಂತೆ. ಆ ವಿಚಾರವು ನಿಜಕ್ಕೂ ನಡೆದಿರಲಾರದು. ನಮ್ಮ ದೇಶದ ಪೋಲೀಸ್ ಇಲಾಖೆಯು ಎಲ್ಲಾ ವಿಧದಲ್ಲಿಯೂ ಮುಂದುವರಿದಿದೆ. ಸಮರ್ಥರಾದ ಪೋಲೀಸ್ ಅಧಿಕಾರಿಗಳನೇಕರಿದ್ದಾರೆ. ಆದರೆ ತನಿಖಾ ಕ್ರಮಗಳಲ್ಲಿ ಇನ್ನೂ ಹಳೆಯ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ನಮ್ಮ ಪೋಲೀಸರು 'ಸ್ಕಾಟ್ಲೆಂಡ್ ಯಾರ್ಡ್' ಪೋಲೀಸ್ ದಳದಂತೆ, ಶ್ರೀಮಾನ್

ನರಸಿಂಹಯ್ಯನವರ ಕಾದಂಬರಿಯ ಪುರುಷೋತ್ತಮನಂತೆ ಕಾರ್ಯಚಟು ವಟಿಕೆಗಳಿಂದ ತನಿಖಾಕ್ರಮವನ್ನು ನಡೆಸುವುದನ್ನು ನೋಡುವ ಸುಯೋಗವು ನಮಗೆ ಆದಷ್ಟು ಜಾಗ್ರತೆ ಲಭಿಸಲಿ.

ಶ್ರೀಯುತರು ಇನ್ನು ಮುಂದೆ ಇದಕ್ಕಿಂತಲೂ ಹೆಚ್ಚಿನ ಸಾಹಸ, ಚಮತ್ಕಾರ, ಮನರಂಜನೀಯ ಪತ್ತೇದಾರಿ ಕಾದಂಬರಿಗಳನ್ನು ರಚಿಸಿ, ಓದುಗರ ಮನ್ನಣೆಗೆ ಪಾತ್ರರಾಗಲೆಂದು ಹಾರೈಸುವೆನು.

ಮೂಗಿಗಿಂತ ಮೂಗುತಿ ಭಾರವಾಯಿತಲ್ಲವೇ ?

ಆರ್. ಸಿ. ನಾಗಯ್ಯ, B.A., B.L.,
(ವಕೀಲರು)
ಬಳೇಪೇಟೆ, ಬೆಂಗಳೂರು ನಗರ.

॥ ಶ್ರೀ ಶೈಲ ಮಲ್ಲಿಕಾರ್ಜುನ ಪ್ರಸನ್ನ ॥

ಭಯಂಕರ ಭೂತ

(ಪತ್ತೇದಾರಿ ಕಾದಂಬರಿ)

೧

ಪ್ರಖ್ಯಾತ ಪತ್ತೇದಾರ ಪುರುಷೋತ್ತಮನು ತನ್ನ ಪರಮಾಪ್ತ ಗೆಳೆಯನಾದ ರಾಮನಾಥನೊಡನೆ ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತನಾಡುತ್ತಾ ಕುಳಿತಿರಲು ಟಪಾಲಿನವನು ಆಗಮಿಸಿ ಆತನ ಹೆಸರಿಗೆ ಬಂದಿದ್ದ ಕವರನ್ನಿತ್ತು ಹಿಂದಿರುಗಿದ.

ಪುರುಷೋತ್ತಮನು ಟಪಾಲು ಮುದ್ರೆಯನ್ನು ನೋಡಲು ಕಾಂಚೀನಗರದಿಂದಲೇ ಬಂದುದಾಗಿತ್ತು.

ಕಳ್ಳ, ಕೊಲೆಗಾರ ತಪ್ಪಿದರೆ ದರೋಡೆಕೋರರಲ್ಲಾರೋ ಒಬ್ಬರು ಈ ಕವರನ್ನು ತನಗೆ ಕಳುಹಿಸಿರುವರೆಂಬುದರಲ್ಲಿ ಸಂದೇಹವಿಲ್ಲವೆಂದುಕೊಂಡನು.

ಸಧ್ಯದಲ್ಲಿಯೇ ಸೆರೆಮನೆಯ ಸುಯೋಗವನ್ನು ಹೊಂದಲಿರುವ ಅಧಮನೊಬ್ಬನು ಇತರ ಕಳ್ಳರಂತೆ ತನ್ನ ಸಾಹಸವನ್ನು ತೋರಿಸಿಕೊಳ್ಳುವ ನಿಮಿತ್ತ ತನಗೆ ಕಾಗದ ಬರೆದಿರುವನೆಂದು ಯೋಚಿಸಿ, ಏನು ವಿಷಯ ಬರೆದಿರಬಹುದೆಂದು ಓದಿ ತಿಳಿಯುವ ಕುತೂಹಲವುಳ್ಳವನಾಗಿ ಕವರನ್ನು ನಿಧಾನವಾಗಿ ಒಡಿಸಿದ.

ಒಳಗೆ ನೋಡಿದರೆ ಕಾಗದವೇನೂ ಇರಲಿಲ್ಲ. ಕಾಗದದ ಬದಲಿಗೆ ರೈಲ್ವೇ ಪಾರ್ಸೆಲ್ ರಶೀತಿಯಿತ್ತು

ಅದನ್ನು ನೋಡಿ ಪತ್ತೇದಾರರಿಬ್ಬರಿಗೂ ಆಶ್ಚರ್ಯವಾಯಿತು.

ಹಿಂದಿನ ಯಾವ ಕಳ್ಳ, ಕೊಲೆಗಾರರೂ ಅವರಿಗೆ ಈ ರೀತಿ ರೈಲ್ವೇ ರಸೀತಿಯನ್ನು ಕಳುಹಿಸಿರಲಿಲ್ಲ.

ಯಾವ ನಗರದಿಂದ ಬಂದುದೆಂದು ನೋಡಲು ಸುಲ್ತಾನನಗರದಿಂದ ಬಂದುದಾಗಿತ್ತು.

ಕಳುಹಿಸಿದವರಾರೆಂದು ನೋಡಲು ಆ ಹೆಸರು ಅರ್ಥಂಬರ್ಧ ತಿಳಿಯುತ್ತಿತ್ತಲ್ಲದೆ ಪೂರ್ತಿ ಹೆಸರನ್ನು ತಿಳಿಯಲಾಗಲಿಲ್ಲ.

ಈ ರಸೀತಿಯನ್ನು ತೆಗೆದುಕೊಂಡು ಸುಲ್ತಾನನಗರಕ್ಕೆ ಹೋಗಿ, ಪಾರ್ಸೆಲ್ ಆಫೀಸಿನಲ್ಲಿ ವಿಚಾರಿಸಿದರೆ ಕಳುಹಿಸಿದವರ ಹೆಸರು ವಿಳಾಸಗಳು ತಿಳಿಯದೆ ಇರಲಾರದೆಂದುಕೊಂಡ ಪುರುಷೋತ್ತಮನು ಸುಲ್ತಾನನಗರದಿಂದ ಪಾರ್ಸೆಲ್ಲನ್ನು ಕಳುಹಿಸಿ, ರಸೀತಿಯನ್ನು ಈ ನಗರದಿಂದ ಕಳುಹಿಸಬೇಕಾದರೆ ಆ ಪಾರ್ಸೆಲ್ಲಿನಲ್ಲಿ ಏನಾದರೂ ಅಪಾಯಕರವಾದ ವಸ್ತುವು ಇಲ್ಲದೆ ಇರುವುದಿಲ್ಲವೆಂದುಕೊಂಡನು.

ಪಾರ್ಸೆಲ್ಲಿನ ಹಣವನ್ನು ಸುಲ್ತಾನನಗರದಲ್ಲಿಯೇ ಕಟ್ಟಿರುವುದರಿಂದ, ಅದರ ಲೆಗ್ಗೇಜು ಚಾರ್ಜನ್ನು ಪುರುಷೋತ್ತಮನು ಕೊಡಬೇಕಾದ ಪ್ರಮೇಯ ವಿರಲಿಲ್ಲ.

ಆ ಲೆಗ್ಗೇಜಿನ ಚಾರ್ಜು ಮೂವತ್ತೈದು ರೂಪಾಯಿ ಎಂಭತ್ತು ನಯೇ ಪೈಸೆಯಾಗಿದೆ.

ಲೆಗ್ಗೇಜಿನ ಚಾರ್ಜು ಇಷ್ಟು ರೂಪಾಯಿಗಳಾಗಿರಬೇಕಾದರೆ ಕಳುಹಿಸಿರುವ ಪಾರ್ಸೆಲ್ಲು ದೊಡ್ಡದೇ ಆಗಿರಬಹುದೆಂದು ಭಾವಿಸಿಕೊಂಡ ಪುರುಷೋತ್ತಮನು ಅದನ್ನು ಕಳುಹಿಸಿದವನು ದೊಡ್ಡ ಕಳ್ಳನೇ ಆಗಿರುವನೆಂಬುದರಲ್ಲಿ ಸಂದೇಹ ವಿಲ್ಲವೆಂದುಕೊಂಡನು.

ಪುರುಷೋತ್ತಮನಂತೆಯೇ ಯೋಚನೆಗೊಳಗಾಗಿದ್ದ ರಾಮನಾಥನು ಹಲವು ಬಗೆಯಲ್ಲಿ ಯೋಚಿಸಿದನಾದರೂ ಬಗೆ ಹರಿಯದೆ, ಹೀಗೆಯೇ ನಡೆದಿದೆ ಯೆಂಬುದನ್ನು ನಿರ್ಧಾರ ಪಡಿಸದೆ ಆ ಬಗ್ಗೆ ಪುರುಷೋತ್ತಮನಿಗೆ ಕೇಳಿದ.

"ಈ ಪಾರ್ಸೆಲ್ಲನ್ನು ಸುಲ್ತಾನನಗರದಿಂದ ಕಳುಹಿಸಿ ರಸೀತಿಯನ್ನು ಈ ನಗರದಿಂದಲೇ ಕಳುಹಿಸಿರಬೇಕಾದರೆ, ಕಳ್ಳನು ಈ ನಗರದವನೇ ಅಥವಾ ಸುಲ್ತಾನನಗರದವನೇ? ಎಂದು ಯೋಚಿಸಬೇಕಾಗಿದೆ. ಬಹುಶಃ ಈ ನಗರದವನೇ ಆಗಿದ್ದು, ಈ ನಗರದಲ್ಲಿದ್ದರೂ ಇರಬಹುದು. ತನ್ನ ಸ್ವಸಾಮರ್ಥ್ಯವನ್ನು ನಮ್ಮಲ್ಲಿ ಪ್ರದರ್ಶಿಸಿಕೊಳ್ಳುವ ನಿಮಿತ್ತ ಈ ಒಂದು ಕಾರ್ಯಕ್ಕೆ ಕೈ ಹಾಕಿರಬಹುದು. ಈ ಮನುಷ್ಯನು ದೊಡ್ಡ ಕಳ್ಳನೆನಿಸಿಕೊಂಡಿರುವುದರಿಂದ ಸುಲ್ತಾನನಗರದ ಪಾರ್ಸೆಲ್ ಆಫೀಸಿನಲ್ಲಿ ಕಳ್ಳವಿಳಾಸವಿರುವುದರಲ್ಲಿ ಸಂದೇಹವಿಲ್ಲ. ಅಲ್ಲಿಗೆ ಹೋಗಿ ನೋಡುವುದರಿಂದ ಪ್ರಯೋಜನವೇನೂ ಆಗದೆಂದು ನನ್ನ ಅಭಿಪ್ರಾಯ. ಲಗ್ಗೇಜು ಚಾರ್ಜು ಮೂವತ್ತೈದು ರೂಪಾಯಿ ಎಂಭತ್ತು ನಯೇ ಪೈಸೆ ಆಗಿರುವುದರಿಂದ ಕಳುಹಿಸಿರುವ ಪಾರ್ಸೆಲ್ಲು ದೊಡ್ಡದಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಬಹುಶಃ ಪೆಟ್ಟಿಗೆಯಿದ್ದರೂ ಇರಬಹುದು. ಈವರೆವಿಗೆ ನಮಗೆ ಭಯಸೂಚಕ ಪತ್ರಗಳು ಬಂದಿರುವುಲ್ಲದೆ, ಈ ರೀತಿ ರೈಲ್ವೇ ರಸೀತಿಯು ಬಂದಿರಲಿಲ್ಲ. ಇದೂ ಒಂದು ವಿಚಿತ್ರ ಪ್ರಸಂಗವೇ ಸರಿ."

—ಎಂದು ಸಹಜ ಭಾವದಿಂದ ಉತ್ತರವಿತ್ತ ಪುರುಷೋತ್ತಮ.

"ಕಾಂಚೀನಗರದಿಂದ ಪಾರ್ಸೆಲ್ಲನು ಕಳುಹಿಸಿ ರೈಲ್ವೇ ರಸೀತಿಯನ್ನು ಈ ನಗರದಿಂದ ಕಳುಹಿಸುವ ಉದ್ದೇಶವೇನಿರಬಹುದು?"

"ಕವರು ಅಕಸ್ಮಾತ್ ಗೈರುವಿಲೆಯಾದರೆ ಪಾರ್ಸೆಲ್ಲು ರೈಲ್ವೇ ಆಫೀಸಿನಲ್ಲಿಯೇ ಉಳಿಯಬಹುದೆಂಬ ಅಭಿಪ್ರಾಯದಿಂದ ಈ ನಗರಕ್ಕೆ ಬಂದು ಕಳುಹಿಸಿರುವನು."

"ಹಾಗಾದ ಮಾತ್ರಕ್ಕೆ ಆತನು ಈ ನಗರದವನೇ ಎಂದು ಹೇಗೆ ಹೇಳುವೆ?"

"ನನಗೆ ಮಾತ್ರ ಹಾಗೆ ತೋರುತ್ತದೆ. ಈ ಮಾತು ನಿಜವೋ, ಸುಳ್ಳೋ? ಎಂಬುದು ಮುಂದೆ ನಿನಗೆ ತಿಳಿಯುತ್ತದೆ."

"ಸುಲ್ತಾನ್‌ನಗರದಿಂದ ಈ ಕವರನ್ನು ರಿಜಿಸ್ಟರ್ಡ್ ಮೂಲಕ ಕಳುಹಿಸಬಹುದಾಗಿತ್ತಲ್ಲ?"

"ಆ ರೀತಿ ಕಳುಹಿಸಲು ಹೆಸರು ವಿಳಾಸಗಳನ್ನೆಲ್ಲಾ ಬರೆಯಬೇಕು. ಆ ತಾಪತ್ರಯವೇಕೆಂದು ಈ ರೀತಿ ಕಳುಹಿಸಿರುವನು."

"ಇದ್ದರೂ ಇರಬಹುದು. ಆ ಪಾರ್ಸೆಲ್ಲಿನಲ್ಲಿ ಏನಿರಬಹುದೆಂದು ನಿನ್ನ ಅಭಿಪ್ರಾಯ?"

"ಇಂತಹ ವಸ್ತುವೇ ಇದೆಯೆಂದು ಹೇಳಲಾಗದೇ ಹೋದರೂ ನನಗೆ ಕಳುಹಿಸಿರುವಾಗ ಅದರಲ್ಲಿ ಅಪಾಯಕರವಾದ ವಸ್ತುವಿದೆಯೆಂದು ನನ್ನ ಭಾವನೆ."

"ಸರಿ! ಆ ಪಾರ್ಸೆಲ್ಲಿನಲ್ಲಿ ಏನು ವಸ್ತುವಿದೆಯೆಂಬುದನ್ನು ನೋಡುವ ಕುತೂಹಲವುಂಟಾಗಿದೆ. ನಡೆ ಅದನ್ನು ಬಿಡಿಸಿಕೊಂಡು ಬರೋಣ."

ಪುರುಷೋತ್ತಮನು ಪೋಲೀಸ್ ಠಾಣೆಗೆ ಫೋನ್ ಮಾಡಲು ಕೆಲ ಹೊತ್ತಿನಲ್ಲಿಯೇ ಇನ್ಸ್‌ಪೆಕ್ಟರ್ ಚಂದ್ರನಾಥನು ಹಾಜರಾದ.

ಪತ್ತೇದಾರನು ಆತನೊಡನೆ ಕವರು ಬಂದ ವಿಷಯವನ್ನು ತಿಳಿಸಿ, ಆತನನ್ನು ಕರೆದುಕೊಂಡು ರೈಲ್ವೇ ಪಾರ್ಸೆಲ್ ಆಫೀಸಿಗೆ ಹೋದನು.

ಪಾರ್ಸೆಲ್ ಆಫೀಸಿಗೆ ಹೋಗಿ, ಆ ರಸೀತಿಯನ್ನು ತೋರಿಸಲು, ಪಾರ್ಸೆಲ್ ಬಂದಿರುವುದೆಂದು ತಿಳಿಯಿತು.

ಮೂವರೂ ಒಳಗೆ ಹೋಗಿ ಆ ಪಾರ್ಸೆಲ್ ಯಾವುದೆಂದು ನೋಡಲು ಪುರುಷೋತ್ತಮನ ಊಹೆಯಂತೆ ಪೆಟ್ಟಿಗೆಯೇ ಆಗಿತ್ತಲ್ಲದೆ, ನಾಲ್ಕಾಳು ಹೊರುವಷ್ಟು ದೊಡ್ಡದಾಗಿತ್ತು.

ಆ ಪೆಟ್ಟಿಗೆಯನ್ನು ತೆಗೆಯಿಸಿಕೊಂಡು ಹೊರಗೆ ಬಂದವಲ್ಲದೆ ಕೈಗಾಡಿಯನ್ನು ಕೂಲಿಗೆ ಗೊತ್ತುಮಾಡಿ ಅದನ್ನು ಪೋಲೀಸ್ ಠಾಣೆಗೆ ತಂದರು.

ಪೆಟ್ಟಿಗೆಯನ್ನು ಠಾಣೆಯ ಹಿಂಭಾಗಕ್ಕೆ ತೆಗೆದುಕೊಂಡು ಹೋಗಿ, ಸುತ್ತಿಗೆ ಮತ್ತು ಇನ್ನಿತರ ಆಯುಧಗಳಿಂದ ಅದರ ಮೇಲ್ಭಾಗವನ್ನು ತೆಗೆದರು.

ತೆಗೆದು ನೋಡಲು ಮೇಲೆ ಕಾಣಸಿದ್ದು ಹುಲ್ಲು ಮಾತ್ರ. ಅದರ ಮೇಲೆ ಸುಗಂಧ ದ್ರವ್ಯಗಳನ್ನು ಸುರಿದಿದೆಯೆಂದು ವಾಸನೆಯೇ ಸೂಚಿಸುತ್ತಿತ್ತು.

ಆ ಸ್ಥಳದಲ್ಲಿ ಪತ್ತೇದಾರರು, ಇನ್ಸ್‌ಪೆಕ್ಟರ್ ಮತ್ತು ನಾಲ್ಕು ಜನ ಯಾಮಿಕರಲ್ಲದೆ ಹೆಚ್ಚು ಜನರಿರಲಿಲ್ಲ.

ಯಾಮಿಕರು ಮೇಲಿದ್ದ ಹುಲ್ಲನ್ನು ತೆಗೆದರು. ಅರ್ಧ ಹುಲ್ಲನ್ನು ತೆಗೆಯುತ್ತಲೇ ಅವರಿಗೆ ಕಂಡ ದೃಶ್ಯವಾದರೂ ಏನು?

ಕೊಲೆಯಾದ ಮನುಷ್ಯನೊಬ್ಬನ ಶವ.

ಶವದ ಮುಖವು ವಿರೂಪಗೊಳಿಸಲ್ಪಟ್ಟು ಗುರುತು ಸಿಕ್ಕದಂದಾಗಿದೆ. ಆದರ ಸಂಗಡ ಮುಂಡವಿರುವುದರಿಂದ ಆ ರುಂಡವು ಪುರುಷನದೆಂದು ಹೇಳಬಹುದಲ್ಲದೆ, ಇಲ್ಲದೇ ಹೋಗಿದ್ದರೆ ಆಗ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಆ ರೀತಿ ವಿರೂಪಗೊಳಿಸಿದೆ.

ಮೊಳಕಾಲಿನವರೆಗೆ ಮಾತ್ರ ಮುಂಡವಿದೆ. ಆದರ ಕೆಳಭಾಗವು ಕೊಡಲಿಯಿಂದ ಕತ್ತರಿಸಿದಂತೆ ಕತ್ತರಿಸಲ್ಪಟ್ಟು, ಆ ಎರಡು ಕಾಲುಗಳು ಮುಂಡದ ಎರಡು ಪಕ್ಕಗಳಲ್ಲಿವೆ. ಹಸ್ತಗಳೆರಡು ಕತ್ತರಿಸಲ್ಪಟ್ಟು, ಒಂದು ತಲೆಯ ಬಳಿ ಮತ್ತೊಂದು ಕಾಲ ಬಳಿ ಬಿದ್ದಿದೆ.

ಶವದ ಮೈ ಮೇಲೆ ಬಟ್ಟೆಯಿದ್ದರೂ ದೇಹದ ಹತ್ತಾರು ಕಡೆಗಳಲ್ಲಿ ಆಯುಧದಿಂದುಂಟಾದ ಗಾಯದ ಗುರುತುಗಳು ಕಾಣುತ್ತಲಿವೆ.

ಆ ಶವದ ಆಕಾರ, ವಿಕಾರಗಳು ಅತ್ಯಂತ ಭೀಕರವಾಗಿ ಕಾಣಿಸುತ್ತಲಿದ್ದು, ನೋಡುವವರ ಮನಸ್ಸಿಗೆ ಭೀತಿಯುಟ್ಟಿಸುವಂತಿದೆ.

ಎಂತಹ ವೇಳೆಯಲ್ಲಾದರೂ ಸರಿ ಒಬ್ಬರೇ ಆ ಪೆಟ್ಟಿಗೆಯಲ್ಲಿರುವ ಶವವನ್ನು ನೋಡಿದರೆ ಭಯದಿಂದ ಕೂಗಿಕೊಳ್ಳದೆ ಇರುವುದಿಲ್ಲ.

"ಪತ್ತೇದಾರರೇ ನೋಡಿದಿರಾ?"

—ಎಂದು ಸೌಮ್ಯನಾಗಿ ಕೇಳಿದ ಚಂದ್ರನಾಥ.

"ನೋಡಿದೆ, ನೋಡುತ್ತಲೂ ಇರುವೆನು."

—ಎಂದು ಸಹಜವಾಗಿಯೇ ಉತ್ತರವಿತ್ತ.

"ಈ ಮನುಷ್ಯನಾರಿರಬಹುದು?"

"ಕೊಲೆಗಾರನ ಆಯುಧಕ್ಕೆ ಬಲಿಯಾದ ದುರದೃಷ್ಟವಂತನು. ಇಂತಹವನೇ ಎಂದು ಹೇಳಲು ಮುಖದ ಗುರುತೇ ಸಿಕ್ಕದು. ಆದರೂ ಈತನು ದೊಡ್ಡ ಮನುಷ್ಯನೆಂದೂ, ಮರ್ಯಾದಸ್ತನೆಂದೂ, ಶ್ರೀಮಂತನೆಂದೂ ಹೇಳಬಹುದಲ್ಲದೆ, ಬಹು ಜನರಿಗೆ ಚಿರಪರಿಚಿತ ವ್ಯಕ್ತಿಯೆಂದು ಹೇಳಬಹುದು. ನಮ್ಮೆಲ್ಲರಿಗೂ ಈತನು ಪರಿಚಿತನಾಗಿದ್ದರೂ ಆಗಿರಬಹುದು."

"ನೀವು ಹೇಳಿದ ಮಾತು ಆಶ್ಚರ್ಯವಾಗಿದೆ. ಆ ಗುಣಗಳೆಲ್ಲಾ ಈತನಲ್ಲಿವೆಯೆಂಬುದಕ್ಕೆ ಆಧಾರವೇನಿದೆ?"

"ಈತನು ಕಷ್ಟಜೀವಿಯಲ್ಲನೆಂದು ಇವನ ಅಂಗಾಂಗಗಳೇ ಸೂಚಿಸುತ್ತವೆ. ಚಿರಪರಿಚಿತ ವ್ಯಕ್ತಿಯೆಂಬುದಕ್ಕೆ ಈತನ ಮುಖವನ್ನು ವಿರೂಪಗೊಳಿಸಿ ಗುರುತು ಸಿಕ್ಕದ ಹಾಗೆ ಮಾಡಿರುವುದೇ ಸಾಕ್ಷಿ. ಇವನನ್ನು ಕೊಲೆ ಮಾಡಿರುವುದರಿಂದ ಕೊಲೆಗಾರನಿಗೆ ಅತಿ ಹೆಚ್ಚಿನ ಲಾಭವಿದೆ. ಪ್ರಯೋಜನವಿಲ್ಲದೆ ಯಾರೂ ಕೊಲೆ ಮಾಡುವುದಿಲ್ಲ. ಇವನ ಆಸ್ತಿಗೆ ಕೊಲೆಗಾರನು ವಾರಸುದಾರನಾಗಿದ್ದರೂ ಆಗಿರಬಹುದು. ಆ ಪ್ರಯುಕ್ತ ಈ ಮನುಷ್ಯನು ಶ್ರೀಮಂತನೆಂದು ನಿರ್ಧರ ಪಡಿಸಬಹುದು."

"ನೀವು ಹೇಳಿದ ಮಾತೆಲ್ಲವನ್ನೂ ಸತ್ಯವೆಂದು ನಂಬಲೇ ?"

"ಈಗ ನಿಮಗೆ ಸಂದೇಹವಿದ್ದರೂ, ಮುಂದೆ ಈ ಅನುಮಾನವೆಲ್ಲಾ ನಿವಾರಣೆಯಾಗಿ, ಈ ಮಾತನ್ನು ಜ್ಞಾಪಿಸಿಕೊಳ್ಳುವಿರೆಂಬುದರಲ್ಲಿ ಅನುಮಾನವೇ ಇಲ್ಲ. ನೀವು ಒಂದು ವೇಳೆ ಮರೆತರೂ ನಾನು ಜ್ಞಾಪಕ ಮಾಡಿಕೊಡುವೆನು. ನೀವು ಕೇಳಿದ ಕೂಡಲೇ ತಟ್ಟನೆ ಉತ್ತರವಿತ್ತುದಕ್ಕಾಗಿ ನಿಮಗೆ ಸಂದೇಹವಿರಬಹುದು. ಅನುಮಾನಪಡಬೇಡಿ."

"ಸರಿ, ಮುಂದೆ ತಿಳಿಯುತ್ತದೆ. ಈತನನ್ನು ಕೊಲೆ ಮಾಡಿದುದೇನೋ ಸರಿ. ಶವವನ್ನು ಯಾರಿಗೂ ತಿಳಿಯದಂತೆ ಮಣ್ಣಿನಲ್ಲಿ ಮುಚ್ಚಿಡಬಹುದಿತ್ತಲ್ಲ. ಕೈ ಕಾಲುಗಳನ್ನು ಕಡಿದು, ಮುಖವನ್ನು ವಿರೂಪಗೊಳಿಸಿ, ಪೆಟ್ಟಿಗೆಯಲ್ಲಿ ಶವವನ್ನಿಟ್ಟು, ವಾಸನೆ ಬಾರದಂತೆ ಸುಗಂಧ ದ್ರವ್ಯಗಳನ್ನು ಸುರಿದು ನಿಮ್ಮಲ್ಲಿಗೆ ಕಳುಹಿಸಿದ ಉದ್ದೇಶವೇನು? ಯಾವ ಲಾಭಕ್ಕಾಗಿ ನಿಮ್ಮಲ್ಲಿಗೆ ಕಳುಹಿಸಿದ ?"

"ತನ್ನ ಶೌರ್ಯ ಸಾಹಸವನ್ನು ತೋರಿಸಿಕೊಳ್ಳುವ ನಿಮಿತ್ತ ನನ್ನಲ್ಲಿಗೆ ಕಳುಹಿಸಿರುವನು. ಅದೂ ಅಲ್ಲದೆ ಈ ಮನುಷ್ಯನನ್ನು ಕೊಲೆ ಮಾಡಿದವನಾರೆಂದು ಹುಡುಕಿಕೊಂಡು ಪತ್ತೇದಾರರು ಅಲೆಯುತ್ತಿದ್ದರೆ ಅವರ ಮುಂದೆಯೇ ನಾನು ಮರ್ಯಾದಸ್ತನಂತೆ ಓಡಾಡಿಕೊಂಡಿರಬಹುದೆಂಬ ಭಾವನೆಯು ಕೊಲೆಗಾರನ ಮನದಲ್ಲಿದ್ದರೂ ಇರಬಹುದು. ಈ ಪೆಟ್ಟಿಗೆಯನ್ನು ಸುಲ್ತಾನನಗರದಿಂದ ಕಳುಹಿಸಿ, ರಶೀತಿಯನ್ನು ಈ ನಗರದಿಂದ ಕಳುಹಿಸಿರುವಾಗ ಆತನು ಈ ನಗರ ನಿವಾಸಿಯೇ ಆಗಿರಬಹುದಲ್ಲದೆ, ನಮ್ಮೆಲ್ಲರಿಗೂ ಚಿರಪರಿಚಿತನಾಗಿದ್ದರೂ ಆಗಿರಬಹುದು."

"ಈತನನ್ನು ಕೊಲೆ ಮಾಡಿ ಇವನ ಆಸ್ತಿಗೆ ಕೊಲೆಗಾರನು ಹಕ್ಕುದಾರನೆಂದು ತಿಳಿಸಿದಿರಿ. ಈತನು ಕಣ್ಮರೆಯಾಗಿರುವುದರಿಂದ ಈತನ ಮನೆಯವರು ಪೋಲೀಸ್ ಠಾಣೆಗೆ ಬಂದು ದೂರು ಕೊಡದಿರುವರೇ? ಆಗ ನಮ್ಮ ಶೋಧನೆಗೆ ಅನುಕೂಲವಾಗುವುದಲ್ಲದೆ, ಕೊಲೆಗಾರನನ್ನೂ ಬಹು ಸುಲಭವಾಗಿ ಹಿಡಿಯಬಹುದಲ್ಲ?"

ನಾವು ಊಹಿಸಿದಷ್ಟು ಸುಲಭವಾಗಿ ಅಪರಾಧಿಯನ್ನು ಹಿಡಿಯುವುದಾಗಿದ್ದರೆ ಈ ಪೆಟ್ಟಿಗೆಯೇ ನಮ್ಮ ಬಳಿಗೆ ಬರುತ್ತಿರಲಿಲ್ಲ. ಕೊಲೆಗಾರನು ನಾವು ಎಣಿಸಿದಷ್ಟು ಮೂರ್ಖಶಿರೋಮಣಿಯಲ್ಲ. ಈತನು ಕಣ್ಮರೆಯಾಗಿರುವ ಬಗ್ಗೆ ನಿಮಗೆಂದಿಗೂ ದೂರು ಬರಲಾರದು. ಈ ಮೃತನ ಕಡೆಯವರೆಲ್ಲರನ್ನೂ ಕೊಲೆಗಾರನು ತನ್ನಂತೆ ಮಾಡಿಕೊಂಡಿರುವನೆಂಬುದರಲ್ಲಿ ಸಂದೇಹವಿಲ್ಲ. ನೀವು ಹೇಳಿದಂತೆ ನಿಮ್ಮಲ್ಲಿಗೆ ದೂರು ಬರುವುದಾಗಿದ್ದಿದ್ದರೆ, ಈ ಶವವು ಪೆಟ್ಟಿಗೆಯಲ್ಲಿ ನಮ್ಮವರೆವಿಗೆ ಬರುತ್ತಿರಲಿಲ್ಲ."

"ನಿಮ್ಮ ಮಾತು ನಿಜವೇ? ಈ ದುರಂತ ಘಟನೆಗೆ ಬಹು ಜನರು ಸೇರಿರುವರೆಂದು ನಿಮ್ಮ ಊಹೆಯೇ?"

"ಹೌದು. ಒಬ್ಬಿಬ್ಬರಿಂದ ಈ ಕಾರ್ಯವಾಗಿಲ್ಲ. ಕೊಲೆಗಾರನಿಗೆ ಸಹಾಯಕವಾಗಿ ಆರೇಳು ಜನರಾದರೂ ಇರುವರೆಂದು ನನ್ನ ಊಹೆ."

"ಕೊಲೆಗಾರನು ಈತನಿಗೆ ಸಂಬಂಧಪಟ್ಟವನೇ ಇರಬೇಕೆಂದು ನಿಮ್ಮ ಊಹೆಯೇ?"

"ಹೌದು ಸಂಬಂಧಪಟ್ಟವನಾಗಿ, ಸಂಬಂಧವಿರುವವರನ್ನು ಸರಿಪಡಿಸಿಕೊಂಡಿರುವುದರಿಂದ ನಿಮ್ಮವರೆವಿಗೆ ದೂರು ಬರಲಾರದು."

"ಕೊಲೆಗಾರನು ತನ್ನ ಶೌರ್ಯವನ್ನು ತೋರಿಸಿಕೊಳ್ಳಲು ಶವವನ್ನು ನಿಮ್ಮಲ್ಲಿಗೆ ಕಳುಹಿಸಿರುವುದರಿಂದ ಆತನಾರೆಂದು ಪತ್ತೇ ಮಾಡಿ ಹಿಡಿಯುವ ಭಾರವು ನಿಮಗೇ ಸೇರಿದೆ."

—ಎಂದು ನಸುನಕ್ಕು ನುಡಿದ ಚಂದ್ರನಾಥ.

"ನೀವು ಈ ಶವದ ಅಂತ್ಯಕ್ರಿಯೆಯ ಬಗ್ಗೆ ಮಾಡಬೇಕಾದ ಕಾರ್ಯವನ್ನು ಮಾಡಿ ಮುಗಿಸಿ. ಅದಕ್ಕೆ ಮೊದಲು ಈ ಸ್ಥಿತಿಯಲ್ಲಿ ಒಂದೆರಡು ಫೋಟೋಗಳನ್ನು ತೆಗೆಯಿಸಿ. ಬೆರಳುಗಳು ಊನವಾಗದೆ ಇರುವುದರಿಂದ

ಹತ್ತು ಬೆರಳ ಗುರುತುಗಳನ್ನೂ ಪಡೆಯಿರಿ. ಕೊಲೆಗಾರನು ತಾನಾಗಿಯೇ ಔತಣಕ್ಕೆ ಆಹ್ವಾನವಿತ್ತ ಬಳಿಕ ನಾವು ಕೈಕಟ್ಟಿ ಕುಳಿತುಕೊಂಡಿರಲು ಸಾಧ್ಯವೇ? ಔತಣವನ್ನು ಸ್ವೀಕರಿಸಿ ಅದಕ್ಕೆ ತಕ್ಕ ಮರ್ಯಾದೆ ತೋರಿಸಿ ಸರಿಯಾದ ಸ್ಥಾನದಲ್ಲಿ ಕೂರಿಸಬೇಕಾದ್ದು ನಮ್ಮ ಕರ್ತವ್ಯ."

—ಎಂದು ಪುರುಷೋತ್ತಮನು ನಕ್ಕು ನುಡಿದ.

ಚಂದ್ರನಾಥನು ಪ್ರತಿ ಮಾತನಾಡದೆ ತನ್ನ ಮುಂದಿನ ಕಾರ್ಯಕ್ಕೆ ಮನಗೊಟ್ಟ.

ಆವಶ್ಯಕತೆಯೊದಗಿದಾಗ ಕಾಣುವೆನೆಂದು ತಿಳಿಸಿದ ಪುರುಷೋತ್ತಮನು ರಾಮನಾಥನೊಡನೆ ಹಿಂತಿರುಗಿದ.

ಶವದ ಪ್ರತಿರೂಪವು ಪತ್ತೇದಾರರ ಮನದಲ್ಲಿ ಅಚ್ಚಳಿಯದೆ ಉಳಿಯಿತು.

೧

ಪತ್ತೇದಾರರಿಬ್ಬರೂ ಯೋಚನೆಯೆಂಬ ಶರಧಿಯಲ್ಲಿ ಮುಳುಗಿದ್ದ ಪ್ರಯುಕ್ತ ಒಬ್ಬರೊಡನೊಬ್ಬರು ಮಾತನಾಡಲಿಲ್ಲ.

ಒಬ್ಬೊಬ್ಬರನ್ನು ಒಂದೊಂದು ವಿಧವಾದ ಯೋಚನೆಯು ಆವರಿಸಿಕೊಂಡಿದೆ.

'ಕೊಲೆಗಾರನು ಕೊಲೆ ಮಾಡುವ ವೇಳೆಯಲ್ಲಿ ನನ್ನ ಕಣ್ಣಿಗೆ ಬಿದ್ದಿದ್ದರೆ, ಅವನ ಕೈಕಾಲುಗಳನ್ನು ಮುರಿದಿಡುತ್ತಿದ್ದೆನಲ್ಲದೆ, ಇತರ ಕೊಲೆಗಾರರು ಅವನನ್ನು ನೋಡಿದರೆ ಪಾಠ ಕಲಿಯುವಂತೆ ಮಾಡುತ್ತಿದ್ದೆನು. ಅವನ ಅದೃಷ್ಟ ಬಲವು ಚೆನ್ನಾಗಿದೆ. ಇಲ್ಲದೇ ಹೋಗಿದ್ದರೆ ನನ್ನ ಕಣ್ಣಿಗೆ ಕಾಣದೇ ಹೋಗುತ್ತಿದ್ದನೇ ?'

ಈ ರೀತಿ ರಾಮನಾಥನು ಆಲೋಚಿಸಿ ಅಡಿಗಡಿಗೆ ಹಲ್ಲುಮುಡಿ ಕಚ್ಚುತ್ತಿದ್ದನು.

ಕ್ರೋಧವು ಅವನ ದೇಹವನ್ನೆಲ್ಲಾ ವ್ಯಾಪಿಸಿರುವುದರಿಂದ ಸಿಟ್ಟಿನ ಪ್ರತಿಮೂರ್ತಿಯಾಗಿ ಕುಳಿತಿರುವನು.

'ಕೊಲೆಯಾದ ಮನುಷ್ಯನಾರು ? ಯಾವ ಊರಿನವನಿರಬಹುದು ? ಅವನಿಗೆ ತಂದೆತಾಯಿಗಳಿರುವರೇ ? ಮದುವೆಯಾಗಿರುವುದೇ ? ಮಕ್ಕಳಿರುವರೇ ? ಅವನ ಉದ್ಯೋಗವೇನಿರಬಹುದು ? ಈಗ ಕೊಲೆಗಾರನು ಎಲ್ಲಿರಬಹುದು ? ನಮ್ಮ ಕಾರ್ಯಕಲಾಪಗಳನ್ನು ಗಮನಿಸುತ್ತಿರಬಹುದೇ ? ಅಥವಾ ಈ ಕಾರ್ಯಕ್ಕೆ ತನ್ನ ಕಡೆಯವನನ್ನು ನಿಯಮಿಸಿ, ತಾನು ಇತರ ಚಟುವಟಿಕೆಗಳಲ್ಲಿ ಮಗ್ನನಾಗಿರಬಹುದೇ ? ಆತನಾರಿರಬಹುದು ?'

ಇವೇ ಮುಂತಾದ ಯೋಚನೆಗಳಲ್ಲಿ ಪುರುಷೋತ್ತಮನು ಮುಳುಗಿ, ಆಗಿನ ಪರಿಸ್ಥಿತಿಯಲ್ಲಿ ಯಾವುದನ್ನೂ ನಿರ್ಧರಿಸಲಾರದವನಾದನು.

ಸುಮಾರು ಮೂವತ್ತೈದು ನಿಮಿಷಗಳು ಕಳೆಯಿತಾದರೂ, ಒಬ್ಬರೊಡನೊಬ್ಬರು ಮಾತನಾಡಲಿಲ್ಲ.

ಒಬ್ಬರಿನ್ನೊಬ್ಬರ ಯೋಚನೆಗೆ ಭಂಗವುಂಟುಮಾಡದೆ, ಮೌನರಾಗಿ, ಯೋಚನೆಯೆಂಬ ಜಲಧಿಯಲ್ಲಿ ಮುಳುಗೇಳುತ್ತಿರುವರು.

ಆ ವೇಳೆಗೆ ಸರಿಯಾಗಿ ಚಂದ್ರನಾಥನು ಅಲ್ಲಿಗೆ ಆಗಮಿಸಿದ. ಅವನ ಎಡಗೈಯಲ್ಲಿ ಒಂದು ಕಾಗದವಿತ್ತು.

ಇನ್ಸ್‌ಪೆಕ್ಟರನ್ನು ನೋಡುತ್ತಲೇ ಇಬ್ಬರೂ ಯೋಗಸಮಾಧಿಯಿಂದ ಎಚ್ಚೆತ್ತವರಂತಾದರು.

ಇನ್ಸ್‌ಪೆಕ್ಟರನ ಕೈಯಲ್ಲಿದ್ದ ಕಾಗದವನ್ನು ನೋಡಿ ಈ ಕಾಗದವು ಬಹುಶಃ ಆ ಪೆಟ್ಟಿಗೆಯಲ್ಲಿದ್ದರೂ ಇರಬಹುದೆಂದು ಪುರುಷೋತ್ತಮನು ಭಾವಿಸಿದ.

ಚಂದ್ರನಾಥನು ಪತ್ತೇದಾರರ ಎದುರಿಗಿದ್ದ ಕುರ್ಚಿಯ ಮೇಲೆ ಕುಳಿತು ಕಾಗದವನ್ನು ಪುರುಷೋತ್ತಮನ ಕೈಗಿತ್ತು—

"ಈ ಕಾಗದವು ಶವದ ತಲೆಯಡಿಯಲ್ಲಿತ್ತು. ಶವದ ಅಂತ್ಯಕ್ರಿಯೆಯ ಬಗ್ಗೆ ಸರಿಯಾದ ಏರ್ಪಾಡು ಮಾಡಿ ಇಲ್ಲಿಗೆ ಬಂದೆನು. ಈ ಕಾಗದದ ವಿನಃ ಬೇರೇನು ವಸ್ತುವೂ ಸಿಗಲಿಲ್ಲ" ಎಂದು ಹೇಳಿದ.

"ಕಾಗದವನ್ನು ಓದಿ ನೋಡಿದಿರಲ್ಲವೇ ?"

—ಎಂದು ನಗುತ್ತಾ ಪ್ರಶ್ನಿಸಿದ ಪುರುಷೋತ್ತಮನು.

"ಹೌದು ! ಓದಿ ನೋಡಿದೆ"

"ನನ್ನ ಹೆಸರಿಗೇ ಬರೆದುದೆಂದು ತೋರುತ್ತದೆ"

"ಅದೂ ಸಹ ನಿಜ"

"ಶವವನ್ನು ನನ್ನ ವಿಳಾಸಕ್ಕೆ ಕಳುಹಿಸಿರುವಾಗ ಕಾಗದವನ್ನು ನನಗಲ್ಲದೆ ಬೇರೆ ಯಾರಿಗೆ ಬರೆಯುವನು ? ನಮ್ಮ ವಿಷಯದಲ್ಲಿ ಕೀಳಾಗಿ ಬರೆದಿರಬಹುದು"

—ಎಂದು ನುಡಿದ ಪುರುಷೋತ್ತಮನು, ವಿಷಯವೇನಿದೆಯೆಂಬುದನ್ನು ನೋಡಲು, ಕಾಗದವನ್ನು ಬಿಚ್ಚಿದ.

ಆ ವೇಳೆಗೆ ಸರಿಯಾಗಿ (ಕಾಲಿಂಗ್ ಬೆಲ್) ಆಗಮನ ಸೂಚಕವಾದ ಘಂಟೆಯು ಬಾರಿಸಿತು.

ಯಾರೋ ಅಪರಿಚಿತರು ತನ್ನನ್ನು ನೋಡಲು ಬಂದಿರುವರೆಂದು ಭಾವಿಸಿದ ಪುರುಷೋತ್ತಮನು, ರಾಮನಾಥನ ಮುಖವನ್ನು ನೋಡಲು ಆತನು ಹೊರಗೆ ಹೋಗಿ ಬಾಗಿಲ ಬಳಿಯಲ್ಲಿ ನಿಂತಿದ್ದ ಅಪರಿಚಿತ ವ್ಯಕ್ತಿಯು ಯಾರೆಂಬುದನ್ನು ನೋಡಿದ.

ಅವರನ್ನು ಹಿಂದೆ ಯಾವ ಸಮಯದಲ್ಲಿಯೋ ನೋಡಿದ್ದಂತೆ ರಾಮನಾಥನ ಮನಕ್ಕೆ ವೇದ್ಯವಾಯಿತಾದರೂ, ಎಲ್ಲಿ? ಯಾವಾಗ? ಎಂದು ತಕ್ಷಣವೇ ಹೊಳೆಯಲಿಲ್ಲ.

ಅಪರಿಚಿತರ ವಯಸ್ಸು ಸುಮಾರು ನಲವತ್ತಿರಬಹುದು. ಆದರೇ! ಮುಖದಲ್ಲಿ ವಿಶೇಷ ಕಳೆಯಿದೆ. ಆ ತೇಜಸ್ಸನ್ನು ನೋಡಿದರೆ, ಮೂವತ್ತು ವರ್ಷಗಳ ಅಂದಾಜು ಮಾಡುವರು.

ಅಪರಿಚಿತರು ಬೆಲೆ ಬಾಳುವ ಉತ್ತಮ ಪಂಚೆಯನ್ನು ಕಚ್ಚೆ ಹಾಕಿರುವರು. ಸಿಲ್ಕ್ ಷರಟನ್ನುಟ್ಟು ಅದರ ಮೇಲೆ ಲಾಂಗ್‌ಕೋಟ್ ಹಾಕಿಕೊಂಡಿರುವರು. ತಲೆಯ ಮೇಲೆ ಜರಿ ಪೇಟಾ ಇದೆ. ಕಿವಿಗಳಲ್ಲಿ ವಜ್ರದ ಕಡಕು ಇರುವುದಲ್ಲದೆ, ಎರಡು ಕೈಗಳಲ್ಲಿ ನಾಲ್ಕು ಉಂಗುರಗಳಿವೆ. ಎಡಗೈಗೆ 'ರಿಸ್ಟ್' ವಾಚನ್ನು ಕಟ್ಟಿರುವರು.

ರಾಮನಾಥನನ್ನು ನೋಡುತ್ತಲೇ ಆ ಶ್ರೀಮಂತರು ನಮಸ್ಕಾರ ಮಾಡಿ, ಹಲ್ಲು ಬಿಡಲು, ಪ್ರತಿ ನಮಸ್ಕರಿಸಿದ ರಾಮನಾಥನು, ಅಲ್ಲಿ ಏನೊಂದು ಮಾತನ್ನೂ ಆಡದೆ ಒಳಗೆ ಕರೆದುಕೊಂಡು ಹೋದನು.

ಪುರುಷೋತ್ತಮ, ಚಂದ್ರನಾಥರು ಆ ಶ್ರೀಮಂತರ ಮುಖ ನೋಡಿದರು.

ಆ ಶ್ರೀಮಂತರು ಪುರುಷೋತ್ತಮನಿಗೆ ಅಪರಿಚಿತ ವ್ಯಕ್ತಿಯಾಗಿದ್ದರೂ, ಚಂದ್ರನಾಥನಿಗೆ ಹೊಸಬರಾಗಿರಲಿಲ್ಲ.

ಚಂದ್ರನಾಥನನ್ನು ನೋಡುತ್ತಲೇ ಅಪರಿಚಿತರು ನಗು ಮುಖದಿಂದ—

"ಓ! ಇನ್ಸ್ಪೆಕ್ಟರ್ ಸಾಹೇಬರು, ಇಲ್ಲಿಯೇ ಇರುವಿರಾ? ನೀವು ಇಲ್ಲಿರುವುದರಿಂದ ಉತ್ತಮವೇ ಆಯಿತು. ನಿಮ್ಮಲ್ಲಿಗೆ ಬರುವ ಕೆಲಸ ತಪ್ಪಿತು.

ನೀವು ಮೂವರೂ ಯಾವುದೋ ಗಾಢವಾದ ಯೋಚನೆಯಲ್ಲಿದ್ದಿರೆಂದು ತೋರುತ್ತದೆ. ನಾನು ಬಂದುದರಿಂದ ನಿಮ್ಮ ಕಾರ್ಯಕ್ಕೆ ವಿಘ್ನವುಂಟಾಗಿರಬಹುದು" ಎಂದು ನುಡಿದು ಇನ್ಸ್ಪೆಕ್ಟರನಿಗೆ ಹಸ್ತಲಾಘವವನ್ನಿತ್ತರು.

ಈ ಶ್ರೀಮಂತರೇ ಕೊಲೆಗಾರರಾಗಿದ್ದರೂ ಆಗಿರಬಹುದೆಂಬ ಭಾವನೆಯು ರಾಮನಾಥನ ಮನಕ್ಕೆ ಹೊಳೆಯದಿರಲಿಲ್ಲ.

'ಹೇಗೂ ಮನೆಯೊಳಗೆ ಬಂದಿರುವರು. ಇವರೇ ಕೊಲೆಗಾರರೆಂದು ತಿಳಿದು ಬಂದರೆ ಈ ಸ್ಥಳದಲ್ಲಿಯೇ ತಕ್ಕ ಪ್ರಾಯಶ್ಚಿತ್ತ ಮಾಡದೆ ಬಿಡಲಾರೆ. ನಮ್ಮ ಮರ್ಮವನ್ನರಿಯಲು ಈ ವೇಷದಲ್ಲಿ ಬಂದಿದ್ದರೂ ಬಂದಿರಬಹುದು.' ಎಂಬುದಾಗಿ ಯೋಚಿಸಿಕೊಂಡ ರಾಮನಾಥನು ತುಟಿ ಎರಡು ಮಾಡದೆ ಶ್ರೀಮಂತರು ತಮ್ಮಲ್ಲಿಗೆ ಬಂದ ಕಾರಣವನ್ನರಿಯುವ ಕುತೂಹಲವುಳ್ಳವನಾದನು.

ಪುರುಷೋತ್ತಮನು ಶ್ರೀಮಂತರ ಮುಖವನ್ನು ಎವೆಯಿಕ್ಕದೆ ನೋಡಿದ. ಹಿಂದೆ ಯಾವ ಸಮಯದಲ್ಲಿಯೂ ಅವರನ್ನು ನೋಡದೆ ಇದ್ದ ಪ್ರಯುಕ್ತ, ಸಂದೇಹಕ್ಕೊಳಗಾಗಬೇಕಾಯಿತು.

ಇನ್ಸ್ಪೆಕ್ಟರೊಡನೆ ವಿಶ್ವಾಸದಿಂದಲೂ, ಸಲಿಗೆಯಿಂದಲೂ ಮಾತನಾಡಿದ ಪ್ರಯುಕ್ತ, ಇವರಿಬ್ಬರೂ ಹಳೆಯ ಸ್ನೇಹಿತರೆಂದು ತಿಳಿದು ಆ ಬಗ್ಗೆ ವಿಸ್ಮಿತನಾಗಬೇಕಾದ ಪ್ರಮೇಯ ಒದಗಿತು.

ಶ್ರೀಮಂತರ ಪರಿಚಯವು ಪತ್ತೇದಾರರಿಗಿಲ್ಲದ ಪ್ರಯುಕ್ತ ಇನ್ಸ್ಪೆಕ್ಟರನೇ ಅವರಿಬ್ಬರಿಗೂ ಪರಿಚಯ ಮಾಡಿಸಬೇಕಾಯಿತು.

"ಪತ್ತೇದಾರರೇ ! ಇವರು ನಮ್ಮ ನಗರದ ಗಣ್ಯ ಶ್ರೀಮಂತರಲ್ಲೊಬ್ಬರು. ಇವರ ಹೆಸರು ಅನ್ನದಾನಪ್ಪ. ಹೆಸರಿಗೆ ತಕ್ಕಂತೆ ದಾನಪ್ಪನೇ ಆಗಿರುವರು. ಎಡಗೈ ದಾನ ಮಾಡಿದರೆ ಬಲಗೈಗೆ ಗೊತ್ತಾಗುವುದಿಲ್ಲ. ದೀನ ದರಿದ್ರರಿಗೆ ಕಲ್ಪವೃಕ್ಷದಂತಿರುವರು. ಹೊಗಳಿಕೆಯೆಂದರೆ ಇವರಿಗೆ ಹಿಡಿಸುವುದಿಲ್ಲ. ಮಹಾಲಕ್ಷ್ಮಿರೋಡಿನಲ್ಲಿ ಜ ವಾ ಹಿ ರಿ ಅಂಗಡಿಯಿಟ್ಟುಕೊಂಡಿರುವರು. ಮುಂಭಾಗ ಅಂಗಡಿ, ಹಿಂಭಾಗ ಮನೆ. ನಾನು ಇವರನ್ನು ಸುಮಾರು ಹದಿನೈದಿಪ್ಪತ್ತು ವರ್ಷಗಳಿಂದ ನೋಡುತ್ತಿರುವೆನು. ನಿಮಗೂ ಇವರ

ಪರಿಚಯುವಿರುವುದೆಂದು ಭಾವಿಸಿದ್ದೆ. ಈಗ ಇಲ್ಲವೆಂದಂತಾಯಿತು. ನಾನೇ ನಿಮ್ಮಿಬ್ಬರ ಪರಿಚಯು ಮಾಡಿಸಿದಂತಾಗಲಿ"

—ಎಂದು ಹೇಳಿದ ಚಂದ್ರನಾಥನು, ಅನ್ನದಾನಪ್ಪನವರಿಗೂ ಪತ್ರೀದಾರರಿಗೂ ಪರಿಚಯು ಮಾಡಿಸಿದ.

ಆ ವೇಳೆಗೆ ಪುರುಷೋತ್ತಮನು ಕಾಗದವನ್ನು ತನ್ನ ಜೇಬಿನಲ್ಲಿಟ್ಟುಕೊಂಡಿದ್ದನು.

ಪರಸ್ಪರ ಪರಿಚಯುವಾದನಂತರ, ಪುರುಷೋತ್ತಮನು ಅನ್ನದಾನಪ್ಪನವರಿಗೆ ಕುಳಿತುಕೊಳ್ಳುವಂತೆ ಹೇಳಿ ಬಳಿಕ ತನ್ನಲ್ಲಿಗೆ ಬಂದ ಕಾರಣವನ್ನು ವಿಚಾರಿಸಿದ.

"ನನ್ನ ಸಂಬಂಧೀಕರ ಮಗನು ವ್ಯಾಸಂಗಕ್ಕಾಗಿ ಇಂಗ್ಲೇಂಡಿಗೆ ಹೋದವನು, ಇಲ್ಲಿಗೆ ಹಿಂದಿರುಗಿ ಹಲವು ದಿನಗಳಾಯಿತು. ಆತನು ಒಂದು ವಿಧದಲ್ಲಿ ಅಳಿಯುನೇ ಆಗಬೇಕು. ಇಂಗ್ಲೇಂಡಿಗೆ ಹೋಗಿ ಕ್ಷೇಮವಾಗಿ ಹಿಂದಿರುಗಿದ್ದಕ್ಕಾಗಿ, ಸತ್ಕಾರ ಸಮಾರಂಭ ಏರ್ಪಡಿಸಿರುವೆವು. ಆ ಸಮಾರಂಭವು ನಾಳೆಯು ದಿನವೇ ನಡೆಯಲಿದೆ. ನೀವು ಅತಿಥಿಗಳಾಗಿ ಆಗಮಿಸಬೇಕಾಗಿ ಕೇಳಿಕೊಳ್ಳಲು ಬಂದೆ. ನಿಮ್ಮ ಹೆಸರು ಪ್ರಖ್ಯಾತಿಯನ್ನು ಬಹು ದಿನಗಳಿಂದ ಕೇಳಿದ್ದೆ. ನೀವು ನನ್ನನ್ನು ನೋಡದೆ ಇದ್ದರೂ ನಾನು ನಿಮ್ಮನ್ನು ನೋಡಿದ್ದೆ. ನನ್ನ ಹೆಸರನ್ನಾದರೂ ನೀವು ಕೇಳಿರಬಹುದು. ಆ ವಿಷಯುವಿರಲಿ. ನಿಮ್ಮ ಗೆಳೆತನವನ್ನು ಬಯುಸಬೇಕೆಂದು ಬಹುದಿನಗಳಿಂದಲೂ ಯೋಚಿಸುತ್ತಿದ್ದೆ. ಕಾಲವು ಕೂಡಿಬಂದಿರಲಿಲ್ಲ. ಈಗ ಈ ಒಂದು ವಿಧದಲ್ಲಿ ನಿಮ್ಮ ಪರಿಚಯುವಾಯಿತು. ನನಗಷ್ಟೇ ಸಂತೋಷ. ಇಲ್ಲಿ ಇನ್‌ಸ್ಪೆಕ್ಟರ್ ಇದ್ದದ್ದು ಉತ್ತಮವೇ ಆಯಿತು. ನೀವೆಲ್ಲರೂ ದಯುವಿಟ್ಟು ಬರಬೇಕಾಗಿ ನನ್ನ ನಮ್ರ ಪ್ರಾರ್ಥನೆ. ಇನ್ನೂ ನಾನು ಹಲವಾರು ಕಡೆ ಹೋಗಬೇಕಾಗಿರುವುದರಿಂದ ನನಗೆ ವೇಳೆಯಿಲ್ಲ. ಪುನಃ ಬರಲಾರೆ. ಖಂಡಿತಾ ಬಾರದಿರಬೇಡಿ."

—ಎಂದು ಸವಿನಯುವಾಗಿಯೇ ನುಡಿದ ಅನ್ನದಾನಪ್ಪನವರು, ತಮ್ಮ ಜೇಬಿನಿಂದ ಇನ್ವಿಟೇಷನ್ ಕಾರ್ಡುಗಳನ್ನು ಕೊಟ್ಟು—

"ನಾನು ಅಕಸ್ಮಾತ್ ಬಂದುದರಿಂದ ನಿಮ್ಮ ಕಾರ್ಯಕ್ಕೆ ವಿಘ್ನವುಂಟಾ

ಗಿರಬಹುದು. ದಯವಿಟ್ಟು ಕ್ಷಮಿಸಿ" ಎಂದು ನುಡಿದು ಅಲ್ಲಿ ನಿಲ್ಲದೆ ಹಿಂದಿರು ಗಿದರು.

ಪುರುಷೋತ್ತಮನು ಅನ್ನದಾನಪ್ಪನವರನ್ನು ತಡೆದು ನಿಲ್ಲಿಸಿ ಮಾತನಾಡ ಬೇಕೆಂದಿದ್ದನು.

ಆದರೇ! ಚಂದ್ರನಾಥನು ಅನ್ನದಾನಪ್ಪನವರನ್ನು ಹದಿನೈದಿಪ್ಪತ್ತು ವರ್ಷಗಳಿಂದ ನೋಡುತ್ತಿರುವೆನೆಂದು ತಿಳಿಸಿರುವನಾದ್ದರಿಂದ, ಈತನಿಗೆ ಹೆಚ್ಚು ಕಡಿಮೆ ಶ್ರೀಮಂತರ ವ್ಯವಹಾರವೆಲ್ಲಾ ತಿಳಿದಿರಬಹುದೆಂದೂ, ಈತನನ್ನೇ ಕೇಳಿ ತಿಳಿದರಾಯಿತೆಂದೂ ಭಾವಿಸಿ, ಅವರನ್ನು ತಡೆಯಲಿಲ್ಲ.

ಅವರು ಹಿಂದಿರುಗಿದನಂತರ ಪುರುಷೋತ್ತಮನು—

"ನೀವು ಇವರ ವಿಷಯವಾಗಿ ಹೇಳಿದ ಗುಣಗಳೆಲ್ಲವೂ ಇವರಲ್ಲಿರುವುದೇ? ಇವರ ಮಾತು, ನಡವಳಿಕೆಗಳನ್ನು ಮತ್ತು ಈ 'ಇನ್ವಿಟೇಷನ್' ಕಾರ್ಡನ್ನು ನೋಡಿದರೆ ನನಗೆ ಹಾಗೆ ತೋರುವುದಿಲ್ಲ. ನೀವು ಹೇಳುವುದರಿಂದ ನಂಬ ಬೇಕಾಗುವುದು. ಹೇಗೆ?" ಎಂದು ಕೇಳಿದ.

ಚಂದ್ರನಾಥನು ನಗುತ್ತಾ—

"ನಾನು ಹೇಳಿದ ಪ್ರತಿ ಪದಕ್ಕೂ ವಿರುದ್ಧವಾಗಿರುವರೆಂದು ಭಾವಿಸಿ, ಇವರಿಗೆ ನಾಚಿಕೆಯಾಗಲೆಂದು ಆ ರೀತಿ ಹೇಳಿದೆ. ಬಿಕ್ಷುಕರು ಅಂಗಡಿಯ ಬಳಿಗೆ ಹೋದರೆ ನಾಯಿಯಂತೆ ಬೊಗಳುವರು. ಕುಡಿಯಲು ಒಂದು ಲೋಟ ನೀರನ್ನೂ ಸಹ ಕೊಡುವುದಿಲ್ಲ, ಪುಣ್ಯಾತ್ಮ" ಎಂದು ಹೇಳಿದ.

ಚಂದ್ರನಾಥನ ಮಾತನ್ನು ಕೇಳಿ ಕ್ರೋಧದಿಂದ ಕುಳಿತಿದ್ದ ರಾಮನಾಥ ನಿಗೂ ನಗು ಬಾರದಿರಲಿಲ್ಲ.

"ಇವರ ವ್ಯವಹಾರವು ನಿಮಗೆ ತಿಳಿದಿದೆಯೇ? ಹದಿನೈದಿಪ್ಪತ್ತು ವರ್ಷಗಳ ಪರಿಚಯವೆಂದಮೇಲೆ ತಿಳಿದಿರಲೇಬೇಕು"

"ಅಲ್ಪಸ್ವಲ್ಪ ತಿಳಿದಿದೆ"

"ತಿಳಿದುದನ್ನು ಹೇಳಿದರೆ ಸಾಕು. ಇವರ ಆಸ್ತಿಯ ಅಂದಾಜು ಎಷ್ಟಾಗ ಬಹುದು?"

"ಸುಮಾರು ಮೂರು, ನಾಲ್ಕು ಲಕ್ಷ ರೂಪಾಯಿಗಳಾಗಬಹುದು"

"ಇವರೇ ಸಂಪಾದಿಸಿದುದೋ? ಅಥವಾ ಹಿರಿಯರಿಂದ ಬಂದದ್ದೋ?"

"ಹಿಂದಿನ ಆಸ್ತಿಯು ನಾಲ್ಕಾಣೆ ಭಾಗವಿರಬಹುದು. ಇವರು ಹನ್ನೆರಡಾಣೆ ಭಾಗ ಹೆಚ್ಚಿಸಿದರು"

"ಹೇಗೆ ಹೆಚ್ಚಿಸಿದರು ?"

"ಹಲವು ಮಾರ್ಗಗಳಿಂದ. ಆ ವ್ಯವಹಾರ ಚತುರತೆಯನ್ನು ಎಷ್ಟು ಹೇಳಿದರೂ ಅಲ್ಪವೇ"

"ಸರಿ! ಆ ವಿಷಯವಿರಲಿ. ಇವರಿಗೆ ಮಕ್ಕಳೆಷ್ಟು ಜನರಿರುವರು ?"

"ಇಬ್ಬರೇ"

"ಹೆಣ್ಣೋ ? ಗಂಡೋ ?"

"ಒಂದು ಹೆಣ್ಣು, ಒಂದು ಗಂಡು. ಹೆಣ್ಣು ಮಗಳಿಗೆ ಹದಿನೈದು, ಹದಿನಾರು ವರ್ಷಗಳಿರಬಹುದು. ಗಂಡುಮಗನಿಗೆ ಮೂರು ನಾಲ್ಕು ವರ್ಷಗಳಿರಬಹುದು."

"ಪತ್ನಿಯಿರುವಳೇ ?"

"ಇರುವಳು. ಎರಡನೆಯ ಸಂಬಂಧ"

"ಮೊದಲನೆಯವಳಿಲ್ಲವೇ ?"

"ಇಲ್ಲಾ ! ಸತ್ತು ಹತ್ತಾರು ವರ್ಷಗಳಾಗಿರಬಹುದು. ಹೆಣ್ಣುಮಗಳು ಆಕೆಯದೆ. ಗಂಡು ಮಗ ಈಗಿರುವವಳದು"

"ಸರಿ! ಆ ಹೆಣ್ಣುಮಗಳನ್ನು ಇಂಗ್ಲೇಂಡಿನಿಂದ ಬಂದವನಿಗೆ ಕೊಟ್ಟು ವಿವಾಹ ಮಾಡಬೇಕೆಂದು ಈತನ ಅಭಿಪ್ರಾಯವಾಗಿದೆಯಲ್ಲವೇ ?"

"ಹೌದು! ಆ ವಿಷಯವನ್ನು ನನ್ನಲ್ಲಿ ಹಲವು ಸಾರಿ ಹೇಳಿರುವರು. ಆದರೇ! ಅದರಲ್ಲಿ ಇನ್ನೊಂದು ತೊಡಕಿನ ಸಮಸ್ಯೆ ಉದ್ಭವಿಸಿದೆ"

"ಏನು, ಅಂತಹ ತೊಡಕು ?"

"ಇವರ ಪತ್ನಿಗೆ ಇಷ್ಟವಿಲ್ಲ. ತನ್ನ ತಮ್ಮನಿಗೆ ಕೊಡಬೇಕೆಂದು ಆಕೆಯ ಇಷ್ಟ. ತಮ್ಮನಿಗಿತ್ತು ವಿವಾಹ ಮಾಡಿದರೆ, ತಾನು ತೌರುಮನೆಗೆ ಹೋಗಿ ಬರಲು ದಾರಿಯಾಗುವದೆಂದು ಆವಳ ಅಭಿಪ್ರಾಯ. ಅವನು ವಿದ್ಯಾವಂತನಲ್ಲವಾದ್ದರಿಂದ ಕೊಡುವುದಿಲ್ಲವೆಂದೂ, ಇಂಗ್ಲೇಂಡಿನಿಂದ ಬಂದಿರುವ ರಾಜಗೋಪಾಲನಿಗೇ ಕೊಡಬೇಕೆಂದು ಅನ್ನದಾನಪ್ಪನವರ ಹಠ. ಈ ವಿಷಯವಾಗಿ ಸತಿಪತಿಯರಿಗೆ, ಆಗಾಗ್ಗೆ ಕಲಹಗಳಾಗಿವೆ"

"ಈ ವಿಷಯವನ್ನು ಅನ್ನದಾನಪ್ಪನವರೇ ನಿಮ್ಮಲ್ಲಿ ಹೇಳಿರುವರಲ್ಲವೇ ?"

"ಹೌದು ! ನನ್ನಲ್ಲಿ ಅಷ್ಟು ವಿಶ್ವಾಸದಿಂದಿರುವರು"

"ಈಗ ಏರ್ಪಾಡು ಮಾಡಿರುವ ಸತ್ಕಾರ ಕೂಟದ ಖರ್ಚು ಅನ್ನದಾನಪ್ಪನವರದೇ ಎಂದು ತೋರುತ್ತದೆ ಅಲ್ಲವೇ ? ಅಥವಾ ರಾಜಗೋಪಾಲನದೇ ?"

"ಅಲ್ಲಾ ! ಅನ್ನದಾನಪ್ಪನವರದೇ ಖರ್ಚು"

"ಸರಿ ! ಅಳಿಯನಿಗೆ ಮರುಳು ಮಾಡುವ ಉದ್ದೇಶ. ಇರಲಿ, ರಾಜಗೋಪಾಲನಿಗೆ ತಂದೆತಾಯಿಯರಿರುವರೇ ?"

"ಇರುವರು"

"ಅವರೇನು ಕೆಲಸ ಮಾಡಿಕೊಂಡಿರುವರು ?"

"ಸುಟ್ಟರೂ ಸುಡದಷ್ಟು ಆಸ್ತಿಯಿರುವಾಗ ಅವರೇಕೆ ಕೆಲಸ ಮಾಡಿಕೊಂಡಿರಬೇಕು ?"

"ಅವರಿಗೆ ಬೇರೆ ಮಕ್ಕಳಿಲ್ಲವೇ ?"

"ಇಲ್ಲಾ ! ಇರುವವನು ರಾಜಗೋಪಾಲನೊಬ್ಬನೇ"

"ಹೆಣ್ಣು ಮಕ್ಕಳಿಲ್ಲವೇ ?"

"ಒಬ್ಬಳೇ ಒಬ್ಬಳಿದ್ದಳು. ಆಕೆಯು ತನ್ನ ಪತಿ ಮತ್ತು ಪುತ್ರರೊಂದಿಗೆ ಕಾರಿನಲ್ಲಿ ಯಾವುದೋ ಪುಣ್ಯಕ್ಷೇತ್ರಕ್ಕೆ ಹೋಗಿ ಹಿಂದಿರುಗುವಾಗ, ಕಾರು ಆಕ್ಸಿಡೆಂಟ್ ಆಗಿ ಎಲ್ಲರೂ ಮೃತರಾದರು"

"ಎಷ್ಟು ದಿನಗಳಾಯಿತು ?"

"ಈಚೆಗೆ ಅಂದರೆ ಮೂರು ನಾಲ್ಕು ತಿಂಗಳಾಯಿತು"

"ಆಗ ರಾಜಗೋಪಾಲನು ಇಂಗ್ಲೇಂಡಿನಲ್ಲಿದ್ದನೇ ?"

"ಹೌದು ! ಆತನು ಇಲ್ಲಿಗೆ ಬಂದು ಹದಿನೈದಿಪ್ಪತ್ತು ದಿನಗಳಾಗಿರಬಹುದು. ಅಷ್ಟೇ"

"ಆಸ್ತಿಗೆಲ್ಲಾ ರಾಜಗೋಪಾಲನೊಬ್ಬನೇ ಸರ್ವಾಧಿಕಾರಿ. ಅಂತಹವನನ್ನು ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ಅನ್ನದಾನಪ್ಪನವರ ಇಷ್ಟ. ಬೇರೆ ಯಾರೂ ಇಲ್ಲದಿರುವುದರಿಂದ, ತಮ್ಮ ಮಗಳು ಸೌಖ್ಯವಾಗಿರುವಳಲ್ಲದೆ, ತಮಗೂ ಅನುಕೂಲವಾಗುವುದೆಂಬ ಭಾವನೆಯಿರಬಹುದು. ಈ ವಿವಾಹಕ್ಕೆ ರಾಜಗೋಪಾಲನೂ, ಅವನ ತಂದೆ, ತಾಯಿಯರೂ ಒಪ್ಪಿರುವರೇ ?"

“ರಾಜಗೋಪಾಲನ ತಂದೆತಾಯಿಯರಿಬ್ಬರೂ ಮುದುಕರಾಗಿರುವರು. ಅವರಿಗೆ ಮಕ್ಕಳೇ ಇರಲಿಲ್ಲ. ಅದಕ್ಕಾಗಿ ಅವರು ಮಾಡಿದ ಪ್ರತಿಜ್ಞೆಯವುಗಳನ್ನು ಎಷ್ಟು ಹೇಳಿದರೂ ಅಲ್ಪವೇ. ಯಾವ ಜನ್ಮದ ಪುಣ್ಯಫಲವೋ ಏನೋ, ಪ್ರಾಯ ಕಳೆದ ಮೇಲೆ ಗಂಡುಮಗನನ್ನು ಕಂಡರು. ಅವರಿಬ್ಬರ ವಯಸ್ಸು ಈಗ ಐವತ್ತು, ಅರವತ್ತು ವರ್ಷಗಳಿರಬಹುದು. ಅವರಿಬ್ಬರನ್ನು ಅನ್ನದಾನಪ್ಪನವರು ಒಪ್ಪಿಸಿರುವರು. ರಾಜಗೋಪಾಲನು ಒಪ್ಪಿರುವನೋ ಇಲ್ಲವೋ, ನನಗೆ ತಿಳಿಯದು”

“ಆತನು ತನ್ನ ತಂದೆತಾಯಿಯರ ವಿಷಯದಲ್ಲಿ ಹೇಗಿರುವನು ?”

“ಮೊದಲು ವಿಧೇಯನಾಗಿದ್ದನು. ಈಗ ಇಂಗ್ಲೇಂಡಿಗೆ ಹೋಗಿ ಬಂದಿರುವುದರಿಂದ ತನ್ನ ತಂದೆತಾಯಿಯರ ಮಾತಿಗೆ ಮನ್ನಣೆ ಕೊಡುವನೋ, ಇಲ್ಲವೋ ತಿಳಿಯದು. ಇಂಗ್ಲೇಂಡಿನಲ್ಲಿ ವ್ಯಾಸಂಗ ಮುಗಿದರೂ ಹಿಂದಿರುಗದೆ ಇಲ್ಲಿಂದ ಹಣವನ್ನು ತರಿಸಿಕೊಳ್ಳುತ್ತಾ, ಹತ್ತುವರ್ಷಗಳನಂತರ ಹಿಂದಿರುಗಿರುವನು. ಹಾಗಿರುವಾಗ ಮೊದಲಿನ ಗುಣವನ್ನೇ ಹೊಂದಿರುವನೆಂದು ಹೇಗೆ ಹೇಳಲಿ ? ನೀವೇ ಹೇಳಿ”

“ವ್ಯಾಸಂಗ ಮುಗಿದರೂ ಹಿಂದಿರುಗಲಿಲ್ಲವೆಂದ ಬಳಿಕ ಅಲ್ಪಸ್ವಲ್ಪವಾದರೂ ಬದಲಾವಣೆಯಾಗಿರುವನೆಂಬುದರಲ್ಲಿ ಸಂದೇಹವಿಲ್ಲ. ಆ ಬದಲಾವಣೆಯನ್ನು ಸರಿಪಡಿಸಲೋಸುಗ ಅನ್ನದಾನಪ್ಪನವರು ಸತ್ಕಾರ ಕೂಟವಿಟ್ಟಿದ್ದರೂ ಇರಬಹುದು. ನನಗೆ ಮಾತ್ರ ಹಾಗೇ ತೋರುತ್ತದೆ. ಜಿಪುಣಾಗ್ರೇಸರನು ಆ ರೀತಿ ಖರ್ಚು ಮಾಡಬೇಕೆಂದರೆ, ಲಾಭವಿಲ್ಲದೆ ಮಾಡುವನೇ ?”

“ನಿಮ್ಮ ಊಹೆಯಂತೆ ಇದ್ದರೂ ಇರಬಹುದು”

“ಪೋಲೀಸ್ ಠಾಣೆಯಲ್ಲಿಯೇ ನಾವು ಕಾಗದವನ್ನು ನೋಡಿದ್ದರೆ ಇಷ್ಟು ವಿಷಯಗಳು ತಿಳಿಯುತ್ತಿರಲಿಲ್ಲ. ನಾವು ನೋಡದೆ ಬಿಟ್ಟು ಬಂದುದರಿಂದ ಇಷ್ಟು ವಿಷಯಗಳನ್ನು ತಿಳಿದಂತಾಯಿತು. ಇದಕ್ಕೇ ವಿಧಿ ಸಂಕಲ್ಪವೆಂದು ಹೇಳುವುದು”

—ಎಂದು ನಕ್ಕು ನುಡಿದ ಪುರುಷೋತ್ತಮನು.

"ಅವರ ವಿಷಯವನ್ನೆಲ್ಲಾ ಕೇಳಿ ತಿಳಿದಂತಾಯಿತಲ್ಲವೇ? ಅವರು ಬಂದಾಗ ಕಾಗದವನ್ನು ಮುಚ್ಚಿಟ್ಟುಕೊಂಡಿರಿ. ಈಗ ನಾವು ಮೂವರ ವಿನಃ ಬೇರೆ ಯಾರೂ ಇಲ್ಲ. ತೆಗೆದು ನೋಡಿ"

ರಾಮನಾಥನು ಮೌನವಾಗಿ ಕುಳಿತು ಅವರಿಬ್ಬರ ಮಾತುಗಳನ್ನು ಆಲಿಸಿ ಕೇಳುತ್ತಿದ್ದನಲ್ಲದೆ, ಮಧ್ಯೆ ಒಂದು ಮಾತನ್ನೂ ಆಡಲಿಲ್ಲ. ಅವನಿಗೂ ಸಹ ಕಾಗದದಲ್ಲಿ ಏನು ವಿಷಯ ಬರೆದಿದೆಯೆಂಬುದನ್ನು ನೋಡುವ ಕುತೂಹಲ ವುಂಟಾಗಿದೆ.

೩

ಪುರುಷೋತ್ತಮನು ತನ್ನ ಜೇಬಿನಿಂದ ಕಾಗದವನ್ನು ಹೊರಗೆ ತೆಗೆದು ಅದನ್ನು ಬಿಡಿಸಿ ನೋಡಲು ಅದರಲ್ಲಿ ಈ ರೀತಿ ಬರೆದಿದೆ.

'ಪುರುಷೋತ್ತಮಾ, ಈ ವಿಕಾರವಾದ ಶವವನ್ನು ನೋಡಿ ನಿನಗೆ ಆಶ್ಚರ್ಯವಾಗಿದೆಯಲ್ಲವೇ? ಒಂದು ವೇಳೆ ನಿನ್ನ ಮನದಲ್ಲಿ ಭೀತಿಯುತ್ಪನ್ನವಾಗಿದ್ದರೂ ಆಗಿರಬಹುದು.

'ಈ ಶವ ಯಾರದು? ಕೊಲೆ ಮಾಡಿದವನಾರು? ಯಾವ ಲಾಭಕ್ಕಾಗಿ ಕೊಲೆ ಮಾಡಿದ? ಮುಖವನ್ನು ವಿರೂಪಗೊಳಿಸಿದ ಉದ್ದೇಶವೇನಿರಬಹುದು? ಶವವನ್ನು ನನ್ನಲ್ಲಿಗೆ ಪಾರ್ಸಲ್ ಮೂಲಕ ಕಳುಹಿಸಿದ ಕಾರಣವೇನಿರಬಹುದು? ಇವೇ ಮುಂತಾದ ಯೋಚನೆಗಳು ನಿನ್ನ ತಲೆಯಲ್ಲಿ ಸೇರಿಕೊಂಡು ನಿನ್ನನ್ನು ಹುಚ್ಚನನ್ನಾಗಿ ಪರಿವರ್ತಿಸುವುದರಲ್ಲಿ ಸಂದೇಹವಿಲ್ಲ. ನಿಜವಾಗಿಯೂ ಹುಚ್ಚನಾದರೂ ಆಗಬಹುದು.

'ನಾನು ಯಾವುದೋ ಒಂದು ಕಾರಣಕ್ಕಾಗಿ ಕೊಲೆಮಾಡಿ, ಮುಖವನ್ನು ವಿರೂಪಗೊಳಿಸಿದೆ. ಕೊಲೆಯಾದವನಾರು? ಏಕೆ ಕೊಲೆಯಾದನೆಂಬುದನ್ನು ಪತ್ತೇಮಾಡಿ ಹಿಡಿಯಲು ನಿನ್ನ ಈ ಜನ್ಮದಲ್ಲಿ ಸಾಧ್ಯವಿಲ್ಲ ನೀನೊಬ್ಬನೇ ಏಕೆ? ನಿನ್ನಂತಹವರು ಸಾವಿರ ಜನರು ಬಂದರೂ ನನ್ನ ಮರ್ಮವನ್ನು ಪತ್ತೇಮಾಡಿ ಹಿಡಿಯಲು ಸಾಧ್ಯವಾಗದೆಂದು ನಿರ್ಧಾರವಾಗಿ ಹೇಳುವೆನು.

'ನನ್ನ ವೀರತ್ವವನ್ನು ತೋರಿಸಿಕೊಳ್ಳಲು ಮತ್ತು ನಿನ್ನ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ಶವವನ್ನು ಪಾರ್ಸೆಲ್ ಮೂಲಕ ನಿನಗೆ ಕಳುಹಿಸಿರುವೆನು. ಆದರೇ! ಇದರಲ್ಲಿ ನಿನ್ನ ಬುದ್ಧಿವಂತಿಕೆಯು,ಕಾರ್ಯಕೌಶಲ್ಯವೇನೂ ಪ್ರಕಾಶವಾಗಲಾರದು.

'ನಾನೊಬ್ಬ ಬುದ್ಧಿವಂತನೆಂದೂ, ನನ್ನ ಸಮಾನ ಯಾರೂ ಇಲ್ಲವೆಂದು ತಿಳಿದಿರುವೆ. ಹಾಗೆ : ತಿಳಿದಿರುವ, ನೀನೊಬ್ಬ ಅವಿವೇಕಿಯೇ ಸರಿ.

'ಈ ಕಾಗದವನ್ನು ನೋಡಿ ನನ್ನ ಶೋಧನೆಗೆ ತೊಡುಗುವೆ ಯೆಂಬುದರಲ್ಲಿ ಸಂದೇಹವಿಲ್ಲ. ಅದು ಈ ಜನ್ಮದಲ್ಲಿಯೇ ಸಾಧ್ಯ ವಾಗದೆಂದು ಮೊದಲೇ ತಿಳಿಸಿರುವೆನು. ನಿನಗೆ ಇತರ ಕಳ್ಳ, ಕೊಲೆ ಗಾರರು ಕಾಗದಗಳನ್ನು ಬರೆದಿರಬಹುದು. ಹಾಗೆ ಬರೆದವ ರೆಲ್ಲರೂ, ನಿನ್ನಿಂದ ಹಿಡಿಯಲ್ಪಟ್ಟು, ಸೆರೆಮನೆಯ ಕಂಬಿಗಳನ್ನು ಎಣಿಸುತ್ತಾ ತಮ್ಮ ದುರದೃಷ್ಟವನ್ನು ನಿಂದಿಸಿಕೊಳ್ಳುತ್ತಿರಬಹುದು. ಈ ಕಾಗದವನ್ನು ಬರೆದವನ ಪರಿಸ್ಥಿತಿಯೂ ಹಾಗೇ ಆಗುವುದೆಂದು ಭಾವಿಸಬೇಡ.

'ನಾನು ನಿನ್ನನ್ನು ನೋಡಿರುವೆನು. ನೀನೂ ಸಹ ನನ್ನನ್ನು ನೋಡಿರುವೆ. ಆದರೇ! ಇಬ್ಬರಿಗೂ ಪರಿಚಯವಿಲ್ಲ. ಮುಂದೆ ಆಗುವುದರಲ್ಲಿ ಸಂದೇಹವಿಲ್ಲ. ಆದ ಮಾತ್ರಕ್ಕೆ ನಾನು ಇಂತಹ ವನೇ ಎಂದು ನಿನ್ನಿಂದ ಕಂಡುಹಿಡಿಯಲು ಸಾಧ್ಯವಾಗದು.

'ಶವವು ನಿನ್ನಲ್ಲಿಗೆ ಬಂದಾಗ ನಾನು ಯಾವುದಾದರೊಂದು ಒಗೆಯಲ್ಲಿ ನಿನ್ನನ್ನು ಸಂಧಿಸಿ ಮಾತನಾಡುವೆನು. ಆಗ ಸಾಧ್ಯ ವಾಗದೆ ಹೋದರೆ, ಮುಂದೆ ನನಗೂ ನಿನಗೂ ಪರಿಚಯವಾಗಿ ಮಾತುಕತೆಗಳು ನಡೆಯುವುದೆಂಬುದರಲ್ಲಿ ಅನುಮಾನವಿಲ್ಲ.

'ನನ್ನ ಸಾಹಸವು ಇಲ್ಲಿಗೇ ಮುಗಿಯ.ಲಿಲ್ಲ. ಕೆಲವು ದಿನ ಗಳಲ್ಲಿಯೇ ನಿನ್ನನ್ನೂ, ರಾಮನಾಥನನ್ನೂ ಕೊಲ್ಲುವೆನು. ಅಷ್ಟರೊಳಗಾಗಿ ಇನ್ನೂ ಆರೇಳು ಜನರು ನನ್ನ ಆಯುಧಕ್ಕೆ ತಮ್ಮ ಪ್ರಾಣಗಳನ್ನು ಒಪ್ಪಿಸುವರು.

'ನನ್ನಿಂದ ಕೊಲೆಯಾಗುವ ಆರೇಳು ಜನರು ಯಾರು? ಏಕೆ ಕೊಲೆಯಾಗುವರು? ನನಗೂ ಅವರಿಗೂ ಸಂಬಂಧವೇನು? ಕೊಲೆ ಮಾಡುವುದರಿಂದ ಲಾಭವೇನು? ಇವೇ ಮುಂತಾದ ಯೋಚನೆಗಳಲ್ಲಿ ತೊಡಗಿದರೆ ನೀನು ಖಂಡಿತಾ ಹುಚ್ಚನಾಗುವೆ. ಈ ನನ್ನ ಮಾತನ್ನು ನಿಜವೆಂದು ನಂಬು.

'ಆರೇಳು ಜನರನ್ನು ಕೊಲೆ ಮಾಡಿದ್ದನ್ನು ನೋಡಿ ನೀನು ಹುಚ್ಚನಂತಾಗುವೆಯೋ? ಅಥವಾ ಹುಚ್ಚನೇ ಆಗುವೆಯೋ ತಿಳಿಯದು. ನಿನಗೆ ಹುಚ್ಚು ಹಿಡಿಸಿ ಕೊಲ್ಲಬೇಕೆಂದು ನನ್ನ ಅಭಿಪ್ರಾಯವಾಗಿರುವುದರಿಂದ, ನಿನಗೆ ಹುಚ್ಚು ಹಿಡಿಸಿಯೇ ಕೊಲ್ಲುವೆನು.

'ಹಾಸ್ಯಕ್ಕಾಗಿ ಅಥವಾ ನಿನ್ನನ್ನು ಬೆದರಿಸುವುದಕ್ಕಾಗಿ ಈ ರೀತಿ ಬರೆದಿರುವೆನೆಂದು ಭಾವಿಸಬೇಡ. ನಾನು ನುಡಿದಂತೆ ನಡೆಯು ವೆನೋ, ಇಲ್ಲವೋ? ಎಂಬುದು ನಿನಗೇ ತಿಳಿಯುತ್ತದೆ? ನನ್ನ ಸಾಹಸದ ಪ್ರತಿಫಲವಾಗಿ ನಿನ್ನ ಎದುರಿಗಿರುವ ಶವವೊಂದೇ ಸಾಕು. ಅದಕ್ಕಿಂತಲೂ ಹೆಚ್ಚಿನ ನಿದರ್ಶನ ಬೇಕೇ?

'ಇನ್ನು ಕೆಲವು ದಿನಗಳಲ್ಲಿಯೇ ನಿನ್ನ ಇಹಲೋಕ ವ್ಯಾಪಾರವು ಮುಗಿಯುವುದರಿಂದ ಅಷ್ಟರಲ್ಲಿಯೇ ನಿನ್ನ ಮನದಭಿಲಾಷೆ ಏನಿದ್ದರೂ ಮುಗಿಸಿಕೊ. ಆಸೆಯಿಟ್ಟುಕೊಂಡು ಅಪಮೃತ್ಯುವಿಗೀಡಾಗಿ, ಪಿಶಾಚಿಯಾಗಿ ತಿರುಗುತ್ತಾ ನಿರಪರಾಧಿಗಳಿಗೆ ತೊಂದರೆ ಕೊಡುವುದು ಬೇಡ. ರಾಮನಾಥನಿಗೂ ಹೇಳು. ಮರೆಯಬೇಡ. ದೇಹವೆರಡಾದರೂ ಆತ್ಮವೊಂದೇ ಎನ್ನುವಷ್ಟರ ಮಟ್ಟಿಗಿರುವ ನಿಮ್ಮನ್ನು ಒಂದೇ ಸಾರಿಗೆ ಪರಲೋಕಕ್ಕೆ ಕಳುಹಿಸುವುದು ಸೂಕ್ತವಲ್ಲವೇ? ಇನ್ನು ಹೆಚ್ಚು ಬರೆಯುವುದು ಅನಾವಶ್ಯಕ.'

ನಿನ್ನ ಚಿರಪರಿಚಿತ ಶತ್ರು
'ಭಯಂಕರಭೂತ'

ಕಾಗದವನ್ನು ಓದಿದ ಪುರುಷೋತ್ತಮನು ಮುಗುಳ್ನಕ್ಕನೇ ವಿನಃ

ಗಾಬರಿಯಾಗಲಿಲ್ಲ. ಭೀತಿಯನ್ನೂ ಹೊಂದಲಿಲ್ಲ. ಕಾಗದದಲ್ಲಿಯೇ ತಿಳಿಸಿರುವಂತೆ ಇವನ ಹಾಗೆ ಕಾಗದ ಬರೆದವರು ಕಾರಾಗೃಹದಲ್ಲಿರುವಾಗ ಇವನೂ ಸಹ ಒಂದು ದಿನ ಸೆರೆಮನೆ ಸೇರುವುದರಲ್ಲಿ ಆಶ್ಚರ್ಯವಿಲ್ಲವೆಂದುಕೊಂಡನು.

ರಾಮನಾಥನು ಕಾಗದವನ್ನು ಓದಿ ಸಿಟ್ಟಾದನಲ್ಲದೆ, ಪುರುಷೋತ್ತಮನಂತೆ ಸಹನ ಗುಣವನ್ನು ಹೊಂದಲಿಲ್ಲ.

ಇನ್ಸ್‌ಪೆಕ್ಟರನು ಕಾಗದವನ್ನು ತಂದುಕೊಟ್ಟ ಸಮಯದಲ್ಲಿಯೇ ಅನ್ನದಾನಪ್ಪನವರು ಸತ್ಕಾರ ಸಮಾರಂಭದ ನೆವವನ್ನು ಕಲ್ಪಿಸಿಕೊಂಡು ಬಂದಿರುವರಾದ್ದರಿಂದ ಅವರೇ ಕೊಲೆಗಾರರಾಗಿದ್ದರೂ ಆಗಿರಬಹುದೆಂದುಕೊಂಡನಲ್ಲದೆ, ಪೋಲೀಸ್ ಠಾಣೆಗೆ ಬರಲು ಸಾಧ್ಯವಾಗದೆ ಹೋದ್ದರಿಂದ ಮನೆಗೆ ಬಂದಿರುವರೆಂದು ಯೋಚಿಕೊಂಡನು.

ಅನ್ನದಾನಪ್ಪನವರೇ ಕೊಲೆಗಾರರೆಂಬುದರಲ್ಲಿ ಸಂದೇಹವಿಲ್ಲವೆಂದು ರಾಮನಾಥನು ದೃಢಪಡಿಸಿಕೊಂಡನು.

"ಇವರಿಗೆ ಅನ್ನದಾನಪ್ಪನೆಂದು ಹೆಸರಿಟ್ಟವರಾರು? ಅನ್ನವನ್ನು ದಾನ ಮಾಡುತ್ತಿದ್ದರೇ?"

—ಎಂದು ವ್ಯಂಗ್ಯವಾಗಿ ಇನ್ಸ್‌ಪೆಕ್ಟನಿಗೆ ಕೇಳಿದ ರಾಮನಾಥ.

"ಅನ್ನದ ಮಾತೇಕೆ ಎತ್ತುವಿರಿ? ಒಂದು ಅಗುಳನ್ನೂ ದಾನ ಮಾಡುವುದಿಲ್ಲ. ಯಾವ ಸಮಯದಲ್ಲಿಯೇ ಆಗಲಿ ಭಿಕ್ಷುಕರಿಗೆ ಒಂದು ನಯೇ ಪೈಸೆ ಕೊಟ್ಟದ್ದನ್ನು ನಾನು ಕಂಡಿಲ್ಲ."

—ಎಂದು ಗಾಂಭೀರ್ಯದಿಂದ ನುಡಿದ ಚಂದ್ರನಾಥ.

ರಾಮನಾಥನು ಅಲ್ಲಿಗೇ ತಟಸ್ಥನಾದನಲ್ಲದೆ ಪುನಃ ಮಾತನಾಡಲಿಲ್ಲ.

"ಪತ್ತೇದಾರರೇ! ಕಾಗದದ ವಿವರವು ಹೇಗಿದೆ?"

—ಎಂದು ಚಂದ್ರನಾಥನು ಪುರುಷೋತ್ತಮನಿಗೆ ಕೇಳಿದ.

"ಹಿಂದಿನ ಕಳ್ಳರಿಗಿಂತ ಒಂದು ಕೈ ಜೋರಾಗಿ ಬರೆದಿರುವನು. ಕೊಲೆಗಾರನು ಸಾಮಾನ್ಯನಲ್ಲವೆಂದು ಇದರಿಂದಲೇ ವ್ಯಕ್ತಪಡುತ್ತದೆ."

—ಎಂದು ಸೌಮ್ಯನಾಗಿ ಉತ್ತರವಿತ್ತ ಪುರುಷೋತ್ತಮ.

"ಕಾಗದದಲ್ಲಿ ಬರೆದಿರುವಂತೆ ನಿಮ್ಮ ಪರಿಚಯ ಮಾಡಿಕೊಳ್ಳಬಹುದೇ?"

"ಏಕಾಗುವುದಿಲ್ಲ? ಹಿಂದಿನ ಎಷ್ಟೋ ಜನ ಕಳ್ಳ, ಕೊಲೆಗಾರರು ನಮಗೆ ಆಪ್ತ ಮಿತ್ರರೆನಿಸಿಕೊಂಡು, ನಮ್ಮ ಸಂಗಡವೇ ಓಡಾಡಿಕೊಂಡಿದ್ದು ಬೆದರಿಕೆಯ ಪತ್ರಗಳನ್ನು ಬರೆದು, ಕೊಲೆ–ದರೋಡೆಗಳನ್ನು ಮಾಡಲಿಲ್ಲವೇ? ಹಾಗೆ ಈತನೂ ನಮ್ಮ ಸಂಗಡವೇ ಓಡಾಡಿಕೊಂಡಿದ್ದು, ನಮ್ಮ ಕಣ್ಣುಗಳಿಗೆ ನಿರಪರಾಧಿಯಂತೆ ಕಂಡು ತನ್ನ ಕಾರ್ಯ ಸಾಧಿಸಿಕೊಳ್ಳಬಹುದು. ಚಿಕ್ಷಾಕರು ಸಾಧಾರಣದವರು, ಕಳ್ಳ, ಕೊಲೆಗಾರರಾದರೆ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳದೆ, ಕಣ್ಮರೆಯಾಗಿರುವರು. ಶ್ರೀಮಂತರೂ, ವ್ಯವಹಾರ ಚತುರರೂ ಆದವರು ನಮ್ಮ ಮುಂದೆಯೇ ಓಡಾಡಿಕೊಂಡಿದ್ದು, ನಮ್ಮ ಮಿತ್ರರಲ್ಲೊಬ್ಬರಾಗಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವರು."

"ಹಾಗಾದರೇ! ಈ ಕೊಲೆಗಾರನು ಶ್ರೀಮಂತನಲ್ಲದೆ ವ್ಯವಹಾರ ಚತುರನೆಂದು ಹೇಳುವಿರಾ?"

"ಹೌದು! ಅದಕ್ಕೆ ಈ ಕಾಗದವೇ ಸಾಕ್ಷಿ. ಶವವನ್ನು ಸುಲ್ತಾನ್ ನಗರದಿಂದ ನಮ್ಮಲ್ಲಿಗೆ ಕಳುಹಿಸಿರುವುದೇ ಆಧಾರ. ಆ ನಗರದಲ್ಲಿ ಕೊಲೆ ಮಾಡಿ, ಇಷ್ಟು ದೂರ ಕಳುಹಿಸುವ ಅವಶ್ಯಕತೆಯೇನಿತ್ತು? ಅಲ್ಲಿಯೇ ಮಣ್ಣು ಮಾಡಿದ್ದರೆ ನಮಗೇನು ತಿಳಿಯುತ್ತಿತ್ತು? ತಾನಾಗಿಯೇ ನಮಗೆ ಆಹ್ವಾನವಿತ್ತಿರುವನು. ಹಾಗಿರುವಾಗ ಆತನು ಯುಕ್ತಿ, ಚತುರತೆ ಮತ್ತು ಸಾಹಸಗಳಲ್ಲಿ ಮೇಲಾದವನೆಂದು ತೋರುವುದಿಲ್ಲವೇ? ಯೋಚಿಸಿ ನೋಡಿ"

"ಈತನಿಗೂ ನಿಮಗೂ ಪರಿಚಯವಿಲ್ಲ. ಮುಂದೆ ಹೊಸದಾಗಿ ಪರಿಚಯವಾಗಬೇಕು. ಹೊಸದಾಗಿ ಮಿತ್ರರಾಗುವವರಾರೆಂಬುದನ್ನು ಕಂಡುಕೊಂಡರೆ ನಮ್ಮ ಕಾರ್ಯವು ಕೈಗೂಡಿದಂತಾಗುವುದಿಲ್ಲವೇ?"

"ಒಂದು ವೇಳೆ ಸಾಧ್ಯವಾದರೂ ಆಗಬಹುದು. ಕಾಗದದಲ್ಲಿ ಬರೆದಿರುವಂತೆ ಹೊಸದಾಗಿ ಪರಿಚಯವಾದರೆ ನಮ್ಮ ಕಾರ್ಯಕ್ಕೆ ಅನುಕೂಲವಾಗುತ್ತದೆ. ನಮಗೆ ಪೂರ್ವಪರಿಚಿತನೇ ಆಗಿದ್ದರೆ, ನಾವು ಯಾರ ಮೇಲೆ ಸಂದೇಹಪಡಲು ಸಾಧ್ಯ? ಇದರಲ್ಲಿ ತಿಳಿಸಿರುವಂತೆಯೇ ನಡೆಯುತ್ತದೆಯೆಂಬುದರಲ್ಲಿ ನನಗೆ ಸಂದೇಹವೆ. ಈಗ ನಮಗೆ ಅನ್ನದಾನಪ್ಪನವರು ಹೊಸದಾಗಿ ಪರಿಚಿತರಾದರು. ಇವರು ನನ್ನನ್ನು ನೋಡಿದ್ದರು. ನಾನು ಇವರನ್ನ

ಯಾವುದೋ ಒಂದು ಸಮಯದಲ್ಲಿ ನೋಡಿರಬಹುದು. ಒಂದು ವೇಳೆ ನೋಡಿಯೇ ಇಲ್ಲವೆಂದರೂ ಹೆಸರನ್ನಾದರೂ ಕೇಳಿರುವೆನು. ಕಾಗದದಲ್ಲಿ ತಿಳಿಸಿರುವಂತೆ ನಮಗೂ ಇವರಿಗೂ ಪರಿಚಯವಾಗಿದೆ. ನೀವೇ ನಮ್ಮಿಬ್ಬರಿಗೂ ಪರಿಚಯ ಮಾಡಿಸಿ, ಮುಂದೆ ಹೊಗಳಿ, ಹಿಂದೆ ಇವರ ವೃತ್ತಾಂತವನ್ನೆಲ್ಲಾ ಹೇಳಿದಿರಿ."

"ಇವರೇ ಅಪರಾಧಿಗಳೆಂಬುದರಲ್ಲಿ ಸಂದೇಹವಿಲ್ಲ. ನನಗೆ ಮಾತ್ರ ಇವರಮೇಲೇ ಅನುಮಾನವಿದೆ. ಎಂದೂ ಬಾರದೆ ಇದ್ದವರು ಈಗ ಬಂದಿರುವರು. ಇಲ್ಲಿಗೆ ಬರಲು ಬೇಕಾದ ಏರ್ಪಾಡು ಮಾಡಿಕೊಂಡೇ ಬಂದಿರುವರೆಂದು ನನ್ನ ಅಭಿಪ್ರಾಯ."

—ಎಂದು ಅವರಿಬ್ಬರ ನಡುವೆ ರಾಮನಾಥನು ಪ್ರವೇಶಮಾಡಿದ.

"ಈ ಅನ್ನದಾನಪ್ಪನವರ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಿಜವಾಗಿಯೂ ನಿಮಗೆ ಹೊಸ ಪರಿಚಿತರೇ ಆಗಿರುವರಲ್ಲ?"

—ಎಂದು ಚಂದ್ರನಾಥನು ಪುರುಷೋತ್ತಮನಿಗೆ ಮಾರ್ಮಿಕವಾಗಿ ಪ್ರಶ್ನಿಸಿದ.

"ನಿಮಗೂ, ಇವರಿಗೂ ಹದಿನೈದು ವರ್ಷಗಳಿಂದ ಸ್ನೇಹ, ಪರಿಚಯವಿರುವುದರಿಂದ ಇವರ ವಿಷಯವಾಗಿ ಈಗ ಮಾತ್ರ ಏನೂ ಹೇಳಲಾರದವನಾಗಿರುವೆನು. ಆದರೇ! ಇಲ್ಲಿ ಮಾತನಾಡಿದ ಬಗೆಯು ಮಾತ್ರ ಕೊಂಚ ಅನುಮಾನಕ್ಕೆಡೆಯಾಗಿದೆ."

"ನನಗೆ ಹದಿನೈದು ವರ್ಷಗಳ ಮಿತ್ರರಾದರೇನು? ಮೂವತ್ತು ವರ್ಷಗಳಿಂದ ಪರಿಚಿತರಾಗಿದ್ದರೇನು? ನ್ಯಾಯವೆಂಬುದು ಎಲ್ಲರಿಗೂ ಒಂದೆ. ತಪ್ಪು ಮಾಡಿದವರು ಯಾರಾಗಿದ್ದರೇನು? ಅವರವರು ಮಾಡಿದ ತಪ್ಪಿನ ಪ್ರತಿಫಲವನ್ನು ಅನುಭವಿಸಲೇಬೇಕು. ಆದರೇ! ನಾನು ಮಾತ್ರ ಇವರು ನಿರಪರಾಧಿಗಳೆಂದು ಹೇಳಬಲ್ಲೆ. ನಿಮ್ಮ ಅಭಿಪ್ರಾಯವು ಹೇಗಿರುವುದೋ, ಏನೋ."

"ನಿರಪರಾಧಿಯಾಗಿದ್ದರೆ ಉತ್ತಮವೇ ಆಯಿತು."

—ಎಂದು ನಕ್ಕುನುಡಿದ ಪುರುಷೋತ್ತಮ.

"ಅಪರಾಧಿಯು ಜೀವಿಸುವನೇ ಆಗಿದ್ದರೆ ಆತನು ನಾಳೆಯ ದಿನ ಸತ್ಕಾರ, ಸಮಾರಂಭಕ್ಕೆ ಬರಬಹುದಲ್ಲವೇ? ಅವನೂ ಆಹ್ವಾನಿತನಾಗಿರ ಬಹುದು. ಅಲ್ಲಿಯೇ ನಮ್ಮ ಆತನ ಪರಿಚಯವಾಗಬಾರದೇಕೆ?"

"ಆ ರೀತಿಯಾದರೂ ಆಗಬಹುದು. ಹೀಗೆಯೇ ನಡೆಯುವುದೆಂದು ಹೇಳಲು ಸಾಧ್ಯವಾಗದೆ ಹೋದರೂ, ಹೀಗೆ ನಡೆಯಬಹುದೆಂದು ಊಹೆ ಮಾಡಿ ಹೇಳಬಹುದು. ನಿಮ್ಮ ಮಾತಿನಂತೆ ನಡೆದರೂ ನಡೆಯಬಹುದು. ಈ ಸಮಾರಂಭವನ್ನೇರ್ಪಡಿಸಲು ಆತನು ಮೂಲ ಕಾರಣನಾಗಿದ್ದರೂ ಆಗಿರ ಬಹುದು."

"ಅದರಲ್ಲಿ ಸಂದೇಹವಿಲ್ಲವೆಂದೇ ನನ್ನ ಭಾವನೆ. ಬಹಿರಂಗವಾಗಿ ಸರ್ವರ ಸಮ್ಮುಖದಲ್ಲಿ ಪರಿಚಿತನಾದರೆ, ಅವನಮೇಲೆ ಅನುಮಾನಗೊಳ್ಳಲು ಆಸ್ಪದವೆಲ್ಲಿರುತ್ತದೆ? ನೀವು ಹೇಳಿದಂತೆ ನಾಳೆಯ ದಿನದ ಕಾರ್ಯಕಲಾಪ ಗಳಿಗೆ ಆತನ ಕೈವಾಡವಿದ್ದರೂ ಇರಬಹುದು. ನಾವು ಜಾಗರೂಕರಾಗಿದ್ದರೆ, ಕೊಲೆಗಾರನಾರೆಂದು ತಿಳಿಯಲಾಗದೆಹೋದರೂ, ಅವನ ನೆರಳನ್ನಾದರೂ ನೋಡಿ ತಿಳಿಯಬಹುದು. ನಮ್ಮ ನೈಪುಣ್ಯತೆಯ ಚಮತ್ಕಾರವನ್ನು ತೋರಿಸಬೇಕಾದರೆ ನಾಳೆಯ ದಿನವೇ ಎಂದು ನನ್ನ ಅಭಿಪ್ರಾಯ. ಇದಕ್ಕೆ ನೀವೇನು ಹೇಳುವಿರಿ? ಈ ಬಗ್ಗೆ ನಿಮ್ಮ ಸಲಹೆ ಏನು?"

"ನನಗೂ ಹಾಗೆಯೇ ತೋರುತ್ತದೆ. ನಾಳೆಯ ದಿನವೇ ನಮ್ಮ ಆತನ ಪರಿಚಯವಾಗುವುದರಲ್ಲಿ ಸಂದೇಹವಿಲ್ಲ."

"ಶವದ ಬಗ್ಗೆ ಮಾಡಿ ಮುಗಿಸಬೇಕಾದ ಅಲ್ಪಸ್ವಲ್ಪ ಕಾರ್ಯವಿದೆ. ನಾನಿಲ್ಲದೆ ಆ ಕಾರ್ಯವು ಮುಗಿಯುವಹಾಗಿಲ್ಲ. ನಾನು ನಾಳೆಯ ದಿನ ಇಲ್ಲಿಗೇ ಬರುವೆನು. ತಪ್ಪಿದರೆ ಸತ್ಕಾರವು ನಡೆಯುವ ಛತ್ರದ ಬಳಿಗೆ ಬರು ವೆನು."

ಪುರುಷೋತ್ತಮನು ಮಾತನಾಡದೆ ತನ್ನ ಒಪ್ಪಿಗೆಯನ್ನು ಸೂಚಿಸಿ, ತಲೆಯಾಡಿಸಿ ಹುಬ್ಬುಹಾರಿಸಲು ಇನ್ಸ್ಪೆಕ್ಟರನು ಹಿಂದಿರುಗಿದ.

"ನಾವು ಹುಚ್ಚರಾಗುವೆವೇ? ನೀವು ಹುಚ್ಚರಾಗುವಿರೆಂದು ಬರೆದಿರು ವನಲ್ಲ. ನಮಗೆ ಹುಚ್ಚು ಹಿಡಿಸಿ ಕೊಲ್ಲುವನೇ? ಅವನಿಗೆ ಅಷ್ಟು ಸಾಮರ್ಥ್ಯ ವಿರುವುದೇ? ಮೂರ್ಖನನ್ನು ಪತ್ತೆಮಾಡಿ ಹಿಡಿಯಲು ನಮ್ಮಂತವರು ಸಾಧಿ

ಜನ ಬೇಕೇ? ನನ್ನ ಎದುರಿಗೆ ಸಿಕ್ಕರೆ ಎಷ್ಟು ಜನ ಬೇಕಾಗುವರೆಂದು ತೋರಿಸುವೆನು. ನಮ್ಮನ್ನು ಅಪಮೃತ್ಯುವಿಗೀಡುಮಾಡುವನಂತೆ, ಅವಿವೇಕಿ. ಕಾಗದದಲ್ಲಿ ಬರೆದು ಮರೆಯಲ್ಲಿ ಅಡಗಿ ಕುಳಿತುಕೊಂಡರೇನು ಫಲ. ಎದುರಿಗೆ ಬಂದು ಒಂದೆರಡು ಮಾತನಾಡಿದರೆ ಸಾಕು. ಏನು ಮಾಡುವೆನೆಂದು ಈಗ ಹೇಳಿ ಫಲವಿಲ್ಲ."

—ಎಂದು ಕ್ರೌರ್ಯದಿಂದ ನುಡಿದ ಸಿಟ್ಟಿನ ಪ್ರತಿಮೂರ್ತಿ ರಾಮನಾಥ.

"ರಾಮನಾಥ! ಹಾಗೇಕೆ ಕೋಪಿಸಿಕೊಳ್ಳುವೆ? ನಾಯಿಗಳು ಬೊಗಳಿದರೆ ದೇವಲೋಕ ಹಾಳಾಗುವುದೇ? ಹಾಗೆ ಈತನು ನಿಂದಿಸಿ ಕಾಗದ ಬರೆದಮಾತ್ರಕ್ಕೆ ನಮ್ಮ ಗೌರವಕ್ಕೆ ಕುಂದುಂಟಾಯಿತೇ? ಇವನಹಾಗೆ ಕಾಗದ ಬರೆದವರು ಈಗ ಯಾವ ಪರಿಸ್ಥಿತಿಯಲ್ಲಿರುವರೆಂಬುದನ್ನು ಯೋಚಿಸಿ ನೋಡು."

"ನಾಳೆಯ ದಿನ ಅಧಮನು ಸತ್ಕಾರ ಕೂಟಕ್ಕೆ ಬಾರದಿರುವುದಿಲ್ಲ. ನೀನು ಹೇಗಾದರೂ ಮಾಡಿ ಅವನಾರೆಂಬುದನ್ನು ಕಂಡುಹಿಡಿ. ಬಿಡಬೇಡ. ಆಗಲೇ ಅವನ ಅವಸ್ಥೆಯೇನಾಗುವುದೆಂದು ನೀನೇ ನೋಡುವೆ. ನನ್ನಿಂದ ಮಾತ್ರ ಪತ್ತೇದಾರಿ ಹಿಡಿಯಲು ಸಾಧ್ಯವಾಗದೆಂದು ಈಗಲೇ ಹೇಳುವೆನು. ನೀನು ಕೊಂಚ ಜಾಗರೂಕನಾದರೆ ಸಾಕು, ಆತನಾರೆಂದು ತಿಳಿಯಬಹುದು."

"ನಾನು ನನ್ನ ಯತ್ನಮೀರಿ ಪ್ರಯತ್ನಪಡುವೆನು. ಅದರಮೇಲೆ ದೈವಚಿತ್ತ."

"ತನ್ನ ವೀರತ್ವವನ್ನು ತೋರಿಸಿಕೊಳ್ಳಲು ಶವವನ್ನು ನಮ್ಮಲ್ಲಿಗೆ ಕಳುಹಿಸಿರುವನೆಂದಬಳಿಕ, ನಾವು ಅವನ ವೀರತ್ವಕ್ಕೆ ತಕ್ಕ ಮರ್ಯಾದೆ ಮಾಡುವುದು ಬೇಡವೇ? ಮಾಡದೆ ಬಿಟ್ಟರೆ ನಮಗೆ ಅಗೌರವವೇ? ಇನ್ನೂ ಆರೇಳು ಜನರನ್ನು ಕೊಲ್ಲುವನಂತೆ ಅವಿವೇಕಿ. ಅವನೇನು 'ಭಯಂಕರ ಭೂತ'ನೇ? ನನ್ನ ಎದುರಿಗೆ ತನ್ನ ಆಕಾರವನ್ನು ತೋರಿಸಬಾರದೇ?"

ಮಾತಿಗೆ ಮಾತು ಬೆಳೆದರೆ, ರಾಮನಾಥನ ಸಿಟ್ಟು ಹೆಚ್ಚುತ್ತಾ ಹೋಗುವುದೆಂದು ಭಾವಿಸಿದ ಪುರುಷೋತ್ತಮನು ಮಾತನಾಡಲಿಲ್ಲ.

ಪುರುಷೋತ್ತಮನು ಮಾತನಾಡದೆ ಹೋದ್ದರಿಂದ ರಾಮನಾಥನೂ ತಟಸ್ಥನಾಗಬೇಕಾಯಿತು.

ಕೆಲಹೊತ್ತು ಮೌನರಾಗಿ ಕುಳಿತಿದ್ದ ಇಬ್ಬರೂ ಮನೆಯಿಂದ ಹೊರಗೆ ಹೊರಟರು.

೪

ಧರ್ಮಪ್ರಕಾಶ ಧರ್ಮಯ್ಯನವರ ಛತ್ರದಲ್ಲಿ ಇಂದು ಶ್ರೀಮಂತರೂ, ಸರಕಾರದ ಅಧಿಕಾರಿಗಳೂ, ಪತ್ತೇದಾರರೂ ಮತ್ತು ಇತರ ಮಹನೀಯರು, ಇಂಗ್ಲೇಂಡಿನಿಂದ ವ್ಯಾಸಂಗ ಮುಗಿಸಿಕೊಂಡು ಹಿಂದಿರುಗಿದ ರಾಜಗೋಪಾಲನಿಗಾಗಿ ಏರ್ಪಟ್ಟಿರುವ ಗೌರವ ಸತ್ಕಾರ ಕೂಟಕ್ಕೆ ಮಾನ್ಯ ಅತಿಥಿಗಳಾಗಿ ಆಗಮಿಸಿರುವರು.

ಛತ್ರದ ಮುಂಭಾಗದಲ್ಲಿ ದೊಡ್ಡ ಚಪ್ಪರವನ್ನು ಕಟ್ಟಿ ಅಲಂಕಾರ ಮಾಡಿರುವರು.

ವಿದ್ಯುದ್ದೀಪಗಳಿಂದಲಂಕೃತವಾದ ಚಪ್ಪರವು ನಯನಗಳಿಗೆ ಮನೋಹರವಾಗಿ ಕಾಣಿಸುತ್ತಲಿದೆ.

ಅನ್ನದಾನಪ್ಪನವರ ಓಡಾಟವು ಹೇಳುವುದಕ್ಕೇ ಬಾರದು. ಒಂದು ನಿಮಿಷವೂ ನಿಂತಲ್ಲಿ ನಿಲ್ಲರು.

ಪ್ರತಿಯೊಬ್ಬರೂ ತಮತಮಗೆ ನಿಯಮಿತವಾದ ಆಸನಗಳಲ್ಲಿ ಕುಳಿತರು.

ಪತ್ತೇದಾರರು ಅನ್ನದಾನಪ್ಪನವರ ಗಡಿಬಿಡಿಯನ್ನೇ ನೋಡುತ್ತಿರುವರು.

ರಾಜಗೋಪಾಲನು ಇನ್ನೂ ಬಂದಿರಲಿಲ್ಲ. ಆತನು ಭಾಷಣ ಮಾಡುವುದಕ್ಕೂ ಏರ್ಪಾಡು ಮಾಡಿರುವರು.

ಅನ್ನದಾನಪ್ಪನವರು ಮಾನ್ಯ ಅತಿಥಿಗಳನ್ನು ಕಂಡು ಸಂತೋಷದಿಂದ ಮಾತನಾಡುತ್ತಾ ಪತ್ತೇದಾರರಿದ್ದಲ್ಲಿಗೆ ಬಂದರು.

ಪತ್ತೇದಾರರನ್ನು ನೋಡಿ ಹರ್ಷದಿಂದ ಹಸ್ತಲಾಘವವನ್ನಿತ್ತು—

"ಪತ್ತೇದಾರರೇ! ನೀವು ಬಂದದ್ದು ನೋಡಿ ನನಗೆ ಸಂತೋಷವಾಯಿತು. ಈ ಬಡವನ ಕೂಟಕ್ಕೆ ನಿಮ್ಮಂತವರು ದಯಮಾಡಿಸಿದ್ದು ನನ್ನ ಭಾಗ್ಯೋದಯವೇ ಸರಿ. ನಾನೇ ಖುದ್ದಾಗಿ ಎಲ್ಲರಿಗೂ ಹೇಳಿ ಬಂದುದರಿಂದ ಯಾರೊಬ್ಬರೂ ತಪ್ಪಿಸಿಕೊಳ್ಳದೆ ಬಂದಿರುವರು. ನಿಮಗೆ ಇಲ್ಲಿ ಕೆಲವರ ಪರಿಚಯ ಇರಲಾರದು. ನಾನು ಮಾಡಿಸುವೆನು ಬನ್ನಿ" ಎಂದು ಹೇಳಿದರು.

ಪತ್ತೇದಾರರಿಗೆ ಬೇಕಾದ್ದು ಅದೆ. ರೋಗಿ ಹಾಲು ಅನ್ನವನ್ನು ಬಯಸಿದಾಗ ವೈದ್ಯರು ಅದನ್ನೇ ಹೇಳಿದರೆ ರೋಗಿಗೆ ಸಂತೋಷವಾಗುವುದಿಲ್ಲವೇ?

ಪತ್ತೇದಾರರಿಗೆ ಸತ್ಕಾರ ಸಮಾರಂಭದ ವೈಭವವೇನೂ ಬೇಕಾಗಿರಲಿಲ್ಲ. ಅದರಲ್ಲಿ ಭಾಗವಹಿಸಿ ಆನಂದಪಡಬೇಕಾದ ಪ್ರಮೇಯವೂ ಇರಲಿಲ್ಲ.

ಅನ್ನದಾನಪ್ಪನವರು ಅವರಿಬ್ಬರನ್ನು ಕರೆದುಕೊಂಡು ನಾಲ್ಕು ಹೆಜ್ಜೆ ಮುಂದೆ ಹೋಗಿ, ಅಲ್ಲಿ ಕುಳಿತಿದ್ದ ಸ್ಥೂಲಕಾಯದ ಶೆಟ್ಟರನ್ನು ತೋರಿಸಿ—

"ಇವರು ನಮ್ಮ ನಗರದ ಗಣ್ಯ ವರ್ತಕರಲ್ಲೊಬ್ಬರು. ಇವರ ಹೆಸರು ರಂಗಯ್ಯ ಶ್ರೇಷ್ಠಿ. ಅನಾಥಾಲಯಗಳಿಗೆ ಸಾವಿರಾರು ರೂಪಾಯಿ ದಾನ ಮಾಡಿದ್ದಾರೆ" ಎಂದು ಹೇಳಿದರು.

ಪತ್ತೇದಾರರು ಆ ವರ್ತಕನ ಪರಿಚಯ ಮಾಡಿಕೊಂಡು ಮುಂದೆ ಹೋದರು.

ಅಲ್ಲಿ ಕುಳಿತಿದ್ದ ವೃದ್ಧರನ್ನು ತೋರಿಸಿ—

"ಇವರೇ ಲೋಕ ಸೇವಾನಿರತ ಲೋಕಪ್ಪನವರು. ಇವರ ಹೆಸರಿನ ಒಂದು ಬೀದಿಯೇ ಈ ನಗರದಲ್ಲಿದೆ. ಪಾಠಶಾಲೆ, ಪಶು ವೈದ್ಯಶಾಲೆಗಳನ್ನು ಕಟ್ಟಿಸಿಕೊಟ್ಟ ಲೋಕೋಪಕಾರಿಗಳಾದ ಮಹಾತ್ಮರು"

ಪತ್ತೇದಾರರು ಅವರಿಗೂ ನಮಸ್ಕಾರ ಮಾಡಿ ಪರಿಚಯ ಮಾಡಿಕೊಂಡರು.

ಮುಂದೆ ಹೋಗಿ ಗಿರಿಜಾ ಮೀಸೆಯವರೊಬ್ಬರನ್ನು ಪರಿಚಯ ಮಾಡಿಕೊಡುತ್ತಾ—

"ಇವರು ಯಂತ್ರ, ತಂತ್ರ ಮತ್ತು ಮಂತ್ರ ವಿದ್ಯೆಗಳಲ್ಲಿ ಮಹಾ ನಿಪುಣರು. ಮಂತ್ರ ವಿದ್ಯೆಯ ಮರ್ಮವನ್ನೆಲ್ಲಾ ಅರೆದು, ಕುಡಿದು ಜೀರ್ಣಿಸಿ

ಕೊಂಡಿರುವರು. ಮೋಡಿ ವಿದ್ಯೆಯ ಪ್ರದರ್ಶನದಲ್ಲಿ, ರಾಜ, ಮಹಾರಾಜರುಗಳಿಂದ 'ಸರ್ಟಿಫಿಕೇಟ್' ಪಡೆದಿರುವರು. ದೀನದರಿದ್ರರ ವಿಷಯದಲ್ಲಿ ಸಹಾನುಭೂತಿಯುಳ್ಳವರು. ಬಡವರಿಗೆ ಉಚಿತ ಚಿಕಿತ್ಸೆ ಮಾಡುವರು. ನಿಮಗೆ ಇವರ ಪರಿಚಯವಿರಬೇಕಾದ್ದು ಅವಶ್ಯಕ" ಎಂದು ಹೇಳಿದರು ಅನ್ನದಾನಪ್ಪನವರು.

ಪತ್ತೇದಾರರು ಅವರ ಪರಿಚಯ ಮಾಡಿಕೊಂಡರಲ್ಲದೆ, ವಿನಯದಿಂದ—

"ನಿಮ್ಮ ಹೆಸರೇನು? ನೀವಿರುವುದೆಲ್ಲಿ?" ಎಂದು ಪುರುಷೋತ್ತಮನು ಕೇಳಿದ.

"ನನ್ನ ಹೆಸರು ವೈದೀಶ್ವರನ್. ನಾನಿರುವುದು ಮಾರ್ಕೆಟ್ ರೋಡಿನಲ್ಲಿ. ನಿಮಗೆ ವಿರಾಮವಿದ್ದಾಗ ಒಂದು ಸಾರಿ ಬನ್ನಿ"

—ಎಂದು ಸಹಜ ಸ್ಥಿತಿಯಲ್ಲೇ ನುಡಿದ ಮಂತ್ರವಾದಿ.

ಪತ್ತೇದಾರರು ಸಂತೋಷದಿಂದ ಆಗಲೆಂಬಂತೆ ತಲೆಯಾಡಿಸಿ, ಅನ್ನದಾನಪ್ಪನವರ ಹಿಂದೆ ಹೋದರು.

ಪತ್ತೇದಾರರನ್ನು ಮುಂದೆ ಕರೆದುಕೊಂಡು ಹೋದ ಅನ್ನದಾನಪ್ಪನವರು ಅಲ್ಲಿ ಗಂಭೀರ ಭಾವದಿಂದ ಕುಳಿತಿದ್ದವರೊಬ್ಬರ ಪರಿಚಯ ಮಾಡಿಸುತ್ತಾ—

"ನಿಮಗೆ ಈ ಮಹನೀಯರ ಪರಿಚಯ ಮಾಡಿಸಲು ನನಗೆ ಸಂತೋಷವಾಗುತ್ತದೆ. ಇವರ ವ್ಯವಹಾರವು ವಿಚಿತ್ರಮಯವಾಗಿದೆ. ಇವರೇನು ಕೆಲಸ ಮಾಡಿಕೊಂಡಿರುವರೆಂದು ಯಾರಿಗೂ ತಿಳಿಯದು. ಸದಾ ಓಡಾಡಿಕೊಂಡೇ ಇರುತ್ತಾರೆ. ಎಲ್ಲರಿಗೂ ಬೇಕಾದ ಮನುಷ್ಯರು. ಸಾವಿರಾರು ರೂಪಾಯಿಗಳ ಲೇವಾದೇವಿ ನಡೆಯಿಸುವರು. ಶ್ರೀಮಂತಿಕೆಯ ವೈಭವದಲ್ಲೇ ಇರುವರಾದರೂ, ಇವರ ಒಳಮರ್ಮವು ಇವರಿಗೆ ಆಪ್ತರೆನಿಸಿಕೊಂಡವರಿಗೇ ತಿಳಿಯದು. ಬಹುಶಃ ಹಗಲುವೇಳೆ, ಮರ್ಯಾದಸ್ಥರಂತೆ ಓಡಾಡಿಕೊಂಡಿದ್ದು 'ರಾತ್ರಿಯ ವೇಳೆ ನಮ್ಮಂತವರ ಮನೆಗಳಿಗೆ ಕನ್ನ ಹಾಕುವರೋ ಏನೋ" ಎಂದು ಹಾಸ್ಯ ರಸವತ್ತಾಗಿ ತೇಲಿಸಿ, ನಗುತ್ತಾ ನುಡಿದರಲ್ಲದೆ, ಇವರ ಹೆಸರು ಬಾಲಕೃಷ್ಣನೆಂದು ತಿಳಿಸಿದರು.

ಪತ್ತೇದಾರರಿಗೆ ಬಾಲಕೃಷ್ಣನ ಮೇಲೆ ಸಂದೇಹ ಬಾರದಿರಲಿಲ್ಲ. ಇಬ್ಬರೂ ಆತನ ಮುಖವನ್ನು ಎವೆಯಿಕ್ಕದೆ ನೋಡಿದರು.

ಬಾಲಕೃಷ್ಣನು ಮೌನವಾಗಿ ಕುಳಿತುಕೊಳ್ಳಲಿಲ್ಲ. ಎದ್ದು ನಿಂತು—

"ಪತ್ತೇದಾರರೇ! ನಿಮ್ಮ ಪ್ರಖ್ಯಾತಿಯನ್ನು ಕೇಳಿ ತಿಳಿದಿದ್ದೆನಲ್ಲದೆ, ಮುಖತಃ ಪರಿಚಯವಿರಲಿಲ್ಲ. ಈಗ ಅನ್ನದಾನಪ್ಪನವರಿಂದ ನಿಮ್ಮ ಪರಿಚಯವಾದುದಕ್ಕಾಗಿ ನನಗೆ ಸಂತೋಷವಾಯಿತು. ನನಗೆ ವೇಳೆಯಿದ್ದಾಗ ನಿಮ್ಮಲ್ಲಿಗೆ ಬಂದು ಕಾಣುವೆನು" ಎಂದು ಹೇಳಿದ.

ಪತ್ತೇದಾರರಿಗೆ ಆಶ್ಚರ್ಯವಾಯಿತು. ಹಿಂದಿನವರಾರೂ ಅವನಂತೆ ಮಾತನಾಡಲಿಲ್ಲ. ಬಾಲಕೃಷ್ಣನು ಮಾತನಾಡಿದುದರಲ್ಲಿಯೂ ಒಂದು ಬಗೆಯ ಕಳೆಯಿದೆ.

ಕಾಗದದಲ್ಲಿ ಬರೆದಂತೆ ಪರಿಚಯವಾಗಿ ಮಾತುಕತೆಗಳು ನಡೆದಿರಬೇಕಾದರೆ, ಸಂದೇಹ ಬಾರದಿರುವುದೇ?

ಈಗ ಯಾವ ಬಗೆಯ ಅನುಮಾನವನ್ನೂ ತೋರ್ಪಡಿಸಿಕೊಳ್ಳದೆ, ಮುಂದೆ ಸೂಕ್ಷ್ಮವಾಗಿ ಇವನನ್ನು ಪರೀಕ್ಷಿಸಬೇಕೆಂದು ಪುರುಷೋತ್ತಮನು ಯೋಚಿಸಿ, ರಾಮನಾಥನು ದುಡುಕಿ, ಅನಾಹುತಕ್ಕೆ ಅವಕಾಶ ಕಲ್ಪಿಸಬಹುದೆಂಬ ಭಾವನೆಯಿಂದ ಅವನ ಕೈಹಿಡಿದು ಮುಂದೆ ಕರೆದುಕೊಂಡು ಹೋದನು.

ಅನ್ನದಾನಪ್ಪನವರು ಮತ್ತೊಬ್ಬರ ಪರಿಚಯ ಮಾಡಿ ಕೊಡುತ್ತಾ—

"ಇವರ ಹೆಸರು ರಾಘವಾಚಾರ್ಯ. ಇವರ ವೃತ್ತಿ ವೈದ್ಯಕೀಯ. ಸ್ವಂತ ವೈದ್ಯಶಾಲೆಯಿಟ್ಟುಕೊಂಡು ಜನೋಪಕಾರಿಗಳಾಗಿರುವರು. ಇವರನ್ನು ಎರಡನೆಯ ಧನ್ವಂತರಿಯೆಂದು ಕರೆಯುವರು. ಜೀವದಾಸೆಯನ್ನು ತೊರೆದ ರೋಗಿಗಳು ಇವರ ಹಸ್ತಗುಣದಿಂದ ಉಳಿದಿರುವರು. ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದವರು, ಇವರ ದೆಶೆಯಿಂದ ತಮ್ಮ ರೋಗಗಳನ್ನು ಗುಣಪಡಿಸಿಕೊಂಡು, ಇವರೇ ತಮ್ಮ ಮನೆದೇವರೆಂದು ಭಾವಿಸಿರುವರು. ಇವರ ಪರಿಚಯವಿಲ್ಲದವರು ವಿರಳ. ಇವರು ಈ ನಗರದಲ್ಲಿರುವುದು ನಮ್ಮೆಲ್ಲರ ಭಾಗ್ಯೋದಯವೇ ಸರಿ. ಆಸೆ ಬಿಟ್ಟ ರೋಗಿಗಳೂ ಇವರ ಹಸ್ತ ಕೌಶಲ್ಯದಿಂದ ಗುಣಮುಖರಾಗಿ, ಪುನರ್ಜನ್ಮ ಹೊಂದಿದವರಂತೆ ಇವರನ್ನು ಸ್ತುತಿಸು

ವರು. ಇವರ ವಿಷಯವಾಗಿ ಹೆಚ್ಚು ಹೇಳಿದರೆ ಹೊಗಳಿಕೆಯಾಗುವುದು" ಎಂದು ಹೇಳಿದರು.

ರಾಘವಾಚಾರ್ಯರು ಪತ್ತೇದಾರರಿಗೆ ನಗುಮುಖದಿಂದ ಹಸ್ತಲಾಘವ ವನ್ನಿತ್ತು ಬೀಳ್ಕೊಟ್ಟರು.

ಅಲ್ಲಿಂದ ಮುಂದೆ ಲಾಯರೊಬ್ಬರ ಪರಿಚಯ.

"ಇವರು ಸುಪ್ರಸಿದ್ಧ ವಕೀಲರಲ್ಲೊಬ್ಬರು. ಇವರು ಹಿಡಿದ ಕೇಸಿನಲ್ಲಿ ಅಪಜಯವೆಂಬುದೇ ಇಲ್ಲ. ನೂರಕ್ಕೆ ತೊಂಭತ್ತೈದು ಕೇಸುಗಳನ್ನು ಗೆದ್ದಿರು ವರು. ಇವರು ನಡೆಯಿಸುವುದು ಹೆಚ್ಚಾಗಿ ಕ್ರಿಮಿನಲ್ ಕೇಸುಗಳನ್ನೇ. ಅದೂ ಅಪರಾಧಿಗಳೆನಿಸಿದವರ ಪರವಾಗಿ ವಕಾಲತ್ತು ವಹಿಸುವರು. ಎದುರು ಪಾರ್ಟಿಯ ಸಾಕ್ಷಿಗಳ ಬಾಯಿಂದ ಸುಳ್ಳು ಹೇಳಿಸುವುದರಲ್ಲಿ ಮಹಾ ಜಾಣರು. ಒಬ್ಬರ ಪರವಾಗಿ ವಕಾಲತ್ತು ವಹಿಸಿದನಂತರ ಎದುರು ಪಾರ್ಟಿಯವರು ಸಾವಿರಾರು ರೂಪಾಯಿಗಳ ಆಸೆ ತೋರಿಸಿದರೂ ಅದಕ್ಕೆ ಬಲಿ ಬೀಳುವುದಿಲ್ಲ ಬಡವನಾಗಲಿ, ಬಲ್ಲಿದನಾಗಲಿ, ಒಬ್ಬರ ಪರ ವಕಾಲತ್ತು ವಹಿಸಿದರೆ ಮುಗಿ ಯಿತು. ಆ ಕೇಸು ಗೆದ್ದ ಹಾಗೆಯೇ. ಸಾವಿರಾರು ರೂಪಾಯಿಗಳ ಸಂಪಾ ದನೆಯಿದ್ದರೂ ನಿರಾಡಂಬರ ಜೀವಿಗಳು. ಸರ್ವರಲ್ಲಿಯೂ ಏಕಾಭಿಪ್ರಾಯ ವುಳ್ಳವರು. ಸಂಪಾದನೆಯಲ್ಲಿ ನಾಲ್ಕನೆಯ ಒಂದು ಭಾಗವನ್ನು ದಾನ, ಧರ್ಮ ಮಾಡಿ ಆ ಪಾಪವನ್ನು ಕಳೆದುಕೊಳ್ಳುವರು"

—ಎಂದು ಅನ್ನದಾನಪ್ಪನವರು ಕೊನೆಯ ಮಾತನ್ನು ವಿನೋದವಾಗಿ ಹೇಳಿ, ಪತ್ತೇದಾರರಿಗೆ ವಕೀಲರ ಪರಿಚಯ ಮಾಡಿ ಕೊಟ್ಟರು.

ವಕೀಲರ ಪರಿಚಯ ಮಾಡಿಕೊಂಡ ಪತ್ತೇದಾರರು ಮುಂದೆ ಹೋದರು.

ಇಲ್ಲಿಗೆ ಬಂದವರೆಲ್ಲರ ಪರಿಚಯ ಮಾಡಿಕೊಂಡರೆ ತಮ್ಮ ಕಾರ್ಯಸಾಧ ನೆಗೆ ಅನುಕೂಲವಾಗುವುದೆಂದು ಪುರುಷೋತ್ತಮನ ಭಾವನೆಯಾಗಿದೆ.

ಅನ್ನದಾನಪ್ಪನವರು ಮತ್ತೊಬ್ಬ ಶ್ರೀಮಂತರನ್ನು ಪತ್ತೇದಾರರಿಗೆ ಪರಿಚಯ ಮಾಡಿಕೊಡುತ್ತಾ ಈ ರೀತಿ ಹೇಳಿದರು—

"ಪತ್ತೇದಾರರೇ! ಇವರು ಮೋಟಾರು ವಾಹನಗಳ ಮಾಲೀಕರು ಇವರ ಸ್ವಾಧೀನದಲ್ಲಿ ಸುಮಾರು ಮೂವತ್ತು ಬಸ್ಸುಗಳಿವೆ. ಅದರ ಮೇಲೆ

ಲಾರಿ, ಕಾರುಗಳು ಬೇರೆ. ಇವರಲ್ಲಿ ಕೆಲಸಕ್ಕಿರುವ ಡ್ರೈವರ್ ಕಂಡಕ್ಟರ್ ಗಳೊಬ್ಬೊಬ್ಬರು ಸಾವಿರಾರು ರೂಪಾಯಿಗಳನ್ನು ಸಂಪಾದಿಸಿರುವರು. ಬಡತನದ ಬೇಗೆಯಲ್ಲಿ ಬೆಂದು ಶ್ರೀಮಂತ ಪದವಿಗೇರಿರುವುದರಿಂದ ಕಷ್ಟ ಸುಖಗಳ ಅನುಭವವು ಮನದಟ್ಟಾಗಿದೆ. ನೂರಾರು ಜನ ಬಡವರ ವಿವಾಹ ಕಾರ್ಯವನ್ನು ತಮ್ಮ ಸ್ವಂತ ಖರ್ಚಿನಿಂದ ಮಾಡಿ, ಜನಾದರಣೆ ಪಡೆದಿರುವರು. ವರ್ಷಕ್ಕೊಂದು ಸಾರಿ, ದೇವರ ಉತ್ಸವವನ್ನೇರ್ಪಡಿಸಿ, ಸಾವಿರಾರು ಜನ ಬಡಬಗ್ಗರಿಗೆ ಅನ್ನ ಸಂತರ್ಪಣೆಯಿಡುವರು. ಜನಸೇವೆಯೇ ಜನಾರ್ಧನಸೇವೆಯೆನ್ನುವ ಈ ಶ್ರೀಮಂತ ದಾಸಪ್ಪನವರ ಪರಿಚಯವು ನಿಮಗಿರಬೇಕು"

ಪತ್ತೇದಾರರು ದಾಸಪ್ಪನವರಿಗೆ ಹಸ್ತಲಾಘವವನ್ನಿತ್ತು ತಮ್ಮ ಸಂತೋಷವನ್ನು ವ್ಯಕ್ತಪಡಿಸಿಕೊಂಡರು.

ಬಳಿಕ ಅನ್ನದಾನಪ್ಪನವರು ರಾವ್‌ಬಹದ್ದೂರ್ ಬಿರುದಾಂಕಿತರು, ಧರ್ಮಪ್ರಕಾಶಕರೆಂದು ಬಿರುದು ಪಡೆದವರು, ಬ್ಯಾಂಕುಗಳ ಡೈರೆಕ್ಟರ್‌ಗಳು, ಹೋಟೆಲ್‌ಗಳ ಮಾಲೀಕರು, ರೇಷ್ಮೆ ವ್ಯಾಪಾರಗಳಲ್ಲಿ ಪ್ರಸಿದ್ಧರಾದವರು, ತಮ್ಮ ಹಾಗೆ ಜವಾಹಿರಿ ಅಂಗಡಿಗಳನ್ನಿಟ್ಟುಕೊಂಡಿರುವವರೆಲ್ಲರ ಪರಿಚಯವನ್ನು ಪತ್ತೇದಾರರಿಗೆ ಮಾಡಿಸಿಕೊಟ್ಟರು.

ಸರ್ಕಾರಿ ಅಧಿಕಾರಿಗಳ ಪರಿಚಯವನ್ನು ಮಾಡಿಸಿಕೊಡಬೇಕಾದ ಪ್ರಮೇಯವೇನೂ ಇರಲಿಲ್ಲ.

ಮೇಲಧಿಕಾರಿಗಳೊಡನೆ ಪತ್ತೇದಾರರು ಕುಶಲಪ್ರಶ್ನೆ ನಡೆಯಿಸಿದರು.

ತರುವಾಯ ತಮ್ಮ ಆಸನಗಳಲ್ಲಿ ಕುಳಿತರು.

ಪತ್ತೇದಾರರಿಗೆ ಬಾಲಕೃಷ್ಣನ ಮೇಲೆ ಸಂದೇಹವುಂಟಾಗಿದೆ.

ಆತನೇ ಅಪರಾಧಿಯಾಗಿದ್ದರೂ ಆಗಿರಬಹುದೆಂಬ ಅನುಮಾನ ಉದ್ಭವಿಸಿದೆ.

ಕೊಲೆಗಾರನು ಕಾಗದದಲ್ಲಿ ಬರೆದಿರುವಂತೆ, ಈ ಸತ್ಕಾರ ಕೂಟದಲ್ಲಿ ನಡೆದಿರುವುದರಿಂದ ಬಾಲಕೃಷ್ಣನ ಮೇಲೆ ಪೂರ್ಣ ಸಂದೇಹಗೊಂಡಿರುವರು.

ಅದರ ಮೇಲೆ ಅವನ ಕಾರ್ಯಕಲಾಪಗಳು ಇನ್ನೂ ಹೆಚ್ಚಿನ ಅನುಮಾನಕ್ಕೆ ಆಸ್ಪದವುಂಟುಮಾಡಿವೆ.

ಅನ್ನದಾನಪ್ಪನವರನ್ನು ಕರೆದು—

"ಈ ಸಮಾರಂಭವನ್ನು ಏರ್ಪಡಿಸಿದುದೇನೋ ಸರಿ. ಆದರೇ! ನೀವು ಫ್ಹೋಟೋ ಏರ್ಪಾಡು ಮಾಡಿರುವಿರೋ ಇಲ್ಲವೋ ತಿಳಿಯದು. ಆ ಒಂದು ಕಾರ್ಯ ಮಾಡಿದರೆ ನೀವು ಈ ಕೂಟವನ್ನಿಟ್ಟುದುದಕ್ಕೂ ಸಾರ್ಥಕವಾಗುವುದು" ಎಂದು ಹೇಳಿದ ಪುರುಷೋತ್ತಮ.

ಫ್ಹೋಟೋ ಇದ್ದರೆ ಅದರಲ್ಲಿ ತನಗೆ ಬೇಕಾದ ವ್ಯಕ್ತಿಯನ್ನು ನೋಡಬಹುದೆಂದು ಪುರುಷೋತ್ತಮನ ಯೋಚನೆಯಾಗಿದೆ.

ಅನ್ನದಾನಪ್ಪನವರು ನಗುತ್ತಾ—

"ನಾನು ಮೊದಲೇ ಏರ್ಪಾಡು ಮಾಡಿರುವೆನು" ಎಂದು ಹೇಳಿದರು.

"ಇಲ್ಲಿರುವ ಪ್ರತಿಯೊಬ್ಬ ಅತಿಥಿಯ ಮುಖವೂ ಚೆನ್ನಾಗಿ ಕಾಣುವಂತಿರಬೇಕು"

"ಆಗಲಿ. ಯಾರು ಕಾಣದೆ ಹೋದರೂ, ನಿಮ್ಮಿಬ್ಬರ ಮುಖಗಳು ಚೆನ್ನಾಗಿ ಕಾಣುವಂತಿರಲೆಂದು ಫ್ಹೋಟೋಗ್ರಾಫರನಿಗೆ ಹೇಳುವೆನು"

ಆ ವೇಳೆಗೆ ಸರಿಯಾಗಿ ಆ ಸತ್ಕಾರ ಕೂಟಕ್ಕೆ ಆಹ್ವಾನಿತನಾಗಿದ್ದ ಮತ್ತೊಬ್ಬ ಅತಿಥಿಯು ಆಗಮಿಸಿದ.

ಅನ್ನದಾನಪ್ಪನವರು ಆ ಅತಿಥಿಯನ್ನು ತಾವಿದ್ದಲ್ಲಿ ಕರೆದು, ಅವನಿಗೆ ಪತ್ತೆದಾರರ ಪರಿಚಯ ಮಾಡಿಸಿ, ಬಳಿಕ ಅವನ ವಿಷಯವಾಗಿ ಪತ್ತೇದಾರರಿಗೆ ಹೀಗೆ ಹೇಳಿದರು,

"ಇವರ ಹೆಸರು ಮಸ್ತಾನ್‌ಸಾಹೇಬ್. ಪೈಲ್ವಾನ್ ಮಸ್ತಾನ್ ಸಾಹೇಬ್ ಎಂದೇ ಎಲ್ಲರೂ ಕರೆಯುವರು. ಈ ವರೆವಿಗೆ ನೂರಕ್ಕೂ ಮೇಲ್ಪಟ್ಟು ಕುಸ್ತಿಗಳನ್ನು ಆಡಿ ಗೆದ್ದಿರುವರಲ್ಲದೆ, 'ಕೋರಾಪೀಟ್' ಎಂಬ ಬಿರುದನ್ನು ಹೊಂದಿರುವರು. ಬೆಳ್ಳಿಗದೆ ಮತ್ತು ಇತರ ಮೆಡಲುಗಳನ್ನೂ ಪ್ರಶಸ್ತಿ ಪತ್ರಗಳನ್ನೂ ಪಡೆದಿರುವರು. ಭಾರತ ದೇಶವನ್ನು ಸಂಚರಿಸಿ, ಹೋದ ಕಡೆಗಳಲ್ಲೆಲ್ಲಾ ಕುಸ್ತಿಗಳನ್ನು ಮಾಡಿ, ಜಯ ಗಳಿಸಿರುವರು. ತನ್ನನ್ನು ಸೋಲಿಸಿದವರಿಗೆ, ಅಥವಾ ಸೋಲುಗೆಲುವುಗಳಿಲ್ಲದೆ ಒಂದು ಘಂಟೆ ಸೆಣಸಾಡಿದವರಿಗೆ ಐದು ಸಾವಿರ ರೂಪಾಯಿಗಳನ್ನು ಕೊಡುವೆನೆಂದು ಸಾರಿರುವರು. ಇವರ ಕುಸ್ತಿಗಳನ್ನು ನೀವು ನೋಡಿರಬಹುದೋ, ಏನೋ ನಾನೇನೋ ನನ್ನ ನಿಯಮದಂತೆ ಪರಿಚಯ ಮಾಡಿಸಿದೆ"

ಪತ್ತೇದಾರರಿಗೆ, ಮಸ್ತಾನ್‌ಸಾಬಿಯು ಹಸ್ತಲಾಘವವನ್ನಿತ್ತು, ಬಳಿಕ ಅನ್ನದಾನಪ್ಪನವರು ತೋರಿಸಿದ ಆಸನದಲ್ಲಿ ಕುಳಿತುಕೊಂಡನು.

ರಾಜಗೋಪಾಲನು ಬರುವ ವೇಳೆಗೆ ಮಸ್ತಾನ್‌ಸಾಬಿಯು ಬಂದ ಪ್ರಯುಕ್ತ, ರಾಮನಾಥನು ಆತನ ಮೇಲೆ ಸಂದೇಹಗೊಂಡನು.

ಮೊದಲೇ ಬಂದರೆ, ಪತ್ತೇದಾರರು ತನ್ನನ್ನು ನೋಡಿ ಸಂದೇಹಗೊಳ್ಳಬಹುದೆಂದು ಯೋಚಿಸಿ, ಈಗ ಬಂದಿರುವನೆಂದುಕೊಂಡನು.

ಪುರುಷೋತ್ತಮನು ಮಾತ್ರ ಬಾಲಕೃಷ್ಣನ ಮೇಲೆಯೇ ಸಂದೇಹಗೊಂಡಿರುವನು.

ಅಡಿಗಡಿಗೆ ಬಹು ಸೂಕ್ಷ್ಮವಾಗಿ ಬಾಲಕೃಷ್ಣನ ಕಡೆ ನೋಡುತ್ತಿರುವನಾದರೂ, ಬಾಲಕೃಷ್ಣನು ಮಾತ್ರ ಪತ್ತೇದಾರರ ಕಡೆ ತಿರುಗಿ ನೋಡದೆ, ಗಾಂಭೀರ್ಯದಿಂದ ತನ್ನ ದೃಷ್ಟಿಯನ್ನು ಎದುರಿಗೇ ಇಟ್ಟು ಕುಳಿತಿರುವನು.

ಪತ್ತೇದಾರರಿಗೆ ಅಲ್ಲಿದ್ದವರೆಲ್ಲರ ಪರಿಚಯವಾದ್ದರಿಂದ ಒಂದು ವಿಧದಲ್ಲಿ ಸಂತೋಷವೇ ಆಯಿತು.

೫

ಸತ್ಕಾರಕೂಟಕ್ಕೆ ಆಗಮಿಸಿದವರು ರಾಜಗೋಪಾಲನು ಬರುವುದನ್ನೇ
ೀಕ್ಷಿಸುತ್ತಿದ್ದರು.

ಕೆಲಹೊತ್ತಿನಲ್ಲಿಯೇ ರಾಜಗೋಪಾಲನು ಆಗಮಿಸಿ ಸರ್ವರಿಗೂ ತಲೆ
ಗಿ ನಮಸ್ಕರಿಸಿದ.

ರಾಜಗೋಪಾಲನನ್ನು ಹಿಂದೆ ಕಂಡವರು, ಈತನು ಇಂಗ್ಲೇಂಡಿಗೆ
ೀಗಿರುವುದರಿಂದ ಪೂರಾ ಬದಲಾಯಿಸಿ ಹೋಗಿರುವನೆಂದು ತಮ್ಮತಮ್ಮಲ್ಲೇ
ತನಾಡಿಕೊಂಡರು.

ಪತ್ತೇದಾರರು ರಾಜಗೋಪಾಲನನ್ನು ನೋಡಿದರು. ಅವನ ವಿಷಯ
ಅಲ್ಲಿದ್ದವರು ಆಡಿಕೊಳ್ಳುವುದನ್ನೂ ಕೇಳಿದರು.

ರಾಜಗೋಪಾಲನ ಬಲಗಡೆ ಅವನ ತಂದೆಯೂ, ಎಡಗಡೆ ಅನ್ನದಾನಪ್ಪ
ೂ, ಅವರ ಅಕ್ಕಪಕ್ಕಗಳಲ್ಲಿ ಇತರ ಬಂಧುಗಳೂ ಕುಳಿತರು.

ಬಳಿಕ ರಾಜಗೋಪಾಲನು ಇನ್ನೊಂದು ಸಾರಿ, ಮಾನ್ಯ ಅತಿಥಿಗಳಿಗೆ
ಸ್ಕರಿಸಿ ಮಾತನಾಡಲಾರಂಭಿಸಿದ.

"ನನ್ನ ತಂದೆತಾಯಿಯರ ಸಮಾನರಾದಂತ ಬಂಧು-ಮಿತ್ರರೇ! ನಾನು
ವಿದ್ಯಾಭ್ಯಾಸಕ್ಕಾಗಿ ಇಂಗ್ಲೇಂಡಿಗೆ ಹೋದ ವಿಷಯವು ತಮ್ಮೆಲ್ಲರಿಗೂ
ಬಹುದು. ನನ್ನ ವ್ಯಾಸಂಗವು ಮುಗಿದು ತೇರ್ಗಡೆಯಾದರೂ ನಾನು
ಗದೆ, ಅಲ್ಲಿಯೇ ವಿನೋದವಾಗಿ ಕಾಲಹರಣ ಮಾಡಿಕೊಂಡು, ಹತ್ತು
ನಂತರ ಮಾತೃಭೂಮಿಯನ್ನು ಕಾಣಲು ಹಿಂದಿರುಗಿದೆ. ನಿಜವಾಗಿ
ವುದಾದರೆ ನನಗೆ, ಇಲ್ಲಿಗೆ ಬರಲು ಮನಸ್ಸೇ ಇರಲಿಲ್ಲ. ಒಬ್ಬ ಅಣ್ಣನೋ

ತಪ್ಪಿದರೆ ಒಬ್ಬ ತಮ್ಮನೋ ನನಗಿದ್ದಿದ್ದರೆ ಖಂಡಿತಾ ಬರುತ್ತಿರಲಿಲ್ಲ. ವೃದ್ಧ ಮಾತಾಪಿತೃಗಳ ಮನಸ್ಸಿಗೆ ನೋವುಂಟುಮಾಡಬಾರದೆಂಬ ಇಚ್ಛೆಯಿಂದ ಹಿಂದಿರುಗಿದೆ. ತಾವೆಲ್ಲರೂ ಈ ಸಮಾರಂಭಕ್ಕೆ ಆಗಮಿಸಿರುವುದರಿಂದ ನನಗೆ ಪರಮಾನಂದವಾಯಿತಲ್ಲದೆ, ತಮ್ಮೆಲ್ಲರ ಆಶೀರ್ವಾದವನ್ನು ಹೃತ್ಪೂರ್ವಕವಾಗಿ ಬಯಸುವೆನು. ನನ್ನ ಮಾನ್ಯ ಮಿತ್ರರೂ ಮತ್ತು ಇತರರೂ ಇಂಗ್ಲೇಂಡಿನ ಸ್ಥಿತಿಗತಿಗಳ ಬಗ್ಗೆ ಮಾತನಾಡಬೇಕೆಂದು ಒತ್ತಾಯಪಡಿಸಿರುವುದರಿಂದ, ಅಲ್ಲಿನ ವ್ಯವಹಾರ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ವಿವರಿಸಿ ಹೇಳುವೆನು.

"ಜಗತ್ತಿನಲ್ಲಿ ರವಿ ಮುಳುಗದಷ್ಟು ಸಾಮ್ರಾಜ್ಯವನ್ನು ಗಳಿಸಿದ್ದ ಇಂಗ್ಲೇಂಡ್ ದೇಶವು ಇತರ ದೊಡ್ಡ ದೇಶಗಳ ಸಮಕ್ಕೆ ಬಾರದೆ ಚಿಕ್ಕದಾಗಿದೆ. ಆ ದೇಶದ ಜನಸಂಖ್ಯೆ ಐದು ಕೋಟಿ ಇಪ್ಪತ್ತು ಲಕ್ಷ ಮಾತ್ರ.

"ಲಂಡನ್ ನಗರವು ಪ್ರಪಂಚದ ದೊಡ್ಡ ನಗರಗಳಲ್ಲೊಂದಾಗಿದೆ. ನೂರಕ್ಕೆ ತೊಂಭತ್ತೈದು ಜನರಿಗೆ ಮನೆ-ಮಠಗಳಿವೆ. ಐದು ಜನರು ಮಾತ್ರ ಹೋಟೆಲಿನಲ್ಲಿ ಊಟ ಮಾಡಿಕೊಂಡು ಕಾಲ ಕಳೆಯುತ್ತಿರುವರು. ನಮ್ಮಲ್ಲಿ ನೂರಕ್ಕೆ ಐವತ್ತು ಜನರು ಹೋಟೆಲಿನಲ್ಲಿ ಊಟ ಮಾಡಿಕೊಂಡು ಕಾಲ ತಳ್ಳುತ್ತಿರುವರು.

"ಬ್ರಿಟನ್ನಿನ ಕುಟುಂಬಗಳಲ್ಲಿ ಹೆಚ್ಚು ಜನರಿರುವುದಿಲ್ಲ. ಒಂದು ಮನೆಯಲ್ಲಿ ಸತಿಪತಿಯರು, ಒಬ್ಬರು ತಪ್ಪಿದರೆ ಇಬ್ಬರು ಮಕ್ಕಳು. ಈ ನಾಲ್ಕು ಜನರಲ್ಲದೆ ಹೆಚ್ಚು ಜನರಿರುವುದಿಲ್ಲ. ನಮ್ಮ ದೇಶದ ಪ್ರತಿ ಕುಟುಂಬದಲ್ಲಿ ಕಡಿಮೆಯೆಂದರೂ ಆರೇಳು ಜನರಿರುತ್ತಾರೆ. ಅದರಲ್ಲಿಯೂ ಪ್ರೈಮರಿಸ್ಕೂಲು ಉಪಾಧ್ಯಾಯರು ಮತ್ತು ಪೋಲೀಸಿನವರಿಗೆ ಮಕ್ಕಳು ಹೆಚ್ಚು. ನಿಮಗೆ ಎಷ್ಟು ಜನ ಮಕ್ಕಳೆಂದು ಕೇಳಬೇಕಾದರೆ ಅವರನ್ನೇ ಕೇಳಿ ತಿಳಿಯಬೇಕು.

"ಆ ದೇಶದ ಪ್ರತಿಯೊಂದು ಮನೆಗಳಿಗೂ, ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ನೀರು, ಲೈಟಿನ ಸೌಕರ್ಯವಿರುತ್ತದೆ. ನಮ್ಮಲ್ಲಿ ಶ್ರೀಮಂತರಿಗಲ್ಲದೆಇತರರಿಗೆ ಆ ಸುಖಸೌಲಭ್ಯವಿರುವುದಿಲ್ಲ. ಅರ್ಧ ಮುಕ್ಕಾಲು ಮೈಲಿಗಳ ದೂರದಿಂದ ನೀರು ತರುವವರೂ ಇರುವರು.

"ಪ್ರತಿಯೊಬ್ಬ ಕೆಲಸಗಾರನು ಕೆಲಸಕ್ಕೆ ಹೋಗಿ ಹಿಂದಿರುಗಲು ಬಸ್ಸು ಮತ್ತು ರೈಲ್ವೇಗಳ ಸೌಕರ್ಯವಿದೆ. ನಮ್ಮ ದೇಶದಲ್ಲಿಯೂ ಸಹ ಆ ಸೌಕರ್ಯವಿದೆಯೆಂದು ಹೆಮ್ಮೆಪಡಬೇಕಾಗಿದೆ.

"ಬ್ರಿಟನ್ನಿನ ವಾರ್ಷಿಕ ಸರ್ಕಾರಿ ಉತ್ಪನ್ನವು ನಾಲ್ಕುನೂರ ಇಪ್ಪತ್ತಾರು ಕೋಟಿ ಪೌಂಡು ಇದೆ. (ಒಂದು ಪೌಂಡಿಗೆ ಹನ್ನೆರಡು ರೂಪಾಯಿ) ಅದರಲ್ಲಿ ನೂರಕ್ಕೆ ಹದಿನಾಲ್ಕರಷ್ಟು ಹಣವನ್ನು ಸರ್ಕಾರವು ಜನತೆಯಿಂದ ಪಡೆದ ಸಾಲದ ಬಡ್ಡಿ ಎಂದು ಕೊಡಬೇಕಾಗುವುದು. ಆ ದೇಶದ ಜನಜೀವನವು ಸುಖಮಯವಾಗಿದೆಯೆಂಬುದಕ್ಕೆ ಇದೊಂದು ದೃಷ್ಟಾಂತವು ಸಾಲದೇ?

"ಆ ದೇಶದ ಅಂಚೆ ಕಛೇರಿಗಳಲ್ಲಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಎರಡು ಕೋಟಿ, ಇಪ್ಪತ್ತೇಳು ಲಕ್ಷ ಖಾತೆಗಳಿವೆ. ಆ ಪ್ರಯುಕ್ತ ಆ ಜನರು ತಮ್ಮ ಜೀವನವನ್ನು ವಿಲಾಸಮಯವಾಗಿ ಕಳೆಯುವರಲ್ಲದೆ, ಸದಾ ಆನಂದಮಯ ರಾಗಿರುವರು.

"ಪ್ರತಿಯೊಬ್ಬರೂ ತನ್ನ ಉತ್ಪನ್ನದ ನೂರಕ್ಕೆ ಇಪ್ಪತ್ತೊಂಭತ್ತು ಭಾಗ ವನ್ನು ಆಹಾರಕ್ಕಾಗಿ ಉಪಯೋಗಿಸುವನು. ನೂರಕ್ಕೆ ಹದಿನೇಳು ಭಾಗವನ್ನು ಕುಡಿತ ಮತ್ತು ಬೀಡಿ, ಸಿಗರೇಟುಗಳಿಗೆ ಉಪಯೋಗಿಸುವನು. ಆ ಜನರು ನಮ್ಮ ಹಾಗೆ ಕುಚೇಲರಾಗಿಲ್ಲ.

"ಬ್ರಿಟನ್ನಿನಲ್ಲಿ ಧಾರ್ಮಿಕ ಪೀಠದ ಮಹತ್ವವೂ ಅತ್ಯಂತ ಹಿರಿದಾಗಿರು ತ್ತದಲ್ಲದೆ, ಆ ಧಾರ್ಮಿಕ ಚರ್ಚುಗಳ ವಾರ್ಷಿಕ ವರಮಾನವು ಸುಮಾರು ಹತ್ತುಕೋಟಿ ರೂಪಾಯಿಗಳಾಗುತ್ತವೆ.

"ನಾಟಕಗಳನ್ನು ನೋಡುವ ಮತ್ತು ಆಡುವ ಹುಚ್ಚು ಬ್ರಿಟಿಷ್ ಜನ ರಿಗೆ ವಿಪರೀತವಾಗಿದೆ. ಬ್ರಿಟನ್ನಿನಲ್ಲಿ ಒಟ್ಟು ಮೂವತ್ಮೂರು ಸಾವಿರಕ್ಕೂ ಮೀರಿ ನಾಟ್ಯವಿಲಾಸ ಸಂಘಗಳಿವೆ. ಲಂಡನ್ ನಗರವೊಂದರಲ್ಲಿಯೇ ಐವತ್ತು ನಾಟಕಮಂದಿರಗಳಿಗೂ ಹೆಚ್ಚಾಗಿವೆ. ಸುಮಾರು ನಾಲ್ಕುಸಾವಿರದ ಆರು ನೂರು ಸಿನಿಮಾ ಟಾಕೀಸ್‌ಗಳು ಬ್ರಿಟನ್ನಿನಲ್ಲಿವೆ.

"ಫುಟ್‌ಬಾಲ್ ಆಟವೆಂದರೆ ಆ ಜನರಿಗೆ ವಿಶೇಷ ಮಮತೆ. ಸುಮಾರು ಮೂವತ್ತೈದು ಸಾವಿರ ಫುಟ್‌ಬಾಲ್ ಆಟದ ಗುಂಪುಗಳೇ ಇವೆ. ಇನ್ನಿತರ ಆಟದ ಸಂಘಗಳೂ, ಗುಂಪುಗಳೂ ಹೇರಳವಾಗಿವೆ.

"ಆ ದೇಶದ ಪ್ರತಿಯೊಬ್ಬರೂ ವಿದ್ಯಾಭ್ಯಾಸ ಕಲಿತು ಜ್ಞಾನ ಪಡೆದಿರುತ್ತಾರೆ. ಆ ದೇಶವನ್ನು ಸುವಿದ್ಯಾ ರಾಷ್ಟ್ರವೆಂದರೂ ತಪ್ಪಾಗದು.

"ಸುಮಾರು ನೂರ್ರೈವತ್ತರ ವರೆವಿಗೆ ದೈನಿಕ ಪತ್ರಿಕೆಗಳಿವೆ. ಸಾಪ್ತಾಹಿಕ ಮತ್ತಿತರ ಪತ್ರಿಕೆಗಳು ಸಾವಿರಾರಿವೆ. ನೂರಕ್ಕೆ ಅರವತ್ತು ಜನರು ಪತ್ರಿಕೆಗಳನು ಕೊಂಡು ಓದುವರು. ನಮ್ಮಲ್ಲಿ ನೂರಕ್ಕೆ ಹದಿನೈದು ಜನರಿರುವರೋ ಇಲ್ಲವೋ ತಿಳಿಯದು.

"ಆ ದೇಶದಲ್ಲಿ ಪ್ರತಿವರ್ಷ ಹದಿಮೂರು ಸಾವಿರ ಪುಸ್ತಕಗಳು ಪ್ರಕಟವಾಗುತ್ತವೆ. ಅವುಗಳಲ್ಲಿ ಇತಿಹಾಸದ ಮೇಲೆ ಇನ್ನೂರೆಂಭತ್ನಾಲ್ಕು, ಚರಿತ್ರೆ ಮತ್ತು ಸ್ಮೃತಿಗಳ ಮೇಲೆ ಮುನ್ನೂರೆಂಭತ್ತೆರಡು, ಕಾವ್ಯ ನಾಟಕಗಳ ಮೇಲೆ ಐನೂರರವತ್ತಾರು, ನಿಬಂಧವ ಮೇಲೆ ನೂರಾಒಂಭತ್ತು ಮತ್ತು ಕಾದಂಬರಿಗಳು ಎರಡು ಸಾವಿರದ ಇನ್ನೂರ ಐವತ್ತೆಂಟು. ಈ ರೀತಿ ಪ್ರಕಟವಾಗುತ್ತದೆ.

"ಬಡವರಾಗಿರಲಿ, ಶ್ರೀಮಂತರಾಗಿರಲಿ ಪ್ರತಿಯೊಬ್ಬರೂ ಕಾದಂಬರಿ, ಕಥೆಗಳನ್ನು ಕ್ರಯಕ್ಕೆ ಕೊಂಡು ಓದುವರು.

"ಇಂಗ್ಲೇಂಡಿನಲ್ಲಿ ಸಾರ್ವಜನಿಕ ವಾಚನಾಲಯುಗಳೂ ಇವೆ. ಇತರ ವಾಚನಾಲಯುಗಳಲ್ಲಿರುವ ಗ್ರಂಥಗಳ ಒಟ್ಟು ಸಂಖ್ಯೆ ನಲವತ್ತು ಲಕ್ಷ. ಲಂಡನ್ ನಗರದಲ್ಲಿರುವ ಭವ್ಯ ವಾಚನಾಲಯುವೆನಿಸಿಕೊಂಡ 'ಬ್ರಿಟಿಷ್ ಮ್ಯೂಜಿಯಂ' ಒಂದರಲ್ಲಿಯೇ ಐವತ್ತು ಲಕ್ಷ ಗ್ರಂಥಗಳಿವೆ.

"ಬ್ರಿಟನ್ನಿನ ಆಮದು, ರಫ್ತು ವ್ಯಾಪಾರವು ಅತಿ ದೊಡ್ಡ ಪ್ರಮಾಣದಲ್ಲಿಯೇ ನಡೆಯುತ್ತದೆ. ರೈಲಿಗಾಗಿಯೇ ಅರವತ್ತ ಮೂರು ಸಾವಿರದ ನೂರಾನಾಲ್ಕು ದೊಡ್ಡ ಮತ್ತು ಚಿಕ್ಕ ಪೂಲುಗಳಿವೆ. ದೊಡ್ಡ ಪೂಲು ಸುಮಾರು ಎರಡೂವರೆ ಮೈಲಿ ಉದ್ದವಿದೆ.

"ಬ್ರಿಟನ್ನಿನಲ್ಲಿ ಸಾಮಾನ್ಯವಾಗಿ ಮಾಂಸಾಹಾರವೇ ಹೆಚ್ಚು. ಆ ದೇಶದಲ್ಲಿ ಎರಡು ಕೋಟಿ ಹದಿನೆಂಟು ಲಕ್ಷ ಕುರಿಗಳಿವೆ. ನಲವತ್ತಾರು ಲಕ್ಷ ಆಕಳುಗಳೂ, ಐವತ್ತು ಲಕ್ಷ ಹಂದಿಗಳೂ ಇವೆ.

"ಆ ದೇಶದ ಟ್ರೇಡ್ ಯೂನಿಯನ್ ಸದಸ್ಯರುಗಳ ಸಂಖ್ಯೆ ಒಂದು ಲಕ್ಷ ಎಂಭತ್ತು ಸಾವಿರ. ಕೂಲಿಕಾರರಿಗೆ ವಸತಿ, ಅವರಿಗೆ ಶಿಕ್ಷಣ, ವೈದ್ಯಕೀಯ ಸೌಕರ್ಯ, ವಿಧವೆಯರಿಗೆ ಜೀವನ ಅನುಕೂಲ, ಕೆಲಸಗಾರರಿಗೆ ವಿಶ್ರಾಂತಿ

ವೇತನ, ವೊದಲಾದ ಸೌಕರ್ಯಗಳಿಗೆ ಸರ್ಕಾರ ಮತ್ತು ನಗರಸಭೆಯವರು ವರ್ಷಕ್ಕೆ ಇನ್ನೂರು ಕೋಟಿ ಪೌಂಡು ಖರ್ಚು ಮಾಡುವರು.

"ಬ್ರಿಟನ್ನಿನ ಭೂಮಿ, ಜಲ ಮತ್ತು ವಾಯುದಳಗಳ ಸಂಖ್ಯೆ ಐದು ಲಕ್ಷ ಮೂವತ್ತು ಸಾವಿರವಿರಬಹುದು. ಸೈನ್ಯವು ಕಡಿಮೆ ಪ್ರಮಾಣದ್ದೆ ಆಗಿದೆ.

ಬ್ರಿಟಿಷ್ ಜನರು ದೇಶಪ್ರೇಮಿಗಳು. ತಾವು ಇನ್ನೊಂದು ದೇಶದ ಗುಲಾಮರಾಗಲು ಒಪ್ಪುವುದಿಲ್ಲ. ಯುದ್ಧದ ಪರಿಸ್ಥಿತಿಯೇನಾದರೂ ಒದಗಿ ಬಂದರೆ, ತಮ್ಮ ಪತ್ನೀ ಪುತ್ರರನ್ನು ತೃಣಸಮಾನವಾಗಿ ಭಾವಿಸಿ, ದೇಶಕ್ಕೋಸ್ಕರ ಪ್ರಾಣವನ್ನರ್ಪಿಸಲು ಸಿದ್ಧರಾಗುವರು.

ದೇಶಸೇವೆಯ ಸತ್ಕಾರ್ಯಕ್ಕೆ ತಮ್ಮ ತನುಮನಗಳನ್ನು ಧಾರೆಯೆರೆಯುವರು. ತಮ್ಮ ಪತ್ನೀ ಪುತ್ರರ ಮೇಲೆ ಇಲ್ಲದ ಮಮತೆಯು ತಮ್ಮ ತಾಯ್ನಾಡಿನ ಮೇಲಿದೆ.

"ಮಾನ್ಯ ಸನ್ಮಿತ್ರರೇ! ಮತ್ತು ಹಿತೈಷಿಗಳೇ! ಬ್ರಿಟನ್ನಿನ ಸ್ಥಿತಿಗತಿಗಳನ್ನು ಸೂಕ್ಷ್ಮ ರೀತಿಯಲ್ಲಿ ವಿವರಿಸಿರುವೆನು. ಉದ್ದುದ್ದ ಭಾಷಣಗಳನ್ನು ಮಾಡಿ ತಮಗೆ ಬೇಸರಗೊಳಿಸಲು ಇಷ್ಟವಿಲ್ಲ. ನಾನು ಹತ್ತು ವರ್ಷಗಳು ಅಲ್ಲಿದ್ದು ಪಡೆದ ಅನುಭವವನ್ನು ಹತ್ತು ವರ್ಷಗಳು ಹೇಳಿದರೂ ಮುಗಿಯದು ಒಂದೊಂದು ವಿಷಯುವೇ ಒಂದೊಂದು ಗ್ರಂಥವಾಗಬಹುದು. ಆದ್ದರಿಂದ ಎಲ್ಲವನ್ನೂ ವಿವರವಾಗಿ ತಿಳಿಸದೆ, ಪ್ರತಿಯೊಂದು ಅಂಶವನ್ನು ಸೂಕ್ಷ್ಮವಾಗಿ ಹೇಳಿರುವೆನು. ತಾವೆಲ್ಲರೂ ಆದರದಿಂದ ಮತ್ತು ಶಾಂತರೀತಿಯಿಂದ ವರ್ತಿಸಿ ನನ್ನ ಭಾಷಣವನ್ನು ಆಲಿಸಿದ್ದಕ್ಕಾಗಿ ತಮ್ಮೆಲ್ಲರಿಗೂ ನಾನು ಚಿರಋಣಿಯಾಗಿರುವೆನು. ಈ ಸಮಾರಂಭದ ಮೂಲ ಕಾರಣರಾಗಿ ತಮ್ಮೆಲ್ಲರಿಗೂ ನನ್ನ ಪರಿಚಯ ಮಾಡಿಕೊಟ್ಟ ಶ್ರೀಮಾನ್ ಅನ್ನದಾನಪ್ಪನವರಿಗೆ ದೇವರು ಆಯುರಾರೋಗ್ಯ, ಸುಖ ಸಂಪತ್ತು ಕೊಡಲೆಂದು ಹಾರೈಸುವೆನು. ಮತ್ತು ಈ ಸಮಾರಂಭದ ಇತರ ವ್ಯವಸ್ಥಾಪಕರಿಗೂ ನನ್ನ ಅನಂತ ಧನ್ಯವಾದಗಳು ಸಲ್ಲಿವೆಯೆಂದು ತಿಳಿಸಿ ಈ ನನ್ನ ಪುಟ್ಟ ಭಾಷಣವನ್ನು ಮುಕ್ತಾಯ ಮಾಡುವೆನು. ಜೈ ಹಿಂದ್."

ಭಾಷಣವನ್ನು ಮುಗಿಸಿದ ರಾಜಗೋಪಾಲನು ಸರ್ವರಿಗೂ ನಮಸ್ಕರಿಸಲು, ಸಭೆಯಲ್ಲಿ ಹರ್ಷೋದ್ಗಾರ ಸೂಚಕ ಕರತಾಡನವಾಯಿತು.

ರಾಜಗೋಪಾಲನ ತಂದೆಯಾದ ವೆಂಕಟರತ್ನಂರವರು ಮಗನ ಭಾಷಣ ವನ್ನು ಕೇಳಿ ಪರಮಾನಂದಗೊಂಡರಲ್ಲದೆ, ಹತ್ತು ವರ್ಷಗಳು ಪರದೇಶದಲ್ಲಿದ್ದರೂ ದುರ್ಬುದ್ಧಿಗೆ ಮನಗೊಡದೆ, ಸುಬುದ್ಧಿಯನ್ನು ಕಲಿತು ಬಂದಿರುವನಲ್ಲಾ ಎಂದು ಯೋಚಿಸಿ, ಆ ಸದ್ಬುದ್ಧಿಯನ್ನು ಕರುಣಿಸಿದ ದೇವರಿಗೆ ತಮ್ಮ ಮನ ದಲ್ಲಿಯೇ ಸಹಸ್ರ ನಮಸ್ಕಾರಗಳನ್ನರ್ಪಿಸಿದರು.

ಇಂತಹ ಅಳಿಯನು ಸಿಕ್ಕರೆ ತಾನು ಮಹಾ ಭಾಗ್ಯಶಾಲಿಯಾಗುವುದರಲ್ಲಿ ಸಂದೇಹವಿಲ್ಲವೆಂದು ಅನ್ನದಾನಪ್ಪನವರು ಯೋಚಿಸಿಕೊಂಡರು.

ಸತ್ಕಾರಕೂಟವು ವೈಭವದಿಂದಲೇ ನಡೆಯಿತಲ್ಲದೆ, ಅತಿಥಿಗಳಾಗಿ ಆಗಮಿಸಿದವರು, ಅನ್ನದಾನಪ್ಪ, ವೆಂಕಟರತ್ನಂ ಮತ್ತು ರಾಜಗೋಪಾಲನಿಗೆ ವಂದಿಸಿ, ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಹಿಂದಿರುಗಿದರು.

ಪತ್ತೇದಾರರು ಇನ್ನೂ ಆ ಸ್ಥಳದಲ್ಲಿಯೇ ಇದ್ದರು. ಕಾರಣ :-ಇತರ ರಂತೆ ಬಾಲಕೃಷ್ಣನು ಅಲ್ಲಿಂದ ಹಿಂದಿರುಗಲಿಲ್ಲ.

ಎಲ್ಲರೂ ಹಿಂದಿರುಗಿದನಂತರ ಬಾಲಕೃಷ್ಣನು ರಾಜಗೋಪಾಲನ ಸಮೀಪಕ್ಕೆ ಹೋಗಿ ಹಸ್ತಲಾಘವವನ್ನಿತ್ತನು.

ಪತ್ತೇದಾರರಿಗೆ ಆಶ್ಚರ್ಯವಾಗಿ ಒಬ್ಬರ ಮುಖವನ್ನೊಬ್ಬರು ನೋಡಿ ಕೊಂಡರು.

ಈತನ ನಡವಳಿಕೆಯು ಹೀಗೆಯೇ ಇರಬಹುದೇ ? ಎಂಬ ಯೋಚನೆಯೂ ಪುರುಷೋತ್ತಮನ ಮನಕ್ಕೆ ಹೊಳೆಯದಿರಲಿಲ್ಲ.

ರಾಜಗೋಪಾಲನಿಗೆ ಹಸ್ತಲಾಘವವನ್ನಿತ್ತ ಬಾಲಕೃಷ್ಣನು ಏರಿಕೆಯ ಧ್ವನಿಯಲ್ಲಿ—

"ಮಿಸ್ಟರ್. ರಾಜಗೋಪಾಲ್ ನೀವು ಇಂಗ್ಲೇಂಡಿನಿಂದ ಸುರಕ್ಷಿತವಾಗಿ ಹಿಂದಿರುಗಿದುದಕ್ಕೆ ನನ್ನ ಅನಂತ ವಂದನೆಗಳು ಸಲ್ಲಿವೆ" ಎಂದು ಹೇಳಿ ಪ್ರತ್ಯುತ್ತರವನ್ನು ನಿರೀಕ್ಷಿಸದೆ ಅಲ್ಲಿಂದ ಹಿಂದಿರುಗಿದ.

ರಾಜಗೋಪಾಲನು ಪ್ರತಿ ಮಾತನಾಡದೆ, ಬಾಲಕೃಷ್ಣನು ಹೋದ ಕಡೆಯೇ ನೋಡುತ್ತಾ ನಿಂತ.

ಇವರಾರೆಂದು ವೆಂಕಟರತ್ನಂರವರು ಮಗನಿಗೆ ಕೇಳಲು ತನಗೇನೂ ತಿಳಿಯದೆಂದು ಆತನೇಳಿದ.

ಹೋಗುತ್ತಾ ಬಾಲಕೃಷ್ಣನು ಪತ್ತೇದಾರರು ಇನ್ನೂ ಕುಳಿತುಕೊಂಡಿರು ವುದನ್ನು ನೋಡಿ—

"ಏನು ಪತ್ತೇದಾರರು ಇನ್ನೂ ಕುಳಿತಿರುವಿರಲ್ಲ. ಏನಾದರೂ ಪತ್ತೇ ಮಾಡಬೇಕಾಗಿದೆಯೇ? ಅಥವಾ ಇನ್ನೂ ಭಾಷಣವಿದೆಯೆಂದು ಕುಳಿತಿರು ವಿರಾ? ಎಂದು ಹೇಳುತ್ತಾ ಅಲ್ಲಿ ನಿಲ್ಲದೆ ಹೊರಗೆ ಬಂದ.

ಮೂಕರಂತಾದ ಪತ್ತೇದಾರರು ಅವನ ಹಿಂದೆಯೇ ಬಂದರು.

ಬಾಲಕೃಷ್ಣನು ಹೊರಗೆ ನಿಲ್ಲಿಸಿದ್ದ ಸೈಕಲ್ ಮೋಟಾರಿನ ಮೇಲೆ ಕುಳಿತು, ಸ್ಟಾರ್ಟ್ ಮಾಡಿ ಅಲ್ಲಿಂದ ಹೊರಟನು.

ಪತ್ತೇದಾರರು ಆ ಸೈಕಲ್ ಮೋಟಾರಿನ ನಂಬರನ್ನು ಬರೆದುಕೊಂಡು, ಪುನಃ ಒಳಗೆ ಹೋಗದೆ ಹಾಗೇ ತಮ್ಮ ಮನೆಯ ದಾರಿಯನ್ನಿಡಿದರು.

ಬಾಲಕೃಷ್ಣನ ಮಾತು, ನಡವಳಿಕೆಯ ವಿಚಿತ್ರವು ಅವರಿಗೆ ಸಮಸ್ಯೆ ಯನ್ನು ತಂದೊಡ್ಡಿತು.

ಇನ್ಸ್ಪೆಕ್ಟರನು ಮೇಲಧಿಕಾರಿಗಳ ಸಂಗಡ ಹಿಂದಿರುಗಿದ್ದ ಪ್ರಯುಕ್ತ, ಆತನು ಪತ್ತೇದಾರರ ಸಂಗಡ ಇರಲಿಲ್ಲ.

ಮಾರ್ಗಮಧ್ಯದಲ್ಲಿ ಪತ್ತೇದಾರರು ಯಾವುದೊಂದು ವಿಷಯವನ್ನು ಕುರಿತೇ ಅಗಲಿ ಮಾತನಾಡಲಿಲ್ಲ.

ಇಬ್ಬರೂ ಯೋಚನೆ ಎಂಬ ಸಮಾಧಿಯಲ್ಲಿ ಮುಳುಗಿ ಹೋಗಿದ್ದರು.

ಮನೆಯನ್ನು ತಲುಪಿದನಂತರ ರಾಮನಾಥನು ಮೌನವನ್ನು ಮುರಿದು--

"ಬಾಲಕೃಷ್ಣನ ಮೇಲೆ ನಿನಗೆ ಸಂದೇಹವುಂಟಾಗಿರುವುದಲ್ಲವೇ?" ಎಂದು ಕೇಳಿದ.

"ನನಗೆ ಮಾತ್ರವೇನು? ನಿನಗೂ ಅನುಮಾನವುಂಟಾಗಿದೆ."

—ಎಂದು ಉತ್ತರವಿತ್ತ ಪುರುಷೋತ್ತಮ.

"ಅದು ಸರಿ! ಆತನೇ ಕೊಲೆಗಾರನಲ್ಲವೇ?"

"ನಾನು ಮೊದಲು ಆತನ ಮೇಲೆ ಸಂದೇಹಗೊಂಡಿದ್ದೆನು. ಈಗ ಆ ಸಂದೇಹವು ದೂರವಾಯಿತು."

"ಇದೇನು ಹೀಗೆ ಹೇಳುವೆ? ಆತನು ಕೊಲೆಗಾರನಲ್ಲವೆಂದು ನಿನ್ನ ಅಭಿಪ್ರಾಯವೇ?"

"ಹಾಗೆಂದೇ ನನ್ನ ಅಭಿಪ್ರಾಯ."

"ಹೇಗೆ ಹೇಳುವೆ?"

"ಆತನು ನಿಜವಾದ ಕೊಲೆಗಾರನೇ ಆಗಿದ್ದಿದ್ದರೆ ಆ ರೀತಿ ವರ್ತಿಸುತ್ತಿರಲಿಲ್ಲ. ಆ ನಡವಳಿಕೆಯೇ ಒಂದು ವಿಧವಾಗಿರುತ್ತಿತ್ತು. ಬಾಲಕೃಷ್ಣನ ನಡವಳಿಕೆಯೇ ಹಾಗಿರಬಹುದೆಂದು ತೋರುತ್ತದೆ."

"ನಿನ್ನ ಮಾತೇ ಆಶ್ಚರ್ಯವಾಗಿ ತೋರುತ್ತದೆ. ನನಗೆ ಮಾತ್ರ ಆತನ ಮೇಲೆ ಸಂದೇಹವಿದೆ. ಬೇಕೆಂದೇ ಆ ರೀತಿ ವರ್ತಿಸಿರಬಹುದೆಂದು ನನ್ನ ಅಭಿಪ್ರಾಯ. ಇದಕ್ಕೇನು ಹೇಳುವೆ?"

"ನೀನು ಏನು ಹೇಳಿದರೂ ಸರಿ ನನಗೆ ನಂಬಿಕೆಯಿಲ್ಲ. ನಿನಗೆ ಬಾಲಕೃಷ್ಣನ ಮೇಲೆ ಅನುಮಾನವಿದ್ದರೆ ಹಲವು ದಿನಗಳು ಪರೀಕ್ಷಿಸಿ ನೋಡು. ತಿಳಿಯುತ್ತದೆ."

"ಹಾಗಾದರೇ! ನಿನಗೆ ಆತನ ಮೇಲೆ ಅನುಮಾನವಿಲ್ಲವೇ?"

"ಇಲ್ಲವೆಂದು ಹೇಳಿದೆನಲ್ಲ."

"ಹಾಗಿದ್ದ ಮೇಲೆ ಬೇರೆ ಯಾರ ಮೇಲೆ ಸಂದೇಹವುಂಟಾಗಿದೆ?"

"ಈಗ ನಡೆದಿರುವ ಪರಿಸ್ಥಿತಿಯಲ್ಲಿ ಯಾರ ಮೇಲೂ ಸಂದೇಹವುಂಟಾಗಿಲ್ಲ. ಸತ್ಕಾರ ಕೂಟಕ್ಕೆ ಆಗಮಿಸಿದವರೆಲ್ಲರೂ ಭಾರಿ ಶ್ರೀಮಂತರೇ ಆಗಿರುವರಲ್ಲದೆ, ಗೌರವವ್ಯಕ್ತಿಯಾಗಿರುವರು. ಅವರನ್ನು ಯಾರ ಮೇಲೆ ಏಕಾಏಕಿ ಸಂದೇಹಗೊಳ್ಳಲಿ? ಅಲ್ಲಿಗೆ ಬಂದಿದ್ದವರಲ್ಲಿ ಒಬ್ಬೊಬ್ಬರು ಒಂದೊಂದು ದೊಡ್ಡ ಗುಣವನ್ನು ಪಡೆದವರಾಗಿರುವರು. ಆ ಸಮಯದಲ್ಲಿ ಬಾಲಕೃಷ್ಣನ ಮೇಲೆ ನನಗೆ ಅನುಮಾನವುಂಟಾಯಿತು. ಈಗ ಅದೂ ಸಹ ದೂರವಾಯಿತು."

"ಶ್ರೀಮಂತರೂ ವ್ಯವಹಾರ ಚತುರರೂ ಆದ ಕೊಲೆಗಾರರು ನಮ್ಮ ಮುಂದೆಯೇ ಓಡಾಡಿಕೊಂಡಿದ್ದು, ನಮ್ಮ ಮಿತ್ರರಲ್ಲಿ ಅವರೂ ಒಬ್ಬರೆನಿಸಿ ಕಾರ್ಯ ಸಾಧಿಸಿಕೊಳ್ಳುವರೆಂದು ನೀನು ಹೇಳಿದ್ದು ನೆನಪಿರುವುದೇ?"

"ಇದೆ. ಅದನ್ನು ಮರೆಯಲಾರೆ."

"ಅಲ್ಲಿ ಸೇರಿದ್ದವರಲ್ಲಿಯೇ ಕೊಲೆಗಾರನು ಏಕೆ ಇರಬಾರದು? ಅನ್ನದಾನಪ್ಪನವರು ಅವರ ಗುಣಾವಗುಣಗಳನ್ನು ವಿಮರ್ಶೆ ಮಾಡಿ ಹೇಳಿದ

ಮಾತ್ರಕ್ಕೆ ಅವರೆಲ್ಲರೂ ನಿರಪರಾಧಿಗಳೆಂದು ನಿನ್ನ ಭಾವನೆಯೇ? ಇನ್ಸ್ಪೆಕ್ಟರನು ಅನ್ನದಾನಪ್ಪನವರ ಗುಣ ಮಹಿಮೆಯನ್ನು ನಮ್ಮ ಮುಂದೆ ಹೊಗಳಿದಂತೆ ಅವರು ಅದೇ ರೀತಿ ಹೊಗಳಿರಬಾರದೇಕೆ? ಅಂತಹ ಸಭೆಯಲ್ಲಿ ಅವಮಾನ ಮಾಡಲು ಯಾರಿಗೆ ತಾನೆ ಮನಸ್ಸು ಬರುತ್ತದೆ? ನಿನಗೆ ಬಾಲಕೃಷ್ಣನ ಮೇಲೆ ಅನುಮಾನವಿಲ್ಲದಿರಬಹುದು. ಹಾಗಿದ್ದ ಮೇಲೆ ಕೊಲೆಗಾರನು ಆ ಗುಂಪಿನಲ್ಲಿ ಇದ್ದೇ ಇದ್ದನೆಂದು ನನ್ನ ಭಾವನೆ."

"ಚಂದ್ರನಾಥನು ಹೊಗಳಿದುದನ್ನು ಕೇಳಿ ನನಗೆ ಸಂದೇಹವುಂಟಾಗಿ ನಾನೇ ವಿಚಾರಿಸಿದೆ. ಅನ್ನದಾನಪ್ಪನವರು ಹೇಳಿದುದರಲ್ಲಿ ನನಗೆ ಅನುಮಾನವೇನೂ ಕಾಣಲಿಲ್ಲ. ಅವರವರ ಯೋಗ್ಯತಾಗುಣಗಳ ಸತ್ಯಸಂಗತಿಯನ್ನು ಹೇಳಿರುವರೆಂಡೇ ನನ್ನ ಭಾವನೆ. ನೀನು ತಿಳಿಸಿದಂತೆ ಆ ಗುಂಪಿನಲ್ಲಿಯೇ ಕೊಲೆಗಾರನಿದ್ದರೆ ನಮ್ಮ ಕಾರ್ಯಕ್ಕೆ ಅನುಕೂಲವೇ ಆಯಿತು. ಹೇಗೂ ಫೋಟೋ ಹಿಡಿದಿರುವುದರಿಂದ ಅವರಾರೂ ನಮ್ಮಿಂದ ತಪ್ಪಿಸಿಕೊಳ್ಳುವ ಹಾಗಿಲ್ಲ. ಒಬ್ಬೊಬ್ಬರ ನಡವಳಿಕೆಗಳನ್ನು ಪರೀಕ್ಷಿಸಿ ತಿಳಿಯಬಹುದು. ಅವರಲ್ಲಿ ಯಾರಾದರೂ ತಪ್ಪಿಸಿಕೊಂಡರೆ ತಾವಾಗಿಯೇ ಅಪರಾಧವನ್ನು ತೋರಿಸಿಕೊಟ್ಟಂತಾಗುವುದು."

ಬಾಲಕೃಷ್ಣನ ಮೇಲೆ ಸಂದೇಹಗೊಂಡಿದ್ದ ರಾಮನಾಥನು ತಾನು ಅತನನ್ನು ಪರೀಕ್ಷಿಸದೆ ಬಿಡಬಾರದೆಂದುಕೊಂಡು ಪುನಃ ಮಾತನಾಡಲಿಲ್ಲ.

೬

ತನ್ನ ಮುದ್ದು ಮಗಳಾದ ಸರೋಜಳನ್ನು ರಾಜಗೋಪಾಲನಿಗಿತ್ತು ವಿವಾಹ ಮಾಡಿ, ಅವನನ್ನು ತನ್ನ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ಅನ್ನದಾನಪ್ಪನವರ ಮನೋಕಾಂಕ್ಷೆಯಾಗಿದೆ. ಅದಕ್ಕಾಗಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ, ಸತ್ಕಾರ ಕೂಟವನ್ನಿಟ್ಟು ಸರ್ವರಿಗೂ ರಾಜಗೋಪಾಲನ ಪರಿಚಯ ಮಾಡಿಕೊಟ್ಟಿರುವರು.

ಆದರೇ! ಅವರ ದ್ವಿತೀಯ ಪತ್ನಿಯಾದ ಮನೋರಮೆಗೆ ಆ ವಿವಾಹವು ಇಷ್ಟವಿಲ್ಲ.

ತನ್ನ ತಮ್ಮನಾದ ಮುರಿದಾಸನಿಗೆ ಸವತಿಯ ಮಗಳನ್ನಿತ್ತು ವಿವಾಹ ಮಾಡಬೇಕೆಂದು ಅವಳ ಆಕಾಂಕ್ಷೆಯಾಗಿದೆ.

ಅವರಿಬ್ಬರಲ್ಲಿ ಯಾರನ್ನು ವರಿಸುವುದಕ್ಕೂ ಸರೋಜಳಿಗೆ ಇಷ್ಟವಿಲ್ಲ.

ರಾಜಗೋಪಾಲನು ಇಂಗ್ಲೇಂಡಿಗೆ ಹೋಗಿ ಬಂದಿರುವನು. ಸ್ಫುರದ್ರೂಪಿ ತರುಣ. ಆಗರ್ಭ ಶ್ರೀಮಂತ. ತನ್ನ ತಂದೆತಾಯಿಯರಿಗೆ ಒಬ್ಬನೇ ಮಗ.

ಮನೋರಮೆಯ ತಮ್ಮನಾದ ಮುರಿದಾಸನು ವಿದ್ಯಾವಂತನಲ್ಲದಿದ್ದರೂ ಬುದ್ಧಿವಂತ. ಶ್ರೀಮಂತನಲ್ಲದಿದ್ದರೂ, ಬಡವನಲ್ಲ. ಆತನೂ ತನ್ನ ಜನನೀ ಜನಕರಿಗೆ ಒಬ್ಬನೇ ಮಗ.

ಆದರೂ ಅವರಿಬ್ಬರಲ್ಲಿ ಯಾರನ್ನೇ ಆಗಲಿ ತನ್ನ ಪತಿಯನ್ನಾಗಿ ಮಾಡಿಕೊಳ್ಳಲು ಸರೋಜಳಿಗೆ ಇಷ್ಟವಿಲ್ಲ.

ಹೀಗಿದ್ದಮೇಲೆ ಅವಳ ಇಷ್ಟವೇನಿದೆ? ಅವಳ ಹೃದಯ ಮಂದಿರದಲ್ಲಿ ನೆಲೆಯಾಗಿರುವ ಮನೋರಮಣನಾರು? ಅಥವಾ ವಿವಾಹವೇ ಆಗಬಾರದೆಂದು ಪ್ರತಿಜ್ಞೆ ಮಾಡಿರುವಳೇ?

ಸರೋಜಳಿಗೆ ವಿವಾಹವಾಗಬಾರದೆಂಬ ಇಚ್ಛೆಯೇನೂ ಇಲ್ಲ. ಅವಳ ಹೃದಯವನ್ನು ಸೂರೆಗೊಂಡಿರುವವನು ಬೇರೊಬ್ಬನಿರುವನು. ಆತನಾರು?

ಕಾಲೇಜು ಸಹಪಾಟಿ ವರದರಾಜು.

ವರದರಾಜುವಿನ ತಂದೆತಾಯಿಯರು ಶ್ರೀಮಂತರೇನಲ್ಲ. ಆತನ ತಂದೆಯು ಸೌದೆ ಮಂಡಿಯನ್ನಿಟ್ಟುಕೊಂಡಿರುವನು.

ತನಗೆ ಕಷ್ಟವಾದರೂ ಚಿಂತೆಯಿಲ್ಲವೆಂದು ತನ್ನ ಕಷ್ಟ ಸುಖಗಳನ್ನು ಮಗನ ಬಳಿಯಲ್ಲಿ ಹೇಳಿಕೊಳ್ಳದೆ, ಮಗನಿಗೆ ಓದಿಸಿರುವನು.

ಆದರೇ! ಮಗನು ಬುದ್ಧಿವಂತ. ತನ್ನ ವಿದ್ಯಾಭ್ಯಾಸಕ್ಕಾಗಿ ತನ್ನ ತಂದೆ ತಾಯಿಯರು ಕಷ್ಟಪಡುತ್ತಿರುವುದನ್ನು ಗಮನಿಸದಿರುತ್ತಿರಲಿಲ್ಲ.

ಸಾಧ್ಯವಾದಷ್ಟು ಅವರ ಮನಸ್ಸಿಗೆ ನೋವುಂಟು ಮಾಡದೆ, ಬಿ. ಎ. ವರೆವಿಗೆ ಓದಿ, ಅಲ್ಲಿಂದ ಮುಂದೆ ಓದಲು ಸಾಧ್ಯವಾಗದೆ ಈಗ ಕೆಲಸವನ್ನು ಹುಡುಕುತ್ತಿರುವನು.

ಬಿ. ಎಲ್. ಗೆ ಕುಳಿತುಕೊಳ್ಳಬೇಕೆಂದು ಅವನ ತಂದೆತಾಯಿಯರು ಒತ್ತಾಯ ಮಾಡಿದರೂ ಬೇಡವೆಂದು ನಿರಾಕರಿಸಿ, ಕೆಲಸಕ್ಕಾಗಿ ಅಲೆಯುತ್ತಿರುವನು.

ಹಲವಾರು ಕಂಪೆನಿ, ಫ್ಯಾಕ್ಟರಿ, ಸರ್ಕಾರದ ಹಲವು 'ಡಿಪಾರ್ಟ್‌ಮೆಂಟ್' ಗಳಿಗೆ 'ಅಪ್ಲಿಕೇಷನ್' ಹಾಕಿರುವನು. ತನಗೆ ಉತ್ತಮವಾದ ಕೆಲಸ ಸಿಕ್ಕರೆ ತನ್ನ ತಂದೆತಾಯಿಯರ ಕೆಲಸವನ್ನು ತಪ್ಪಿಸಬೇಕೆಂದು ಅವನ ಅಭಿಪ್ರಾಯವಾಗಿದೆ.

ವರದರಾಜನು ವಿದ್ಯಾವಂತನು ಮಾತ್ರವೇ ಅಲ್ಲ. ವಿಶೇಷ ಬುದ್ಧಿಯುಳ್ಳವನೂ ಆಗಿರುವನು. ಸ್ಫುರದ್ರೂಪಿ ತರುಣ. ಯಾವುದೊಂದು ಬಗೆಯ ದುರಭ್ಯಾಸವೂ ಅವನಲ್ಲಿಲ್ಲ. ದುರಭ್ಯಾಸವುಳ್ಳವರ ಸಹವಾಸದಲ್ಲಿದ್ದರೂ, ದುರ್ಬುದ್ಧಿಯನ್ನು ಕಲಿಯಲಿಲ್ಲ.

ಪ್ರತಿಯೊಬ್ಬರಿಗೂ ಬೇಕಾದವನಾಗಿರುವನು. ಯಾರಲ್ಲಿಯೂ ಹಗೆತನ ವನ್ನು ಕಟ್ಟಿಕೊಂಡಿಲ್ಲ. ಆವನಿಗೆ ಆತನ ಸ್ನೇಹಿತರೂ ಇತರರೂ 'ಅಜಾತಶತ್ರು' ಎಂದು ಕರೆಯುವರು.

ಪರಸ್ತ್ರೀಯರನ್ನು ಕಣ್ಣೆತ್ತಿಯೂ ನೋಡುವವನಲ್ಲ. ಮುಖ ನೋಡಿ ಮೋಹ ಕಳೆದುಕೊಳ್ಳುವುದರಿಂದ ಏನು ಪ್ರಯೋಜನ, ಎನ್ನುವನು.

ಪರಸ್ತ್ರೀಯರನ್ನು ತನ್ನ ಸಹೋದರಿಯರ ಸಮಾನವೆಂದು ಭಾವಿಸಿದರೆ ಮೆಚ್ಚುವನೆನ್ನುವನು.

ಇಂತಹ ಉತ್ತಮ ಗುಣವುಳ್ಳವನನ್ನು ಸರೋಜಳು ಪ್ರೇಮಿಸಿ, ತನ್ನ ಹೃದಯ ದೇವನನ್ನಾಗಿ ಮಾಡಿಕೊಳ್ಳುವುದರಲ್ಲಿ ಆಶ್ಚರ್ಯವೇನಿದೆ?

ಇಬ್ಬರಿಗೂ ಮತಭೇದವಿಲ್ಲ. ಒಂದೇ ಮತದವರು. ಆದರೇ! ಸರೋಜಳು ಶ್ರೀಮಂತರ ಪುತ್ರಿ. ವರದರಾಜನು ಬಡವನ ಮಗ.

ತನ್ನ ಸರಿಸಮಾನವಿಲ್ಲವೆಂಬ ದುರಭಿಮಾನದಿಂದಲೇ ಅನ್ನದಾನಪ್ಪ ನವರು ತಿಮ್ಮರಾಜು (ವರದರಾಜುವಿನ ತಂದೆ) ವನ್ನು ಸತ್ಕಾರ ಕೂಟಕ್ಕೆ ಆಹ್ವಾನಿಸಲಿಲ್ಲ.

ಸರೋಜಳು ವರದರಾಜನನ್ನು ಪ್ರೇಮಿಸಿರುವಂತೆ ಆತನು ಸರೋಜಳನ್ನು ತನ್ನ ಮನೋದೇವತೆಯನ್ನಾಗಿ ಮಾಡಿಕೊಂಡು, ಅವಳಿಗೆ ತನ್ನ ಹೃದಯದಲ್ಲಿ ಸ್ಥಾನವಿತ್ತಿರುವನು.

ಅವರ ಪರಸ್ಪರ ಪ್ರಣಯ ಸಂಬಂಧವು ಅವರವರ ತಂದೆತಾಯಿಯರಿಗೆ ತಿಳಿಯದು. ಸಮಯ ಬಂದಾಗ ತಿಳಿಸಿ ಅವರ ಸಮ್ಮತಿ ಪಡೆಯಬೇಕೆಂಬ ಅಭಿಪ್ರಾಯದಿಂದಿರುವರು.

ಆದರೇ! ತಮ್ಮ ವಿವಾಹ ಕಾರ್ಯವು ಸುಲಭವಾಗಿ ನೆರವೇರದೆಂದು ಅವರಿಬ್ಬರೂ ಬಲ್ಲರು.

ಬಡತನ, ಸಿರಿತನವೇ ಅವರಿಬ್ಬರ ವಿವಾಹ ಕಾರ್ಯಕ್ಕೆ ದೊಡ್ಡ ಅಡಚಣೆಯಾಗಿದೆ.

ಲಕ್ಷಾಧೀಶ್ವರನ ಮಗನಿಗೆ ತಮ್ಮ ಮಗಳನ್ನಿತ್ತು ವಿವಾಹ ಮಾಡಲು ಸಕಲ ಏರ್ಪಾಡುಗಳನ್ನು ಮಾಡುತ್ತಿರುವ ಅನ್ನದಾನಪ್ಪನವರು, ತಮ್ಮ ಸರಿ

ಸಮಾನ ಯೋಗ್ಯತೆಯಿಲ್ಲದ (ಶ್ರೀಮಂತಿಕೆಯಲ್ಲಿ ಮಾತ್ರ) ಶಿವಮ್ಮರಾಜುವಿನ ಮಗನಿಗೆ ಕೊಟ್ಟು ವಿವಾಹ ಮಾಡುವರೇ ?

ಆದರೇ ! ಪ್ರಣಯಿಗಳು ಒಬ್ಬರನ್ನೊಬ್ಬರು ವಿವಾಹವಾಗಲು ಭೀಷ್ಮ ಪ್ರತಿಜ್ಞೆ ಮಾಡಿರುವರು. ಎಂತಹ ವಿಘ್ನಗಳು ಸಂಭವಿಸಿದರೂ, ಅದಕ್ಕೆ ಹೆದರದೆ, ಸತಿಪತಿಯರಾಗಲು ತೀರ್ಮಾನಿಸಿಕೊಂಡಿರುವರು.

ಅವರವರ ವಿದ್ಯಾಭ್ಯಾಸವು ಮುಕ್ತಾಯವಾಗಿದ್ದರೂ, ಪ್ರಣಯಿಗಳು ಆಗಾಗ್ಗೆ ಒಬ್ಬರನ್ನೊಬ್ಬರು ಸಂಧಿಸುತ್ತಲೇ ಇದ್ದರು.

ವರದರಾಜನು ಬಿ. ಎ. ವರೆವಿಗೆ ಓದಲು ಸರೋಜಳು ಪ್ರೋತ್ಸಾಹಿಸಿ ದ್ರವ್ಯಸಹಾಯ ಮಾಡಿದ್ದಳೆಂದರೂ ತಪ್ಪಾಗದು.

ಅನ್ನದಾನಪ್ಪನವರು ರಾಜಗೋಪಾಲನಿಗಾಗಿ ಸತ್ಕಾರ ಕೂಟವನ್ನಿಟ್ಟು ಆ ಕೂಟಕ್ಕೆ ಶ್ರೀಮಂತರನ್ನು ಆಹ್ವಾನಿಸಿದ ವಿಷಯವು ವರದರಾಜನಿಗೆ ತಿಳಿಯದಿರಲಿಲ್ಲ.

ರಾಜಗೋಪಾಲನಿಗೆ ಸರೋಜಳನ್ನು ಕೊಟ್ಟು ವಿವಾಹ ಮಾಡುವರೆಂಬ ವಿಷಯವೂ ಸಹ ಅವರಿವರ ಮೂಲಕ ಗೊತ್ತಾಯಿತು.

ಆ ವಿಷಯವು ತಿಳಿದನಂತರ ವರದರಾಜನ ಮನಸ್ಸಿಗೆ ಖೇದವಾಗದಿರಲಿಲ್ಲ.

ಸರೋಜಳು ತನ್ನ ತಂದೆತಾಯಿಯರ ಬಳಿಯಲ್ಲಿ ತಮ್ಮ ವಿಷಯವನ್ನು ಮೊದಲೇ ಹೇಳಿ ಅವರ ಅನುಮತಿ ಪಡೆದಿದ್ದರೆ, ಈ ಕೂಟವು ನಡೆಯಲು ಅವಕಾಶವಾಗುತ್ತಿರಲಿಲ್ಲವೆಂದುಕೊಂಡನು.

'ಸರೋಜಳು ನನ್ನನ್ನು ಮನಃಪೂರ್ವಕವಾಗಿ ವರಿಸುವೆನೆಂದು ಅಭಯವಿತ್ತಿರುವಳಲ್ಲದೆ, ತನ್ನ ತಂದೆತಾಯಿಯರ ಮೇಲೆ ಆಣೆ ಮಾಡಿರುವಳು. ನಾನು ದರಿದ್ರನೆಂಬುದನ್ನು ಬಲ್ಲಳು. ನನ್ನ ವಿದ್ಯಾಭ್ಯಾಸಕ್ಕೆ ಹಣ ಸಹಾಯ ಮಾಡಿರುವಳು. ಈಗ ನೋಡಿದರೆ ಅವಳ ತಂದೆಯು ರಾಜಗೋಪಾಲನನ್ನು ತಮ್ಮ ಅಳಿಯನನ್ನಾಗಿ ಮಾಡಿಕೊಳ್ಳಲು, ಅದಕ್ಕೆ ಬೇಕಾದ ಏರ್ಪಾಡು ನಡೆಯಿಸುತ್ತಿರುವನು. ಸರೋಜಳಿಗೆ ಈ ವಿಷಯವು ತಿಳಿದಿಲ್ಲವೇ ? ತಿಳಿಯದೆ ಏನು ? ಆಕೆಯು ತನ್ನ ತಂದೆಯನ್ನು ಎದುರಿಸಿ ನಿಲ್ಲಬಲ್ಲಳೇ ? ಅನ್ನದಾನಪ್ಪನವರು ಮಗಳ ಮನೋಭಿಪ್ರಾಯಕ್ಕೆ ಸಮ್ಮತಿಸುವರೇ ? ಸಮ್ಮತಿಸಲಾರರು.

ನನ್ನ ಸರೋಜಳ ವಿವಾಹವು ನಡೆಯಲಾರದು. ಸರೋಜಳು ತನ್ನ ತಂದೆಯ ಮಾತನ್ನು ಮೀರಲಾರಳು. ಬಾಲಬುದ್ಧಿಯಿಂದ ತಿಳಿಯದೆ ಪ್ರತಿಜ್ಞೆ ಮಾಡಿ, ಆಣೆ ಪ್ರಮಾಣಗಳನ್ನು ಮಾಡಿದೆ. ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಕ್ಷಮಿಸಿ ರೆಂದು ಈ ಸಾರಿ ನನ್ನನ್ನು ಸರೋಜಳು ಸಂಧಿಸಿದಾಗ ಬೇಡಿಕೊಳ್ಳಬಹುದು. ಸ್ತ್ರೀಯರ ಮನೋಧರ್ಮವನ್ನು ತಿಳಿಯಲು ಯಾರಿಂದಲೂ ಸಾಧ್ಯವಾಗದೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿರುವಾಗ, ಅವನ ಮಾತನ್ನು ಸುಳ್ಳೆಂದು ಅಲ್ಲೆ ಗಳೆಯಲು ಸಾಧ್ಯವೇ? ಈಗ ಕಣ್ಣಾರೆ ಕಂಡಂತಾಗುವುದು. ಸರೋಜಳು ನನ್ನನ್ನು ಸಂಧಿಸಿದಾಗ ಅವಳ ಮನೋಭಿಪ್ರಾಯವು ಹೇಗಿದೆಯೆಂಬುದನ್ನು ಕೇಳಿ ತಿಳಿಯುವೆನು'

ಈ ರೀತಿ ಯೋಚಿಸಿಕೊಂಡ ವರದರಾಜನು ಒಂದು ವಿಧದಲ್ಲಿ ಹುಚ್ಚ ನಂತೆಯೇ ಆದನು.

ಊಟ ಉಪಚಾರಗಳು ಅವನಿಗೆ ಬೇಡವಾಯಿತು. ಕುಳಿತಲ್ಲಿ, ನಿಂತಲ್ಲಿ ಸದಾ ಸರೋಜಳು ತನ್ನಲ್ಲಿ ಮಾಡಿದ ವೀರ ಪ್ರತಿಜ್ಞೆಯನ್ನು ಜ್ಞಾಪಿಸಿ ಕೊಳ್ಳುವನು. ಆ ರೀತಿ ನಡೆಯಬಲ್ಲಳೇ? ಎಂದು ಚಿಂತಿಸುವನು.

ತನಗೆ ತಾನೇ ಯಾರೊಬ್ಬರೂ ಸಮೀಪದಲ್ಲಿಲ್ಲದಾಗ ಹುಚ್ಚನಂತೆ ಮಾತನಾಡಿಕೊಳ್ಳುವನು.

ಹಗಲು, ರಾತ್ರಿಯು ಹೇಗೆ ಕೂಡುವುದಿಲ್ಲವೋ, ಹಾಗೆ ತನ್ನ ಸರೋ ಜಳ ಪರಿಸ್ಥಿತಿಯಾಗುವುದೆಂದು ನಿಟ್ಟುಸಿರು ಬಿಡುವನು.

ಆದರೇ! ವಿವೇಕಶಾಲಿಯಾದ ವರದರಾಜನು ತನ್ನ ಪರಿಸ್ಥಿತಿಯ ಅನು ಭವವನ್ನು ತನ್ನ ತಂದೆತಾಯಿಯರ ಬಳಿಯಲ್ಲಿ ಹೇಳಿಕೊಳ್ಳಲಿಲ್ಲ.

ಮನೆಯನ್ನು ರಾತ್ರಿ ಹನ್ನೊಂದು ಘಂಟೆಗೆ ಸೇರಿ ಬೆಳಗ್ಗೆ ಐದು ಘಂಟೆಗೆ ಅಲ್ಲಿಂದ ಹೊರಡುತ್ತಿದ್ದನು.

ಈಚಿನ ಮಗನ ವರ್ತನೆಯನ್ನು ಅವನ ತಂದೆತಾಯಿಯರು ಅರಿಯ ದವರಾದರು.

ಕೆಲಸಕ್ಕಾಗಿ ಅಲೆದಲೆದು, ಬೇಸತ್ತು ಬರುವನೆಂದುಕೊಂಡರು.

ಮಗನ ಪರಿಸ್ಥಿತಿಯ ಪ್ರಸಂಗ ಮರ್ಮವನ್ನು ಅವರೇನು ಬಲ್ಲರು?

ಪ್ರಾಪ್ತವಯಸ್ಕನಾದ ಮಗನಿಗೆ ಮದುವೆ ಮಾಡಲು ಅವರ ಬಳಿಯಲ್ಲಿ ಹಣವಿಲ್ಲ. ಮಗನು ಎಲ್ಲಿಯಾದರೂ ಕೆಲಸಕ್ಕೆ ಸೇರಿಕೊಂಡರೆ ಆ ಧೈರ್ಯದ ಮೇಲೆ ಯಾರಲ್ಲಿಯಾದರೂ ಸಾಲ ಮಾಡಿ, ಅನುರೂಪಳಾದ ಕನ್ಯೆಯನ್ನು ನೋಡಿ ಮದುವೆ ಮಾಡಬೇಕೆಂದು ಸತಿಪತಿಯರ ಅಭಿಪ್ರಾಯವಾಗಿದೆ. ಅದರೂ ದೇವನಗರದಲ್ಲಿರುವ ತಮ್ಮ ಬಂಧುಗಳೊಡನೆ ಪತ್ರವ್ಯವಹಾರ ನಡೆಯಿಸುತ್ತಿರುವರು.

ಮಗನ ಪರಿಸ್ಥಿತಿಯನ್ನು ತಂದೆತಾಯಿಯರರಿಯರು. ಅವರ ಮನೋಭಿಪ್ರಾಯವು ಹೇಗಿದೆಯೆಂದು ಮಗನರಿಯನು.

ಈ ಸಾರಿ ಸರೋಜಳನ್ನು ಸಂಧಿಸಿದಾಗ ಅವಳ ಮನೋಭಿಪ್ರಾಯವು ಹೇಗಿದೆಯೆಂಬುದನ್ನು ಕೇಳಿ ತಿಳಿದು, ಬಳಿಕ ಆ ವಿಷಯವನ್ನು ತನ್ನ ತಂದೆ ತಾಯಿಯರಲ್ಲಿ ಪ್ರಸ್ತಾಪ ಮಾಡಬೇಕೆಂದು ಅಭಿಲಾಷೆಯುಳ್ಳವನಾಗಿ, ದಿನಗಳನ್ನು ವರ್ಷಗಳಂತೆ ಕಳೆಯುತ್ತಿರುವನು.

ಸಂಭ್ರಮದ ಸತ್ಕಾರಕೂಟ ಸಮಾರಂಭವನ್ನಿಟ್ಟು ಸರ್ವರನ್ನು ಸಂತೋಷಗೊಳಿಸಿದ ಅನ್ನದಾನಪ್ಪನವರು, ರಾಜಗೋಪಾಲನು ತಮ್ಮ ಅದ್ದೂರಿಯ ಸಮಾರಂಭನ್ನು ನೋಡಿ ಬೆರಗಾಗಿರುವನಲ್ಲದೆ, ತಮ್ಮ ಮಗಳನ್ನು ವಿವಾಹವಾಗುವುದರಲ್ಲಿ ಸಂದೇಹವಿಲ್ಲವೆಂದುಕೊಂಡರು.

ಆದರೇ! ರಾಜಗೋಪಾಲನ ಮನಸ್ಸು ಹೇಗಿದೆಯೆಂದು ಅವರೇನು ಬಲ್ಲರು?

ತಮ್ಮ ಮಗಳಿಗೆ ಆ ವಿಷಯವು ತಿಳಿದಿದ್ದರೂ, ಅವಳನ್ನು ಕೇಳಿ ಅವಳ ಅಭಿಪ್ರಾಯವು ಹೇಗಿದೆಯೆಂಬುದನ್ನು ಕೇಳಿ ತಿಳಿಯಬೇಕೆಂದುಕೊಂಡರು.

ತಮ್ಮ ಪತ್ನಿಯು ಸರೋಜಳ ಮನಸ್ಸನ್ನು ತನ್ನ ತಮ್ಮನ ಕಡೆಗೆಲ್ಲಿ ತಿರುಗಿಸಿಬಿಡುವಳೋ ಎಂಬ ಭೀತಿ ಬೇರೆ ಇದೆ.

ಒಂದು ದಿನ ಸಾಯಂಕಾಲ ಸಮಯದಲ್ಲಿ ಮಗಳನ್ನು ಮಹಡಿಯ ಮೇಲೆ ಕರೆದುಕೊಂಡು ಹೋಗಿ, ಸೋಫಾದ ಮೇಲೆ ಕುಳ್ಳಿರಿಸಿ, ಅವರೂ ಆಕೆಯ ಪಕ್ಕದಲ್ಲೇ ಕುಳಿತರು.

ತನ್ನನ್ನು ಮೇಲೆ ಏಕೆ ಕರೆದುಕೊಂಡು ಬಂದುದೆಂದು ಸರೋಜಳಿಗೆ ತಿಳಿಯದಿರಲಿಲ್ಲ. ಆದರೂ ಏನೂ ಅರಿಯದವಳಂತೆಯೇ ಇರುವಳು.

ತಂದೆ ಮಗಳು ಮೇಲೆ ಹೋದುದನ್ನು ನೋಡಿ, ಮನೋರಮೆಯು ಅವರಿಬ್ಬರು ಏನು ಮಾತನಾಡುವರೆಂಬುದನ್ನು ಕದ್ದು ಕೇಳುವ ನಿಮಿತ್ತ ಅವರ ಹಿಂದೆಯೇ ಹೋಗಿ ಬಾಗಿಲ ಮರೆಯಲ್ಲಿ ಅಡಗಿ ನಿಂತುಕೊಂಡಳು.

"ಸರೋಜಾ! ನಿನ್ನನ್ನು ಇಲ್ಲಿಗೆ ಏಕೆ ಕರೆದುಕೊಂಡು ಬಂದೆನೆಂದು ತಿಳಿದಿದೆಯೇ?"

—ಎಂದು ಅನ್ನದಾನಪ್ಪನವರು ಕೇಳಿದರು.

"ಏಕೆ? ನನಗೇನೂ ತಿಳಿಯದೇ?"

—ಎಂದು ಏನೂ ಅರಿಯದವಳಂತೆ ಮರುಪ್ರಶ್ನಿಸಿದಳು ಸರೋಜ.

"ನಿನಗೆ ತಿಳಿಯದೆಂದೇ, ಭಾವಿಸಿ ತಿಳಿಸಲು ಕರೆದುಕೊಂಡು ಬಂದೆ"

"ಏನು ವಿಷಯ? ಏಕೆ ಕರೆದುಕೊಂಡು ಬಂದಿರಿ?"

"ನೀನು ರಾಜಗೋಪಾಲನನ್ನು ನೋಡಿರುವೆಯಲ್ಲವೇ?"

"ಯಾವ ರಾಜಗೋಪಾಲ? ಇಂಗ್ಲೇಂಡಿನಿಂದ ಬಂದಿರುವನಲ್ಲ ಆತನೇ? ನೋಡಿರುವೆನು. ಏಕೆ ಆತನಿಂದ ಏನಾಗಬೇಕು?"

"ಅವನು, ಇವನೆಂದು ಏಕವಚನ ಶಬ್ದವನ್ನು ಆಡಬೇಡ ಸರೋಜಾ"

"ಇನ್ನೇನೆಂದು ಹೇಳಲಿ? ಇಂಗ್ಲೇಂಡಿಗೆ ಹೋಗಿಬಂದ ಮಾತ್ರಕ್ಕೇ ಏನಾಯಿತು? ಹೆಚ್ಚಿನ ಗೌರವವನ್ನು ತೆಗೆದುಕೊಂಡು ಬಂದಿರುವನೇ? ಒಂದು ವೇಳೆ ತೆಗೆದುಕೊಂಡು ಬಂದಿದ್ದರೆ, ಅದನ್ನು ಪೆಟ್ಟಿಗೆಗಳಲ್ಲಿ ಭದ್ರಪಡಿಸಿ ಕೊಂಡಿರಲಿ"

ಮಗಳ ವರ್ತನೆಗೆ ಸೋಜಿಗರಾದ ಅನ್ನದಾನಪ್ಪನವರು ಮೃದು ವಾಗಿಯೇ—

"ಇದೇನು ಸರೋಜಾ! ಅವನ ವಿಷಯವಾಗಿ ಈ ರೀತಿ ಮಾತನಾಡು ತ್ತಿರುವೆ? ನಿನಗೇನಾದರೂ ಹುಚ್ಚು ಹಿಡಿಯಿತೇ? ಹೇಗೆ?" ಎಂದು ಕೇಳಿದರು.

"ಹುಚ್ಚೂ ಇಲ್ಲ, ಗಿಚ್ಚೂ ಇಲ್ಲ. ಈಗ ನನ್ನಲ್ಲಿ ಮಾತನಾಡಬೇಕಾದ ವಿಷಯವೇನು ಹೇಳಿ?"

—ಎಂದು ಮೂಸ್ನುರಿದು ಪ್ರಶ್ನಿಸಿದಳು ಸರೋಜ.

"ಅವನ ವಿಷಯವನ್ನೇ ಮಾತನಾಡಬೇಕಾಗಿದೆ"

"ಏನು, ಇಂಗ್ಲೇಂಡಿಗೆ ಹೋಗಿ ಬಂದುದರ ವಿಷಯವಾಗಿ ಭಾಷಣ ಮಾಡಬೇಕೆಂದಿರುವಿರಾ ?"

"ಪೂರ್ತಿ ಹೇಳುವವರೆವಿಗೆ ಕೇಳು. ಮಾತು ಮುಗಿಯುವ ಮೊದಲೇ ಮಧ್ಯೆ ಮಧ್ಯೆ ಮಾತನಾಡಿ ಏಕೆ ತಲೆ ಕೆಡಿಸುವೆ ?"

"ಅದೇನು ಪೂರ್ತಿ ಹೇಳಿ ? ನಿಮ್ಮ ಮಾತು ಮುಗಿಯುವವರೆವಿಗೆ ಸುಮ್ಮನೆ ಕುಳಿತುಕೊಳ್ಳುವೆನು"

"ರಾಜಗೋಪಾಲನು ಇಂಗ್ಲೇಂಡಿಗೆ ಹೋಗಿ ಬಂದಿರುವನಾದರೂ, ಯಾವುದೊಂದು ಬಗೆಯ ದುರಭ್ಯಾಸವನ್ನೂ ಕಲಿತಿಲ್ಲ. ಸಾತ್ವೀಕ ಗುಣ ವುಳ್ಳವನು"

"ಸತ್ಕಾರ ಕೂಟದಲ್ಲಿ ಈ ಮಾತುಗಳನ್ನೆಲ್ಲಾ ಹೇಳಲಿಲ್ಲವೇಕೆ ? ಆಗ ಮರೆತುಹೋದಿರೆಂದು ತೋರುತ್ತದೆ. ಅಲ್ಲವೇ ?"

"ನಾನು ಹೇಳುವವರೆವಿಗೂ ಸುಮ್ಮನಿರುವೆಯಾ ? ಅಥವಾ ಹೀಗೇ ತಲೆ ಹರಟುವೆಯೋ ?"

"ಅಪ್ಪಾ ! ನನ್ನೆದುರಿಗೆ ರಾಜಗೋಪಾಲನ ಸ್ತೋತ್ರವನ್ನು ಮಾಡ ಬೇಡಿ. ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದ ಮುಖ್ಯವಾದ ವಿಷಯವೇ ನೆಂಬುದನ್ನು ಮಾತ್ರ ಹೇಳಿ. ಹೆಚ್ಚು ಮಾತು ಬೇಕಿಲ್ಲ. ನಿಮ್ಮ ಹೊಗಳಿಕೆ ಯನ್ನು ಕೇಳಿಕೊಂಡಿರಲು ನಾನೇನೂ ಸ್ತೋತ್ರಪ್ರಿಯಳಲ್ಲ. ನನಗೂ ಅದಕ್ಕೂ ಬಹುದೂರ"

"ಹಾಗೋ, ಹಾಗಿದ್ದ ಮೇಲೆ ಒಂದೇ ಮಾತಿನಲ್ಲಿ ಹೇಳುವೆನು ಕೇಳು. ನಿನ್ನನ್ನು ಆ ರಾಜಗೋಪಾಲನಿಗೆ........"

ತಂದೆಯ ಮಾತು ಪೂರೈಸುವ ಮೊದಲೇ ಮಗಳು ಸಿಡುಕಿನಿಂದ ಎದ್ದು ನಿಂತಳು.

"ಏನೂ....! ನನ್ನನ್ನು ಇಂಗ್ಲೇಂಡಿನಿಂದ ಬಂದವನಿಗಿತ್ತು ವಿವಾಹ ಮಾಡುವುದೇ ?"

—ಎಂದು ಕೋಪತಾಪಗಳಿಂದಲೇ ಕೇಳಿದಳು.

"ಹಾಗೇಕೆ ಸಿಟ್ಟು ಮಾಡಿಕೊಳ್ಳುವೆ ಸರೋಜಾ. ಕುಳಿತುಕೋ. ನೋಡು, ರಾಜಗೋಪಾಲನನ್ನು ಸಾಮಾನ್ಯನೆಂದು ತಿಳಿಯಬೇಡ. ಇಂಗ್ಲೇಂ

ಡಿಗೆ ಹೋಗಿ ಅಲ್ಲಿ ಹತ್ತು ವರ್ಷಗಳಿದ್ದರೂ, ಈ ದೇಶದ ನಡೆ ನುಡಿಗಳನ್ನು ಬಿಟ್ಟಿಲ್ಲ. ನಿಗರ್ವಿಯಾದ ಮನುಷ್ಯ. ಅಂತಹ ಉತ್ತಮ ಗುಣವುಳ್ಳ ವರನು ಜೇರೆ ಸಿಗಲಾರನು. ಅವನನ್ನು ಅಳಿಯನನ್ನಾಗಿ ಮಾಡಿಕೊಳ್ಳಲು ನಾನು ಪಟ್ಟಿರುವ, ಪಡುತ್ತಿರುವ ಶ್ರಮವನ್ನು ನೀನು ಬಲ್ಲೆಯಾ?"

—ಎಂದು ಶಾಂತವಚನಗಳಿಂದಲೇ ಮಗಳನ್ನು ಸಂತೈಸಿ ನುಡಿದರು, ಅನ್ನದಾನಪ್ಪನವರು.

"ಅವನು ಎಂತಹ ಗುಣವುಳ್ಳವನಾದರೂ ಸರಿ, ನಾನು ಅವನನು ವರಿಸಲಾರೆ. ಇಂಗ್ಲೇಂಡಿಗೆ ಮಾತ್ರವಲ್ಲ, ಅಮೇರಿಕಾ, ಜರ್ಮನಿಗೆ ಹೋಗಿ ಬಂದರೂ ಸರಿ, ಅವನನ್ನು ವರಿಸಲು ನನಗಿಷ್ಟವಿಲ್ಲ. ನನಗಾಗಿ ನೀವು ಕಷ ತೆಗೆದುಕೊಳ್ಳಬೇಡಿ. ನೀವು ಬಲಾತ್ಕಾರ ಪಡಿಸಿದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುವೆನು"

ಮಗಳ ಮಾತಿಗೆ ಅನ್ನದಾನಪ್ಪನವರು ಬೆರಗಾದರು. ಆಕೆಯು ಆ ರೀತಿ ಹೇಳುವಳೆಂದು ಕನಸುಮನಸಿನಲ್ಲಿಯೂ ತಿಳಿದಿರಲಿಲ್ಲ.

ಬಾಗಿಲ ಮರೆಯಲ್ಲಿ ನಿಂತು ತಂದೆಮಗಳ ಮಾತುಗಳನ್ನು ಕದ್ದು ಕೇಳುತ್ತಿದ್ದ, ಮನೋರಮೆಗೆ ಸರೋಜಳಾಡಿದ ಮಾತಿಗೆ ಅತ್ಯಾನಂದಗೊಂಡು, ಈಕೆಯು ತನ್ನ ತಮ್ಮನನ್ನು ವರಿಸುವುದರಲ್ಲಿ ಸಂದೇಹವಿಲ್ಲವೆಂದುಕೊಂಡಳು. ಅವಳ ಆಗಿನ ಸಂತೋಷವನ್ನು ಎಷ್ಟು ವರ್ಣಿಸಿದರೂ ಅಲ್ಪವೇ.

ತಾನು ಈ ವರೆವಿಗೆ ಅವಳಿಗೆ ಹಿತೋಪದೇಶ ಮಾಡಿದ್ದಕ್ಕೆ ಇಂದಿಗೆ ಸಾರ್ಥಕವಾಯಿತೆಂದುಕೊಂಡಳು.

"ಸರೋಜಾ! ಹೆತ್ತವರ ಮನಸ್ಸನ್ನು ನೋಯಿಸಬೇಡ. ತಂದೆತಾಯಿಯರು ನೊಂದುಕೊಂಡರೆ ಮಕ್ಕಳಿಗೆ ಶ್ರೇಯಸ್ಸಾಗದು"

—ಎಂದು ಮೃದುವಾಗಿ ನುಡಿದರು ಅನ್ನದಾನಪ್ಪನವರು.

"ಮಕ್ಕಳ ಹಿತಾಹಿತಗಳನ್ನು ಬಯಸುವುದು ತಂದೆತಾಯಿಯರ ಕರ್ತವ್ಯವಲ್ಲವೇ?"—ಎಂದು ಗಂಭೀರವಾಗಿ ಪ್ರಶ್ನಿಸಿದಳು ಸರೋಜ.

"ಹೌದು! ಅಲ್ಲವೆಂದವರಾರು?"

"ಹಾಗಿದ್ದಮೇಲೆ ನೀವು ನನ್ನ ಕ್ಷೇಮವನ್ನು ಬಯಸುವಿರಾದರೆ ನನ್ನ ಪಾಡಿಗೆ ನನ್ನನ್ನು ಬಿಡಿ"

"ಹೀಗೆಯೇ ಎಷ್ಟು ಕಾಲವಿರುವೆ ?"

"ನಿಮ್ಮ ಮನಸ್ಸು ಬದಲಾವಣೆಗೊಳ್ಳುವವರೆವಿಗೆ"

"ನನ್ನ ಮನಸ್ಸೇನು ಬದಲಾವಣೆಗೊಳ್ಳಬೇಕು ?"

"ಹಾಗೆಂದು ಕೇಳಿದರೆ, ನಾನೇನು ಹೇಳಲಿ ? ಈಗ ನಿಮ್ಮ ಹೃದಯದೊಳಗಡಗಿರುವ ಮನಸ್ಸು ದೂರಾಗಬೇಕು"

"ನೀನು ಹೇಳುವುದೇ ನನಗೆ ಅರ್ಥವಾಗುತ್ತಿಲ್ಲ. ಇರಲಿ. ರಾಜಗೋಪಾಲನ ಬಗ್ಗೆ ನಿನಗೇಕೆ ಅಷ್ಟು ತಾತ್ಸಾರ ?"

"ನನಗೂ ಅವನಿಗೂ ಸಂಬಂಧವನ್ನು ಕಲ್ಪಿಸುವುದಕ್ಕೆ ಬರಲು ತಾತ್ಸಾರವನ್ನು ತೋರಿದೆನಲ್ಲದೆ ಬೇರೆ ಏನೂ ಇಲ್ಲ"

"ಹಾಗಾದರೆ ನೀನು ವಿವಾಹವನ್ನೇ ಆಗುವುದಿಲ್ಲವೇ ?"

"ಆ ವಿಷಯದಲ್ಲಿ ನೀವೇಕೆ ತೊಂದರೆ ತೆಗೆದುಕೊಳ್ಳುವಿರಿ ?"

"ತಂದೆಯಾದವನಿಗೆ ಪ್ರಾಪ್ತವಯಸ್ಕಳಾದ ಮಗಳ ಬಗ್ಗೆ ಯೋಚನೆಯಿರುವುದಿಲ್ಲವೇ ?"

"ಇರುತ್ತದೆ. ನಿಮ್ಮ ಯೋಚನೆಯು ಮಗಳ ಕ್ಷೇಮದ ಕಡೆ ಇಲ್ಲ. ಆಸ್ತಿಯ ಕಡೆ ಇದೆ"

"ಏನೂ....! ರಾಜಗೋಪಾಲನು ನಿನ್ನನ್ನು........"

ತಂದೆಯು ಮಾತು ಪೂರೈಸುವ ಮೊದಲೇ ಮಗಳು ಸಿಟ್ಟಿನಿಂದ—

"ಅಪ್ಪಾ ! ನೀವು ಏನು ರಾಮಾಯಣವನ್ನು ಊದಿದರೂ ಸರಿ, ಅವನನ್ನು ನಾನು ವರಿಸಲಾರೆ" ಎಂದಳು.

ಮಗಳ ಈ ಮಾತನ್ನು ಕೇಳಿ ಅನ್ನದಾನಪ್ಪನವರಿಗೂ ಸಿಟ್ಟು ಬಾರದಿರಲಿಲ್ಲ.

"ನಿನಗೆ ನಿನ್ನ ಚಿಕ್ಕಮ್ಮನ ಬೋಧನೆಯು ಜೋರಾಗಿದಯೆಂದು ತೋರುತ್ತದೆ. ಇಲ್ಲದೇ ಹೋಗಿದ್ದರೆ ನೀನು ಈ ರೀತಿ ಹೇಳುತ್ತಿರಲಿಲ್ಲ"

—ಎಂದು ಹಲ್ಲು ಕಡಿಯುತ್ತಾ ನುಡಿದರು ಅನ್ನದಾನಪ್ಪನವರು.

"ನನಗೆ ಯಾರ ಬೋಧನೆಯೂ ಆಗಿಲ್ಲ. ನೀವೇಕೆ ಚಿಕ್ಕಮ್ಮನನ್ನು ದೂರುವಿರಿ ?"

—ಎಂದು ಏರಿಕೆಯ ಧ್ವನಿಯಲ್ಲಿ ನುಡಿದಳು ಸರೋಜ.

ಮರೆಯಲ್ಲಿದ್ದ ಮನೋರಮೆಯು ಪತಿಯ ಮಾತಿಗೆ ಸಿಟ್ಟುಗೊಂಡ ರಾದರೂ ಮಗಳ ಮಾತಿಗೆ ಸಂತೋಷಗೊಂಡಳು.

"ನೀನು ಹೇಳಿದರೆ ನಾನು ನಂಬುವೆನೇ ? ನಿನ್ನ ಮನಸ್ಸು ಮಂದಾಸನ ಮೇಲೆ ನಟ್ಟುಹೋಗಿದೆ"

"ಯಾರ ಮೇಲೂ ಇಲ್ಲ"

—ಎಂದು ತಂದೆಯ ಮಾತಿಗೆ ಪ್ರತ್ಯುತ್ತರವಿತ್ತಳು ಸರೋಜ.

"ಹಾಗಾದರೇ ! ಬೇರೆ ಯಾರನ್ನು ವರಿಸುವೆ ?"

"ಈಗ ನನಗೇನೂ ಕೇಳಬೇಡಿ"

"ನೀನು ಏನು ಹೇಳಿದರೂ ಸರಿ, ನಿನ್ನನ್ನು ರಾಜಗೋಪಾಲನಿಗಿತ್ತೇ ವಿವಾಹ ಮಾಡುವೆನು. ನೀನು ಸತ್ತರೆ ನನಗೆ ಮಗಳೇ ಹುಟ್ಟಲಿಲ್ಲವೆಂದು ಭಾವಿಸುವೆನು. ಆದುದಾಗಲಿ"

—ಎಂದು ನುಡಿದ ಅನ್ನದಾನಪ್ಪನವರು ಮಗಳ ಪ್ರತ್ಯುತ್ತರವನ್ನು ನಿರೀಕ್ಷಿಸದೆ, ಅಲ್ಲಿಂದ ಹೊರಟರು.

ಮನೋರಮೆಯು ಆ ವೇಳೆಯಲ್ಲಿ ಮರೆಯಾಗಿ ಪತಿಯು ಹೋದ ನಂತರ, ಏನೂ ಅರಿಯದವಳಂತೆ ಸರೋಜಳಿಗೆ ಹಿತೋಕ್ತಿಗಳನ್ನು ಹೇಳಿ ಸಮಾಧಾನ ಮಾಡಿದಳು.

ಅವಳ ಹಿತೋಪದೇಶವೇನೂ ಸರೋಜಳಿಗೆ ಬೇಕಿರಲಿಲ್ಲ.

೭

ತಾನು ಕೊಲೆ ಮಾಡಿದ ಶವದ ಮುಖವನ್ನು ವಿರೂಪಗೊಳಿಸಿ, ರೈಲ್ವೇ ಪಾರ್ಸೆಲ್ಲಿನ ಮೂಲಕ ತನ್ನಲ್ಲಿಗೆ ಕಳುಹಿಸಿದುದು ಮಾತ್ರವಲ್ಲದೆ, ಕಾಗದವನ್ನೂ ಬರೆದು ತನ್ನ ವೀರತ್ವವನನ್ನು ತೋರಿಸಿಕೊಂಡ ಕೊಲೆಗಾರನಾರೆಂಬುದನ್ನು ಪತ್ತೇಮಾಡಿ ಹಿಡಿಯಲು ಪತ್ತೇದಾರರು ತಮ್ಮ ತನುಮನಗಳನ್ನು ಲೆಕ್ಕಿಸದೆ ಶ್ರಮಪಡಬೇಕಾಯಿತು.

ಬಾಲಕೃಷ್ಣನ ಮೇಲೆ ಸಂದೇಹಗೊಂಡಿದ್ದ ರಾಮನಾಥನು ಅವನ ನಡವಳಿಕೆಗಳನ್ನು ಪರಿಶೀಲಿಸಿ ನೋಡಲು ಸಾಧ್ಯವಾಗಲಿಲ್ಲ.

ಕಾರಣ :–ಬಾಲಕೃಷ್ಣನನ್ನು ಸತ್ಕಾರ ಸಮಾರಂಭದಲ್ಲಿ ನೋಡಿದ್ದು, ಮತ್ತೆ ಆತನೆಲ್ಲಿರುವನೆಂಬುದನ್ನು ನೋಡಲಾಗಲಿಲ್ಲ.

ಇದ್ದಕ್ಕಿದ್ದ ಹಾಗೆಯೇ ಆತನು ನಾಪತ್ತೆಯಾದನು. ರಾಮನಾಥನು ಅವರಿವರಲ್ಲಿ ಕೇಳಿ ತಿಳಿದುಕೊಳ್ಳಲೂ ಪ್ರಯತ್ನಿಸಲಿಲ್ಲ.

ಯಾರನ್ನಾದರೂ ಕೇಳಿದಾಗ, ಆ ಮನುಷ್ಯನು ಅಕಸ್ಮಾತ್ ಬಾಲ ಕೃಷ್ಣನ ಕಡೆಯವನೇ ಆಗಿದ್ದರೆ ತನ್ನ ಕಾರ್ಯಕ್ಕೆ ತೊಂದರೆಯಾಗುವುದೆಂದು ಆತನ ಭಾವನೆಯಾಗಿದೆ.

ಅನ್ನದಾನಪ್ಪನವರನ್ನು ಕೇಳಿ ತಿಳಿಯಬಹುದು. ಅವರೇ ಕೊಲೆಗಾರ ರಾಗಿದ್ದರೆ, ಅಥವಾ ಕೊಲೆಗಾರನಿಗೆ ಸಹಾಯವಾಗಿದ್ದರೆ, ತಮಗೆ ಇನ್ನೂ ಹೆಚ್ಚಿನ ತಾಪತ್ರಯಕ್ಕೆ ಕಾರಣವಾಗುವುದೆಂದು ಭಾವಿಸಿದ ರಾಮನಾಥನು ಆ ಪ್ರಯತ್ನಕ್ಕೂ ಮನಗೊಡಲಿಲ್ಲ.

ಬಾಲಕೃಷ್ಣನು ಆ ದಿನ ನಿಜವೇಷದಲ್ಲಿ ಬಂದು ಉಳಿದ ಸಮಯದಲ್ಲಿ ವೇಷಾಂತರಗಳಿಂದ ತಿರುಗುತ್ತಿರಬಹುದೇ? ಕೊಲೆಗಾರನಾಗದೇ ಇದ್ದರೂ ಅವನಿಗೆ ಬೆಂಬಲಿಗನಾಗಿರಬಹುದೇ? ಇದ್ದರೂ ಇರಬಹುದು. ಇಲ್ಲದೇ ಹೋದರೆ, ಈ ರೀತಿ ಇದ್ದಕ್ಕಿದ್ದ ಹಾಗೆ ಕಣ್ಮರೆಯಾಗುವುದೆಂದರೇನು? ಈ ವೇಳೆಯಲ್ಲಿ ಅವನನ್ನು ಪತ್ತೇಮಾಡಿ ಹಿಡಿಯದೆ ಬಿಡಬಾರದು.

ಈ ರೀತಿ ಯೋಚಿಸಿಕೊಂಡ ರಾಮನಾಥನಿಗೆ, ಅದೊಂದು ದೊಡ್ಡ ಸಮಸ್ಯೆಯೇ ಆಯಿತು.

ಕೆಲ ಹೊತ್ತು ಯೋಚಿಸಿ, ಅನ್ನದಾನಪ್ಪನವರ ಬಳಿಯಲ್ಲಿ ನೇರವಾದ ಪ್ರಶ್ನೆಯನ್ನು ಕೇಳದೆ, ಯಾವುಯಾವುದೋ ಮಾತಿನ ಮಧ್ಯೆ ಕೇಳಿ ತಿಳಿಯಬೇಕೆಂದು ಯೋಚಿಸಿ ಅವರಲ್ಲಿಗೆ ಹೊರಟನು.

ಪುರುಷೋತ್ತಮನು ಮಾತ್ರ ಯೋಚನೆಯೆಂಬ ಸಾಗರದಲ್ಲಿ ಮುಳುಗಿ ಹೋಗಿರುವನು.

ಕೊಲೆಗಾರನಾದವನು ಸತ್ಕಾರಕೂಟಕ್ಕೆ ಬಂದಿದ್ದನೇ, ಇಲ್ಲವೇ? ಬಂದಿದ್ದರೆ ಆತನಾರಿರಬಹುದು?

ಲೋಕಸೇವಾನಿರತ ಲೋಕಪ್ಪನವರು ವೃದ್ಧರು, ಅವರಿಂದ ಆ ದುರಂತ ಘಟನೆಯು ನಡೆದಿಲ್ಲ.

ಮಂತ್ರವಾದಿ ವೈದೀಶ್ವರನ ಕೃತ್ಯವಿರಬಹುದೇ? ಕೊಲೆಯಾದವನಿಗೂ ಅವನಿಗೂ ಏನು ಸಂಬಂಧವಿರಬಹುದು?

ಮುಂಡಿವರ್ತಕರಾದ ರಂಗಯ್ಯಶ್ರೇಷ್ಠಿಯವರ ಕೈವಾಡವೇನಾದರೂ ಇರಬಹುದೇ? ಅವರೇಕೆ ಇಂತಹ ನೀಚಕಾರ್ಯಕ್ಕೆ ಮನಗೊಡುವರು? ಅವರು ನಿರಪರಾಧಿಯೆಂದು ಅವರ ಮುಖಭಾವವೇ ಸೂಚಿಸುತ್ತಿತ್ತು.

ಡಾಕ್ಟರ್ ರಾಘವಾಚಾರ್ಯರನ್ನು, ಕೊಲೆಗಾರನೆನ್ನಲೆ ಅಥವಾ ಸುಪ್ರಸಿದ್ಧ ವಕೀಲರು ಈ ಕೃತ್ಯಕ್ಕೆ ಕಾರಣಭೂತರಾಗಿರಬಹುದೇ?

ತಮ್ಮೊಡನೆ ವಿನೋದವಾಗಿ ಮಾತನಾಡಿದ ಬಾಲಕೃಷ್ಣನೇ ಆಗಿರಬಹುದೇ? ಆ ದಿನ ಆತನು ಇತರರಂತೆ ಮೌನವಾಗಿರದೆ ವಿನೋದವಾಗಿ ಮಾತನಾಡಿದ. ಆ ರೀತಿ ಮಾತನಾಡಿದ ಕಾರಣವೇನು? ರಾಮನಾಥನಿಗೆ ಮಾತ್ರ ಅವನ ಮೇಲೆ ಸಂದೇಹವುಂಟಾಗಿದೆ. ಅವನ ಚಲನವಲನ

ಗಳನ್ನರಿಯಲೂ ಪ್ರಯತ್ನಪಟ್ಟಿರುವನು. ಆತನು ಒಂದು ವೇಳೆ ತಪ್ಪಿತಸ್ಥನೇ ಆಗಿದ್ದರೆ ತಿಳಿಯದಿರುವುದಿಲ್ಲ.

ಮೋಟಾರ್ ವಾಹನಗಳ ಮಾಲೀಕರಾದ ದಾಸಪ್ಪನವರಿಗೆ ಕೊಲೆಯಾದವನು ಸಂಬಂಧೀಕನಿರಬಹುದೇ ?

ಅಂತ್ಯ ಸಮಯಕ್ಕೆ ಬಂದು ತನ್ನೊಡನೆ ಪರಿಚಯ ಮಾಡಿಕೊಂಡ ಪೈಲ್ವಾನ್ ಮಸ್ತಾನ್‌ಸಾಬಿಯು ಅಪರಾಧಿಯಿರಬಹುದೇ ? ಸತ್ತವನು ಮುಸಲ್ಮಾನನಾಗಿರಬಹುದೇ ?

ಈ ರೀತಿ ಆಲೋಚಿಸಿಕೊಂಡ ಪುರುಷೋತ್ತಮನು ಯಾವುದೊಂದು ಸಮಸ್ಯೆಯನ್ನೂ ಬಗೆಹರಿಸಲಾರದವನಾದನು.

ಅವರಲ್ಲಿ ಯಾರ ಮೇಲೆಯೇ ಆಗಲಿ ಅನುಮಾನಪಡುವ ಹಾಗಿಲ್ಲ. ಆ ಸತ್ಕಾರ ಕೂಟದಲ್ಲಿ ಹಿಡಿದ ಫೋಟೋ ಸಹ ಪುರುಷೋತ್ತಮನ ಬಳಿಯಲ್ಲಿದೆ. ಅನ್ನದಾನಪ್ಪನವರು ಮೂರು ಫೋಟೋಗಳನ್ನು ಕೊಟ್ಟಿರುವರು.

ಆ ಮೂರು ಫೋಟೋಗಳೂ ಮೂರು ವಿಧವಾಗಿರುವುದಲ್ಲದೆ, ಆ ದಿನ ಸತ್ಕಾರ ಕೂಟಕ್ಕೆ ಆಗಮಿಸಿದವರೆಲ್ಲರ ಭಾವಚಿತ್ರಗಳೂ ಇವೆ.

ಪ್ರತಿಯೊಬ್ಬರ ಮುಖಗಳೂ ಸ್ವಚ್ಛವಾಗಿ ಕಾಣುತ್ತವೆ.

ರಾವ್‌ಬಹದ್ದೂರ್ ಬಿರುದಾಂಕಿತರು, ಬ್ಯಾಂಕ್ ಡೈರೆಕ್ಟರು, ಹೋಟೆಲ್‌ಗಳ ಮಾಲೀಕರು, ಜವಾಹಿರಿ ಅಂಗಡಿಗಳನ್ನಿಟ್ಟುಕೊಂಡು ದಿನವೊಂದಕ್ಕೆ ಸಾವಿರಾರು ರೂಪಾಯಿಗಳ ವ್ಯವಹಾರವನ್ನು ನಡೆಯಿಸುತ್ತಿರುವವರೂ, ಧರ್ಮ ಪ್ರಕಾಶ ಬಿರುದು ಪಡೆದವರು, ರೇಷ್ಮೆವ್ಯಾಪಾರಗಳಲ್ಲಿ ಪ್ರಖ್ಯಾತಿ ಪಡೆದವರು ಮತ್ತು ಸರ್ಕಾರಿ ಅಧಿಕಾರಿಗಳೆಲ್ಲರನ್ನೂ ನೋಡುವನು.

ಅನ್ನದಾನಪ್ಪನವರೇ ಈ ಕೃತ್ಯಕ್ಕೆ ಮೂಲ ಕಾರಣರಾಗಿರಬಹುದೇ ? ತಮ್ಮ ಮೇಲೆ ಸಂದೇಹ ಬಾರದಿರಲೆಂಬ ಅಭಿಪ್ರಾಯದಿಂದ ಈ ಸಮಾರಂಭಗಳಿಗೆ ಏರ್ಪಾಟು ಮಾಡಿದ್ದರೇ ?

ಹತ್ತು ವರ್ಷಗಳ ಕಾಲ ಇಂಗ್ಲೇಂಡಿನಲ್ಲಿದ್ದು ಬಳಿಕ ಹಿಂದಿರುಗಿದ ರಾಜಗೋಪಾಲನು ಕೊಲೆಗಾರನಾಗಿರಬಹುದೇ ? ಆತನು ಕೊಲೆ ಮಾಡುವುದಾದರೆ, ಯಾವ ಲಾಭಕ್ಕಾಗಿ ಮಾಡುವನು ?

ಇವೇ ಮುಂತಾದ ಯೋಚನೆಗಳಿಂದ ಪುರುಷೋತ್ತಮನು ಹುಚ್ಚ ನಂತಾದರೂ ನಿರಾಶನಾಗಲಿಲ್ಲ.

ಕೊಲೆಗಾರನು ಸತ್ಕಾರ ಕೂಟಕ್ಕೆ ಆಗಮಿಸಿದ್ದರೂ ಆಗಮಿಸಿರಬಹುದು. ಇಷ್ಟು ಜನರ ನಡುವೆ ಅವನಿದ್ದೇ ಇರುವನು. ಅವನನ್ನು ಯಾವ ರೀತಿ ಯಿಂದಲಾದರೂ ಹಿಡಿಯದೆ ಬಿಡಲಾರೆನೆಂದು ಪ್ರತಿಜ್ಞೆ ಮಾಡಿದನು.

ಕೊಲೆ ಮಾಡಿದ ಶವವನ್ನು ತನ್ನ ಮನೆಗೆ ಪಾರ್ಸೆಲ್ಲಿನ ಮೂಲಕ ಕಳುಹಿಸಿರುವವನನ್ನು ಬಿಡಲು ಸಾಧ್ಯವೇ?

ಸತ್ಕಾರಕೂಟಕ್ಕೆ ಆಗಮಿಸಿರುವವರಲ್ಲಿ ಯಾರುಯಾರ ಮೇಲೆ ಸಂದೇಹ ವಿರುವುದೋ ಅವರ ನಡವಳಿಕೆಗಳನ್ನು ಪರೀಕ್ಷಿಸಿ, ಬಳಿಕ ಮುಂದಿನ ಕಾರ್ಯಕ್ಕೆ ತೊಡಗಬೇಕೆಂದುಕೊಂಡನು.

ಅನ್ನದಾನಪ್ಪನವರ ಮೂಲಕ ಬಾಲಕೃಷ್ಣನ ವಿಷಯವನ್ನು ಕೇಳಿ ತಿಳಿಯಬೇಕೆಂದಿದ್ದ ರಾಮನಾಥನು ಅವರ ಅಂಗಡಿಯ ಬಳಿಗೆ ಹೋಗಿ ನೋಡಲು ಅವರು ಕಾಣಲಿಲ್ಲ.

ವಿಚಾರಿಸಿದರೆ ತಿಳಿಯುವುದೆಂದು ಭಾವಿಸಿ, ಅಲ್ಲಿದ್ದವರನ್ನು ಕೇಳಲು ಎರಡು ದಿನಗಳಿಂದ ಪತ್ತೆಯಿಲ್ಲವೆಂದೂ, ಎಲ್ಲಿಗೆ ಹೋಗಿರುವರೋ ತಿಳಿಯ ದೆಂದೂ ಅಂಗಡಿಯಲ್ಲಿದ್ದವರು ಹೇಳಿದರು.

ಈಗ ಅಂಗಡಿಯ ವ್ಯವಹಾರವನ್ನು ಮೇನೇಜರನಾದವನೇ ನೋಡಿ ಕೊಳ್ಳುತ್ತಿರುವನು.

ವಿಷಯವನ್ನು ಕೇಳಿ ರಾಮನಾಥನಿಗೆ ಅತ್ಯಾಶ್ಚರ್ಯವಾಯಿತು.

ಬಾಲಕೃಷ್ಣನು ಪತ್ತೆಯಿಲ್ಲವೆಂದು ಆತನ ವಿಷಯವನ್ನು ಕೇಳಲು, ಅನ್ನದಾನಪ್ಪನವರ ಬಳಿಗೆ ಬಂದರೆ ಅವರೂ ಪತ್ತೆಯಿಲ್ಲ. ಇವರ ವಿಷಯ ವನ್ನು ಕೇಳಲು ಇನ್ನೊಬ್ಬರ ಬಳಿಗೆ ಹೋದರೆ ಅವರೂ ಸಹ ಪತ್ತೆಯಿಲ್ಲದಂತಾ ಗಬಹುದೋ ಏನೋ, ಎಂದುಕೊಂಡ ರಾಮನಾಥನು ಇದ್ದಕ್ಕಿದ್ದ ಹಾಗೆಯೇ ಇವರು ಕಣ್ಮರೆಯಾಗಲು ಏನೋ ಒಳಸಂಧಾನವು ನಡೆದಿದೆಯೆಂದು ಯೋಚಿಸಿ, ಈ ವಿಷಯವನ್ನು ಪುರುಷೋತ್ತಮನಿಗೆ ತಿಳಿಸಬೇಕೆಂದು ಅಲ್ಲಿಂದ ಹಿಂದಿರುಗಿ ಪುರುಷೋತ್ತಮನೊಡನೆ ಅನ್ನದಾನಪ್ಪನವರು ಕಣ್ಮರೆಯಾಗಿರುವ ವಿಷಯ ವನ್ನು ಹೇಳಿದ.

ವಿಷಯವನ್ನು ಕೇಳಿ ಪುರುಷೋತ್ತಮನಿಗೆ ಅತ್ಯಾಶ್ಚರ್ಯವಾಯಿತು. ಬಾಲಕೃಷ್ಣನು ಕಾಣುತ್ತಿಲ್ಲವೆಂದೂ, ಅವನ ಶೋಧನೆಯಲ್ಲಿ ರಾಮನಾಥನು ನಿರತನಾಗಿರುವನೆಂದೂ ತಿಳಿದಿದ್ದನು. ಈಗ ಇದ್ದಕ್ಕಿದ್ದ ಹಾಗೆ ಅನ್ನದಾನಪ್ಪನವರು ಕಣ್ಮರೆಯಾಗಿರುವರೆಂದರೆ ಆಶ್ಚರ್ಯವಾಗುವುದಿಲ್ಲವೇ?

ಅನ್ನದಾನಪ್ಪನವರು ಕಣ್ಮರೆಯಾಗಿರುವುದರಲ್ಲಿ ಅತ್ಯಂತ ಗೂಢ ಸಮಸ್ಯೆ ಇರುವುದೆಂದುಕೊಂಡನು.

ಅವರು ಕಣ್ಮರೆಯಾಗಲು ಕೊಲೆಗಾರನ ಕೈವಾಡವಿದ್ದರೂ ಇರಬಹುದು. ಬಾಲಕೃಷ್ಣನು ಈ ವ್ಯವಹಾರಗಳಿಗೆ ಸಂಬಂಧ ಪಟ್ಟಿರಬಾರದೇಕೆ? ಈ ಒಂದು ಸರಪಳಿಯ ಕೊಂಡಿಗಳಲ್ಲಿಯೇ ಸಮಸ್ಯೆಗಳೆಲ್ಲಾ ಅಡಗಿ ಕುಳಿತಿವೆಯೆಂಬುದಾಗಿ ಪುರುಷೋತ್ತಮನು ಯೋಚಿಸಿಕೊಂಡನು.

ರಾಮನಾಥನು ಆ ವಿಷಯವಾಗಿ ಪ್ರಶ್ನಿಸಬೇಕೆಂದುಕೊಂಡಿರಲು, ಟಪಾಲಿನವನು ಆಗಮಿಸಿ, ಕವರನ್ನಿತ್ತು ಹಿಂದಿರುಗಿದ.

ಕವರಿನ ಮೇಲಿದ್ದ ಟಪಾಲು ಮುದ್ರೆಯನ್ನು ನೋಡುತ್ತಲೇ ಈ ಕಾಗದವನ್ನು ಬರೆದವನು ಕೊಲೆಗಾರನೇ ಎಂದು ಭಾವಿಸಿಕೊಂಡ ಪುರುಷೋತ್ತಮನು, ಅನ್ನಧಾನಪ್ಪನವರಿಗೆ ಏನೋ ಅಪಾಯವು ಸಂಭವಿಸಿದೆ. ಈ ವೇಳೆಗೆ ಇಹಲೋಕ ವ್ಯಾಪಾರವನ್ನು ಮರೆತಿದ್ದರೂ ಮರೆತಿರಬಹುದೆಂದು ಯೋಚಿಸಿ, ಕಾಗದದಲ್ಲಿ ಏನು ವಿಷಯ ಬರೆದಿದೆಯೆಂಬುದನ್ನು ನೋಡುವ ಕುತೂಹಲವುಳ್ಳವನಾಗಿ, ಕವರಿನೊಳಗಿದ್ದ ಕಾಗದವನ್ನು ಹೊರಗೆ ತೆಗೆದು ನೋಡಲು ಅದರಲ್ಲಿ ಈ ರೀತಿ ಬರೆದಿದೆ.

'ಪುರುಷೋತ್ತಮಾ! ನನ್ನಿಂದ ಕೊಲೆಯಾದವನ ಶವವು ನಿನ್ನಲ್ಲಿಗೆ ಬಂದಲಾಗಾಯ್ತು ನಿನ್ನ ಕಾರ್ಯ ಕಲಾಪಗಳನ್ನು ಗಮನಿಸುತ್ತಲೇ ಇರುವೆನು.

'ಒಂದು ನಿಮಿಷವನ್ನೂ ವ್ಯರ್ಥ ಮಾಡದ ನೀನೇಕೆ ವೃಥಾ ಕಾಲಹರಣ ಮಾಡುತ್ತಿರುವೆ? ರಾಮನಾಥನು ಮಾಡುತ್ತಿರುವ ಕಾರ್ಯಚಟುವಟಿಕೆಗಳನ್ನೂ ನೋಡುತ್ತಿರುವೆನು. ನೀನೇಕೆ ತಟಸ್ಥನಾಗಿರುವೆ? ನನ್ನ ವಿಷಯದಲ್ಲಿ ಭಯವಾಗಿರುವುದೇ? ಹಾಗಿದ್ದರೆ ಪತ್ರಿಕೆಗಳಲ್ಲಿ ಪ್ರಕಟಿಸು. ನಾನು ನಿನ್ನನ್ನು ಮುಂದೆ

ಕೆಣಕಲಾರೆ. ಅಥವಾ ಕೊಲೆಗಾರನಾಗಿರಬಹುದೆಂದು ಯೋಚನೆ ಮಾಡುತ್ತಿರುವೆಯಾ ?

'ನೀನು ರಾಜಗೋಪಾಲನಿಗೆ ಏರ್ಪಡಿಸಿದ್ದ ಸತ್ಕಾರಕೂಟಕ್ಕೆ ಬಂದುದನ್ನು ನೋಡಿದೆ. ನೀನೂ, ನಿನ್ನ ಮಿತ್ರನೂ ನನ್ನನ್ನು ನೋಡದಿರಲಿಲ್ಲ. ಆದರೇ! ಮಾತುಕತೆಗಳು ನಡೆಯಲಿಲ್ಲ. ಅಷ್ಟೇ. ಮುಂದೆ ನಿನ್ನನ್ನು ಸಂಧಿಸಿ ಮಾತನಾಡುವೆನೆಂದು ಹಿಂದಿನ ಕಾಗದದಲ್ಲಿ ಬರೆದಿದ್ದೆ. ಆದರೇ! ನಿನ್ನನ್ನು ಸಂಧಿಸಿದೆ. ಪರಸ್ಪರ ಪರಿಚಯವಾಯಿತು, ಮಾತನಾಡಲಾಗಲಿಲ್ಲ. ಈ ವಿಷಯ ಸತ್ಯವೆಂದು ಭಾವಿಸು. ನಮ್ಮಿಬ್ಬರ ಪರಸ್ಪರ ಪರಿಚಯ ವಾದರೂ ನಾನು ಇಂತಹವನೇ ಎಂದು ನಿನ್ನಿಂದ ಗುರುತಿಸ ಲಾಗಲಿಲ್ಲ.

'ನಾನು ನಿನ್ನೊಡನೆ ಮಾತನಾಡುವೆನೆಂದು ತಿಳಿಸಿ ಮಾತ ನಾಡದೆ ಹೋದ್ದರಿಂದ ನನ್ನ ಮನಸ್ಸಿಗೂ ಖೇದವಾಯಿತು. ಆದರೇ! ಅಲ್ಲಿಗೇ ಮುಗಿಯಲಿಲ್ಲ. ಮುಂದೆ ನಾನು ಮಾಡಿ ಮುಗಿಸಬೇಕಾದ ಎಷ್ಟೋ ಕಾರ್ಯಗಳಿವೆ.

'ಆ ಸಾಹಸ ಕಾರ್ಯಗಳ ನಡುವೆ ನಿನ್ನನ್ನು ಸಂಧಿಸಿ ಮಾತ ನಾಡುವೆನು. ಸಾಧ್ಯವಾದರೆ ಆಗಲೇ ನಿನ್ನ ಅವತಾರವನ್ನು ಪೂರ್ತಿ ಮಾಡುವೆನು.

'ಈ ಮಾತು ಹಾಸ್ಯವೆಂದು ಭಾವಿಸಬೇಡ. ನಾನು ಎಂತಹ ವನೆಂದು ನಿನಗೆ ತಿಳಿಯದು. ತಿಳಿಸಬೇಕಾದ ಪ್ರಮೇಯವೂ ಇಲ್ಲ.

'ಇನ್ನೊಂದು ಮುಖ್ಯವಾದ ವಿಷಯ, ಈ ಕಾಗದವನ್ನು ಓದಿ ಮುಗಿಸುವುದರೊಳಗಾಗಿ, ಅಥವಾ ಮುಗಿಸಿದನಂತರ ವಿಷಮ ವಾರ್ತೆಯನ್ನು ಕೇಳುವೆ. ಈ ವೇಳೆಗೆ ಕೇಳಿರುವೆಯೋ ಏನೋ ಅದೂ ತಿಳಿಯದು.

'ಇನ್ನು ಕೆಲವು ದಿನಗಳಲ್ಲಿ ನಿನ್ನ ಇಹಲೋಕ ವ್ಯಾಪಾರವು ಮುಗಿಯುವುದರಿಂದ ಅಷ್ಟರಲ್ಲಿಯೇ ನಿನ್ನ ಮನೋಭಿಲಾಷೆ

ಯೇನಿದ್ದರೂ ಮುಗಿಸಿಕೊ. ನಿನ್ನ ಮಿತ್ರನಾದ ರಾಮನಾಥ
ನಿಗೂ ತಿಳಿಸು.'

ಇತಿ ನಿನ್ನ ಪರಿಚಿತ ಜನ್ಮ ವೈರಿ
'ಭಯಂಕರ ಭೂತ'

ಕಾಗದವನ್ನೋದಿದ ಪುರುಷೋತ್ತಮನು ಭೀತಿಗೊಳ್ಳದೆ ಇದ್ದರೂ, ವಿಷಮವಾರ್ತೆಯೆಂಬುದನ್ನು ಓದಿದನಂತರ ಏನೋ ಅನಾಹುತವು ನಡೆದಿದೆಯೆಂಬುದರಲ್ಲಿ ಸಂದೇಹವಿಲ್ಲವೆಂದು ಭಾವಿಸಿ, ಆ ಬಗ್ಗೆ ಕಳವಳಪಡುವಂತಾದನು.

ಎರಡು ದಿನಗಳಿಂದ ಅನ್ನದಾನಪ್ಪನವರು ಕಣ್ಮರೆಯಾಗಿರುವುದರಿಂದ, ಅವರೇ ಗಂಡಾಂತರಕ್ಕೊಳಗಾಗಿರುವರೆಂಬ ಯೋಚನೆಯು ಪುರುಷೋತ್ತಮನ ಮನಕ್ಕೆ ಹೊಳೆಯದಿರಲಿಲ್ಲ.

ಅನ್ನದಾನಪ್ಪನವರು ಇದ್ದಕ್ಕಿದ್ದ ಹಾಗೆ ಕಣ್ಮರೆಯಾಗಿರುವುದಕ್ಕೂ, ಕೊಲೆಗಾರನು ಕಾಗದ ಬರೆದಿರುವುದಕ್ಕೂ ಸರಿಹೋಗಿದೆ.

ಕೊಲೆಗಾರನು ಮೊದಲೇ ಏರ್ಪಾಡು ಮಾಡಿಕೊಂಡು, ತನಗೆ ಕಾಗದ ಬರೆದಿರುವನೆಂದು ಯೋಚಿಸಿಕೊಂಡ ಪುರುಷೋತ್ತಮನು, ಅನ್ನದಾನಪ್ಪನವರು ಎರಡು ದಿನಗಳಿಂದ ಕಣ್ಮರೆಯಾಗಿದ್ದರೂ, ಅವರ ಮನೆಯವರು ಪೋಲೀಸ್ ಠಾಣೆಗೆ ದೂರು ಕೊಡದಿರುವುದು ಆಶ್ಚರ್ಯವೇ ಸರಿಯೆಂದುಕೊಂಡನು.

ಅನ್ನದಾನಪ್ಪನವರ ಮನೆಯವರು ಕೊಲೆಗಾರನ ಸಂಚಿಗೆ ಒಳಗಾಗಿರಬಹುದೇ? ಅವರು ಕಣ್ಮರೆಯಾಗಿರುವ ವಿಷಯವು ಅವರಿಗೆ ತಿಳಿಯದೇ? ತಿಳಿಯದೆ ಏನು? ತಿಳಿದೂ, ತಿಳಿದೂ ಸುಮ್ಮನಿರುವುದರಲ್ಲಿ ಏನೋ ವಿಶೇಷವಿದೆ. ಈ ಮರ್ಮವನ್ನು ಕಂಡುಹಿಡಿಯದೆ ಬಿಡಬಾರದೆಂದುಕೊಂಡನು.

ಈಗ ಏನು ವಿಷಮವಾರ್ತೆಯನ್ನು ಕೇಳಬಹುದೆಂಬ ಯೋಚನೆಯಲ್ಲಿರಲು ಟೆಲಿಫೋನ್ ಬೆಲ್ಲು ಬಾರಿಸಿತು.

ಎಚ್ಚೆತ್ತ ಪುರುಷೋತ್ತಮನು ವಿಷಮವಾರ್ತೆಯನ್ನು ಕೇಳುವ ಪ್ರಮೇಯವೊದಗಿತೆಂದು ಯೋಚಿಸಿ, ರಿಸೀವರನ್ನು ಕೈಗೆ ತೆಗೆದುಕೊಂಡು ತನ್ನೊಡನೆ ಮಾತನಾಡುತ್ತಿರುವವರಾರೆಂದು ಕೇಳಿದ.

"ನಾನು, ಇನ್ಸ್‌ಪೆಕ್ಟರ್ ಚಂದ್ರನಾಥ. ಠಾಣೆಯಿಂದ ಮಾತನಾಡುತ್ತಿರುವೆನು."

—ಎಂದು ಉತ್ತರ ಬಂದಿತು.

ತನ್ನ ಊಹೆಯು ನಿಜವಾಯಿತೆಂದುಕೊಂಡ ಪುರುಷೋತ್ತಮನು—

"ಏನಾದರೂ ದುರಂತ ಪ್ರಸಂಗವು ನಡೆದಿರುವುದೇ?" ಎಂದು ಕೇಳಿದ.

"ಹೌದು! ಡಾಕ್ಟರ್ ರಾಘವಾಚಾರ್ಯರು ತಮ್ಮ ಸ್ವಗೃಹದಲ್ಲಿ ಕೊಲೆಯಾಗಿರುವರು. ಅವರ ಮನೆಯಿರುವುದು ಸಿನಿಮಾ ರೋಡಿನಲ್ಲಿ. ನೀವು ಕೂಡಲೇ ಅಲ್ಲಿಗೆ ಬನ್ನಿ. ನಾನೂ ಹೊರಡುವೆನು."

"ಈಗಲೇ ಬರುವೆನು."

ಒಬ್ಬರಿಗೊಬ್ಬರು 'ಥ್ಯಾಂಕ್ಸ್' ಹೇಳಿದ ಬಳಿಕ ರಿಸೀವರನ್ನು ಕೆಳಗಿಟ್ಟರು.

ಡಾಕ್ಟರು ಕೊಲೆಯಾದರೆಂಬುದನ್ನು ಕೇಳಿ ಪುರುಷೋತ್ತಮನಿಗುಂಟಾದ ಆಶ್ಚರ್ಯಕ್ಕೆ ಮೇರೆಯೇ ಇಲ್ಲವಾಯಿತು.

ಅನ್ನದಾನಪ್ಪನವರು ಕಣ್ಮರೆಯಾಗಿರುವುದರಿಂದ, ಅವರೇ ಕೊಲೆಯಾಗಿರಬಹುದೆಂದು ಊಹೆ ಮಾಡಿದ್ದನು. ಆದರೆ! ನಡೆದಿರುವ ಪ್ರಸಂಗವೇ ಬೇರೊಂದು ವಿಧವಾಗಿದೆ.

ರಾಮನಾಥನೊಡನೆ ವಿಷಯವನ್ನು ತಿಳಿಸಿ ಆತನನ್ನು ಕರೆದುಕೊಂಡು ಸಿನಿಮಾ ರೋಡಿನ ಬಳಿಗೆ ಹೊರಟನು.

ಹಿಂದೆ ಕೊಲೆಯಾದ ಮನುಷ್ಯನಿಗೂ, ಡಾಕ್ಟರನಿಗೂ ಕೊಲೆಗಾರನಿಗೂ ಸಂಬಂಧವಿದೆಯೆಂದು ಈಗ ಪುರುಷೋತ್ತಮನಿಗೆ ತಿಳಿದಂತಾಯಿತು.

ಆ ಸಂಬಂಧದ ಮೂಲಕವೇ ಕೊಲೆಗಾರನಾರೆಂಬುದನ್ನು ಪತ್ತೇಮಾಡಿ ಹಿಡಿಯಬೇಕೆಂದುಕೊಂಡನು.

ಡಾಕ್ಟರನ ಮನೆಯ ಬಳಿಗೆ ಹೋಗುವ ವೇಳೆಗಾಗಲೇ ಅಲ್ಲಿ ನೂರಾರು ಜನರು ಸೇರಿರುವರು.

ಪತ್ತೇದಾರರಿಗೆ ಮೊದಲೇ ಇನ್ಸ್‌ಪೆಕ್ಟರನು ಹಾಜರಿರುವನಲ್ಲದೆ, ಡಾಕ್ಟರ್ ದಯಾನಂದನೂ ಅಲ್ಲಿಗೆ ಬಂದಿದ್ದು ಶವವನ್ನು ನೋಡಿ, ಬೆಳಗಿನ ಆರು ಘಂಟೆಯ ಸಮಯದಲ್ಲಿ ಕೊಲೆ ನಡೆದಿದೆಯೆಂದು ಹೇಳಿರುವನು.

ಡಾಕ್ಟರನ ಪತ್ನೀಪುತ್ರರು ಆ ವೇಳೆಯಲ್ಲಿ ಮನೆಯಲ್ಲಿರಲಿಲ್ಲ.

ತಮ್ಮ ನೆಂಟರೊಬ್ಬರ ಮನೆಯಲ್ಲಿ ನಡೆದ ಶುಭ ಕಾರ್ಯದ ನಿಮಿತ್ತ ಹಿಂದಿನ ರಾತ್ರಿ ಅಲ್ಲಿಗೆ ಹೋಗಿ ರಾತ್ರಿಯೆಲ್ಲಾ ಅಲ್ಲಿಯೇ ಉಳಿದುಕೊಂಡಿದ್ದು ಬೆಳಗ್ಗೆ ಫಲಾಹಾರವನ್ನೂ ಮುಗಿಸಿಕೊಂಡು ಹತ್ತು ಘಂಟೆಯ ವೇಳೆಗೆ ಹಿಂದಿರುಗಿದ್ದರು.

ಆಗ ಡಾಕ್ಟರು ತಮ್ಮ ರೂಮಿನಲ್ಲಿ ಕೊಲೆಯಾಗಿ ಬಿದ್ದಿರುವುದನ್ನು ಕಂಡು, ಭಯಭೀತರಾಗಿ, ಪೋಲೀಸ್ ಠಾಣೆಗೆ ಕೂಡಲೇ ವರ್ತಮಾನ ಕೊಟ್ಟಿರುವರು.

ಪತ್ತೇದಾರರು ಯಾರ ಅಡ್ಡಿ ಆತಂಕಗಳಿಲ್ಲದೆ ಮನೆಯೊಳಗೆ ಹೋದರು.

ಡಾಕ್ಟರ ಶವವು ಅಸ್ತಾವಸ್ಥೆಯಾಗಿ ಬಿದ್ದಿದೆ. ಅವರ ಎದೆ ಮತ್ತು ಪಕ್ಕೆಗೆ ಪಿಸ್ತೂಲಿನಿಂದ ಹೊಡೆದಿರುವ ಏಟು ಚೆನ್ನಾಗಿ ಕಾಣಿಸುತ್ತಲಿದೆ.

ಆ ಸ್ಥಳದಲ್ಲಿ ಏನೊಂದು ವಸ್ತುವೂ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿಲ್ಲ. ಆಯಾ ವಸ್ತುಗಳು ಆಯಾ ಸ್ಥಳದಲ್ಲಿಯೇ ನಾಜೂಕಾಗಿ ಜೋಡಿಸಲ್ಪಟ್ಟಿದೆ.

ಪುರುಷೋತ್ತಮನು ಸೂಕ್ಷ್ಮವಾಗಿ ನೋಡಲು, ಕೊಲೆಗಾರನ ಕುರುಹುಗಳೇನೂ ಅಲ್ಲಿ ಕಾಣಲಿಲ್ಲ.

ಮನೆಯವರನ್ನು ವಿಚಾರಿಸಲು, ಏನೊಂದು ವಸ್ತುವೂ ಕಳುವಾಗಿಲ್ಲವೆಂದು ತಿಳಿಯಿತು.

ಮೂರು ದಿನಗಳಿಂದ ಅಪರಿಚಿತ ವ್ಯಕ್ತಿಯೋಬ್ಬರು ರಾತ್ರಿ ಒಂಭತ್ತು ಗಂಟೆಗೆ ಬಂದು, ಹನ್ನೆರಡು ಘಂಟೆಯವರೆವಿಗೆ ಮಾತನಾಡುತ್ತಾ ಇದ್ದು ಬಳಿಕ ಹಿಂದಿರುಗುತ್ತಿದ್ದರೆಂದೂ, ಹಿಂದೆ ಯಾವ ಸಮಯದಲ್ಲಿಯೂ ಅವರು ಬರುತ್ತಿರಲಿಲ್ಲವೆಂದೂ, ಅವರಿಬ್ಬರೂ ಸೇರಿದಾಗ ಮಾತನಾಡುತ್ತಿದ್ದರೆಂದು ಡಾಕ್ಟರರ ಪತ್ನಿಯು ತಿಳಿಸಿದಳು.

ಅಪರಿಚಿತರ ಆಕಾರ ವರ್ಣನೆಯನ್ನು ಪುರುಷೋತ್ತಮನು ಕೇಳಲು ದಿನಕ್ಕೆ ಒಂದೊಂದು ಬಗೆಯ ವೇಷದಲ್ಲಿ ಬರುತ್ತಿದ್ದರೆಂದೂ, ತಾನು ಅವರ ಮುಖವನ್ನು ಸರಿಯಾಗಿ ನೋಡಿಲ್ಲವೆಂದೂ ತಿಳಿಸಿದಳು.

ಕೊಲೆಗಾರನಿಗೂ, ಡಾಕ್ಟರರಿಗೂ ಮತ್ತು ಪಾರ್ಸೆಲ್ಲಿನಲ್ಲಿ ಬಂದ ಶವಕ್ಕೂ ಸಂಬಂಧವಿರುವುದೆಂದು ಊಹೆ ಮಾಡಿದ್ದ ಪುರುಷೋತ್ತಮನ ಆಲೋಚನೆಯು ಸುಳ್ಳಾಗಿ ಪರಿಣಮಿಸಿತು.

"ಪತ್ತೇದಾರರೇ! ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?"

—ಎಂದು ಕುತೂಹಲಭರಿತನಾದ ಚಂದ್ರನಾಥನು ಪ್ರಶ್ನಿಸಿದ.

ಪುರುಷೋತ್ತಮನು ಮಾತನಾಡದೆ ತನ್ನ ಜೇಬಿನಲ್ಲಿದ್ದ ಕಾಗದವನ್ನು ತೆಗೆದು ಇನ್ಸ್‌ಪೆಕ್ಟರನ ಕೈಗಿತ್ತ.

ಕಾಗದವನ್ನು ಓದಿದ ಇನ್ಸ್‌ಪೆಕ್ಟರನು ಸ್ತಂಭೀಭೂತನಾದನು.

"ಪತ್ತೇದಾರರೇ! ಇದೇನು ಬಹು ವಿಚಿತ್ರವಾಗಿದೆಯಲ್ಲ? ಈ ವಿಷಯವಾಗಿ ಏನು ಹೇಳುವಿರಿ?"

—ಎಂದು ಮತ್ತೆ ಪ್ರಶ್ನಿಸಿದ ಚಂದ್ರನಾಥ.

"ಈ ಡಾಕ್ಟರನ್ನು ಕೊಲೆಮಾಡುವ ನಿಮಿತ್ತ ಕೊಲೆಗಾರನು ಇವರ ಸ್ನೇಹ ಮಾಡಿಕೊಂಡಿರುವನು. ಇವರನ್ನು ಕೊಲೆ ಮಾಡಬೇಕೆಂದು ತೀರ್ಮಾನ ಮಾಡಿಕೊಂಡ ಪ್ರಯುಕ್ತ, ಇವರಿಗೆ ತನ್ನ ಮುಖ ಕಂಡರೂ ಚಿಂತೆಯಿಲ್ಲವೆಂದು ಭಾವಿಸಿ, ಇವರ ಮನೆಯವರಿಗೆ ತನ್ನ ಮುಖವನ್ನು ಸರಿಯಾಗಿ ತೋರಿಸದಿರುವನು. ಇವರ ಬಂಧುಗಳ ಮನೆಯಲ್ಲಿ ನಡೆದ ಶುಭಕಾರ್ಯವು ಈ ಡಾಕ್ಟರನ ಮೂಲಕವೇ ಆತನಿಗೆ ತಿಳಿದಿದೆಯೆಂಬುದರಲ್ಲಿ ಸಂದೇಹವಿಲ್ಲ. ಈ ದಿನ ಇವರನ್ನು ಕೊಲೆ ಮಾಡಬೇಕೆಂದು ತೀರ್ಮಾನಿಸಿಕೊಂಡೇ ನನಗೆ ನೆನ್ನೆಯ ದಿನ ಕಾಗದ ಬರೆದಿರುವೆನು. ಇವರ ಮನೆಯವರು ತಮ್ಮ ನೆಂಟರ ಮನೆಗೆ ರಾತ್ರಿಯೆಲ್ಲಾ ಬಾರದೇ ಇದ್ದುದು ಕೊಲೆಗಾರನಿಗೆ ಉತ್ತಮವೇ ಆಗಿದೆ. ಬರುವುದಿಲ್ಲವೆಂದು ಮೊದಲೇ ತಿಳಿದಿತ್ತೋ ಏನೋ. ಇಲ್ಲದೆ ಹೋಗಿದ್ದಿದ್ದರೆ ನನಗೇಕೆ ಕಾಗದ ಬರೆಯುತ್ತಿದ್ದನು? ಇವರನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದಲೇ ಇವರ ಸ್ನೇಹ ಮಾಡಿಕೊಂಡು, ತನ್ನ ಕಾರ್ಯವನ್ನು ಸಾಧಿಸಿಕೊಂಡಿರುವನು."

—ಎಂದು ಉತ್ತರವಿತ್ತ ಪುರುಷೋತ್ತಮ.

"ಆತನು ಮಹಾ ಕುಶಲಬುದ್ಧಿಯುಳ್ಳವನೆಂದೇ ತೋರುತ್ತದೆ. ಅಲ್ಲವೇ?"

"ಅದರಲ್ಲಿ ಸಂದೇಹವೇನಿದೆ? ಇಲ್ಲದೇ ಹೋಗಿದ್ದರೆ ಈ ಬಗೆಯ ಕಾರ್ಯವು ಅವನಿಂದ ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ಯಾವುದೊಂದು ವಸ್ತುವೂ ಕಳುವಾಗದೆ ಇರುವುದರಿಂದ, ಯಾವುದೋ ಒಂದು ಸೇಡಿನ ಪರಿಣಾಮವಾಗಿ ಇವರು ಕೊಲೆಯಾದರೆಂದು ನಿರ್ಧರವಾಗಿ ಹೇಳಬಹುದು."

"ಆತನಾರಿರಬಹುದು?"

"ಆತನಾರು? ಇವರನ್ನು ಏಕೆ ಕೊಲೆ ಮಾಡಿದ? ನನ್ನ ಮನೆಗೆ ಪೆಟ್ಟಿಗೆಯಲ್ಲಿ ಬಂದ ಶವ ಯಾರದು? ಅವನನ್ನು ಕೊಲೆ ಮಾಡಿದ ಕಾರಣವೇನೆಂಬುದನ್ನು ನಾನೇ ಒಂದು ದಿನ ನಿಮಗೆ ಹೇಳುವೆನು. ಆತನು ಕಾಗದದಲ್ಲಿ ಬರೆದ ಪ್ರಕಾರವೇ ನಡೆದುಕೊಳ್ಳುತ್ತಿರುವನು. ಅವನ ಅಧಿಕಾರಬಲವು ಎಷ್ಟು ದಿನಗಳು ನಡೆಯುವುದೋ ನಡೆಯಲಿ. ಜಯವಿರುವವರೆವಿಗೆ ಭಯವಿಲ್ಲವೆಂಬ ಗಾದೆಯಿದ್ದೇ ಇದೆ."

ಚಂದ್ರನಾಥನು ಮಾರ್ನುಡಿಯಲಿಲ್ಲ.

ಪುರುಷೋತ್ತಮನು ಡಾಕ್ಟರ್ ಪತ್ನಿಯಿಂದ ತನಗೆ ಅತ್ಯಾವಶ್ಯಕವಾಗಿ ಬೇಕಾದ ಕೆಲವು ವಿಷಯಗಳನ್ನು ಕೇಳಿ ತಿಳಿದುಕೊಂಡು, ಅವಶ್ಯಕತೆಯಿದ್ದಾಗ ಬರುವೆನೆಂದು ಚಂದ್ರನಾಥನೊಡನೆ ಹೇಳಿ, ರಾಮನಾಥನೊಡನೆ ಹಿಂದಿರುಗಿದ.

ಇನ್ಸ್‌ಪೆಕ್ಟರನು ತನ್ನ ನಿಯಮದಂತೆ ಶವದ ಮಹಜರಿಗೆ ತೊಡಗಿದ.

೮

ಸರೋಜಳ ಪ್ರತಿಬಿಂಬವನ್ನು ತನ್ನ ಹೃದಯ ಮಧ್ಯದಲ್ಲಿರಿಸಿಕೊಂಡು, ಅವಳಿಗಾಗಿ ಮನೋವೇದನೆಗೊಳಪಟ್ಟು ಆಕೆಯನ್ನು ಸಂಧಿಸಲು ಹಾತೊರೆಯುತ್ತಿದ್ದ ವರದರಾಜನು ದಿನಗಳನ್ನು ವರ್ಷಗಳಂತೆ ಕಳೆದು, ಆ ದಿನವು ಬರಲು ಒಂದು ಘಂಟೆ ಮುಂಚಿತವಾಗಿಯೇ ನಿಯಮಿತ ಜಾಗದಲ್ಲಿ ಹಾಜರಾದನು.

ಒಂದು ಘಂಟೆಯನ್ನು ಕಳೆಯುವುದೂ ಅವನಿಗೆ ಮಹಾ ಕಠಿಣವಾಯಿತು.

ಅಡಿಗಡಿಗೆ ಹಿಂದೆ ಮತ್ತು ಎಡಬಲಗಳಲ್ಲಿ ನೋಡುವನು. ಸರೋಜಳು ಕಾಣದಿರಲು, ಇನ್ನೂ ವೇಳೆಯಾಗಲಿಲ್ಲವೇ? ಒಂದು ಘಂಟೆ ಮುಂಚೆ ಬರಲು ಅಭ್ಯಂತರವೇನಿದೆ? ಎಂದುಕೊಳ್ಳುವನು.

ಸರೋಜಳು ಬರುವಳೋ, ಇಲ್ಲವೋ, ಎಂದು ಪರಿತಾಪಗೊಳ್ಳುವನು. ಒಂದೊಂದು ಸಾರಿ ಆಕೆಯು ಬರಲಾರಳು, ತಾನಿಲ್ಲಿ ಅವಳಿಗಾಗಿ ನಿರೀಕ್ಷಿಸುವುದು, ನಿಷ್ಪ್ರಯೋಜಕ. ಹಿಂದಿರುಗಿ ಹೋಗಿಬಿಡಲೇ? ಎಂದು ನಿಟ್ಟುಸಿರು ಬಿಡುವನು.

ನಿನ್ನನ್ನೇ ವರಿಸುವೆನೆಂದು ವಚನವಿತ್ತವಳು, ಮುಂದೆ ರಾಜಗೋಪಾಲನ ಮಡದಿಯಾಗುವುದರಲ್ಲಿ ಸಂದೇಹವಿಲ್ಲ. ಆಕೆಯು ಈಗ ಖಂಡಿತಾ ಬರಲಾರಳೆಂದೇ ಭಾವಿಸಿಕೊಂಡಿರುವನಾದರೂ, ಕುಳಿತ ಸ್ಥಳದಿಂದ ಮೇಲೇಳಲು ಮನಸ್ಸು ಬರಲಿಲ್ಲ.

ಸರೋಜಳು ತನ್ನ ಮೇಲೆ ಅಗಾಧವಾದ ಪ್ರೇಮವನ್ನಿಟ್ಟಿರುವಳೆಂದು ಆತನೇನು ಬಲ್ಲನು ?

ಅವನ ಮೇಲಿರುವ ಪ್ರೇಮಕ್ಕಾಗಿ ಶ್ರೀಮಂತ ರಾಜಗೋಪಾಲನನ್ನೇ ನಿರಾಕರಿಸಿರುವಾಗ, ಅವನಲ್ಲಿಗೆ ಬಾರದಿರುತ್ತಾಳೆಯೇ ?

ನಿಯಮಿತ ವೇಳೆಗೆ ಆಕೆಯು ಅಲ್ಲಿ ಹಾಜರಾಗಿ ತನ್ನ ನಿರೀಕ್ಷೆಯಲ್ಲಿದ್ದ ವರದರಾಜನನ್ನು ಕಂಡು ಆನಂದಿತಳಾದಳು.

ನಾಲ್ಕು ಕಣ್ಣುಗಳು ಒಂದುಗೂಡಿದುವು. ಆಗ ಸಾಯಕಾಲ ಆರೂವರೆ ಘಂಟೆಯ ಸಮಯ.

ಸರೋಜಳನ್ನು ನೋಡುತ್ತಲೇ ವರದರಾಜನ ಆನಂದವು ಉಕ್ಕೇರಿತು. ಅವಳ ವಿಷಯದಲ್ಲಿ ಹೊಂದಿದ್ದ ದುರಭಿಪ್ರಾಯವನ್ನೆಲ್ಲಾ ದೂರ ಮಾಡಿ ಪಶ್ಚಾತ್ತಾಪಗೊಂಡನು.

"ಸರೋಜಾ! ಇಂದು ಬಹಳ ತಡವಾಗಿ ಬಂದಿರುವೆಯಲ್ಲವೇ ?"

—ಎಂದು ಸರೋಜಳ ಕೆನ್ನೆಯನ್ನು ಮೃದುವಾಗಿ ಜಿಗುಟಿ ವರದರಾಜು ಕೇಳಿದ.

"ನೀವು ಒಂದೆರಡು ಘಂಟೆ ಮುಂಚೆಯೇ ಬಂದು ಕುಳಿತಿದ್ದಿರೋ ಏನೋ. ನಿಮಗೆ ಹಾಗೆ ತೋರುತ್ತದೆ. ನಾನು ಮಾತ್ರ ಸರಿಯಾದ ವೇಳೆಗೇ ಬಂದಿರುವೆನು. ಹತ್ತು ನಿಮಿಷವೂ ತಡವಾಗಿಲ್ಲ."

—ಎಂದು ನಗುತ್ತಲೇ ಉತ್ತರವಿತ್ತಳು ಸರೋಜ.

"ನನ್ನ ಮೇಲೇ ತಪ್ಪುಹೊರಿಸಿದೆಯಾ ? ಇರಲಿ. ನಿನ್ನ ಮುಖವೇಕೆ ಇಷ್ಟು ಕಳೆಗುಂದಿದೆ ?"

"ನನ್ನ ಮುಖವೇಕೆ ನೋಡುವಿರಿ ? ನಿಮ್ಮ ಮುಖ ನೋಡಿ. ಈಗಲೇ ಸುಕ್ಕುಬಿದ್ದು, ವಯಸ್ಸು ಕಳೆದವರ ಮುಖದಂತೆ ತಾಣುತ್ತಿದೆ. ಏಕೆ ಏನಾದರೂ........?"

ಸರೋಜಳ ಮಾತು ಪೂರೈಸುವ ಮೊದಲೇ—

"ಅಂತಹ ಪ್ರಮೇಯವೇನೂ ಇಲ್ಲ ಸರೋಜ. ಒಂದು ಹೊಸ ಸಮಾಚಾರವನ್ನು ಕೇಳಿದೆ. ಅಂದಿನಿಂದ........" ಎಂದು ಅಲ್ಲಿಗೇ ಮಾತು ನಿಲ್ಲಿಸಿದ ವರದರಾಜು.

"ಹೊಸ ಸಮಾಚಾರವೆಂದರೆ, ನನ್ನ ಮದುವೆ ವಿಷಯವೇ?"

"ಹೌದು ಸರೋಜಾ, ಅದೇ ವಿಷಯ."

—ಎಂದು ಕ್ಷೀಣಸ್ವರದಲ್ಲಿ ನುಡಿದ ವರದರಾಜು.

"ಆ ವಿಷಯವನ್ನು ಕೇಳಿ ಅನ್ನಾಹಾರಗಳನ್ನು ತೊರೆದು ಈ ರೀತಿ ಕ್ಷೀಣಿಸುತ್ತಿರುವಿರಾ?"

"ಸರೋಜಾ! ಅಂತಹ ಪ್ರಸಂಗ ಬಂದಾಗ ಯಾರಿಗೆತಾನೆ ಸಂಕಟವಾಗದಿರುವುದಿಲ್ಲ? ನೀನೇ ನನ್ನ ಹೃದಯದ ರಾಣಿಯೆಂದು ಭಾವಿಸಿ, ಬಾಳದೀಪದ ಗಾಳಿಗೋಪುರಗಳನ್ನು ಕಟ್ಟುತ್ತಿದ್ದೆ. ಈಗ ಆ ಗಾಳಿಗೋಪುರವೆಲ್ಲಾ ಮನಸ್ಸಿನಲ್ಲಿಯೇ ಉಳಿಯುವಂತಾಯಿತೇ? ಎಂದು ಅನುದಿನವೂ ವ್ಯಸನಪಡುತ್ತಿದ್ದೆ. ನಿನ್ನನ್ನು ಮರೆಯಲು ನನ್ನಿಂದಾಗಲಿಲ್ಲ. ಈ ದಿನವನ್ನು ಬಹು ಆತುರದಿಂದ ಎದುರುನೋಡುತ್ತಿದ್ದೆ. ಈಗಮಾತ್ರ ಏನೋ ಒಂದು ಜಗೆಯಲ್ಲಿ ಮನಸ್ಸಿಗೆ ಆನಂದವಾಗಿದೆ. ಆದರೇ! ಕಳವಳವು ಮಾತ್ರ ದೂರಾಗಿಲ್ಲ."

"ನೀವು ನಿಜವಾಗಿಯೂ ನನ್ನನ್ನು ಪ್ರೀತಿಸುವಿರಾ?"

"ಸರೋಜಾ! ಇದೇನು ಹೀಗೆ ಕೇಳುವೆ? ನಾನು ನಿನ್ನ ಮೇಲಿಟ್ಟಿರುವ ಅಮರ ಪ್ರೇಮವನ್ನು ಅರಿಯೆಯಾ? ನಿನ್ನ ವಿನಃ ಉಳಿದ ಸ್ತ್ರೀಯರೆಲ್ಲರು ನನ್ನ ಮಾತೃಸಮಾನರೆಂದು ಭಾವಿಸಿರುವೆನು. ನನ್ನ ಈ ಹೃದಯವು ನಿಷ್ಕಲ್ಮಷವಾಗಿದೆಯೆಂದು ಭಾವಿಸು. ಲೇಶಮಾತ್ರವೂ ಕಲ್ಮಷವಿಲ್ಲ."

—ಎಂದು ಏರಿಕೆಯ ಧ್ವನಿಯಲ್ಲಿ ಹೇಳಿದ ವರದರಾಜು.

"ನನ್ನನ್ನೂ ಅದೇ ರೀತಿ ಭಾವಿಸಿ. ನೀವು ಚಿಂತೆಯಿಂದ ಕೊರಗುತ್ತಿದ್ದರೆ ನಾನು ಧೈರ್ಯದಿಂದ ಗಂಡಾಂತರಗಳನ್ನು ಎದುರಿಸುತ್ತಿರುವೆನು."

"ಏನೂ! ಗಂಡಾಂತರವೇ?"

"ಹೌದು! ಗಂಡಾಂತರವೇ."

—ಎಂದು ನುಡಿದ ಸರೋಜಳು ತನಗೂ ತನ್ನ ತಂದೆಗೂ ನಡೆದ ಸಂಭಾಷಣೆಯ ವಿವರಗಳನ್ನೆಲ್ಲಾ ತಿಳಿಸಿದಳು.

ತನ್ನ ಮೇಲಿನ ಪ್ರೇಮಕ್ಕಾಗಿ ಸರೋಜಳು ಅವಳ ತಂದೆಯೊಡನೆ ದಿಟ್ಟತನದಿಂದ ಮಾತನಾಡಿದುದನ್ನು ಕೇಳಿ, ವರದರಾಜನು ದಿಗ್ಭ್ರಾಂತನಂತಾದನಲ್ಲದೆ, ಅವಳ ಧೈರ್ಯ, ಸಾಹಸಕ್ಕೆ ತನ್ನ ಮನದಲ್ಲಿಯೇ ಮೆಚ್ಚಿಕೊಂಡನು.

"ಸರೋಜಾ! ನಿನ್ನ ತಂದೆಯು ಈ ವಿವಾಹಕ್ಕೆ ಅಂಗೀಕರಿಸುವರೇ? ಐಶ್ವರ್ಯವೆಂಬ ಮದದಲ್ಲಿ ನಮ್ಮನ್ನು ತೃಣಸಮಾನವಾಗಿ ಭಾವಿಸಿರುವರು. ನಿನ್ನ ಮಾತಿಗೆ ಒಪ್ಪುವರೆಂಬ ನಂಬಿಕೆಯು ನನಗಿಲ್ಲ."

"ಮದುವೆಯಾಗುವವಳು ನಾನಲ್ಲದೆ ಅವರಲ್ಲ. ನನ್ನ ಮಾತಿಗೆ ಒಪ್ಪಿದರೇ ಸರಿ, ಇಲ್ಲದೆ ಹೋದರೆ ವಿಷವನ್ನಾದರೂ ಕುಡಿದು ಪ್ರಾಣ ಕಳೆದುಕೊಳ್ಳುವೆನು. ಆ ದಿನ ನನ್ನ ಮಾತಿಗೆ ಕೋಪಿಸಿಕೊಂಡು ಹೋದವರು ಈವರೆವಿಗೆ ಮನೆಗೆ ಬಂದಿಲ್ಲ. ಎಲ್ಲಿಗೆ ಹೋಗಿರುವರೋ, ಏನೋ."

"ಸರೋಜಾ! ನೀನು ಎಂದು ಆತ್ಮಹತ್ಯೆ ಮಾಡಿಕೊಳ್ಳುವೆಯೋ, ಆ ದಿನವೇ ನಾನೂ ಸಹ ಪ್ರಾಣ ಕಳೆದುಕೊಳ್ಳುವೆನು. ನನ್ನ ತಂದೆತಾಯಿಯರ ಮೇಲೆ ಆಣೆಯಿಟ್ಟು ಹೇಳುವೆನು. ಈ ಮಾತು ನಿಶ್ಚಯ. ನಿನ್ನ ತಂದೆಯು ಕಣ್ಮರೆಯಾಗಿರುವ ಬಗ್ಗೆ ನೀವೆಲ್ಲರೂ ಉದಾಸೀನರಾಗಿಯೇ ಇರುವಿರಾ?"

"ಇನ್ನೇನು ಮಾಡಬೇಕು? ಕಾಲುಗಳಿಗೆ ಗೆಜ್ಜೆ ಕಟ್ಟಿಕೊಂಡು ಕುಣಿದಾಡಬೇಕೇ? ಎಲ್ಲಿಗೆ ಹೋದರೂ ಹಿಂದಿರುಗಿ ಬರುವರು. ನಮಗೆ ಭಯ ಹುಟ್ಟಿಸುವುದಕ್ಕಾಗಿ ಹೋಗಿರುವರಲ್ಲದೆ, ಬೇರೆ ಯಾವ ಅಭಿಪ್ರಾಯದಿಂದಲೂ ಹೋಗಿಲ್ಲ."

"ಹಿಂದೆ ಇದೇ ರೀತಿ ಹೋಗಿದ್ದರೆ?"

"ಇಲ್ಲ! ಇದೇ ಪ್ರಥಮ."

"ಹಾಗಾದರೇ! ಹಿಂದಿರುಗಿ ಬರುವರೆಂದು ಹೇಗೆ ಹೇಳುವೆ?"

"ಬಾರದೆ ಎಲ್ಲಿಗೋಗುವರು? ಹಿಂದೆ ಇಂತಹ ಪ್ರಸಂಗವು ನಡೆದಿರಲಿಲ್ಲವಲ್ಲಾ. ನೀವು ಆ ವಿಷಯವಾಗಿ ಯೋಚಿಸಬೇಡಿ."

"ಸರಿ! ನೀನು ಹೇಳಿದ ಮೇಲೆ ನಾನೇಕೆ ಯೋಚಿಸಲಿ? ಇನ್ನೊಂದು ವಿಷಯ, ನಿನ್ನ ಮಲತಾಯಿಗೆ ತಮ್ಮನೊಬ್ಬನಿರುವನಂತೆ, ಆ ತಮ್ಮನಿಗೆ...."

ವರದರಾಜುವಿನ ಮಾತು ಮುಗಿಯುವ ಮೊದಲೇ ಸರೋಜಳು—

"ಆತನ ವಿಷಯವೇ?........ತಂದೆಯು ರಾಜಗೋಪಾಲನನ್ನು ವಿವಾಹವಾಗೆಂದು ಒತ್ತಾಯ ಮಾಡುತ್ತಿದ್ದರೆ ಮಲತಾಯಿಯು ತನ್ನ ತಮ್ಮನಾದ ವರದಾಸನನ್ನು ಮದುವೆಯಾಗೆಂದು ಬಲಾತ್ಕಾರ ಪಡಿಸುತ್ತಿರುವಳು.

ನಾನು ಯಾರ ಮಾತಿಗೂ ಮನ್ನಣೆಯಿಾಯದೆ ನನ್ನ ಹಠವನ್ನೇ ಸಾಧಿಸು ತ್ತಿರುವೆನು. ನನ್ನ ಮಲತಾಯಿಯೇನೋ ತನ್ನ ತಮ್ಮನನ್ನೇ ವರಿಸುವೆನೆಂಬ ಅಭಿಪ್ರಾಯದಿಂದ ನನಗೆ ಬಹಳ ಪ್ರೀತಿಯಿಂದ ಉಪಚರಿಸುತ್ತಿರುವಳು. ನನಗೆ ಅವಳ ಮೇಲುಪಚಾರವೆಲ್ಲಾ ತಿಳಿದಿದೆ." ಎಂದು ಹೇಳಿ ನಕ್ಕಳು.

"ಸರೋಜಾ! ನನಗಾಗಿ ನೀನು ಎಂತಹ ಎಂತಹ ಕಷ್ಟಗಳನ್ನು ಎದುರಿಸಬೇಕಾದ ಪರಿಸ್ಥಿತಿಯೊದಗಿದೆಯಲ್ಲ. ಈ ಹಾಳು ಬಡತನವೆಂಬುದು ನಮ್ಮಿಬ್ಬರ ನಡುವೆ ಕಂಟಕಪ್ರಾಯವಾಗಿ ನಿಂತಿದೆ. ನೀನು ಬಡವರ ಮಗಳಾಗಿ ಹುಟ್ಟಲಿಲ್ಲ. ಅಥವಾ ನಾನು ಶ್ರೀಮಂತರ ಮಗನಾಗಿ ಜನಿಸ ಲಿಲ್ಲ. ಆ ರೀತಿ ನಡೆದಿದ್ದರೆ ಇಷ್ಟು ಅನರ್ಥಗಳಿಗೆ ಕಾರಣವೇ ಆಗುತ್ತಿರ ಲಿಲ್ಲ."

"ಆ ರೀತಿಯಾಗಿದ್ದರೆ ನಮ್ಮಿಬ್ಬರಿಗೂ ಈ ಪ್ರೇಮವೇ ಹುಟ್ಟುತ್ತಿರಲಿಲ್ಲ ವೆಂದು ಭಾವಿಸಿ. ಈ ರೀತಿ ಕದ್ದು ಸೇರಲು ಅವಕಾಶವೂ ಆಗುತ್ತಿರಲಿಲ್ಲ. ಈಗ ನಡೆಯುತ್ತಿರುವುದೇ ಸರಿ. ಪ್ರೇಮಕ್ಕೆ ಜಾತಿ ಮತಗಳ ಭೇಧವಿಲ್ಲ. ಶ್ರೀಮಂತ ಬಡವನೆಂಬ ತಾರತಮ್ಯವಿಲ್ಲ."

—ಎಂದು ಹುಸಿನಕ್ಕಳು ಸರೋಜ.

"ಅಯ್ಯೋ! ದೇವರೇ, ನಿನಗಿರುವ ಈ ಬುದ್ಧಿಯು ನಿಮ್ಮ ತಂದೆಯವ ರಿಗಿರಬಾರದಿತ್ತೇ? ಹಲ್ಲಿಲ್ಲದವರಿಗೆ ಕಡಲೆಯಿಲ್ಲ, ಕಡಲೆಯಿದ್ದವರಿಗೆ ಹಲ್ಲಿಲ್ಲ ವೆಂಬಂತಾಗಿದೆ ನನ್ನ-ನಿನ್ನ ಈ ಸಂಬಂಧದ ಪರಿಸ್ಥಿತಿ. ಸರೋಜಾ! ಏನು ಮಾತನಾಡಿದರೇನು? ಮುಂದೆ ಯಾವ ರೀತಿ ನಡೆಯಬೇಕೆಂಬುದನ್ನು ಹೇಳು."

"ನಾನು ಎಲ್ಲವನ್ನೂ ಸರಿಪಡಿಸುವೆನು. ಅಲ್ಲಿಯವರೆವಿಗೆ ನೀವು ಸುಮ್ಮ ನಿರಿ. ಎಲ್ಲಾ ನಮ್ಮ ಹಾಗೆಯೇ ತೀರ್ಮಾನವಾಗುತ್ತದೆ."

"ಈ ಮಾತು ನಂಬಲೇ?"

"ನನ್ನ ತಂದೆ ತಾಯಿಯರ ಮೇಲೆ ಆಣೆಯಿಟ್ಟು ಹೇಳುವೆನು. ನೀವು ನಿಶ್ಚಿಂತೆಯಿಂದ ಕಾಲ ಕಳೆದುಕೊಂಡಿರಿ. ಮನಸ್ಸಿಗೆ ವ್ಯಥೆಯನ್ನು ಹಚ್ಚಿಕೊಳ್ಳ ಬೇಡಿ."

ವರದರಾಜನು ಆನಂದದಿಂದ ಸರೋಜಳನ್ನು ಆಲಂಗಿಸಿಕೊಂಡನು.

ಪರಸ್ಪರ ಆಲಿಂಗನದಿಂದಲೇ ಪ್ರಣಯಿಗಳ ಮೋಹವು ಕಳೆದು ಹೋಯಿತು.

ಮನ್ಮಥನು ಅವರಿಬ್ಬರ ಮೇಲೆ ತನ್ನ ಕುಸುಮಬಾಣಗಳನ್ನೆಸೆಯುವುದರಲ್ಲಿ ಅವರಿಬ್ಬರೂ ಒಬ್ಬರನ್ನೊಬ್ಬರು ಅಗಲಿದರು-

ಒಬ್ಬರಿಂದೊಬ್ಬರು ಬಹು ಕಷ್ಟದಿಂದ ಅಗಲಿ ಕಣ್ಮರೆಯಾದರು.

ಕಾಮಬಾಣಕ್ಕೆ ಒಳಗಾಗದೆ ಧೀರ ಮನಸ್ಸಿನ ಪ್ರಣಯಿಗಳ ದೃಢ ನಿರ್ಧಾರವನ್ನು ಕೊಂಡಾಡಬೇಕಾದ್ದೇ ಆಗಿದೆ.

ಮನಸ್ಸಿಲ್ಲದ ಮನಸ್ಸಿನಿಂದ ವರದರಾಜನು ಮನೆಗೆ ಬಂದು ನೋಡಲು, ದೇವನಗರದಿಂದ ಅವನ ನೆಂಟರಿಷ್ಟರು ಬಂದಿದ್ದರು.

ಅವರು ಅಕಸ್ಮಾತ್ ಬಂದವರಲ್ಲ. ಇತರ ಕಾರಣಗಳಿಗಾಗಿ ಬಂದವರಲ್ಲ. ಕಾರಣಾಂತರಗಳಿಂದ ಬೇರೆ ಊರಿಗೆ ಹೋಗಿ, ಹಿಂದಿರುಗುವಾಗ ಅಲ್ಲಿಗೆ ಬಂದವರಲ್ಲ.

ವಿವಾಹ ಸಂಬಂಧವಾಗಿ ಬಂದಿರುವ ನೆಂಟರಾಗಿರುವರು.

ವರದರಾಜನಿಗೆ ಕೊಡಬೇಕೆಂದಿರುವ ಕನ್ಯೆ, ಅವಳ ತಂದೆ, ತಾಯಿ ಮತ್ತು ಆಕೆಯ ಅಣ್ಣ-ತಂಗಿಯರು ಬಂದಿರುವರು.

ವರದರಾಜನಿಗೆ ತಿಳಿಯದೆ ಇದ್ದರೂ, ಅವನಿಗೆ ತಿಳಿಯದಂತೆ, ಅವನ ತಂದೆಯು ಕನ್ಯೆಯ ತಂದೆಯೊಡನೆ ಪತ್ರವ್ಯವಹಾರ ನಡೆಯಿಸುತ್ತಿದ್ದನು.

ವರದರಾಜನು ಕನ್ಯೆಯನ್ನು ನೋಡಿದರೆ ಮೆಚ್ಚುವನಲ್ಲದೆ, ತಮ್ಮ ಮಾತಿಗೆ ಮನ್ನಣೆಯೀಯುವನೆಂದೇ ಆತನ ತಂದೆತಾಯಿಯರ ಅಭಿಪ್ರಾಯವಾಗಿದೆ.

ಮಗನು ಮೆಚ್ಚಿ ಮದುವೆಯಾಗಲಿರುವ ಕನ್ಯಾಮಣಿಯು ಶ್ರೀಮಂತರ ಪುತ್ರಿಯಾದ ಸರೋಜಳೆಂದು ಅವರೇನು ಬಲ್ಲರು ?

ವರದರಾಜನು ನೆಂಟರಿಷ್ಟರಾರ ಮುಖಗಳನ್ನೂ ನೋಡದೆ ತನಗಾಗಿ ಏರ್ಪಡಿಸಿಕೊಂಡಿದ್ದ ಚಿಕ್ಕ ರೂಮಿನೊಳಗೆ ಹೋಗಿ ಕುಳಿತನು.

ಬಂದಿರುವ ನೆಂಟರು ಊಟ, ಉಪಚಾರಗಳಿಂದ ಸತ್ಕರಿಸಲ್ಪಟ್ಟು ಹಿಂದಿರುಗುವರೆಂದು ಅವನ ಭಾವನೆಯಾಗಿದೆ.

ಸರಸಮ್ಮನು ಮಗನ ರೂಮಿನೊಳಗೆ ಹೋಗಿ ವಿನಯದಿಂದಲೇ—

"ವರದಾ! ಈಗ ಬಂದಿರುವರಾರು ಬಲ್ಲೆಯಾ?" ಎಂದು ಕೇಳಿದಳು.

"ಯಾರು ಬಂದಿರುವರು?"

—ಎಂದು ತಲೆಯೆತ್ತದೆ ವರದರಾಜನು ಮರುಪ್ರಶ್ನಿಸಿದ.

ಸರಸಮ್ಮನು ವಿಷಯವನ್ನು ಮುಚ್ಚಿಡದೆ, ಅವರು ಬಂದ ಕಾರಣವನ್ನು ಹೇಳಿದಳು.

ವಿಷಯವನ್ನು ಕೇಳುತ್ತಲೇ ವರದರಾಜುವಿಗೆ ಸಾವಿರಾರು ಚೇಳುಗಳು ಒಂದೇ ಸಾರಿಗೆ ಕುಟುಕಿದಂತಾಯಿತು. ಒಂದು ವೇಳೆ ಚೇಳುಗಳು ಕುಟುಕಿದ್ದರೂ ಆ ಯಾತನೆಯನ್ನು ಸಹಿಸಿಕೊಳ್ಳುತ್ತಿದ್ದನು. ತನಗೆ ವಿವಾಹವೆಂದು ತನ್ನ ತಾಯಿಯು ಹೇಳಿದ ಮಾತನ್ನು ಕೇಳಿ ಸಹಿಸಲಾಗಲಿಲ್ಲ.

ತಕ್ಷಣವೇ ಎದ್ದುನಿಂತು ದುಗುಡದಿಂದ—

"ಅಮ್ಮಾ! ಇದೇನು ನಿಮ್ಮ ಮಾತು? ಯಾರಿಗೆ ಮದುವೆ? ನನ್ನೊಡನೆ ಪರಿಹಾಸ್ಯವಾಡುವಿರಾ?" ಎಂದು ಕೇಳಿದ.

"ಇದರಲ್ಲಿ ಪರಿಹಾಸ್ಯವೇನಿದೆ ವರದಾ. ನೀನು ಈಚೆಗೆ ಬದಲಾವಣೆಗೊಂಡಿರುವುದನ್ನು ನಾವು ನೋಡುತ್ತಲೇ ಇರುವೆವು. ನಿನಗೆ ಮದುವೆಯಾಗುವ ಇಚ್ಛೆಯಿದ್ದರೆ ನಮ್ಮಲ್ಲಿ ಹೇಳಲು ಸಂಕೋಚವೆಂದು ಭಾವಿಸಿ ಅದಕ್ಕೆ ಏರ್ಪಾಡು ಮಾಡಿದೆವು. ನಮಗೂ ನಿಮ್ಮ ಮಾವನಿಗೂ ಪತ್ರವ್ಯವಹಾರವು ನಡೆಯುತ್ತಲೇ ಇತ್ತು. ಆ ವಿಷಯವು ನಿನಗೆ ತಿಳಿಯದು. ಈಗ ಕನ್ಯೆಯನ್ನು ಕರೆದುಕೊಂಡೇ ಬಂದಿರುವರು. ಅವಳೇನೂ ಕುರೂಪಿಯಲ್ಲ. ವಿದ್ಯಾವಂತೆ. ನಿನಗೆ ಸಮಜೋಡಿಯಾಗಿರುವಳು. ನೀನೂ ಒಂದು ಸಾರಿ ನೋಡು. ನಿನಗೇ ತಿಳಿಯುತ್ತದೆ."

ತಾಯಿಯ ಒಂದೊಂದು ಮಾತೂ ವರದರಾಜನ ಹೃದಯವನ್ನು ಚೂರಿಯಿಂದ ಇರಿದಂತಾಗುತ್ತಿತ್ತು.

ತಾನೆಂತಹ ಧರ್ಮಸಂಕಟಕ್ಕೆ ಸಿಲುಕಿದೆನಲ್ಲಾ, ಎಂದುಕೊಂಡನು. ತಂದೆತಾಯಿಯರ ಮಾತನ್ನು ಮೀರುವ ಹಾಗಿಲ್ಲ. ಸರೋಜಳನ್ನು ನಿರಾಕರಿಸುವಂತಿಲ್ಲ.

ಹೆತ್ತು, ಹೊತ್ತು, ಸಾಕಿ ಸಲಹಿ, ವಿದ್ಯಾಬುದ್ಧಿಯನ್ನು ಕಲಿಸಿದ ತಂದೆತಾಯಿಯರ ಮಾತಿಗೆ ಮನ್ನಣೆಯೀಯದೇ ಹೋದರೆ ಅವರು ನೊಂದುಕೊಳ್ಳು

ವರು. ಅವರ ಮಾತಿಗೆ ಒಪ್ಪಿ, ತನಗಾಗಿ ಶ್ರೀಮಂತ ತರುಣನನ್ನು ತ್ಯಜಿಸಿ, ತನ್ನನ್ನೇ ನಂಬಿಕೊಂಡಿರುವ ಸರೋಜಳನ್ನು ನಿರಾಕರಿಸಿದರೆ, ಅವಳ ಭವಿಷ್ಯವನ್ನೇ ಹಾಳು ಮಾಡಿದಂತಾಗುವುದಲ್ಲದೆ, ಆಕೆಯು ಆತ್ಮಹತ್ಯೆ ಮಾಡಿಕೊಂಡರೆ ಆ ದೋಷಕ್ಕೆ ಗುರಿಯಾಗಬೇಕಾಗುವುದು.

ಈ ಸಮಸ್ಯೆಯನ್ನು ಯಾವ ರೀತಿ ಇತ್ಯರ್ಥಪಡಿಸಬೇಕೆಂದೇ ವರದರಾಜನಿಗೆ ತೋಚದಂತಾಯಿತು.

"ವರದಾ! ಏನು ಯೋಚಿಸುತ್ತಿರುವೆ? ಹೊರಗೆ ಬರಲು ನಾಚಿಕೆಯೇ? ಸಂಗಡ ನಾನಿರುವೆನು, ಬಾ. ನಾಚಬೇಕಾದವಳು ಹೆಣ್ಣು. ನೀನು ಗಂಡಾಗಿ ನಾಚಿಕೊಳ್ಳುವೆಯಲ್ಲ. ವಸಂತಳನ್ನು (ಕನ್ಯೆಯ ಹೆಸರು) ಇಲ್ಲಿಗೇ ಕರೆದುಕೊಂಡು ಬರಲೇ? ಮುಂದೆ ನಿನ್ನ ಹೆಂಡತಿಯಾಗಲಿರುವವಳನ್ನು ಈಗ ನೋಡುವುದರಲ್ಲಿ ತೊಂದರೆಯೇನಿದೆ ಹೇಳು? ವಸಂತಳನ್ನು ಕೂಗಲೇ?"

—ಎಂದು ಮಗನಿಗೆ ಪ್ರಶ್ನೆ ಹಾಕಿದಳು ಸರಸಮ್ಮ

"ಅಮ್ಮಾ ಅಂತಹ ಕೆಲಸಕ್ಕೇ ಹೋಗಬೇಡಿ. ನನ್ನ ಒಂದು ಮಾತನ್ನು ಕೇಳಿ. ನಾನೀಗ ಕೆಲಸವಿಲ್ಲದೆ ಅಲೆಯುತ್ತಿರುವ ವಿಷಯವು ನಿಮಗೆ ತಿಳಿದೇ ಇದೆ. ಹೆತ್ತ ಜನನೀ ಜನಕರನ್ನು ಸಾಕಲು ಯೋಗ್ಯತೆಯಿಲ್ಲದ ನನಗೆ ವಿವಾಹವೇ? ಯಾರಲ್ಲಿಗೆ ಹೋಗಿ ದೀನತೆಯಿಂದ, ಕಲ್ಲು ಮರಗಳು ಕರಗುವಂತೆ ಬೇಡಿಕೊಂಡರೂ ನನಗೆ ಒಂದು ಕೆಲಸವನ್ನು ಕೊಡುತ್ತಿಲ್ಲ. ಫ್ಯಾಕ್ಟರಿ ಮಿಲ್ಲುಗಳ ತಲೆಬಾಗಿಲಿನಲ್ಲಿಯೇ **ಕೆಲಸ ಖಾಲಿ** ಇಲ್ಲ ಎಂಬ ಬೋರ್ಡನ್ನು ತೂಗು ಹಾಕಿರುವರು. ನನ್ನ ವಿದ್ಯಾಭ್ಯಾಸಕ್ಕಾಗಿ ಮಾಡಿರುವ ಸಾಲವು ದೊಡ್ಡ ಹೊರೆಯಂತೆ ತಲೆಯ ಮೇಲೆ ಕುಳಿತಿದೆ. ಮನೆಯಲ್ಲಿ ವಾರಕ್ಕೆ ಒಂದೆರಡು ಸಾರಿಯಾದರೂ ಏಕಾದಶಿ ವ್ರತವನ್ನಾಚರಿಸಬೇಕಾಗುವುದು. ಇಂತಹ ಪರಿಸ್ಥಿತಿಯಲ್ಲಿ ವಿವಾಹವೇ? ಬೇಡ, ನನಗೆ ಖಂಡಿತ ವಿವಾಹ ಬೇಡ. ನಾನು ಈ ವಿವಾಹಕ್ಕೆ ಒಪ್ಪಲಾರೆನು. ಯಾವ ಕನ್ಯೆಯನ್ನೂ ನನಗೆ ತೋರಿಸಬೇಡಿ. ಬಂದವರು ಬಂದ ಹಾಗೆಯೇ ಹಿಂದಿರುಗಲಿ. ನನಗೆ ತಿಳಿಸದೆ ನೀವೇಕೆ ಇಂತಹ ಕಾರ್ಯಕ್ಕೆ ಮನಗೊಟ್ಟಿರಿ? ಏಕಾದಶಿ ವ್ರತವು ಸಾಲದೆಂದು ಶಿವರಾತ್ರಿಯನ್ನು ಕರೆದಂತಾಗುವುದು. ನಿನ್ನ ಮೇಲೆ ಆಣೆಯಿಟ್ಟು ಹೇಳುವೆನು. ನನಗೆ ಮದುವೆಯಾಗಲ್ಲಿಲ್ಲವೆಂದು ಬದಲಾವಣೆಗೊಂಡಿಲ್ಲ.

ಅಂತಹ ಸಮಯ ಬಂದಾಗ ನಾನೇ ಹೇಳುವೆನು. ಆ ವಿಷಯವಾಗಿ ನೀವೇನೂ ತೊಂದರೆ ತೆಗೆದುಕೊಳ್ಳಬೇಡಿ."

—ಎಂದು ಸಾವಧಾನವಾಗಿ ತಾಯಿಯ ಮನಸ್ಸು ಕರಗಿ ನೀರಾಗುವಂತೆ ಹೇಳಿದ ವರದರಾಜು.

ಮಗನ ಮಾತುಗಳನ್ನು ಕೇಳಿ ಸರಸಮ್ಮನ ಕಣ್ಣುಗಳಲ್ಲಿ ನೀರು ಬಾರದಿರಲಿಲ್ಲ. ತನ್ನ ಸೀರೆಯ ಸೆರಗಿನಿಂದ ಕಣ್ಣೀರಿನ ಹನಿಗಳನ್ನು ಒರಸಿಕೊಂಡಳು.

ಮಗನು ಏನು ಅಭಿಪ್ರಾಯವಿಟ್ಟುಕೊಂಡು ಹೇಳಿರುವನೆಂದು ಆಕೆಯೇನು ಬಲ್ಲಳು?

"ವರದಾ! ನೀನು ಹೇಳುವುದೇನೋ ನ್ಯಾಯ. ನೀನು ಕನ್ಯೆಯನ್ನು ನೋಡಿದ ಮಾತ್ರಕ್ಕೆ ಈಗಲೇ ವಿವಾಹವಾಗುವುದೇ? ಇದೇನು ಗೊಂಬೆ ಮದುವೆಯೇ? ಈಗ ಕನ್ಯೆಯನ್ನು ನೋಡಿ ಒಪ್ಪಿಕೊಂಡರೆ ತಾಂಬೂಲ ಶಾಸ್ತ್ರವನ್ನು ಮಾಡಿ ಮುಗಿಸುವೆವು. ಅನುಕೂಲ ಕೂಡಿಬಂದಾಗ ಮದುವೆ ಮಾಡುವುದು."

"ಅಮ್ಮಾ! ಅದು ನಿಮ್ಮ ಕಾರ್ಯವಲ್ಲ. ವಿವಾಹವಾಗಲು ಕಡಿಮೆಯೆಂದರೂ ಒಂದೆರಡು ವರ್ಷಗಳು ಬೇಕಾಗುವುದು. ಆಗ ನಡೆಯುವ ವಿವಾಹ ಕಾರ್ಯಕ್ಕೆ ಈಗಲೇ ತಾಂಬೂಲ ಶಾಸ್ತ್ರವೇ? ನನ್ನ ಮಾತಿಗೆ ಎದುರಾಡಿದನೆಂದು ಕೋಪಿಸಿಕೊಳ್ಳಬೇಡಿ. ನಿಮ್ಮ ಆಶೀರ್ವಾದವೇ ನನ್ನ ಏಳಿಗೆಗೆ ಮೂಲ ಕಾರಣ."

"ನಿನ್ನ ಸದ್ಗುಣಕ್ಕೆ ಮಾರುಹೋಗಿ ಮಗಳನ್ನು ಕೊಡಲು ಮುನೆಮುಟ್ಟಿ ಬಂದವರನ್ನು ನಿರಾಕರಿಸಿ ಕಳುಹಿಸುವುದು ಧರ್ಮವೇ?"

"ಅಮ್ಮಾ! ನಾನು ನಿಜವಾಗಿಯೂ ಆ ಯೋಗ್ಯತೆಗೆ ಅರ್ಹನಲ್ಲ. ಬಂದವರನ್ನು ನಿರಾಕರಿಸದೆ ಶಾಂತವಚನಗಳಿಂದಲೇ ಹೇಳಿ, ಅವರನ್ನು ಒಪ್ಪಿಸಿ ಉಪಚಾರಗಳಿಂದ ಸಂತೋಷಗೊಳಿಸಿ ಕಳುಹಿಸಿಕೊಡಿ. ನಮ್ಮ-ಅವರ ಋಣಾನುಬಂಧವಿದ್ದರೆ ಆಗಿಯೇ ತೀರುವುದು"

"ವಿವಾಹವು ಯಾವಾಗಲಾದರೂ ನಡೆಯಲಿ. ತಾಂಬೂಲ ಶಾಸ್ತ್ರವು ಈಗ ನಡೆಯುವುದರಲ್ಲಿ ತೊಂದರೆಯೇನಿದೆ?"

"ಅಮ್ಮಾ! ಆ ತೊಂದರೆಯನ್ನು ಹೇಳುವೆನು ಕೇಳಿ. ಮಾನವರು ಸ್ಥಿರಮನಸ್ಸಿಲ್ಲದ ಚಿತ್ತಚಂಚಲವುಳ್ಳವರು. ಕ್ಷಣಕ್ಷಣಕ್ಕೆ ಮನಸ್ಸನ್ನು ಬದಲಾಯಿಸುವರು. ಈಗ ನನ್ನನ್ನು ಅಳಿಯನನ್ನಾಗಿ ಮಾಡಿಕೊಳ್ಳುವ ಅಪೇಕ್ಷೆಯಿಂದ ಬಂದಿರುವರು. ವಿವಾಹವು ಈಗ ನಡೆಯುವಂತಿಲ್ಲ. ತಾಂಬೂಲ ಶಾಸ್ತ್ರ ಮುಗಿದನಂತರ ಹಿಂದಿರುಗುವರು. ಆ ಶಾಸ್ತ್ರವು ನಡೆಯುತ್ತಲೇ ವಸಂತಳು ಒಂದು ವಿಧದಲ್ಲಿ ಪತ್ನಿಯೇ ಆದಳು. ಆಕೆಯು ಪ್ರಾಪ್ತ ವಯಸ್ಕಳಾಗಿರಬಹುದು. ತಮ್ಮ ನಗರಕ್ಕೆ ಹಿಂತಿರುಗಿದ ಹಲವು ದಿನಗಳನಂತರವೇ ಆಗಲಿ, ತಿಂಗಳುಗಳು ಕಳೆದನಂತರವೇ ಆಗಲಿ ಶ್ರೀಮಂತರು ಕನ್ಯಾರ್ಥಿಗಾಗಿ ಬಂದು ಕನ್ಯೆಯ ಮೈಮೇಲೆ ಸಾವಿರಾರು ರೂಪಾಯಿಗಳ ಒಡವೆ ಹಾಕುವೆನೆಂದರೆ ಆಗ ಇವರು ಹಣದಾಸೆಗೆ ಬಲಿಬಿದ್ದು ಸದ್ಗುಣವನ್ನು ಮರೆಯುವರು. ಈಗಿನ ಕಾಲದಲ್ಲಿ ವಿಶೇಷವಾಗಿ ಹಣಕ್ಕೆ ಬೆಲೆಯಿರುವುದಲ್ಲದೆ ಗುಣಕ್ಕೆ ಬೆಲೆಯಿಲ್ಲ. ಆಗ್ಗೆ ಶ್ರೀಮಂತ ತರುಣನಿಗೆ ವಿವಾಹವಾಗುವುದಾದರೆ, ನಿನ್ನ ಸೊಸೆಯನ್ನು ಕಂಡವರಿಗೆ ಒಪ್ಪಿಸಿದಂತಾಗುವುದಿಲ್ಲವೇ? ನಿಧಾನವಾಗಿ ಯೋಚಿಸಿ ನೋಡಿ."

ಮಗನ ಬುದ್ಧಿವಂತಿಕೆಯ ಮಾತಿಗೆ ಬೆರಗಾದ ಸರಸಮ್ಮನು—

"ವರದಾ! ನೀನು ಇಷ್ಟು ಬುದ್ಧಿವಂತನೆಂದು ನಾನು ಖಂಡಿತಾ ತಿಳಿದಿರಲಿಲ್ಲ. ನಿನ್ನ ಇಷ್ಟದಂತೆಯೇ ಆಗಲಿ ನಾನು ಬಂದವರೊಡನೆ ಹೇಳಿ ಅವರನ್ನು ಒಪ್ಪಿಸುವೆನು." ಎಂದಳು.

ವರದರಾಜನಿಗೆ ಸಂತೋಷವಾಯಿತಲ್ಲದೆ ಕಣ್ಣುಗಳಿಂದ ಆನಂದಭಾಷ್ಪಗಳುದುರಿದುವು.

ಯಾವ ಬಗೆಯ ಮನಸ್ತಾಪಕ್ಕೂ, ಅಪವಾದಕ್ಕೂ ಎಡೆಗೊಡದೆ, ಈ ಸಮಸ್ಯೆಯಿಂದ ಸುಲಭವಾಗಿ ದೂರಾದೆನೆಂದುಕೊಂಡು, ತನ್ನ ತಾಯಿಯ ಪಾದಗಳಿಗೆ ನಮಸ್ಕಾರ ಮಾಡಿದ.

ಸರಸಮ್ಮನು ಹೊರಗೆ ಹೋದನಂತರ, ಇನ್ನು ಕೆಲವು ದಿನಗಳಲ್ಲಿಯೇ ಸರೋಜಳ ವಿಷಯವನ್ನು ತಿಳಿಸಿ, ಇವರನ್ನು ಹೇಗಾದರೂ ಮಾಡಿ ಒಪ್ಪಿಸದೆ ಬಿಡಬಾರದೆಂದುಕೊಂಡನು.

ಯೋಚನೆಯಲ್ಲಿಯೇ ಮುಳುಗಿರಲು, ಕೆಲಹೊತ್ತಿನಲ್ಲಿಯೇ ಸರಸಮ್ಮನು, ಕನ್ಯೆಯ ತಂದೆಯೊಡನೆ ಅಲ್ಲಿಗೆ ಬಂದಳು.

ಮಾತಿಗೆ ತಪ್ಪಿ ಮುಟ್ಠಾಳನಾಗುವವನು ತಾನಲ್ಲವೆಂದು ಕನ್ಯೆಯ ತಂದೆಯು ಹೇಳಲು, ಹಾಗಿದ್ದ ಮೇಲೆ ತಾಂಬೂಲಶಾಸ್ತ್ರವೇಕೆ? ಆಗಿದೆಯೆಂದೇ ಭಾವಿಸಿ. ಆದರೆ ಮಾತ್ರ ನಂಬಿಕೆ, ಇಲ್ಲದೆಹೋದರೆ ಇರುವುದಿಲ್ಲವೇ? ಎಂದು ಆತನ ಬಾಯಿ ಮುಚ್ಚಿಸಿದ ವರದರಾಜು.

ಕನ್ಯೆಯ ತಂದೆಯು ಪ್ರತಿಮಾತನಾಡಲಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಸಂಟರಿಂದ ಉಪಚರಿಸಲ್ಪಟ್ಟವನಾಗಿ ತನ್ನವರೊಡನೆ ಹಿಂದಿರುಗಿದ.

೬

ಇಂದು ಕಾಂಚೀನಗರದ ಜೈಹಿಂದ್ ರೋಡಿನಲ್ಲಿರುವ ವಸ್ತುಪ್ರದರ್ಶ ನಾಲಯದ ಪಂಚಮ ವಾರ್ಷಿಕೋತ್ಸವ ಸಮಾರಂಭವು ವೈಭವದಿಂದ ನಡೆಯಲಿದೆ.

ಹತ್ತು ವರ್ಷಗಳ ಕಾಲ ಇಂಗ್ಲೇಂಡಿನಲ್ಲಿದ್ದು, ಅಲ್ಲಿನ ವಿವಿಧ ವಿಷಯ ಗಳ ಬಗ್ಗೆ ಅನುಭವ ಪಡೆದಿರುವ ರಾಜಗೋಪಾಲನ ಅಧ್ಯಕ್ಷತೆಯಲ್ಲಿ ವಾರ್ಷಿ ಕೋತ್ಸವವು ನಡೆಯುತ್ತದೆ.

ಆತನು ಇಂಗ್ಲೇಂಡಿನ ವಿವಿಧ ವಸ್ತು ಪ್ರದರ್ಶನಾಲಯಗಳು ಮತ್ತು ಅವುಗಳಿಂದ ಪಡೆಯುವ ಪ್ರಯೋಜನಗಳ ವಿಷಯವಾಗಿ ಭಾಷಣ ಮಾಡುವ ನೆಂದು ಮೊದಲೇ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತಲ್ಲದೆ, ಹಸ್ತಪತ್ರಿಕೆಗಳನ್ನೂ ಹಂಚಿ, ಸಂಬಂಧಪಟ್ಟವರಿಗೆ 'ಇನ್ವಿಟೇಷನ್' ಗಳನ್ನು ಕೊಟ್ಟಿರುವರು.

ಪ್ರದರ್ಶನಾಲಯದ ಮುಂದೆ ದೊಡ್ಡ ಚಪ್ಪರವನ್ನು ಕಟ್ಟಿ, ಸಭಿಕರು ಕುಳಿತುಕೊಳ್ಳಲು ಮತ್ತು ಇನ್ನಿತರ ವ್ಯವಸ್ಥೆಗಳನ್ನೆಲ್ಲಾ ಸಿದ್ಧಗೊಳಿಸಿರುವರು.

ಸಾಯಂಕಾಲ ಆರು ಘಂಟೆಯ ವೇಳೆಗೆ ಕಾರ್ಯಕ್ರಮವು ಪ್ರಾರಂಭ ವಾಗಲಿರುವುದರಿಂದ ಐದು ಘಂಟೆಯ ವೇಳೆಗೆ ಎಲ್ಲವನ್ನೂ ಸಜ್ಜುಗೊಳಿ ಸಿರುವರು.

ತಮ್ಮ ಚಿರಪರಿಚಿತ ವೈರಿ "ಭಯಂಕರ ಭೂತ" ನಾಮಧಾರಿ ಕೊಲೆ ಗಾರರನ್ನು ಪತ್ತೇಮಾಡಿ ಹಿಡಿಯುವ ಕಾರ್ಯದಲ್ಲಿ ತೊಡಗಿರುವ ಪತ್ತೇದಾರ ರಿಗೂ ಸಹ ಆಹ್ವಾನ ಪತ್ರಗಳು ಹೋಗದೆ ಇರಲಿಲ್ಲ.

ಅವರಿಗೆ ಆ ವಾರ್ಷಿಕೋತ್ಸವಕ್ಕೆ ಹೋಗಲು ಮನಸ್ಸಿಲ್ಲದೆ ಇದ್ದರೂ, ಬೇಸರವನ್ನಾದರೂ ಕಳೆದುಕೊಳ್ಳಬಹುದೆಂಬ ಅಭಿಲಾಷೆಯಿಂದ ಅಲ್ಲಿಗೆ ಹೋದರು.

ತಮ್ಮ ಚಲನವಲನಗಳನ್ನರಿಯುತ್ತಿರುವ ಕೊಲೆಗಾರನು, ಈ ಸ್ಥಳಕ್ಕೆ ಬಂದರೂ ಬರಬಹುದು. ಸಾಧ್ಯವಾದರೆ ತನ್ನೊಡನೆ ಮಾತನಾಡಲೂ ಬಹುದೆಂಬ ಅಭಿಪ್ರಾಯವು ಪುರುಷೋತ್ತಮನ ಮನದಲ್ಲಿದೆ.

ಆರು ಘಂಟೆಯ ವೇಳೆಗಾಗಲೇ ಪ್ರತಿಯೊಬ್ಬರೂ, ಆ ಪ್ರದರ್ಶನಾಲಯದ ಬಳಿ ಹಾಜರಾದರು.

ಕೆಲಹೊತ್ತಿನಲ್ಲಿಯೇ ಸಭೆಯು ಮನುಷ್ಯರಿಂದ ತುಂಬಿ ಗಿಜಗಿಜಿ ಆರಂಭವಾಯಿತು.

ಅಧ್ಯಕ್ಷರು ಮತ್ತು ಇತರ ವ್ಯವಸ್ಥಾಪಕರೆಲ್ಲರೂ ಹಾಜರಾಗಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತಿರುವರು.

ಪ್ರಾರಂಭದಲ್ಲಿ ಸ್ವಾಗತ ಭಾಷಣ, ಮತ್ತು ಇನ್ನಿತರರ ಭಾಷಣಗಳು ನಡೆದು ಕೆಲಹೊತ್ತಿನಲ್ಲಿಯೇ ಮುಕ್ತಾಯವಾದುವು.

ಅವರಿಗೆಲ್ಲಾ ಹೆಚ್ಚು ಹೊತ್ತು ಮಾತನಾಡಲು ಅವಕಾಶವೇ ಇಲ್ಲ.

ಇಂಗ್ಲೇಂಡಿನ ಇತಿಹಾಸವನ್ನು ತಿಳಿಯಬೇಕೆಂದು ಸರ್ವರಿಗೂ ಕುತೂಹಲ. ಚರಿತ್ರೆಯನ್ನು ಓದಿ ತಿಳಿಯುವುದಕ್ಕಿಂತ ಪ್ರತ್ಯಕ್ಷ ಅನುಭವಿಗಳಿಂದ ಕೇಳಿದರೆ ಹೆಚ್ಚು ಸ್ವಾರಸ್ಯಕರವಾಗಿರುತ್ತದೆ.

ಸ್ವಾಗತ ಭಾಷಣ, ಆರಂಭ ಭಾಷಣಗಳು ಮುಗಿದನಂತರ ಅಧ್ಯಕ್ಷತೆ ವಹಿಸಿದ್ದ ರಾಜಗೋಪಾಲನು ಎದ್ದು ನಿಂತು, ಸಭಿಕರಿಗೆ ವಂದಿಸಿ, ತನ್ನ ಭಾಷಣವನ್ನು ಪ್ರಾರಂಭಮಾಡಿದ.

"ಮಾನ್ಯ ಸಹೋದರರೇ! ಈ ವಸ್ತುಪ್ರದರ್ಶನದ ಪಂಚಮ ವಾರ್ಷಿಕೋತ್ಸವವು ನಡೆಯುತ್ತಿರುವುದು ನನಗೆ ಹೆಚ್ಚಿನ ಸಂತೋಷವುಂಟು ಮಾಡಿದೆ. ವಸ್ತುಪ್ರದರ್ಶನಗಳಿಂದ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಅನುಭವವನ್ನು ಪಡೆಯಬಹುದು. ತಿಳುವಳಿಕೆಯನ್ನು ಹೆಚ್ಚಿಸಿ, ಬುದ್ಧಿಶೂನ್ಯರಾದವರನ್ನೂ ಬುದ್ಧಿವಂತರನ್ನಾಗಿ ಮಾಡುವುದರಲ್ಲಿ ಸಂದೇಹವಿಲ್ಲ. ನಮ್ಮ ದೇಶದ ವಸ್ತುಪ್ರದರ್ಶನಾಲಯಗಳಿಗಿಂತ ಇಂಗ್ಲೇಂಡ್ ದೇಶದ ಲಂಡನ್ ನಗರ

ದಲ್ಲಿರುವ ನಾನಾಬಗೆಯ ವಸ್ತುಪ್ರದರ್ಶನಾಲಯಗಳು ವಿದ್ಯಾರ್ಥಿವರ್ಗಕ್ಕೆ ಸಹಕಾರಿಯಾಗಿ ಅವರಿಗೆ ಜ್ಞಾನಾರ್ಜನೆಯುಂಟು ಮಾಡುವುದರಲ್ಲಿ ಸಂದೇಹ ವಿಲ್ಲ. ಆ ದೇಶದ ವಿವಿಧ ವಸ್ತುಪ್ರದರ್ಶನಾಲಯಗಳು ಮತ್ತು ಅವುಗಳಿಂದ ಪಡೆಯುವ ಪ್ರಯೋಜನವನ್ನು ಈಗ ಹೇಳುವೆನು."

'ಲಂಡನ್ ನಗರದಲ್ಲಿರುವ 'ಬ್ರಿಟಿಷ್ ಮ್ಯೂಜಿಯಂ' ಎಂಬುದು ಅತ್ಯಂತ ವಿಸ್ತಾರವುಳ್ಳದ್ದಾಗಿ ಜಗತ್ಪ್ರಸಿದ್ಧವಾಗಿದೆ. ಮಾನವರು ಈ ಜಗತ್ತಿನಲ್ಲಿ ನೆಲೆಗೊಂಡಂದಿನಿಂದ ಈವರೆವಿಗೆ ತಾವು ಏನೇನು ಗುರುತುಗಳನ್ನು ಬಿಟ್ಟು ಹೋಗಿರುವರೋ ಅವುಗಳಲ್ಲಿ ಮುಖ್ಯವಾದ ವಸ್ತುಗಳನ್ನು ಆ ಪ್ರದರ್ಶ ನಾಲಯಗಳಲ್ಲಿ ಇಟ್ಟಿರುವರಲ್ಲದೆ, ಕಾಲ, ದೇಶ, ವರ್ತಮಾನಗಳಿಗನುಸಾರ ಕ್ರಮಪ್ರಕಾರ ಜೋಡಿಸಿಟ್ಟಿರುವರು. ಪ್ರಪಂಚದ ವಿವಿಧ ರಾಷ್ಟ್ರಗಳ ಅಂದರೆ, ಅಮೆರಿಕಾ, ಜರ್ಮನಿ, ಜಪಾನ್, ಗ್ರೀಸ್, ಚೈನಾ, ಇಂಡಿಯಾ ಮತ್ತು ಇಟಲಿ ಇನ್ನೂ ಮುಂತಾದ ದೇಶಗಳ ಪೂರ್ವಿಕರ ನಾಗರೀಕತೆಯು ಹೇಗಿ ತ್ತೆಂಬುದನ್ನು ಆ ವಸ್ತುಪ್ರದರ್ಶನದಲ್ಲಿಟ್ಟಿರುವ ವಸ್ತುಗಳನ್ನು ನೋಡಿ ತಿಳಿಯ ಬಹುದು. ಆ ಪ್ರದರ್ಶನಾಲಯವು ಒಂದು ಚಿಕ್ಕ ಪ್ರಪಂಚದಂತೆಯೇ ಇದೆ. ಅಲ್ಲಿರುವ ಪುಸ್ತಕ ಭಂಡಾರವು ಪ್ರಪಂಚಕ್ಕೇ ದೊಡ್ಡದೆನಿಸಿಕೊಂಡಿರುವುದು. ಆ ದೇಶದಲ್ಲಿ ದಿನವಹಿ ಪ್ರಕಟವಾಗುವ ಪುಸ್ತಕಗಳನ್ನೆಲ್ಲಾ ಅಲ್ಲಿಗೆ ಕಳುಹಿಸ ಬೇಕೆಂಬ ನಿಯಮವಿದೆ. ವಿಸ್ತಾರವಾದ ಆ ಭಂಡಾರದಲ್ಲಿ ಪ್ರತಿಯೊಂದು ವಿಷಯದ ಮೇಲೆ ಬರೆದಿರುವ ಗ್ರಂಥಗಳು ನೂರಾರಿವೆ. ಲಕ್ಷಾಂತರ ಪುಸ್ತಕ ಗಳನ್ನು ಅಲ್ಮಾರುಗಳಲ್ಲಿ ಜೋಡಿಸಿಟ್ಟಿದ್ದರೂ, ಆಯಾ ವಿಷಯಗಳಿಗನುಸಾರ ವಾಗಿ ಜೋಡಿಸಿಟ್ಟಿರುವುದರಿಂದ, ಯಾವ ಗ್ರಂಥ ಬೇಕಾದರೂ ತಕ್ಷಣ ತೆಗೆದು ಕೊಳ್ಳಲು ಅನುಕೂಲವಾಗಿದೆ.

'ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಜಿಯಂನಲ್ಲಿ ಬ್ರಿಟಿಷ್ ಮ್ಯೂಜಿಯಂನಲ್ಲಿರುವಂತಹ ವಸ್ತುಗಳನ್ನು ಇಟ್ಟಿರುವರಾದರೂ ಮುಖ್ಯವಾಗಿ ಇಂಗ್ಲೇಂಡ್ ಮತ್ತು ಸ್ಕಾಟ್ಲೆಂಡ್ ದೇಶದ ನವನಾಗರೀಕತೆಗೆ ಸಂಬಂಧಪಟ್ಟ ವಸ್ತುಗಳು ವಿಶೇಷವಾಗಿವೆ. ಪುಸ್ತಕ ಭಂಡಾರವೂ ಸಹ ಇದೆ. ದರ್ಜಿ ಯವರು, ಚಿತ್ರಗಾರರು ಮತ್ತು ಇನ್ನಿತರ ಕೆಲಸಗಾರರು ಅಲ್ಲಿಗೆ ಬಂದು ಆಯಾ ವ್ಯವಹಾರಕ್ಕೆ ಸಂಬಂಧಪಟ್ಟವರು ಪೂರ್ವಿಕರು ಮಾಡಿಟ್ಟಿರುವ ಕೆಲಸಗಳ

ಮಾದರಿಯನ್ನು ನೋಡಿಕೊಂಡು ಹಿಂದಿರುಗುವರು. ಪುಸ್ತಕ ಭಂಡಾರದಲ್ಲಿ ವಿದ್ಯಾರ್ಥಿಗಳು ಪುಸ್ತಕಗಳನ್ನೂ, ಪತ್ರಿಕೆಗಳನ್ನೂ ಓದುತ್ತಿರುವರು. ವಿದ್ಯಾರ್ಥಿಗಳು ಪ್ರದರ್ಶನಾಲಯಕ್ಕೆ ಹೋಗಿ ವಸ್ತುಗಳ ಮುಂದೆ ನಿಂತು, ಪುಸ್ತಕಗಳಲ್ಲಿ ಬರೆದಿರುವ ಸಂಗತಿಗಳನ್ನು ಓದಿ, ಜ್ಞಾಪಕದಲ್ಲಿಟ್ಟುಕೊಳ್ಳುವರು. ದಿನವಹಿ ವಿದ್ಯಾರ್ಥಿಗಳ ತಂಡವು ಅಲ್ಲಿದ್ದೇ ಇರುತ್ತದೆ. ಆ ಮ್ಯೂಜಿಯಂ ಸುಮಾರು ಏಳು ಮೈಲಿಗಳ ಪ್ರದೇಶವನ್ನು ಆವರಿಸಿಕೊಂಡಿದೆ.

"ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಜಿಯಂ ಪಕ್ಕದಲ್ಲಿಯೇ 'ನ್ಯಾಚುರಲ್ ಹಿಸ್ಟರಿ ಮ್ಯೂಜಿಯಂ' ಎಂಬ ಮತ್ತೊಂದು ವಸ್ತು ಪ್ರದರ್ಶನಾಲಯವಿದೆ. ಅದರಲ್ಲಿಟ್ಟಿರುವ ವಸ್ತು ವಿಶೇಷಗಳೆಲ್ಲಾ ಜೀವಜಂತುಗಳಿಗೆ ಸಂಬಂಧಪಟ್ಟವೆ. ಜಗತ್ತಿನ ನಾನಾ ಭಾಗಗಳಲ್ಲಿ ಹಿಂದೆ ಇದ್ದ ಈಗ ಇರುವ ಮೃಗಪಕ್ಷಿಗಳ ಮತ್ತು ಜಲಚರಗಳ ಶವಗಳು ನಾಜೂಕಾಗಿ ಜೋಡಿಸಲ್ಪಟ್ಟು, ಆ ಪ್ರಾಣಿಗಳ ಪೂರ್ವೋತ್ತರಗಳನ್ನು ವಿವರವಾಗಿ ಚೀಟಿಗಳಲ್ಲಿ ಬರೆದು ಆಯಾ ಪ್ರಾಣಿಗಳ ಮುಂದಿಟ್ಟಿರುವರು. ಜಂತು ಶಾಸ್ತ್ರವನ್ನು ಓದುವ ವಿದ್ಯಾರ್ಥಿಗಳು ಆ ಪ್ರದರ್ಶನಾಲಯಕ್ಕೆ ಹೋಗಿ ಆ ಪ್ರಾಣಿ ವರ್ಗಗಳನ್ನು ನೋಡಿ, ತಾವು ಓದಿದುದನ್ನು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳುವರು. ಪ್ರಾಣಿ ಶಾಸ್ತ್ರಕ್ಕೆ ಸಂಬಂಧಪಟ್ಟ ಸಕಲ ವಿಷಯಗಳನ್ನೂ ಆ ಪ್ರದರ್ಶನಾಲಯವನ್ನು ನೋಡಿ ತಿಳಿಯಬಹುದು.

'ಆ ಮ್ಯೂಜಿಯಂನ ಪಕ್ಕದಲ್ಲಿಯೇ ಇನ್ನೊಂದು ಮ್ಯೂಜಿಯಂ ಇರುವುದು. ಅದರ ಹೆಸರು 'ಸೈನ್ಸ್ ಮ್ಯೂಜಿಯಂ'. ಆ ಮ್ಯೂಜಿಯಂನಲ್ಲಿ ಇದುವರೆವಿಗೆ ಕಂಡುಹಿಡಿಯಲ್ಪಟ್ಟಿರುವ ಯಂತ್ರ ವಿಶೇಷಗಳನ್ನೆಲ್ಲಾ ಇಟ್ಟಿರುವರು. ಪ್ರಥಮದಲ್ಲಿ ತಯಾರಾದ ಯಂತ್ರ, ಕಾಲಕ್ರಮೇಣ ತಯಾರಾದ ಯಂತ್ರಗಳನ್ನೆಲ್ಲಾ ಒಂದರ ಪಕ್ಕದಲ್ಲಿ ಮತ್ತೊಂದರಂತೆ ಜೋಡಿಸಿರುವರು. ಹಡಗನ್ನು ನಡೆಯಿಸುವ ಯಂತ್ರಗಳೂ, ಅಚ್ಚಿನ ಯಂತ್ರಗಳೂ, ನೇಯುವ, ಬರೆಯುವ ಮತ್ತು ಇನ್ನೂ ಅನೇಕಾನೇಕ ಯಂತ್ರಗಳೂ ಇಡಲ್ಪಟ್ಟಿವೆ. ಇಂಜನೀಯರಿಂಗ್ ವ್ಯಾಸಂಗದ ವಿದ್ಯಾರ್ಥಿಗಳು ಆ ಆಲಯಕ್ಕೆ ಹೋಗಿ ವ್ಯಾಸಂಗ ಮಾಡುವರಲ್ಲದೆ, ಕಣ್ಣಾರೆ ಯಂತ್ರ ವಿಶೇಷಗಳನ್ನು ಕಂಡು ಅನುಭವ ಪಡೆಯುವರು.

'ಇಂಪೀರಿಯಲ್ ಇನ್ಸ್ಟಿಟ್ಯೂಟ್' ಎಂಬ ಮತ್ತೊಂದು ಪ್ರದರ್ಶನಾಲಯವು 'ಸೈನ್ಸ್ ಮ್ಯೂಜಿಯಂ' ಹತ್ತಿರದಲ್ಲಿಯೇ ಇದೆ. ಆ ಪ್ರದರ್ಶನಾಲಯದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಒಳಪಟ್ಟಿರುವ ದೇಶಗಳಿಂದ ತಂದಿರುವ ವಸ್ತುಗಳನ್ನು ಜೋಡಿಸಿರುವರು. ಬ್ರಿಟಿಷ್ ಚಕ್ರಾಧಿಪತ್ಯಕ್ಕೊಳಪಟ್ಟಿದ್ದ ನಮ್ಮ ಭಾರತವು ಈಗ ಸ್ವತಂತ್ರರಾಷ್ಟ್ರವಾಗಿದೆ. ಆದರೂ ಆ ಮ್ಯೂಜಿಯಂನಲ್ಲಿ ಭಾರತ ದೇಶದ ವಸ್ತುಗಳು ಹೇರಳವಾಗಿವೆ. ಭಾರತದ ಉತ್ತರ ಪ್ರದೇಶ ಪ್ರಾಂತ್ಯಗಳ ಜನರ ನಾಗರೀಕತೆಯನ್ನು ತೋರಿಸುವ ವಸ್ತುಗಳು ಆ ಪ್ರದರ್ಶನಾಲಯದಲ್ಲಿವೆ. ಕಲ್ಲಿನಲ್ಲಿ, ಮರದಲ್ಲಿ ಮತ್ತು ಗಂಧದ ಮರದಲ್ಲಿ ಭಾರತೀಯರು ಮಾಡಿ ತೋರಿಸಿರುವ ಸುಂದರವಾದ ಚಿತ್ರಗಳು ವಿಶೇಷವಾಗಿವೆ. ಉಡುಗೆ, ತೊಡಿಗೆಗಳೂ, ಪಾತ್ರೆ ಪದಾರ್ಥಗಳೂ, ಆಯುಧಗಳೂ ಮತ್ತು ಇನ್ನೂ ಅನೇಕ ಬಗೆಯ ವಸ್ತುಗಳೂ ಆ ಪ್ರದರ್ಶನಾಲಯದಲ್ಲಿದೆ.

'ಇಷ್ಟು ಮಾತ್ರವಲ್ಲದೆ ಇನ್ನೂ ಅನೇಕ ದೊಡ್ಡ ಮತ್ತು ಚಿಕ್ಕ ಮ್ಯೂಜಿಯಂಗಳು ಆ ದೇಶದಲ್ಲಿ ಬೇಕಾದಷ್ಟಿವೆ. ಒಂದೊಂದು ಪ್ರದರ್ಶನಾಲಯದಿಂದ ನಾನಾಬಗೆಯ ಅನುಭವಗಳನ್ನು ಪಡೆಯಬಹುದು. 'ನ್ಯಾಷನಲ್ ಗ್ಯಾಲರಿ' ಮತ್ತು 'ಟೇಟ್ ಗ್ಯಾಲರಿ' ಎಂಬ ಹೆಸರುಳ್ಳ ಪ್ರದರ್ಶನಾಲಯಗಳಲ್ಲಿ ಇತರ ದೇಶಗಳಲ್ಲಿ ಮತ್ತು ಇಂಗ್ಲೇಂಡ್ ದೇಶದಲ್ಲಿ ಪ್ರಖ್ಯಾತರಾಗಿರುವ ಚಿತ್ರಗಾರರು ಬರೆದಿರುವ ಚಿತ್ರಗಳನ್ನು ಆ ದೇಶದ ಪ್ರಕಾರ ಸಾಲಾಗಿ ಜೋಡಿಸಿಟ್ಟಿರುವರು. ಒಂದೊಂದು ಚಿತ್ರಗಳ ಬೆಲೆ ಸಾವಿರಾರು ರೂಪಾಯಿಗಳಾಗುವುದು. ಅಲ್ಲಿರುವ ಚಿತ್ರಗಳಲ್ಲೆಲ್ಲಾ, ಏಸುಕ್ರಿಸ್ತನ ಜನನವನ್ನೂ ಮತ್ತು ಆತನ ತಾಯಿಯು ಮಗುವನ್ನೆತ್ತಿಕೊಂಡಿರುವ ಚಿತ್ರವು ಅತ್ಯಂತ ರಮಣೀಯವಾಗಿರುವುದಲ್ಲದೆ, ಕುಶಲ ವಿದ್ಯೆಯ ಪಾಂಡಿತ್ಯವನ್ನು ತೋರಿಸುವಂತಾದ್ದಾಗಿದೆ. ಉತ್ತಮ ಚಿತ್ರಗಳನ್ನು ಬರೆದವರಿಗೆ ಬಹುಮಾನವನ್ನೂ ಕೊಡುವರು. ಚಿತ್ರಗಾರರಿಗೆ ಆ ದೇಶದಲ್ಲಿ ವಿಶೇಷ ಪ್ರೋತ್ಸಾಹವಿದೆ.

'ಜೂ ಅಲಾಜಿಕಲ್ ಗಾರ್ಡನ್ಸ್'ಎಂಬ ವಸ್ತುಪ್ರದರ್ಶನದಲ್ಲಿ ಪ್ರಪಂಚದ ಪ್ರಾಣಿಗಳನ್ನೆಲ್ಲಾ ಇಟ್ಟಿರುವರು. ಆಯಾ ಪ್ರಾಣಿಗಳ ಆಹಾರ, ಉತ್ಪತ್ತಿ ಮುಂತಾದ ವಿವರಗಳನ್ನೆಲ್ಲಾ ಬರೆದು ತೋರಿಸಿರುವರು. ಅದನ್ನು 'ರಾಯಲ್ ಜೂ ಅಲಾಜಿಕಲ್ ಸೊಸೈಟಿ'ಯವರು ಏರ್ಪಡಿಸಿರುವರು.

'ಜಿಯಾಲಾಜಿಕಲ್ ಸೊಸೈಟಿ'ಯವರು ಏರ್ಪಡಿಸಿರುವ 'ಜಿಯಾಲಾಜಿಕಲ್ ಮ್ಯೂಜಿಯಂ' ಸೊಗಸಾದ ವಸ್ತುಪ್ರದರ್ಶನ. ಆ ಪ್ರದರ್ಶನಾಲಯದಲ್ಲಿ ಭೂಮಿಯೊಳಗೆ ದೊರೆಯುವ ಲೋಹಗಳನ್ನೂ, ಕಲ್ಲುಗಳನ್ನೂ, ಧಾತುಗಳನ್ನೂ ಇಟ್ಟಿರುವರಲ್ಲದೆ, ಬಹುಕಾಲದ ಹಿಂದೆ ಬದುಕಿದ್ದು, ಸತ್ತು ಭೂಗತವಾದ ಪ್ರಾಣಿಗಳ ಶಿಲಾಮಯವಾದ ಶರೀರಗಳನ್ನೂ, ಇನ್ನೂ ಅನೇಕ ಬಗೆಯ ವಸ್ತು ಸಾಮಗ್ರಿಗಳನ್ನು ಅಲ್ಲಿಟ್ಟಿರುವರು.

'ಮಾನವರಿಗೆ ಬರುವ ರೋಗಗಳ ದೆಶೆಯಿಂದ ಉಂಟಾಗುವ ಅಂಗಗಳ ವ್ಯವಸ್ಥೆ, ಶರೀರ ರಚನೆ, ಇನ್ನೂ ಮುಂತಾದ ವಸ್ತು ಪರಿಚಯಗಳ 'ಮ್ಯೂಜಿಯಂ' ಅನ್ನು 'ರಾಯಲ್ ಕಾಲೇಜ್ ಆಫ್ ಫಿಜಿರ್ಷಸ್' ಎಂಬ ಪ್ರಖ್ಯಾತ ವೈದ್ಯ ಮಂಡಳಿಯವರು ಏರ್ಪಡಿಸಿರುವರು.

'ಆ ದೇಶದ ಭಾರಿ ವರ್ತಕರ ಅಂಗಡಿಗಳನ್ನು ನೋಡಿದರೆ ಪ್ರದರ್ಶನಾಲಯಗಳಂತೆಯೇ ತೋರುವುದು. ಕ್ರಿಸ್‌ಮಸ್ ಹಬ್ಬದ ಕಾಲದಲ್ಲಿ ಅಥವಾ ಜರ್ೂ ತಿಂಗಳಿನಲ್ಲಿ 'ಆಕ್ಸ್‌ಫರ್ಡ್ ಸ್ಟ್ರೀಟ್' 'ಬಾಂಡ್ ಸ್ಟ್ರೀಟ್' ಮತ್ತು 'ರೀಜಂಟ್ ಸ್ಟ್ರೀಟ್' ಪೇಟೆಗಳಲ್ಲಿರುವ ಅಂಗಡಿಗಳನ್ನು ನೋಡಿದರೆ ಒಂದೊಂದೂ, ಒಂದೊಂದು ವಸ್ತುಪ್ರದರ್ಶನಾಲಯದಂತೆ ತೋರುವುದು. ಬೆಳಗಿನ ವೇಳೆ ಮತ್ತು ಸಂಜೆಯ ವೇಳೆ ನೋಡಿದರೆ ಪ್ರಪಂಚವನ್ನೇ ಮರೆಯುವಂತಾಗುವುದು.

'ಕಲೆಕ್ಷನ್' ಎಂಬ ಹೆಸರಿನ ಮ್ಯೂಜಿಯಂಗಳೂ ಲಂಡನ್ ನಗರದಲ್ಲಿವೆ. ಶ್ರೀಮಂತರು ವಿವಿಧ ದೇಶಗಳನ್ನು ಸಂಚಾರ ಮಾಡಿದಾಗ ತಂದ ಮತ್ತು ತರಿಸಿದ ನೂತನ ವಸ್ತುಗಳನ್ನು ತಮ್ಮ ಮನೆಯಲ್ಲಿಟ್ಟುಕೊಂಡಿರುತ್ತಾರೆ. ಆ ವಸ್ತುಗಳು ಪ್ರಜಾಭಿವೃದ್ಧಿಗೆ ಅನುಕೂಲವೆಂದು ಕಂಡು ಬಂದರೆ ತಾವು ಸತ್ತ ನಂತರ ಆ ವಸ್ತುಗಳಿಗೆ ಒಂದು ಮ್ಯೂಜಿಯಂ ಏರ್ಪಡಿಸುವಂತೆ ಮರಣಶಾಸನವನ್ನು ಬರೆದಿಡುವರು. ಅಂತಹ ಮ್ಯೂಜಿಯಂಗಳು ಹಲವಾರಿವೆ.

'ಆ ಪ್ರದರ್ಶನಾಲಯಗಳ ಬಗ್ಗೆ ಉಪನ್ಯಾಸಗಳು ಏರ್ಪಟ್ಟಿವೆ, ಅದಕ್ಕೆ ಸಂಬಂಧಪಟ್ಟ ವಸ್ತುಗಳನ್ನಾಗಲಿ, ಅಥವಾ ಚಿತ್ರಗಳನ್ನಾಗಲಿ, ತೋರಿಸುವ ವಾಡಿಕೆಯು ಆ ದೇಶದಲ್ಲಿದೆ. ಅದರಿಂದ ಸಭಿಕರಿಗೆ ತಿಳುವಳಿಕೆಯು ಹೆಚ್ಚು

ವುದು. ಯಾವ ವಿಷಯದ ಮೇಲೆ ಉಪನ್ಯಾಸ ಮಾಡಲಿ, ಆ ವಿವರವನ್ನು ನಕ್ಷೆ ತಪ್ಪಿದರೆ ಚಿತ್ರಗಳ ಮೂಲಕ ತೋರಿಸುವರು.

'ಮಾನ್ಯ ಸಹೋದರ ಸಮಾನರಾದ ಬಂಧು ಮಿತ್ರರೇ ! ಇಂಗ್ಲೆಂಡ್ ದೇಶವ ಪ್ರದರ್ಶನಾಲಯಗಳೂ, ಅವುಗಳ ಅಭಿವೃದ್ಧಿ ಮಾರ್ಗ ಮತ್ತು ಅವುಗಳಿಂದ ದೊರೆಯುವ ಪ್ರಯೋಜನವು ಈ ರೀತಿಯಿದೆ. ಪ್ರತಿಯೊಂದು ಅಂಶಗಳಿಂದಲೂ ತಿಳುವಳಿಕೆಯನ್ನು ಪಡೆಯುಬಹುದು. ನಮ್ಮ ದೇಶದಲ್ಲಿ ಅಂತಹ ಮ್ಯೂಜಿಯಂಗಳು ಅತ್ಯಾವಶ್ಯಕವಾಗಿರಬೇಕು. ಈಗಾಗಲೇ ಆ ವಿಧದಲ್ಲಿ ವಿಶೇಷ ಮುಂದುವರಿದಿದೆಯಾದರೂ, ಇನ್ನೂ ಎಷ್ಟೋ ಭಾಗಗಳಲ್ಲಿ ಮುಂದುವರಿಯಬೇಕಾಗಿದೆ. ನೂರಾರು ಪ್ರದರ್ಶನಾಲಯಗಳು ಉದ್ಭವವಾಗಿ, ನಮ್ಮವರು ಇಂಗ್ಲೇಂಡಿಗೆ ಹೋಗಿ ತಿಳುವಳಿಕೆ, ಜ್ಞಾನ ಪಡೆಯುವುದು ತಪ್ಪಿ, ಅಲ್ಲಿನವರೇ ಇಲ್ಲಿಗೆ ಬಂದು ಜ್ಞಾನಾರ್ಜನೆ ಪಡೆಯುವಂತಾಗಲಿ. ನಮ್ಮ ಭಾರತವು ಎಲ್ಲಾ ವಿಧದಲ್ಲಿಯೂ ಮುಂದುವರಿದು, ಇತರ ದೇಶದವರಿಗೆ ಮಾರ್ಗದರ್ಶಕವಾಗಲಿ. ಇನ್ನು ಹೆಚ್ಚು ಹೇಳಿ ತಮ್ಮೆಲ್ಲರ ಮನಸ್ಸಿಗೆ ಬೇಸರವುಂಟು ಮಾಡಲಾರೆ. ತಾವೆಲ್ಲರೂ ಶಾಂತರೀತಿಯಿಂದ ಈ ಪಾಮರನ ಭಾಷಣವನ್ನು ಆಲೈಸಿ ಕೇಳಿದ್ದಕ್ಕಾಗಿ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ಅನಂತ ಧನ್ಯವಾದಗಳು ಸಲ್ಲಿವೆ. ಈ ಸಮಾರಂಭದ ವ್ಯವಸ್ಥಾಪಕರಿಗೂ, ಮತ್ತು ಬಳಗ ವೃಂದಕ್ಕೂ ನನ್ನ ವಂದನೆಗಳು ಅರ್ಪಿತವಾಗಿವೆಯೆಂದು ತಿಳಿಸಿ ಈ ಸನ್ನ ಭಾಷಣವನ್ನು ಮುಕ್ತಾಯ ಮಾಡುವೆನು. ಜೈ ಹಿಂದ್"

ಭಾಷಣವು ಮುಗಿಯುತ್ತಲೇ ಸಭೆಯಲ್ಲಿ ಕರತಾಡನವಾಯಿತು.

ಇಂಗ್ಲೇಂಡಿನ ವಸ್ತುಪ್ರದರ್ಶನಗಳ ವಿಷಯವನ್ನು ಮಾತ್ರ ಕೇಳಲು ಬಂದಿದ್ದ ಪತ್ತೇದಾರರು ಮುಕ್ತಾಯ ಭಾಷಣವನ್ನು ಕೇಳಲಿಷ್ಟಪಡದೆ ಅಲ್ಲಿಂದ ಹೊರಟರು.

ಅಲ್ಲಿ ಸೇರಿದ್ದವರಲ್ಲಿ ಬಹು ಜನರು ಪರಿಚಿತರಿದ್ದರೂ, ಯಾರೊಡನೆಯೂ ಮಾತನಾಡಲಿಲ್ಲ. ಅವರು ವೇಷಾಂತರದಲ್ಲಿದ್ದ ಪ್ರಯುಕ್ತ ಇತರರೂ ಅವರನ್ನು ಗುರುತಿಸಿ ಮಾತನಾಡಿಸಲಿಲ್ಲ.

"ಹಿಂದೆ ಬೆಂಗಳೂರಿನಲ್ಲಿ ನಡೆದ *ಮೋಹಿನಿ ಕೊಲೆ ಮೊಕದ್ದಮೆಯ ಸಂಬಂಧದಲ್ಲಿ ನೀನು ಇಂಗ್ಲೇಂಡಿಗೆ ಹೋಗಿದ್ದಾಗ, ರಾಜಗೋಪಾಲನು ಹೇಳಿದ ವಸ್ತುಪ್ರದರ್ಶನಾಲಯಗಳನ್ನೆಲ್ಲಾ ಸಂದರ್ಶಿಸಿದ್ದೆಯಾ ?"

—ಎಂದು ಮಾರ್ಗ ಮಧ್ಯದಲ್ಲಿ ರಾಮನಾಥನು ಪುರುಷೋತ್ತಮನಿಗೆ ಪ್ರಶ್ನಿಸಿದ.

"ನಾನು ಪ್ರತಿಯೊಂದು ವಸ್ತುಪ್ರದರ್ಶನಗಳನ್ನು ನೋಡಿದೆನಾದರೂ, ಈ ರೀತಿ ಸಂಪೂರ್ಣವಾಗಿ ನೋಡಿ ತಿಳಿಯಲು ಅವಕಾಶವಾಗಲಿಲ್ಲ. ನಾನು ಹೋಗಿದ್ದ ಕೆಲಸವೇ ಬೇರೆ. ರಾಜಗೋಪಾಲನ ಕೆಲಸವೇ ಬೇರೆ. ಆತನು ಹತ್ತು ವರ್ಷಗಳು ಅಲ್ಲಿದ್ದನು. ನಾನು ಮೂರು ತಿಂಗಳೂ ಇರಲಿಲ್ಲ. ಅಷ್ಟರಲ್ಲಿ ಸಾಧ್ಯವಾದಷ್ಟು ನೋಡಿರುವೆನು"

—ಎಂದು ಉತ್ತರವಿತ್ತ ಪುರುಷೋತ್ತಮ.

ಇಬ್ಬರೂ ಹಾಗೇ ಮಾತನಾಡುತ್ತಾ ಪೋಲೀಸ್ ಠಾಣೆಗೆ ಹೋದರು.

ಅಲ್ಲಿದ್ದ ಇನ್ಸ್ಪೆಕ್ಟರನು ಇಬ್ಬರಿಗೂ ವಂದಿಸಿ ಕುಳಿತುಕೊಳ್ಳುವಂತೆ ಹೇಳಿ, ತನ್ನಲ್ಲಿಗೆ ಬಂದ ಕಾರಣವನ್ನು ವಿಚಾರಿಸಿದ.

"ಅನ್ನದಾನಪ್ಪನವರು ಹಲವು ದಿನಗಳಿಂದ ಪತ್ತೆಯಿಲ್ಲ. ಅವರ ಮನೆಯವರು ಆ ಬಗ್ಗೆ ಉದಾಸೀನರಾಗಿರುವುದು ಆಶ್ಚರ್ಯವೇ ಸರಿ. ನೀವು ಮನೆಯವರನ್ನು ಇಲ್ಲಿಗೆ ಕರೆಯಿಸಿ ವಿಚಾರಿಸಿ. ಬಾಲಕೃಷ್ಣನೂ ಸಹ ಕಣ್ಮರೆಯಾಗಿರುವನು. ಆ ಪ್ರಸಂಗವೂ ಸಹ ಸೋಜಿಗವೇ ಆಗಿದೆ. ಆತನಿಗೆ ಸ್ವಂತ ಮೋಟಾರ್ ಸೈಕಲ್ಲಿದೆ. ಅದರ ನಂಬರನ್ನು ನಾವು ಬರೆದುಕೊಂಡಿರುವೆವು. ಸೈಕಲ್ ಮೋಟಾರು ಈಗ ಯಾರ ಸ್ವಾಧೀನದಲ್ಲಿದೆಯೆಂಬುವರ ಬಗ್ಗೆ ತನಿಖೆ ನಡೆಯಿಸಿ, ತಿಳಿದುಕೊಳ್ಳಿ. ಮುಂದಿನ ಕಾರ್ಯವನ್ನು ನಾವು ನೋಡಿಕೊಳ್ಳುವೆವು"

—ಎಂದು ಹೇಳಿದ ಪುರುಷೋತ್ತಮ.

"ಅಷ್ಟುಮಾತ್ರವೇ ? ಆಗಲಿ. ನಿಮ್ಮ ಕಾರ್ಯವು ಎಲ್ಲಿಯವರೆವಿಗೆ ಬಂದಿದೆ ?"

---

* ಕಾಸಿಗಾಗಿ ಕೊಲೆಯೇ....? ಪುರುಷೋತ್ತಮನ ಹತ್ತೊಂಭತ್ತನೆಯ ಸಾಹಸ.

—ಎಂದು ಉತ್ತರವಿತ್ತು ಪ್ರಶ್ನಿಸಿದ ಚಂದ್ರನಾಥ.

"ಆ ಪ್ರಯತ್ನದಲ್ಲಿಯೇ ಇರುವೆವು. ಇದುವರೆವಿಗೆ ಯಾವುದೊಂದು ಘಟ್ಟವನ್ನೂ ಮುಟ್ಟಿಲ್ಲ"

"ಈಗ ಎಲ್ಲಿಂದ ಬರುತ್ತಿರುವಿರಿ?"

ಪುರುಷೋತ್ತಮನು ತಾವು ಎಲ್ಲಿಂದ ಬಂದೆವೆಂದು ತಿಳಿಸಿದ.

"ಪತ್ತೇದಾರರೇ! ರಾಜಗೋಪಾಲನು ಅದೃಷ್ಟಶಾಲಿಯೇ ಸರಿ. ಇಂಗ್ಲೇಂಡಿನಲ್ಲಿ ಹತ್ತು ವರ್ಷಗಳಿದ್ದು ಬೇಕಾದ ಅನುಭವವನ್ನು ಪಡೆದು ಬಂದಿರುವನು. ಬೇಕಾದಷ್ಟು ಹಣವಿದೆ, ಆಸ್ತಿಯಿದೆ. ತನ್ನ ತಂದೆತಾಯಿಯರಿಗೆ ಒಬ್ಬನೇ ಮಗ. ಆಸ್ತಿಯಲ್ಲಿ ಪಾಲು ಬೇಕೆಂದು ಕೇಳುವವರು ಮತ್ತೊಬ್ಬರಿಲ್ಲ. ಸ್ವರ್ಗಸಮಾನವಾದ ಸುಖ ವೈಭವಗಳನ್ನು ಅನುಭವಿಸುತ್ತಿರುವನು. ಅಂತಹ ಸುಖ ಭೋಗಗಳನ್ನನುಭವಿಸಲು ಪೂರ್ವಜನ್ಮದ ಯೋಗವಿರಬೇಕು"

ಪುರುಷೋತ್ತಮನು ನಕ್ಕು—

"ಯೋಗಿ ಪಡೆದದ್ದು ಯೋಗಿಗೆ. ಜೋಗಿ ಪಡೆದದ್ದು ಜೋಗಿಗೆ" ಎಂದು ಹೇಳಿದ.

ಚಂದ್ರನಾಥನೂ ಸಹ ಹುಸಿನಕ್ಕು ಯಾಮಿಕನ ಸಂಗಡ ಕಾಫಿ ತರಿಸಿದ.

ಮೂವರೂ ನಡೆದಿರುವ ವಿಚಿತ್ರ ಕೊಲೆಗಳ ವಿಷಯವಾಗಿಯೇ ಮಾತನಾಡುತ್ತಾ ಕಾಫಿಯನ್ನು ಕುಡಿದರು.

ಬಳಿಕ ಪತ್ತೇದಾರರು ಚಂದ್ರನಾಥನಿಂದ ಬೀಳ್ಕೊಂಡು ಅಲ್ಲಿಂದ ಹೊರಟರು. ಹಿಂದಿರುಗುವಾಗ ಪುರುಷೋತ್ತಮನು ಇನ್ಸ್‌ಪೆಕ್ಟರನಿಗೆ ಎಚ್ಚರಿಸದಿರಲಿಲ್ಲ.

೧೦

ತನ್ನಲ್ಲಿಗೆ ಪಾರ್ಸೆಲ್ ಮೂಲಕ ಬಂದ ವಿರೂಪಗೊಳಿಸಲ್ಪಟ್ಟ ಶವಕ್ಕೂ, ಡಾಕ್ಟರ್ ರಾಘವಾಚಾರ್ಯನಿಗೂ, ಅವರಿಬ್ಬರನ್ನು ಕೊಲೆಮಾಡಿ ತನ್ನ ಸಾಹಸವನ್ನು ಪ್ರಕಟಿಸಿಕೊಂಡಿರುವ ಕೊಲೆಗಾರನಿಗೂ ಯಾವುದಾದರೊಂದು ಬಗೆಯಲ್ಲಿ ಸಂಬಂಧವಿದೆಯೆಂದು ಊಹೆ ಮಾಡಿಕೊಂಡಿರುವ ಪುರುಷೋತ್ತಮನು ಆ ಬಗ್ಗೆ ತನ್ನ ತನಿಖೆಯನ್ನು ಮುಂದುವರಿಸಿದ.

ಡಾಕ್ಟರ್ ಪತ್ನಿ ಅನುಪಮೆಯಿಂದ ತನಗೆ ಬೇಕಾದ ವಿಷಯಗಳನ್ನು ಕೇಳಿ ತಿಳಿದಿರುವನಾದ್ದರಿಂದ ಆ ಮೂಲಕ ತನಿಖೆಯನ್ನು ಮುಂದುವರಿಸಿದರೆ ಅಪರಾಧಿ ಯಾರೆಂದು ತಿಳಿಯುವುದೆಂದು ಪುರುಷೋತ್ತಮನ ಮನೋನಂಬಿಕೆಯಾಗಿದೆ.

ಒಂದೊಂದು ಸಾರಿ ಅಪರಿಚಿತ ವ್ಯಕ್ತಿಯ ನೆನಪು ಬಂದು ಮೂರು ದಿನಗಳಿಂದ ಡಾಕ್ಟರಲ್ಲಿ ಬಂದು ಹೋಗುತ್ತಿದ್ದ ವ್ಯಕ್ತಿ ಯಾರಿರಬಹುದು? ಕೊಲೆಗಾರನೇ ಇರಬಹುದೇ? ಅಥವಾ ಆತನಿಂದ ಪ್ರೇರೇಪಿತನಾದ ವ್ಯಕ್ತಿ ಇರಬಹುದೇ? ಅಪರಿಚಿತ ವ್ಯಕ್ತಿಯೆಂದರೆ ಸಂಬಂಧವಿಲ್ಲದವನಾದನು. ಸಂಬಂಧವಿಲ್ಲದವನು ಕೊಲೆ ಮಾಡಿರುವನೆಂದರೆ ಯಾವ ಲಾಭಕ್ಕಾಗಿ ಕೊಲೆ ಮಾಡುವನು? ಸೂಕ್ಷ್ಮವಾಗಿ ಪರ್ಯಾಲೋಚಿಸಿ ನೋಡಿದರೆ ಡಾಕ್ಟರನ್ನು ಕೊಲೆ ಮಾಡಿದ ವ್ಯಕ್ತಿಯು ಡಾಕ್ಟರಿಗೆ ಅಪರಿಚಿತನಾದರೂ, ಅವರ ಪರಿಚಿತನೊಬ್ಬನಿಂದ ಪ್ರೇರೇಪಿತನಾಗಿ ಅವರನ್ನು ಕೊಲೆ ಮಾಡಿರುವನೆಂದು ಹೇಳಬಹುದು.

ಎರಡು ಕೊಲೆಗಳಲ್ಲಿ ಒಂದಕ್ಕೊಂದು ಸಂಬಂಧವಿದ್ದೇ ಇದೆ. ಕೊಲೆ ಮಾಡಿದ ವ್ಯಕ್ತಿಯು ಡಾಕ್ಟರ ಪತ್ನೀಪುತ್ರರಿಗೆ ಅಪರಿಚಿತನಾಗಿ, ಡಾಕ್ಟರಿಗೆ ಪರಿಚಿತ ವ್ಯಕ್ತಿಯಾಗಿರಬಾರದೇಕೆ? ಆವರೆವಿಗೆ ಮನೆಗೆ ಬಾರದೆ ಆಗ ಬಂದು ಹೋಗುತ್ತಿರಬಹುದು. ಆ ಪ್ರಯುಕ್ತ ಡಾಕ್ಟರರ ಮನೆಯವರಿಗೆ ಅಪರಿಚಿತ ನಾಗಿ ಕಂಡಿರಬಹುದು.

ಇವೇ ಮುಂತಾದ ಯೋಚನೆಗಳು ಪುರುಷೋತ್ತಮನ ತಲೆಯಲ್ಲಿ ಸೇರಿಕೊಂಡು, ಮೊದಲು ದಾಸಪ್ಪನವರ ಚಲನವಲನಗಳನ್ನರಿಯುವುದು ಸೂಕ್ತವೆಂದುಕೊಂಡನು.

ದಾಸಪ್ಪನವರ ಪರಿಚಯವು ರಾಜಗೋಪಾಲನಿಗಾಗಿ ಏರ್ಪಡಿಸಿದ್ದ ಗೌರವ ಸತ್ಕಾರ ಕೂಟದಲ್ಲಿಯೇ ಉಂಟಾಗಿದೆ. ಈಗ ಕಣ್ಮರೆಯಾಗಿರುವ ಅನ್ನದಾನಪ್ಪನವರೇ ಅವರ ಪರಿಚಯ ಮಾಡಿಕೊಟ್ಟಿರುವರು.

ದಾಸಪ್ಪನವರಿಗೂ, ಡಾಕ್ಟರಿಗೂ ಇಸ್ಪೀಟಾಡುವಾಗ, ಸಣ್ಣ ವಿಷಯಕ್ಕಾಗಿ ಉಂಟಾದ ಮನಸ್ತಾಪವು ದೊಡ್ಡದಾಗಿ ಬೆಳೆದು ಕೊನೆಯವರೆ ವಿಗೆ ಪ್ರಬಲ ವೈರಿಗಳಾಗಿಯೇ ಉಳಿದರು.

ದಾಸಪ್ಪನವರ ಬಸ್ ಡ್ರೈವರನು ಒಂದು ಸಾರಿ ಡಾಕ್ಟರ ಬಳಿಯಲ್ಲಿ ಕೆಲಸಕ್ಕಿರುವ ಕಾಂಪೌಂಡರನಿಗೆ ಹೊಡೆದ ಪ್ರಯುಕ್ತ, ತಮ್ಮವರ ಪರ ವಹಿಸಿ ಇಬ್ಬರು ಶ್ರೀಮಂತರೂ ಕೋರ್ಟ್ ಕಛೇರಿಗಳನ್ನೇರಿ ಒಬ್ಬರನ್ನೊಬ್ಬರು ಗೆಲ್ಲ ಬೇಕೆಂಬ ಹುರುಪಿನಿಂದ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿರುವರು.

'ದಂಡ, ದ್ರೋಹಕೆ ಉಂಟು, ಪುಂಡು ಪೋಕರಿಗುಂಟು, ಹೆಂಡತಿ, ಮಕ್ಕಳಿಗಿಲ್ಲ ಈ ಕಾಲ' ಎಂದು ಹೇಳುವುದಿಲ್ಲವೇ ? ಹಾಗೆ.

ಒಬ್ಬರ ನಿರ್ನಾಮವಾಗದ ವಿನಃ ಇನ್ನೊಬ್ಬರಿಗೆ ಸಮಾಧಾನವಿರಲಿಲ್ಲ.

ಹಲವರು ಅವರಿಬ್ಬರಿಗೆ ರಾಜಿ ಮಾಡಿಸಲು ಪ್ರಯತ್ನಪಟ್ಟು ನಿರಾಶರಾಗಿ ರುವರು.

ಈಗ ಡಾಕ್ಟರಿಲ್ಲ. ಕೊಲೆಯಾಗಿ ಹಲವು ದಿನಗಳಾಗಿವೆ. ಅವರಿಬ್ಬರ ಮನಸ್ತಾಪವನ್ನು ಅನುಪಮೆಯ ಮೂಲಕ ಕೇಳಿ ತಿಳಿದಿರುವ ಪುರುಷೋ

ತ್ರಮನು ದಾಸಪ್ಪನವರ ಮೇಲೆ ಸಂದೇಹಗೊಂಡು ಅವರನ್ನು ಪರೀಕ್ಷಿಸಲು ಹೊರಟಿರುವನು.

ಆ ವೇಳೆಯಲ್ಲಿ ರಾಮನಾಥನು, ಬಾಲಕೃಷ್ಣನ ಪರಿಶೋಧನೆಯಲ್ಲಿ ನಿರತನಾಗಿದ್ದುದರಿಂದ, ಪುರುಷೋತ್ತಮನು ಒಂಟಿಯಾಗಿರುವನು.

ದಾಸಪ್ಪನವರ ಮನೆಯ ಬಳಿಗೆ ಹೋಗಿ ನೋಡಲು ಮನೆಗೆ ಬೀಗ ಹಾಕಿತ್ತು.

ಬಾಗಿಲಿಗೆ ಹಾಕಿದ್ದ ನಾಲ್ಕಾರು ಬೀಗಗಳನ್ನು ನೋಡಿ, ದಾಸಪ್ಪ ನವರು ಈ ನಗರದಲ್ಲಿರಲಾರರೆಂದು ಭಾವಿಸಿದ ಪುರುಷೋತ್ತಮನು ವಿಷಯ ವನ್ನರಿಯುವ ಕುತೂಹಲವುಳ್ಳವನಾಗಿ, ಅಕ್ಕಪಕ್ಕದ ಮನೆಯವರನ್ನು ವಿಚಾ ರಿಸಲು, ಅವರು ಮಗನ ಮದುವೆಗಾಗಿ ಚಂದ್ರನಗರಕ್ಕೆ ಹೋಗಿರುವರೆಂದು ತಿಳಿಯಿತು. ಸೋಜಿಗನಾದ ಪತ್ತೇದಾರನು ಎಂದು ಹೋದರೆಂದು ವಿಚಾರಿ ಸಲು, ಕೇವಲ ಎರಡು ದಿನಗಳಾಯಿತೆಂದು ಗೊತ್ತಾಯಿತು

ಬಾಲಕೃಷ್ಣನ ಮೇಲೆ ಅನುಮಾನಗೊಂಡಿದ್ದಕ್ಕೆ ಆತನು ಪತ್ತೆಯಿಲ್ಲ. ಅನ್ನದಾನಪ್ಪನವರ ಚಲನ ವಲನಗಳನ್ನರಿಯಬೇಕೆಂದರೆ ಅವರು ಇದ್ದಕ್ಕಿದ್ದ ಹಾಗೆಯೇ ಕಣ್ಮರೆಯಾಗಿರುವರು. ದಾಸಪ್ಪನವರಮೇಲೆ ಅನುಮಾನಗೊಂಡು, ಅವರನ್ನು ಕಾಣುವುದಕ್ಕೆಂದು ಬಂದರೆ ಅವರು ಮಗನ ಮದುವೆಗೆ ಹೋಗಿ ರುವರು. ಈ ಮೂವರಲ್ಲಿ ಯಾರನ್ನು ಅಪರಾಧಿಯೆಂದು ತೀರ್ಮಾನಿಸಲು ಸಾಧ್ಯ?

ಬಂದ ಕಾರ್ಯವು ಪೂರ್ಣವಾಗಲಿಲ್ಲವೆಂದರಿತ ಪುರುಷೋತ್ತಮನು ಹಾಗೇ ಹಿಂದಿರುಗಿದ.

ಚಂದ್ರನಗರಕ್ಕೇ ಹೋಗಿ ದಾಸಪ್ಪನವರನ್ನು ಕಾಣಬೇಕೆಂದು ಯೋಚಿಸಿ ಕೊಂಡನಾದರೂ, ಅಲ್ಲಿಗೆ ಹೋಗಲು ಮನವೊಡಂಬಡಲಿಲ್ಲ.

ಪುರುಷೋತ್ತಮನ ಸಲಹೆಯಂತೆ ಸೈಕಲ್‌ಮೋಟಾರನ್ನು ಹಿಡಿಯಲು ನಿಯಮಿತನಾದ ಇನ್ಸ್‌ಪೆಕ್ಟರನು, ಯಾವಿಕರಿಗೆಲ್ಲಾ ಆ ನಂಬರನ್ನು ತಿಳಿಸಿ, ವಾಹನದ ಸಮೇತ ಮಾಲೀಕನನ್ನು ತನ್ನಲ್ಲಿಗೆ ಕರೆತರುವಂತೆ ಅಜ್ಞೆ ಮಾಡಿದ.

ಎಲ್ಲೆಲ್ಲಿಯೂ ಸಿ. ಐ. ಡಿ.ಗಳು ತುಂಬಿಕೊಂಡಪ್ರಯುಕ್ತ ಒಂದು ಘಂಟೆಯೊಳಗಾಗಿ ಆ ಮೋಟಾರ್ ಸೈಕಲ್ಲನ್ನು ಪತ್ತೆಮಾಡಿ ಹಿಡಿದು ಮಾಲೀಕನ ಸಮೇತ ಪೋಲೀಸ್‌ಠಾಣೆಗೆ ಕರೆದುಕೊಂಡು ಬಂದರು.

ಇನ್ಸ್‌ಪೆಕ್ಟರನು ಆತನಾರೆಂದು ನೋಡಲು, ಅವನು ಬಾಲಕೃಷ್ಣನಾಗಿರದೆ ತನ್ನ ಬಾಲ್ಯಸ್ನೇಹಿತನಾದ ಪದ್ಮಾಚಾರಿಯಾಗಿರುವನು.

ಇನ್ಸ್‌ಪೆಕ್ಟರನು ತನ್ನ ಸ್ನೇಹಿತನನ್ನು ನೋಡಿ ಹರ್ಷದಿಂದ ಹಸ್ತಲಾಘವವನ್ನಿತ್ತು, ಕುಳಿತುಕೊಳ್ಳುವಂತೆ ಹೇಳಿ, ಬಳಿಕ ಸೈಕಲ್ ಮೋಟಾರಿನ ನಂಬರನ್ನು ನೋಡಿದ.

ಪುರುಷೋತ್ತಮನು ಹೇಳಿದ ನಂಬರೇ ಆಗಿದೆ. ಬಾಲಕೃಷ್ಣನು ಈ ವೇಷ ತಾಳಿರಬಹುದೇ? ಎಂದು ಯೋಚಿಸಿ ಪದ್ಮಾಚಾರಿಯ ಮುಖವನ್ನು ಎವೆಯಿಕ್ಕದೆ ನೋಡಿದ.

ಸೋಜಿಗನಾದ ಪದ್ಮಾಚಾರಿಯು—

"ಹಾಗೇಕೆ ನೋಡುತ್ತಿರುವೆ? ನನ್ನ ಮುಖದಲ್ಲೇನು ಅಂತಹ ವಿಶೇಷವಿದೆ? ಪೋಲೀಸಿನವರೇಕೆ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದರು?" ಎಂದು ಪೂರ್ವ ಪರಿಚಯದ ಸಲಿಗೆಯಿಂದಲೇ ಕೇಳಿದ.

"ಈ ಸೈಕಲ್ ಮೋಟಾರು ನಿನ್ನದೇ? ಅಥವಾ ಬೇರೆಯವರದೇ?"

—ಎಂದು ನಿರ್ದಾಕ್ಷಿಣ್ಯವಾಗಿ ಮರುಪ್ರಶ್ನೆ ಹಾಕಿದ ಚಂದ್ರನಾಥ.

"ಇದೇನು ಹೀಗೆ ಕೇಳುವೆ? ನನ್ನದಲ್ಲದೆ ಬೇರೆ ಯಾರದೆಂದು ತಿಳಿದಿರುವೆ? ಯಾರಾದರೂ ದೂರು ಕೊಟ್ಟಿರುವರೇ? ಇದ್ದರೂ ಇರಬಹುದು. ಆ ಪ್ರಯುಕ್ತ ನನ್ನನ್ನು ಕರೆದುಕೊಂಡು ಬಂದಿರುವರು."

"ನಿನ್ನ ಸಂತದ್ದಾದರೆ ಬಹಳ ಸಂತೋಷ. ಆದರೆ ಒಂದು ವಿಷಯ, ನಿನ್ನಿಂದ ಬೇರೆ ಯಾರಾದರೂ ಎರವಲು ಪಡೆದಿರುವರೇ?"

"ಪಡೆದಿದ್ದರು. ಆ ವಿಷಯವೇಕೆ?"

"ಬೇಕಾಗಿರುವುದರಿಂದಲೇ ಕೇಳುತ್ತಿರುವುದು. ಇರಲಿ ಯಾರು ತೆಗೆದುಕೊಂಡಿದ್ದರು?"

"ಬಾಲಕೃಷ್ಣನೆಂಬುವನು-"

"ಬಾಲಕೃಷ್ಣನೇ?........ಅಂದರೆ ಉಂಡಾಡಿಗುಂಡನಂತೆ ಓಡಾಡಿಕೊಂಡಿರುವನಲ್ಲ, ಆತನೇ?"

"ಹೌದು! ಆತನೇ. ಅವನೇನಾದರೂ ದೂರು ಕೊಟ್ಟಿರುವನೇ?"

"ಏನೂ ಇಲ್ಲ. ಆತನು ಎಂದು ತೆಗೆದುಕೊಂಡಿದ್ದನು?"

"ನನಗೆ ಸರಿಯಾಗಿ ತಾರೀಖು, ವಾರಗಳು ತಿಳಿಯದು. ಯಾರದೋ ಸಮಾರಂಭಕ್ಕೆ ಹೋಗಿ ಬರುವೆನೆಂದು ಹೇಳಿ ತೆಗೆದುಕೊಂಡು ಹೋಗಿ, ಎರಡು ಘಂಟೆಗಳ ನಂತರ ಹಿಂದಿರುಗಿ ಬಂದನು. ಏಕೆ? ಈಗ ಏನಾಗಿದೆ?"

"ಏನೂ ಆಗಿಲ್ಲ. ಈಗ ಬಾಲಕೃಷ್ಣನೆಲ್ಲಿರುವನು? ಆತನನ್ನು ಈಚೆಗೆ ಎಲ್ಲಿಯಾದರೂ ನೋಡಿರುವೆಯಾ?"

"ನೋಡಿಲ್ಲ. ಆತನೆಲ್ಲಿರುವನೋ ಏನೋ, ಯಾರು ಬಲ್ಲರು? ಏಕೆ ಅವನ ಮೇಲೇನಾದರೂ ಕಂಪ್ಲೇಂಟ್ ಇರುವುದೇ?"

"ಏನೂ ಇಲ್ಲ. ಸುಮ್ಮನೆ ಕೇಳಿದೆ ಅಷ್ಟೆ."

"ಏನು ಕೇಳಿದರೂ ಇಲ್ಲ, ಇಲ್ಲ ಎಂದೇ ಹೇಳುವೆಯಲ್ಲ. ಏನೂ ಕಾರಣವಿಲ್ಲದೆ ಯಾರಾದರೂ ಕೇಳುವರೇ? ಅದರಲ್ಲಿಯೂ ನೀನು ಕೇಳುವುದೆಂದರೆ ಅನುಮಾನಕ್ಕೆ ಕಾರಣವಲ್ಲವೇ?"

"ಅಂತಹ ಪ್ರಮಾದವೇನೂ ಇಲ್ಲ. ನಾನು ಯಾಮಿಕರಿಗೆ ಹೇಳಿದ್ದೇ ಒಂದು. ಅವರು ಮಾಡಿರುವುದೇ ಒಂದು. ಯಾರನ್ನೋ ಕರೆದುಕೊಂಡು ಬರಲು ಹೋದವರು ನಿನ್ನನು ಕರೆದುಕೊಂಡು ಬಂದರು. ನಿನ್ನನ್ನು ನೋಡಿ ನನಗೆ ಆಶ್ಚರ್ಯವಾಯಿತು. ಬಂದ ಮೇಲೆ ಹಾಗೇ ಕಳುಹಿಸುವುದೇ? ಬೇಕೆಂದೇ ಈ ರೀತಿ ಕೇಳಿದೆ. ಅಷ್ಟೇ ವಿಶೇಷ. ಬೇರೇನೂ ಇಲ್ಲ."

—ಎಂದು ತೇಲಿಸಿ ಮಾತನಾಡಿದ ಚಂದ್ರನಾಥ.

"ನೀನು ಹೇಳಿದರೆ ನಾನು ನಂಬುವೆನೇ? ಏನೋ ವಿಶೇಷವಿದೆ. ನನ್ನಲ್ಲಿ ಮರೆಮಾಚುತ್ತಿರುವೆ. ಹೂ! ಏನು ರಹಸ್ಯವಿದ್ದರೆ ನನಗೇನು? ಅದರಿಂದ ನನಗಾಗಬೇಕಾದ ಲಾಭವೇನೂ ಇಲ್ಲ. ನನ್ನನ್ನು ಕರೆದುಕೊಂಡು ಬಂದುದರಿಂದ ಗಾಬರಿಗೊಂಡಿದ್ದೆ. ಈಗ ಎಲ್ಲಾ ಮಾಯವಾಯಿತು."

—ಎಂದು ನಗುತ್ತಲೇ ನುಡಿದ ಪದ್ಮಾಚಾರಿ.

ಇನ್ಸ್ಪೆಕ್ಟರನೂ ನಕ್ಕು ಕಾಫಿಯನ್ನು ತರಿಸಿದ.

ಕಾಫಿಯನ್ನು ಕುಡಿದ ಪದ್ಮಾಚಾರಿಯು, ಬಾಲಕೃಷ್ಣನು ಅಕಸ್ಮಾತ್ ಸಿಕ್ಕರೆ ಹೇಳುವೆನೆಂದು ತಿಳಿಸಿ, ಇನ್ಸ್‌ಪೆಕ್ಟರನಿಗೆ ಹಸ್ತಲಾಘವವನ್ನಿತ್ತು ಹಿಂದಿರುಗಿದ.

ಮೊದಲು ಪದ್ಮಾಚಾರಿಯನ್ನು ಕರೆತಂದ ಯಾಮಿಕರು, ಯುದ್ಧ ರಂಗವಲ್ಲಿ ಗೆದ್ದ ಸಿಪಾಯಿಗಳಂತೆ ಸಂತೋಷಸಾಗರದಲ್ಲಿ ಮುಳುಗಿದ್ದರು.

ಇನ್ಸ್‌ಪೆಕ್ಟರ್ ಮತ್ತು ಪದ್ಮಾಚಾರಿಯ ಸ್ನೇಹ ಪರಿಚಯವನ್ನು ಕಂಡು ಇಂಗು ತಿಂದ ಮಂಗಗಳಂತಾಗಿ ಭೂಮಿಗಿಳಿದುಹೋದರು.

ಪದ್ಮಾಚಾರಿಯು ಹಿಂದಿರುಗಿದನಂತರ ವಿಷಯವನ್ನು ಪುರುಷೋತ್ತಮ ನಿಗೆ ತಿಳಿಸುವ ನಿಮಿತ್ತ ಇನ್ಸ್‌ಪೆಕ್ಟರನು ಫೋನಿನ ನಂಬರನ್ನು ತಿರುಗಿಸುತ್ತಿರಲು ಆ ವೇಳೆಗೆ ಪತ್ತೇದಾರನೇ ಬಂದುದನ್ನು ನೋಡಿ ಅಲ್ಲಿಗೇ ನಿಲ್ಲಿಸಿದ.

"ಪತ್ತೇದಾರರೇ! ನಿಮಗೆ ಫೋನ್ ಮಾಡಲು ನಂಬರನ್ನು ತಿರುಗಿಸು ತ್ತಿದ್ದೆ. ನೀವೇ ಬಂದುಬಿಟ್ಟಿರಿ."

—ಎಂದು ನುಡಿದ ಚಂದ್ರನಾಥ ನಸುನಗುತ್ತಾ.

ಏನು ವಿಶೇಷವೆಂದು ಪುರುಷೋತ್ತಮನು ಕೇಳಲು, ಚಂದ್ರನಾಥನು—

"ನೀವು ತಿಳಿಸಿದ ನಂಬರಿನ ಸೈಕಲ್ ಮೋಟಾರನ್ನು ಯಾಮಿಕರು ಅದರ ಮಾಲೀಕರ ಸಮೇತ ಕರೆದುಕೊಂಡು ಬಂದಿದ್ದರು" ಎಂದು ಹೇಳಿದ.

"ಮಾಲೀಕರೆಂದರೆ ಯಾರು? ಬಾಲಕೃಷ್ಣನಿರಲಿಲ್ಲವೇ? ಮಾಲೀಕರ ಸಮೇತ ಅಂದರೆ ನನಗೆ ಆಶ್ಚರ್ಯವಾಗುತ್ತದೆ."

ಚಂದ್ರನಾಥನು ನಡೆದ ವಿಷಯವನ್ನು ತಿಳಿಸಲು ಸೋಜಿಗನಾದ ಪುರುಷೋತ್ತಮನು, ಬಾಲಕೃಷ್ಣನು ವಿಚಿತ್ರ ಮನುಷ್ಯನೆಂಬುದರಲ್ಲಿ ಸಂದೇಹವೇ ಇಲ್ಲವೆಂದುಕೊಂಡನು.

ಎರವಲಾಗಿ ತಂದಿದ್ದ ಮೋಟಾರ್ ಸೈಕಲ್ಲನ್ನು ನೋಡಿ ಬಾಲಕೃಷ್ಣನದೇ ಎಂದು ತಿಳಿದು ಮೋಸಹೋದ ತಾವು ಆತನೆಲ್ಲಿರುವನೆಂದು ಪತ್ತೇಮಾಡಿ ಹಿಡಿದರೂ ಇದೇ ರೀತಿ ಭ್ರಾಂತರಾಗುವುದರಲ್ಲಿ ಸಂದೇವಿಲ್ಲವೆಂದುಕೊಂಡನು.

ತನ್ನ ಕಾರ್ಯದಲ್ಲಿ ಲೇಶ ಮಾತ್ರವೂ ಯಶಸ್ಸು ಕಾಣದಿರುವುದರಿಂದ 'ಭಯಂಕರ ಭೂತ' ನಾಮಧಾರಿ ಕೊಲೆಗಾರನನ್ನು ಪತ್ತೇಮಾಡಿ ಹಿಡಿಯಲು ತನ್ನ ಯತ್ನ ಮೀರಿ ಕೆಲಸಮಾಡಬೇಕಾಗುವುದೆಂದುಕೊಂಡನು.

ಕೊಲೆಗಾರನಾರು? ಎಲ್ಲಿರುವನು? ಈ ರೀತಿ ಸಾಹಸಕೃತ್ಯವೆಸಗು ತ್ತಿರುವ ಕಾರಣವೇನು? ಮುಂತಾದುವುಗಳ ಬಗ್ಗೆ ಪರಿಶೋಧನೆ ನಡೆಯಿಸಿರುವ ರಾದರೂ ಎಳ್ಳು ಕಾಳಿನಷ್ಟೂ ಆ ಬಗ್ಗೆ ಸುಳಿವು ಸಿಕ್ಕಿಲ್ಲ.

ಅನ್ನದಾನಪ್ಪನವರು ಕಣ್ಮರೆಯಾಗಿರುವ ಕಾರಣವನ್ನು ವಿಚಾರಿಸಿ ತಿಳಿಯಬೇಕೆಂದು ಪುರುಷೋತ್ತಮನು ಚಂದ್ರನಾಥನಿಗೆ ಹೇಳಿ ಅಲ್ಲಿ ಹೆಚ್ಚು ಮಾತನಾಡದೆ ಹಿಂದಿರುಗಿದ.

ಪುರುಷೋತ್ತಮನ ವರ್ತನೆಯನ್ನು ನೋಡಿ ಚಂದ್ರನಾಥನಿಗೆ ಆಶ್ಚರ್ಯವಾಯಿತು.

ಕೊಲೆಗಾರನ ಶೋಧನೆಯಲ್ಲಿ ವಿನಾಕಾರಣ ಅಲೆದಾಟವೇ ಆಗಿರುವುದ ರಿಂದ, ಈತನಿಗೆ ತಲೆಕೆಟ್ಟಂತಾಗಿದೆಯೆಂದು ಭಾವಿಸಿಕೊಂಡನು.

ತಾವು ಈಗ ಯಾರು ಯಾರ ಮೇಲೆ ಸಂದೇಹಪಟ್ಟಿರುವೆವೋ ಅವರೆಲ್ಲರೂ ನಿರಪರಾಧಿಗಳೇ ಎಂಬುದರಲ್ಲಿ ಪುರುಷೋತ್ತಮನ ಮನಕ್ಕೆ ಹೊಳೆಯದಿರಲಿಲ್ಲ.

ಇದುವರೆವಿಗೆ ಪಟ್ಟ ಪ್ರಯತ್ನವೆಲ್ಲಾ ನೀರಿನಲ್ಲಿ ಹೋಮ ಮಾಡಿದಂತೆ, ನಿಷ್ಪ್ರಯೋಜಕವೆಂದು ತಿಳಿದು ಕೊಲೆಗಾರನನ್ನು ಹಿಡಿಯಲು ಮುಂದೆ ಹೊಸ ಮಾರ್ಗವನ್ನು ಹುಡುಕಬೇಕೆಂದುಕೊಂಡನು.

ಮನೆಗೆ ಬಂದು ಆರಾಮ ಕುರ್ಚಿಯ ಮೇಲೆ ಕುಳಿತು. ಯೋಚನಾ ವಸ್ಥೆಯಲ್ಲಿರಲು ರಾಮನಾಥನು ಆಗಮಿಸಿದ.

ಆತನೊಡನೆ ವಿಷಯವನ್ನು ಹೇಳಲು ರಾಮನಾಥನು ಸೋಜಿಗನಾದರೂ ಬಾಲಕೃಷ್ಣನೇ ಅಪರಾಧಿಯೆಂಬುದರಲ್ಲಿ ಸಂದೇಹವಿಲ್ಲವೆಂದುಕೊಂಡನು.

"ಬಾಲಕೃಷ್ಣನೇ ಕೊಲೆಗಾರನೆಂಬುದರಲ್ಲಿ ಅನುಮಾನವಿಲ್ಲ. ಸ್ವಂತ ಮೋಟಾರ್ ಸೈಕಲ್ಲಿದ್ದರೆ ತಾನು ಸಿಕ್ಕಿಬೀಳುವೆನೆಂಬ ಅನುಮಾನದಿಂದ, ತನಗೆ ಸ್ನೇಹಿತನೆನಿಸಿಕೊಂಡ ಪದ್ಮಾಚಾರಿಯ ಮೋಟಾರ್ ಸೈಕಲ್ಲನ್ನು ತಂದಿರುವನು. ಆತನು ಚಾಣುಕ್ಯ ಬುದ್ಧಿಯುಳ್ಳವನೆಂಬುದಲ್ಲಿ ಸಂದೇಹವಿಲ್ಲ."

—ಎಂದು ದೃಢ ಮನಸ್ಸಿನಿಂದ ಹೇಳಿದ ರಾಮನಾಥ.

ಆದರೇ! ರಾಮನಾಥನು ಹೇಳಿದ ಮಾತನ್ನು ಪುರುಷೋತ್ತಮನು ನಂಬಲಿಲ್ಲ. ಅವನ ಯೋಚನೆಯೇ ಬೇರೆಯಾಗಿದೆ.

ಈಗ ಮಾತಿಗೆ ಮಾತು ಬೆಳೆದರೆ ಕಾಡುಹರಟೆಯ ಮಾತುಗಳಿಗೆ ಅವಕಾಶವಾಗುವುದರಲ್ಲಿ ಸಂದೇಹವಿಲ್ಲವೆಂದು ಯೋಚಿಸಿದ ಪುರುಷೋತ್ತಮನು ರಾಮನಾಥನ ಮಾತಿಗೆ ಪ್ರತಿ ಮಾತನಾಡಲಿಲ್ಲ.

ತನ್ನ ಅಭಿಪ್ರಾಯವೇ ಸರಿಯೆಂದುಕೊಂಡ ರಾಮನಾಥನೂ ಸಹ ಮಾತನಾಡಲಿಲ್ಲ.

೧೧

ವರದರಾಜನಿಗೆ ಅಭಯವಿತ್ತು, ಆತನಿಂದ ವಚನವನ್ನು ತೆಗೆದುಕೊಂಡು ಹಿಂದಿರುಗಿದ ಸರೋಜಳು ತನ್ನ ಚಿಕ್ಕಮ್ಮನ ಕಾಟದಿಂದ ಹೇಗಾದರೂ ತಪ್ಪಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿಕೊಂಡಳು.

ತನ್ನ ಚಿಕ್ಕಮ್ಮನಲ್ಲಿಯೇ ಹೇಳಿದರೆ ಆಕೆಯು ಒಪ್ಪಲಾರಳೆಂದೂ, ಮರಿದಾಸನು ತಾನಾಗಿಯೇ ತನ್ನನ್ನು ಒಪ್ಪದಿರುವಂತೆ ಮಾಡಿದರೆ ಎಲ್ಲಾ ಸರಿಹೋಗುತ್ತದೆಂದುಕೊಂಡಳು.

ಮರಿದಾಸನಿರುವುದು ಕಾಂಚೀನಗರಕ್ಕೆ ಇಪ್ಪತ್ತೇಳು ಮೈಲಿಗಳ ದೂರದಲ್ಲಿರುವ ಜನಿವಾರವೆಂಬ ಗ್ರಾಮದಲ್ಲಿ.

ಆ ಗ್ರಾಮದಲ್ಲಿ ಸ್ವಂತ ಮನೆಮಠಗಳಿರುವುದರಿಂದ, ಅಲ್ಲಿನ ವ್ಯವಹಾರವನ್ನು ನೋಡಿಕೊಂಡು, ತನ್ನ ತಂದೆತಾಯಿಯರ ಸೇವೆ ಮಾಡಿಕೊಂಡು ಕಾಲಕಳೆಯುತ್ತಾ, ತನ್ನ ಸಹೋದರಿಯನ್ನು ನೋಡಿಕೊಂಡು ಹೋಗಲು ಆಗಾಗ್ಗೆ ಕಾಂಚೀನಗರಕ್ಕೆ ಬಂದು ಹೋಗುತ್ತಿರುವನು.

ಬಂದಾಗಲೆಲ್ಲಾ ಸರೋಜಳನ್ನು ನೋಡಿ ಮೋಹಪರವಶನಾಗುತ್ತಿದ್ದನಲ್ಲದೆ, ಮದುವೆಯಾದರೆ ಇವಳನ್ನೇ ಆಗಬೇಕೆಂದುಕೊಳ್ಳುತ್ತಿದ್ದನು.

ತಾನಾಗಿಯೇ ಪ್ರಸ್ತಾಪ ಮಾಡಿದಾಗ ಒಪ್ಪಿದರೇ ಸರಿ, ಇಲ್ಲದೇ ಹೋದರೆ ಅವಮಾನಿತನಾಗಬೇಕಾಗುವುದೆಂದು ಯೋಚಿಸಿ, ತನ್ನ ಸಹೋದರಿಯೊಡನೆ ತನ್ನ ಮರ್ಮವನ್ನು ಹೇಳಿರುವನು.

ತಮ್ಮನಿಗೆ ಅಭಯವಿತ್ತ ಮನೋರಮೆಯು ಸರೋಜಳನ್ನು ಒಪ್ಪಿಸುವ ಪ್ರಯತ್ನದಲ್ಲಿರುವಳು. ತನ್ನ ಪತಿಯು ಒಪ್ಪದೆ ಹೋದ್ದರಿಂದ ಸರೋಜಳನ್ನೇ

ಒಪ್ಪಿಸಬೇಕೆಂದು ಅವಳ ಆಸೆ. ಆಕೆಯು ಒಪ್ಪಿದರೆ ಎಲ್ಲಾ ಸರಿಹೋಗುವು ದೆಂದು ಅವಳ ಅಭಿಪ್ರಾಯವಾಗಿದೆ.

ಮರಿದಾಸನು ಸರೋಜಳಿಗೆ ಒಂದು ವರ್ಷ ದೊಡ್ಡವನು. ಕಾಂಚೀ ನಗರಕ್ಕೆ ಬಂದಾಗಲೆಲ್ಲಾ ಸರೋಜಳೊಡನೆ ವಿಶೇಷ ಸಲಿಗೆಯಿಂದಲೇ ಮಾತ ನಾಡುವನು. ಅನ್ನದಾನಪ್ಪನವರು ಸರೋಜಳಿಗೆ ರಾಜಗೋಪಾಲನನ್ನು ನೋಡಿರುವರೆಂಬ ವಿಷಯವು ಆತನಿಗೆ ತಿಳಿಯದು. ಆ ವಿಷಯವು ತನ್ನ ತಮ್ಮನ ಕಿವಿಗೆ ಬೀಳದ ಹಾಗೆ ಎಚ್ಚರಿಸಹಿಸಿರುವಳು. ಅಕಸ್ಮಾತ್ ಎಲ್ಲರೂ ಇರುವಾಗ ಆ ಪ್ರಸ್ತಾಪವು ಬಂದರೆ, ತಕ್ಷಣವೇ ಬೇರೆ ವಿಷಯವನ್ನೆತ್ತಿ ಅದನ್ನು ಮರೆಯಿಸುತ್ತಿದ್ದಳು.

ಅನ್ನದಾನಪ್ಪನವರ ಮನೋಭಿಪ್ರಾಯವು ಮರಿದಾಸನಿಗೆ ತಿಳಿದಿದ್ದರೆ ಆತನು ಸರೋಜಳನ್ನು ಮರೆಯುತ್ತಿದ್ದನೋ ಏನೋ.

ಅನ್ನದಾನಪ್ಪನವರು ಕಣ್ಮರೆಯಾದ ಬಗ್ಗೆ ಮನೋರಮೆ ಮತ್ತು ಸರೋಜ ಈ ಇಬ್ಬರೂ ಲೇಶಮಾತ್ರವೂ ಚಿಂತಿಸಲಿಲ್ಲ.

ಈಚೆಗೆ ಅತಿ ಹೆಚ್ಚಿನ ಪ್ರೀತಿಯಿಂದ ಸರೋಜಳೊಡನೆ ಮಾತನಾಡುತ್ತಾ ಕಾಲ ಕಳೆಯುತ್ತಿದ್ದ ಮನೋರಮೆಯು, ಒಂದು ದಿನ ಆಕೆಗೆ ತಲೆ ಬಾಚಿ ಹೂ ಮುಡಿಸುತ್ತಾ—

"ಸರೋಜಾ! ನೀನು ಒಂದು ವಿಷಯದಲ್ಲಿ ಬುದ್ಧಿಯಿಲ್ಲದವಳಾದೆ" ಎಂದಳು.

"ಏನು ಚಿಕ್ಕಮ್ಮಾ, ಬುದ್ಧಿಯಿಲ್ಲದೆ ನಾನು ಮಾಡಿರುವಂತಹ ಕೆಲಸ ?"

—ಎಂದು ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಾ ಪ್ರಶ್ನಿಸಿದಳು ಸರೋಜ.

"ಅಂದು ನಿನ್ನ ತಂದೆಯು 'ಬೇರೆ ಯಾರನ್ನು ವರಿಸುವೆ?' ಎಂದು ಕೇಳಿದಾಗ 'ಈಗ ನನಗೇನೂ ಕೇಳಬೇಡಿ' ಎಂದೇಕೆ ಹೇಳಿದೆ? ಮರಿದಾಸ ನನ್ನು ವರಿಸಲು ಇಚ್ಛೆಯಿದೆ. ಅವನ ವಿನಾ ಬೇರೆ ಯಾರನ್ನೂ ಮದುವೆ ಯಾಗುವುದಿಲ್ಲವೆಂದು ಹೇಳಬಹುದಾಗಿತ್ತಲ್ಲ. ಮನದಲ್ಲಿದ್ದ ಯೋಚನೆಯನ್ನು ಮುಚ್ಚಿಡುವುದೇಕೆ? ನೀನಾಗಿಯೇ ಹೇಳುವುದು ಬೇಕಿರಲಿಲ್ಲ. ಅವರಾಗಿಯೇ ಕೇಳಿದಾಗ ಹೇಳದೆ ಹೋದ್ದು ನಿನ್ನ ತಪ್ಪಲ್ಲವೇ ?"

ಚಿಕ್ಕಮ್ಮನ ಒಂದೊಂದು ಮಾತೂ, ಸರೋಜಳ ದೇಹವನ್ನು ಸಹಸ್ರಾರು ಭರ್ಜಿಗಳಿಂದ ಇರಿದಂತಾಗುತ್ತಿತ್ತು.

ಆ ದಿನ ತಮ್ಮಿಬ್ಬರ ಮಾತುಕತೆಗಳನ್ನು ಈಕೆಯು ಕದ್ದು ಕೇಳಿರುವ ಳೆಂದುಕೊಂಡು, ತನ್ನ ಮನದಲ್ಲಿಯೇ ಕ್ರೋಧದ ಕಿಡಿಗಳನ್ನು ಕಾರಿದಳು. ಕೂಡಲೇ ಮಾತನಾಡಲು ಆಕೆಗೆ ಬಾಯಿ ಬಾರದಂತಾಯಿತು.

"ಏಕೆ ಸರೋಜಾ, ಮಾತನಾಡದಿರುವೆ?"

—ಹೂ ಮುಡಿಸಿ ಮುಗಿಸಿದ ಮನೋರಮೆಯು ಮೃದುವಾಗಿಯೇ ಕೇಳಿದಳು.

"ಹೇಗೂ ನೀನು ನಮ್ಮಿಬ್ಬರ ಮಾತುಗಳನ್ನು ಕದ್ದು ಕೇಳುತ್ತಿದ್ದೆ. ಆ ವೇಳಗೆ ನೀನೇ ಒಳಗೆ ಬಂದು ಹೇಳಬಹುದಾಗಿತ್ತಲ್ಲ. ಏಕೆ ಹೇಳಲಿಲ್ಲ?"

—ಎಂದು ನಿರ್ದಾಕ್ಷಿಣ್ಯವಾಗಿ ನುಡಿದಳು ಸರೋಜ.

"ಸರೋಜಾ! ನಾನು ಕದ್ದು ಕೇಳುತ್ತಿದ್ದೆನೇ? ನಿನಗೇನು ಬುದ್ಧಿ ಸರಿಯಾಗಿರುವುದೋ ಇಲ್ಲವೋ?"

"ಕದ್ದು ಕೇಳಿರುವುದೂ, ಬಟ್ಟಿರುವುದೂ ನಿಮ್ಮ ಮಾತುಗಳೇ ಸೂಚಿಸುತ್ತವೆ. ನನಗೇನೂ ಬುದ್ಧಿಮಾಂದ್ಯವಾಗಿಲ್ಲ. ಸರಿಯಾಗಿಯೇ ಇರುವೆನು"

"ಹಾಗಾದರೆ! ನಿನಗೆ........"

ಮನೋರಮೆಯು ಮುಂದೆ ಮಾತನಾಡುವ ಮೊದಲೇ ಸರೋಜಳು—

"ನನಗೆ ಖಂಡಿತಾ ನಿನ್ನ ತಮ್ಮನನ್ನು ವಿವಾಹವಾಗಲು ಇಷ್ಟವಿಲ್ಲ. ಈ ವಿಷಯದಲ್ಲಿ ನನಗೆ ಬಲಾತ್ಕಾರ ಮಾಡಿದರೆ ಪ್ರಯೋಜನವಾಗದು" ಎಂದು ಹೇಳಿ ಎದ್ದು ನಿಂತಳು.

ಸರೋಜಳ ಮಾತನ್ನು ಕೇಳಿ ಮನೋರಮೆಯ ದೇಹದ ಮೇಲೆ ಕಾದ ಮಳಲನ್ನು ಸುರಿದಂತಾಯಿತು.

ತನ್ನ ತಂದೆಯನ್ನು ಜರಿದಂತೆ, ತನ್ನನ್ನೂ ಜರಿದು ಮಾತನಾಡಿದಳಲ್ಲಾ ಎಂದುಕೊಂಡಳು.

"ಸರೋಜಾ! ನಿನ್ನ ಮಾತು ನಿಜವೇ?"

ಕುರ್ಚಿಯಲ್ಲಿ ಕುಳಿತು ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಿದ್ದ ಸರೋಜಳು—

"ನಿನ್ನ ಮೇಲೆ ಆಣೆಯಿಟ್ಟು ಹೇಳುವೆನು. ಸತ್ಯವೆಂದು ಭಾವಿಸು. ಹಳ್ಳಿಯ ಗವಾರನಾದ ನಿನ್ನ ತಮ್ಮನನ್ನು ಮದುವೆಯಾಗಲು ನನಗಿಷ್ಟವಿಲ್ಲ" ಎಂದಳು.

ಹಳ್ಳಿಯ ಗವಾರನೆನ್ನಲು ಮನೋರಮೆಗೆ ಸಿಟ್ಟು ಬಾರದಿರಲಿಲ್ಲ.

"ಸರೋಜಾ! ನನ್ನ ತಮ್ಮನು ಹಳ್ಳಿಯ ಗವಾರನೇ?"

"ಗವಾರನಲ್ಲದೆ ಕಾಲೇಜು ವಿದ್ಯಾರ್ಥಿಯೇ?"

"ನೀನು ಬಹಳ ಹೆಚ್ಚಿಕೊಂಡಿರುವೆ? ಈ ಅಹಂಕಾರವಿದ್ದುದರಿಂದಲೇ ತಾಯಿಯನ್ನು ನುಂಗಿಕೊಂಡೆ"

"ಚಿಕ್ಕಮ್ಮಾ! ನನ್ನ ತಾಯಿಯವರೆವಿಗೂ ಬರಬೇಡ. ಆಕೆಯು ಸಾಯದೆ ಉಳಿದಿದ್ದರೆ, ನೀನು ನನ್ನ ತಂದೆಯ ಕೈ ಹಿಡಿದು ಈ ಸುಖ ಸೌಲಭ್ಯಗಳನ್ನು ಅನುಭವಿಸುವ ಭಾಗ್ಯವೆಲ್ಲಿ ದೊರೆಯುತ್ತಿತ್ತು? ಅದನ್ನು ಮೊದಲು ಯೋಚಿಸು. ನಿನ್ನ ತಮ್ಮನನ್ನು ಮದುವೆಯಾಗುವೆನೆಂದು ಒಪ್ಪಿದ್ದರೆ, ನನ್ನನ್ನು ಹೊಗಳುತ್ತಿದ್ದೆ. ಒಪ್ಪದೆ ಹೋದ್ದರಿಂದ ನನ್ನ ತಾಯಿಯವರೆವಿಗೂ ಬಂದುಬಿಟ್ಟೆ"

"ನಿನ್ನ ದಂಡೆಯು ಇಲ್ಲದೇ ಹೋಗಿದ್ದರೆ, ನಾನು ಹಾಗೇ ಉಳಿಯುತ್ತಿದ್ದೆನೆಂದು ತಿಳಿದೆಯಾ?"

"ಇಲ್ಲಾ! ಯಾರನ್ನಾದರೂ ವಿವಾಹವಾಗುತ್ತಿದ್ದೆ, ಆದರೇ! ಈ ಸುಖಸೌಲಭ್ಯಗಳು ದೊರೆಯುತ್ತಿರಲಿಲ್ಲವೆಂದು ನಿಸ್ಸಂದೇಹವಾಗಿ ಹೇಳುವೆನು"

"ಛೀ! ನಾಯೀ, ಬಾಯಿಗೆ ಬಂದಂತೆ ಮಾತನಾಡುತ್ತಿರುವೆಯಾ? ನಿನಗೆ ಈ ಸುಖ ಸಂಪತ್ತೇ ಸ್ಥಿರವೆಂದು ತಿಳಿದು ಮಾತನಾಡುತ್ತಿರುವೆಯಲ್ಲವೇ? ನಿನಗಿನ್ನೆಂತಹ ಗಂಡನು ಸಿಗುವನೋ ಏನೋ."

"ಚಿಕ್ಕಮ್ಮಾ! ಬಾಯಿ ಹಿಡಿದು ಮಾತನಾಡು. ನಿನಗೆಷ್ಟು ಅಧಿಕಾರವಿರುವುದೋ, ನನಗೂ ಸಹ ಅಷ್ಟೇ ಅಧಿಕಾರವಿದೆ. ನಾನೇನೂ ಈ ಹಣ, ಆಸ್ತಿಯನ್ನು ನಂಬಿಕೊಂಡು ಕುಳಿತಿಲ್ಲ. ನಿನಗೇಕೆ ನನ್ನ ವಿಷಯದಲ್ಲಿ ಅಷ್ಟು ಆಶಕ್ತಿ. ನೀಚಗುಣವುಳ್ಳ ಪತಿಯೇ ಸಿಗಲಿ, ಅದು ನನ್ನ ಭಾಗ್ಯ"

"ಭಾಗ್ಯ.........! ನಿನಗೆ ಅದೊಂದು ಕೇಡು"

ಸರೋಜಳು ಉತ್ತರವೀಯದೆ ಪಕ್ಕದಲ್ಲಿದ್ದ ಕಾದಂಬರಿಯನ್ನು ಕೈಗೆ ತೆಗೆದುಕೊಂಡಳು.

ದೃಷ್ಟಿಯು ಕಾದಂಬರಿಯ ಮೇಲಿದ್ದರೂ ಅವಳ ಗಮನವು ಎಲ್ಲಿಯೋ ಇದೆ.

ಉಪಾಯದಿಂದ ಸರಿಪಡಿಸಿಕೊಳ್ಳಬೇಕೆಂದಿದ್ದ ಕಾರ್ಯವು, ಅಪಾಯ ದಿಂದಲೇ ಸರಿಹೋಗುತ್ತಿದೆಯೆಂದುಕೊಂಡಳು.

ಸರೋಜಳ ಮೇಲಿನ ಸಿಟ್ಟು ಇಳಿಯದೆ ಅವಳನ್ನೇ ನೋಡುತ್ತಾ ನಿಂತಿರಲು, ಆ ವೇಳೆಗೆ ಸರಿಯಾಗಿ ಮುರಿದಾಸನು ಆಗಮಿಸಿದ.

ಬಾಗಿಲ ಕಡೆ ಬೆನ್ನುಮಾಡಿ ಕುಳಿತಿದ್ದ ಸರೋಜಳು ಮುರಿದಾಸನು ಬಂದುದನ್ನು ನೋಡಲಿಲ್ಲ.

ತಮ್ಮನನ್ನು ನೋಡಿದ ಮನೋರಮೆಯು ತನ್ನ ಸಿಟ್ಟನ್ನೆಲ್ಲಾ ಆ ಕ್ಷಣ ದಲ್ಲಿಯೇ ಅಡಗಿಸಿಕೊಂಡು ಸರೋಜಳ ಹತ್ತಿರ ಬಂದು, ಪ್ರೀತಿಯಿಂದಲೇ—

"ಸರೋಜಾ! ನನ್ನ ತಮ್ಮನು ಏನಾಗಿರುವನು? ರೂಪದಲ್ಲಿ ಕೆಟ್ಟಿರು ವನೇ? ಬುದ್ಧಿಯಿಲ್ಲವೇ? ವಿದ್ಯೆಯನ್ನು ಕಲಿತಿಲ್ಲವೇ?" ಎಂದು ಕೇಳಿದಳು.

ಇವರಿಬ್ಬರಿಗೂ ಏನೋ ವಾಗ್ವಾದವು ನಡೆಯುತ್ತಿದೆಯೆಂದುಕೊಂಡ ಮುರಿದಾಸನು ನಿಂತಲ್ಲಿಯೇ ನಿಂತುಕೊಂಡನು.

ಸರೋಜಳೂ ಶಾಂತಳಾಗಿಯೇ—

"ಕಾಲೇಜು ತರುಣಿಯು ವಿದ್ಯೆಯಿಲ್ಲದವನನ್ನು ಮದುವೆಯಾದರೆ, ಅವರ ಜೀವನ ಸೌಖ್ಯವು ಎಂದಿಗೂ ಸುಧಾರಿಸುವುದಿಲ್ಲ. ಶ್ರೀಮಂತಿಕೆಯಲ್ಲಿ ಬೆಳೆ ದವಳು ಬಡವನ ಮನೆಯನ್ನು ಸೇರಿದರೆ, ದರ್ಪದಿಂದಲೇ ಇರುವುದಕ್ಕಾಗು ತ್ತದೆಯೇ? ಅಡಿಗೆಯನ್ನು ಮಾಡಲು ನಳಪಾಕಶಾಸ್ತ್ರದ ಬುಕ್ಕು, ತಕ್ಕಡಿ ಮತ್ತು ಅಳತೆ ಕಲ್ಲುಗಳನ್ನು ಇಟ್ಟುಕೊಳ್ಳಬೇಕಾಗುವುದು. ಹಾಗೆ ಮಾಡಿದ ಅಡಿಗೆಯು ರುಚಿಸುವುದೇ? ಪತಿಯೊಂದಿಗೆ ವಿನೋದವಾಗಿ ಸರಸಸಲ್ಲಾಪ ಗಳಾಡಿಕೊಂಡಿರಲು ಆಗುವುದಿಲ್ಲ. ಆ ಪ್ರಯುಕ್ತ ಅವರಿಬ್ಬರ ಜೀವನ ಮಟ್ಟವು ಸುಧಾರಿಸುವುದಿಲ್ಲ ಒಬ್ಬ ಹಳ್ಳಿ ಹುಡುಗಿಯು ಕಾಲೇಜು ತರುಣ ನನ್ನು ವಿವಾಹವಾದರೆ, ಹಲವು ತಿಂಗಳಲ್ಲಿಯೇ ಆ ಮನೆಯ ನಡಿವಾಟನ್ನು ತಿಳಿದು, ಆ ಸನ್ನಿವೇಶಕ್ಕೆ ತಕ್ಕಂತೆ ನಡಿಯುವರು. ನಿನ್ನ ತಮ್ಮನು ವಿದ್ಯಾ

ವಂತನಿರಬಹುದು. ಬುದ್ಧಿವಂತನೂ ಆಗಿರಬಹುದು. ಆದರೇ! ಆತನನ್ನು ವಿವಾಹವಾಗಲು ನನಗಿಷ್ಟವಿಲ್ಲ. ನೀವು ದಿನ ಹಗಲೆಲ್ಲಾ ಮುರಿದಾಸನ ವಿಷಯವಾಗಿ ರಾಮಾಯಣ ಹೇಳಿದರೂ ನನ್ನದೊಂದೇ ಮಂತ್ರ. ಮುಂದೆ ನನ್ನೊಡನೆ ಆ ವಿಷಯವಾಗಿ ಮಾತನಾಡುವುದು ಅನಾವಶ್ಯಕ" ಎಂದು ಹೇಳಿದಳು.

ಸರೋಜಳ ಮಾತುಗಳನ್ನು ಕೇಳಿ ವಿವೇಕಶಾಲಿಯಾದ ಮುರಿದಾಸನು ಎಚ್ಚೆತ್ತನು. ಅವನಿಗಾಗ ಸಂಪೂರ್ಣ ಜ್ಞಾನೋದಯುವಾಯಿತು.

ಈ ಸರೋಜಳಿಗೆ ತನ್ನ ಮೇಲೆ ಮನಸ್ಸಿಲ್ಲ. ಒಂದು ವೇಳೆ ಬಲಾತ್ಕಾರದಿಂದ ವಿವಾಹವಾದರೂ ತನ್ನ ಜೀವನ ಮಟ್ಟವು ಸುಧಾರಿಸುವುದಿಲ್ಲ. ಸದಾ ಕಷ್ಟಪರಂಪರೆಗಳನ್ನು ಅನುಭವಿಸಿಕೊಂಡಿರಬೇಕಾಗುವುದು. ಗಂಡುಹೆಣ್ಣಿನ ಹೃದಯವು ಒಂದಾಗಿದ್ದರೆ ಬಾಳ್ವೆಯು ಸುಗಮವಾಗುವುದು. ಇಲ್ಲದೇ ಹೋದರೆ ಆ ಸಂಸಾರದಲ್ಲಿ ನೆಮ್ಮದಿಯಿರುವುದಿಲ್ಲ. ಆದ್ದರಿಂದ ತನ್ನ ಮೇಲೆ ಮನಸ್ಸಿಲ್ಲದ ಇವಳನ್ನು ವರಿಸುವುದರಿಂದ ತನಗೆಂದಿಗೂ ಸೌಖ್ಯವಿಲ್ಲವೆಂದುಕೊಂಡನು.

ಆಗಲೇ ಸರೋಜಳ ಮೇಲಿದ್ದ ಮನಸ್ಸನ್ನು ಸಂಪೂರ್ಣವಾಗಿ ಪರಿತ್ಯಜಿಸಿದ.

ಸರೋಜಳ ಮಾತುಗಳನ್ನು ಕೇಳಿ ತನ್ನ ತಮ್ಮನು ನೊಂದುಕೊಂಡಿರಬಹುದೆಂದು, ಮನೋರಮೆಯು ಯೋಚಿಸಿಕೊಂಡಳು.

ಮುರಿದಾಸನ ಮನದಭಿಪ್ರಾಯವನ್ನು ಆಕೆಯೇನು ಬಲ್ಲಳು?

"ನನ್ನ ತಮ್ಮನೇನೋ ಹಳ್ಳಿಯ ಗಮಾರ. ಇಂಗ್ಲೇಂಡಿನಿಂದ ಬಂದಿರುವ ರಾಜಗೋಪಾಲನನ್ನು ಏಕೆ ತಿರಸ್ಕರಿಸಿದೆ? ಅವನೇನು ವಿದ್ಯಾವಂತನಲ್ಲವೇ? ಆಸ್ತಿ, ಮನೆಮಠಗಳಿಲ್ಲವೇ?"

—ಎಂದು ವ್ಯಂಗ್ಯವಾಗಿಯೇ ಕೇಳಿದಳು ಮನೋರಮೆ.

"ಆಸ್ತಿ, ಮನೆಮಠಗಳಿದ್ದು, ವಿದ್ಯಾವಂತನಾದ ಮಾತ್ರಕ್ಕೇ ಏನಾಯಿತು? ಗಂಡು ಹೆಣ್ಣಿನ ಮನವು ಒಂದಾಗದ ಸಂಸಾರವು ಎಂದಿಗೂ ಸುಗಮವಾಗಿ ಬಾಳದು"

—ಎಂದು ಕಾದಂಬರಿಯ ಮೇಲಿದ್ದ ದೃಷ್ಟಿಯನ್ನು ಬದಲಿಸದೆ ಉತ್ತರವಿತ್ತಳು ಸರೋಜ.

ಈಕೆಯು ಬೇರೆ ಯಾರ ಮೇಲೋ ಮನಸ್ಸಿಟ್ಟಿರುವಳೆಂಬ ಭಾವನೆಯು ಅಕ್ಕ ತಮ್ಮನ ಮನಸ್ಸಿಗೆ ಬಾರದಿರಲಿಲ್ಲ.

ಇನ್ನು ತಾನೇಕೆ ಇಲ್ಲಿ ಅಡಗಿ ನಿಂತಿರಬೇಕೆಂದು ಮರಿದಾಸನು, ಅವರಿಬ್ಬರ ಮುಂದೆ ಹೋಗಿ ನಿಂತನು.

ಆತನನ್ನು ನೋಡಿದ ಸರೋಜಳ ಮನದಲ್ಲಿ ಒಂದು ವಿಧವಾದ ಭೀತಿ ಯುತ್ಪನ್ನವಾಯಿತು.

ಇವರಿಬ್ಬರೂ ಸೇರಿ, ತನ್ನ ತಂದೆಯಿಲ್ಲದ ಈ ಸಮಯದಲ್ಲಿ ತನ್ನನ್ನೇನು ಮಾಡುವರೋ ಎಂದುಕೊಂಡು ತಲ್ಲಣಿಸಿದಳಾದರೂ, ಅಲ್ಪಸ್ವಲ್ಪ ಧೈರ್ಯ ವನ್ನು ತಂದುಕೊಂಡು ಕುಳಿತುಕೊಂಡೇ ಇದ್ದಳು.

ಮನೋರಮೆಯು ಏನೂ ಅರಿಯದವಳಂತೆ—

"ಮರಿದಾಸಾ ! ಯಾವಾಗ ಬಂದೆ ?" ಎಂದು ಕೇಳಿದಳು.

"ಯಾವಾಗ ಬಂದೆನೆಂದು ನಿನಗೇ ಗೊತ್ತು. ಇರಲಿ. ಅಕ್ಕಾ, ನಿನ್ನಲ್ಲಿ ಒಂದು ವಿಷಯ ಹೇಳುವೆನು. ನನಗಾಗಿ ಸರೋಜಳನ್ನು ಬಲಾತ್ಕರಿಸಬೇಡ. ನಿನ್ನ ಮಾತಿಗೆ ಒಪ್ಪುವಳೆಂದು ನಾನು ಭಾವಿಸಿದ್ದೆ. ಮನಸ್ಸಿಲ್ಲದ ಮದುವೆ ಯಿಂದ ಯಾರಿಗೂ ಸುಖವಿಲ್ಲ"

—ಎಂದು ನಿಶ್ಚಲ ಮನಸ್ಸಿನಿಂದ ನುಡಿದ ಮರಿದಾಸ.

ಮನೋರಮೆಯು ಬೆರಗಾದಳು. ಆತನು ಆ ರೀತಿ ಹೇಳುವನೆಂದು ಆಕೆಯು ಖಂಡಿತಾ ತಿಳಿದಿರಲಿಲ್ಲ.

ಸರೋಜಳೂ ಸಹ ಆಶ್ಚರ್ಯಳಾಗದಿರಲಿಲ್ಲ. 'ಇವನು ತನ್ನ ಮನಸ್ಸನ್ನು ಪರೀಕ್ಷಿಸಲು ಹೇಳುವನೋ, ಹೇಗೆಂದುಕೊಂಡಳು.

ಮನೋರಮೆಯು ಬೆರಗು ದೃಷ್ಟಿಯಿಂದ ತಮ್ಮನ ಮುಖವನ್ನು ನೋಡುತ್ತಾ ನಿಂತಳು.

ಆಗ ಮರಿದಾಸನು ಶಾಂತ ವಚನಗಳಿಂದಲೇ ಸರೋಜಳಿಗೆ—

"ಸರೋಜಾ! ಗಾಬರಿಯಾಗಬೇಡ. ನಾನು ನಿನಗೇನೂ ತೊಂದರೆ ಯುಂಟು ಮಾಡುವುದಿಲ್ಲ. ನೀನು ಈಗ ಹೇಳಿದ ಮಾತುಗಳೆಲ್ಲವನ್ನೂ ಕೇಳಿಸಿಕೊಂಡೆ. ನಿನ್ನನ್ನು ಮದುವೆಯಾಗಬೇಕೆಂಬ ಆಸೆಯಿಂದೇನೋ ಇದ್ದೆನು. ಆದರೇ! ಆ ಆಸೆಯು ಇಂದಿಗೆ ನಿರಾಸೆಯಾಯಿತು.

ಆದ ಮಾತ್ರಕ್ಕೆ ನನಗೆ ವ್ಯಸನವಿಲ್ಲ. ಲೈಲಾಳ ದೆಶೆಯಿಂದ ಹುಚ್ಚನಾದ ಮಜುನುವಿನಂತೆ, ನಾನು ಹುಚ್ಚನಂತೆ ಪರಿತಪಿಸಲಾರೆ. ಇನ್ನು ಮುಂದೆ ನಿನ್ನನ್ನು ನನ್ನ ಸಹೋದರಿ ಸಮಾನಳಾಗಿ ಭಾವಿಸುವೆನು. ನನ್ನನ್ನೂ ನಿನ್ನ ಸಹೋದರನಂತೆ ಭಾವಿಸು. ನಾನು ನಿನಗೆ ವಂಚಿಸಲು ಈ ರೀತಿ ಹೇಳುತ್ತಿಲ್ಲ. ನನ್ನ ತಂದೆತಾಯಿಯರ ಮೇಲೆ ಆಣೆಯಿಟ್ಟು ಹೇಳುವೆನು" ಎಂದು ಹೇಳಿದ.

ಮರಿದಾಸನಾಡಿದ ಮಾತುಗಳಿಗೆ ಮನೋರಮೆಯು ಬೆರಗಾದಳು.

ಆನಂದಪುಳಕಿತಳಾದ ಸರೋಜಳು, ದೇವರು ಇಂದಿಗೆ ತನ್ನ ಮೇಲೆ ದಯ ಮಾಡಿದನೆಂದು ಭಾವಿಸಿ, ಮರಿದಾಸನ ಪಾದಗಳ ಮೇಲೆಬಿದ್ದು "ಅಣ್ಣಾ" ಎಂದು ತಬ್ಬಿಕೊಂಡಳು.

ಇಬ್ಬರ ಮನಸ್ಸೂ ನಿರ್ಮಲವಾಯಿತಲ್ಲದೆ, ಅವರಿಬ್ಬರ ಕಣ್ಣುಗಳಲ್ಲಿಯೂ ಆನಂದಬಾಷ್ಪಗಳುದುರಿದುವು. ಮನೋರಮೆಯ ಕಣ್ಣುಗಳೂ ತೇವವಾಗ ದಿರಲಿಲ್ಲ.

ತನ್ನ ತಮ್ಮನೇ ಈ ರೀತಿ ಹೇಳಿದ ಮೇಲೆ ಇನ್ನು ತನ್ನ ಯತ್ನವೇನಿದೆ ಯೆಂದುಕೊಂಡಳು.

"ಮರಿದಾಸಾ! ನಿಜವಾಗಿಯೂ ನೀನು ಸದ್ಗುಣಶಾಲಿಯಪ್ಪ. ದೇವರು ನಿನಗೆ ಒಳ್ಳೆಯದು ಮಾಡಲಿ"

—ಎಂದು ಹೇಳಿದಳು ಮನೋರಮೆ.

"ಅಕ್ಕಾ! ಅದಿರಲಿ. ಭಾವನೆಲ್ಲಿ? ಕಾಣಿಸುತ್ತಿಲ್ಲ"

—ಎಂದು ಕೇಳಿದ ಮರಿದಾಸ.

ಮನೋರಮೆಯು ಮಾತನಾಡುವ ಮೊದಲೇ ಸರೋಜಳು, ತನ್ನ ತಂದೆಯು ಕಣ್ಮರೆಯಾಗಿರುವ ಕಾರಣವನ್ನು ಹೇಳಿದಳು.

ಮರಿದಾಸನ ಮನಸ್ಸು ಕಸಿವಿಸಿಯಾದಂತಾಯಿತು. ಇಷ್ಟು ದಿನಗಳಾ ದರೂ ಭಾವನ ಬಗ್ಗೆ ಇವರು ಉದಾಸೀನರಾಗಿರುವರಲ್ಲಾ, ಎಂದು ಅವರಿಬ್ಬರ ಬಗ್ಗೆ ಬೇಸರಗೊಂಡನು. ಸಿಟ್ಟೂ ಬಾರದಿರಲಿಲ್ಲ.

"ಇಷ್ಟು ದಿನಗಳಾದರೂ ನೀವಿಬ್ಬರು ಭಾವನ ಬಗ್ಗೆ ಅನಾದರಣೆ ಮಾಡಿರುವಿರಲ್ಲ. ನಿಮಗೇನು ಬುದ್ಧಿಯಿರುವುದೇ?"

—ಎಂದು ಅವರಿಬ್ಬರ ಮೇಲೆ ಸಿಟ್ಟು ಮಾಡಿದ.

ಅವರಿಬ್ಬರ ಬಾಯಿಂದ ಮಾತುಗಳೇ ಹೊರಡಲಿಲ್ಲ.

ಆ ವೇಳೆಗೆ ಯಾಮಿಕನೊಬ್ಬನು ಆಗಮಿಸಿ ಬಾಗಿಲ ಬಳಿ ನಿಂತು ಅನ್ನದಾನಪ್ಪನವರ ಹೆಸರಿಡಿದು ಕೂಗಿದ.

ಕೂಡಲೇ ಮರಿದಾಸನು ಹೊರಗೆ ಬಂದು ಅವರಿಲ್ಲವೆಂದು ತಿಳಿಸಲು, ಯಾಮಿಕನು ಆತನನ್ನೇ ಪೋಲೀಸ್‌ಠಾಣೆಗೆ ಕರೆದುಕೊಂಡು ಹೊರಟ.

ತಾಯಿ, ಮಗಳಿಬ್ಬರೂ ಗಾಬರಿಗೊಂಡರು.

ಯಾಮಿಕನು ಮರಿದಾಸನನ್ನು ಪೋಲೀಸ್‌ಠಾಣೆಗೆ ಕರೆದುಕೊಂಡು ಹೋಗಲು, ಆತನನ್ನು ನೋಡಿ ಇನ್ಸ್‌ಪೆಕ್ಟರನು ಸೋಜಿಗನಾಗಿ, ನೀವಾರೆಂದು ಕೇಳಲು, ಆತನು ತಾನಾರೆಂದು ತಿಳಿಸಿದ.

ಈತನು ಬಂದದ್ದು ಉತ್ತಮವೇ ಆಯಿತು. ಅನ್ನದಾನಪ್ಪನವರು ಕಣ್ಮರೆಯಾಗಿರುವ ಕಾರಣವು ಇವನಿಗೆ ತಿಳಿದಿದ್ದರೂ ತಿಳಿದಿರಬಹುದು. ಎಂದು ಯೋಚಿಸಿ, ಆ ವಿಷಯವನ್ನು ಕೇಳಿದ.

ಮರಿದಾಸನು ಏನೊಂದು ಪ್ರಸಂಗವನ್ನೂ ಮುಚ್ಚಿಡದೆ ಎಲ್ಲಾ ವಿಷಯ ಗಳನ್ನೂ ವಿವರವಾಗಿ ಹೇಳಿದ.

ಇನ್ಸ್‌ಪೆಕ್ಟರನಿಗೆ ಆಶ್ಚರ್ಯವಾಗಿ, ಮತ್ತೊಂದು ಸಾರಿ ಕೇಳಲು, ತಾನು ಹೇಳಿದ್ದೆಲ್ಲಾ ಸತ್ಯವೆಂದು ಮರಿದಾಸನು ಒತ್ತಿ ಹೇಳಿದ.

ಮಗಳಿಗೆ ಭಯ ಹುಟ್ಟಿಸಲು, ಅನ್ನದಾನಪ್ಪನವರು, ಕಣ್ಮರೆಯಾಗಿರ ಬಹುದೆಂಬ ಭಾವನೆಯು ಇನ್ಸ್‌ಪೆಕ್ಟರನ ಮನಕ್ಕೆ ಹೊಳೆಯದಿರಲಿಲ್ಲ.

ಮರಿದಾಸನ ತ್ಯಾಗಬುದ್ಧಿಯನ್ನು ತನ್ನ ಮನದಲ್ಲಿಯೇ ಕೊಂಡಾಡಿ, ಅವನಿಗೆ ಹಿಂದಿರುಗುವಂತೆ ಹೇಳಿ, ಪುರುಷೋತ್ತಮನಿಗೆ ಫೋನ್ ಮಾಡಿದ.

ಪೋಲೀಸ್‌ಠಾಣೆಯಿಂದ ಮನೆಗೆ ಹಿಂದಿರುಗಿದ ಮರಿದಾಸನು, ನಡೆದ ವಿಷಯವನ್ನು ಅವರಿಬ್ಬರೊಡನೆ ಹೇಳಿ—

"ಈ ವೇಳೆಯಲ್ಲಿ ನಾನಿಲ್ಲದೇ ಹೋಗಿದ್ದರೆ ನಿಮ್ಮಲ್ಲಿ ಯಾರಾದರೊಬ್ಬರು ಪೋಲೀಸ್‌ಠಾಣೆಗೆ ಹೋಗಬೇಕಾಗುತ್ತಿತ್ತು. ಆಗ ನಿಮ್ಮ ಮರ್ಯಾದೆ ಏನಾಗುತ್ತಿತ್ತೆಂದು ಯೋಚಿಸಿನೋಡಿ. ದೇವರೇ ನಿಮ್ಮ ಮರ್ಯಾದೆಯನ್ನು ಉಳಿಸಿದಂತಾಯಿತು. ಈ ವೇಳೆಯಲ್ಲಿ ನಾನು ಬರುವುದಕ್ಕೂ, ಅದೇ ಸಮಯದಲ್ಲಿ ನೀವಿಬ್ಬರೂ ನನ್ನ ವಿಷಯವನ್ನೇ ಮಾತನಾಡುತ್ತಿರುವುದಕ್ಕೂ,

ವಿಷಯವೆಲ್ಲಾ ನನಗೆ ತಿಳಿದು, ಪರಿಸ್ಥಿತಿಯು ಸರಿಹೋಗುವುದಕ್ಕೂ, ಆ ಸಮಯಕ್ಕೆ ಸರಿಯಾಗಿ ಯಾಮಿಕನು ಕರೆಯಲು ಬಂದುದನ್ನೂ ಜ್ಞಾಪಿಸಿ ಕೊಂಡರೆ ಇದೊಂದು ದೈವ ಸಂಘಟನೆಯೇ ಸರಿ. ಇನ್ನು ಮುಂದಾದರೂ ವಿವೇಕವನ್ನು ತಂದುಕೊಳ್ಳಿ" ಎಂದು ಹೇಳಿದ.

"ಅಣ್ಣಾ ! ನನ್ನ ತಂದೆಯು ಬರುವವರೆವಿಗೆ ನೀನಿಲ್ಲಿಯೇ ಇರು. ಈ ವೇಳೆಯಲ್ಲಿ ನೀನಿಲ್ಲವೆ ಹೋಗಿದ್ದರೆ ನಮ್ಮ ಮರ್ಯಾದೆ ಹೋಗದೆ ಇರುತ್ತಿರ ಲಿಲ್ಲ. ಮುಂದೆ ಮತ್ತೇನು ತೊಂದರೆ ಬರುವುದೋ ಎಂಬ ಭೀತಿಯುಂಟಾ ಗಿದೆ. ನಿನ್ನ ಭಾವನು ಎಲ್ಲಿದ್ದರೂ ಸರಿ ಕರೆಯಿಸುವ ಭಾರವು ನಿನಗೇ ಸೇರಿದೆ"

—ಎಂದು ಹೇಳಿದಳು ಸರೋಜ.

ಮನೋರಮೆಯು ಮಗಳ ಮಾತಿಗೆ ಬೆಂಬಲ ಕೊಡಲು ಮರಿದಾಸನು ಆಗಲೆಂದು ಒಪ್ಪಿಕೊಂಡನು.

ಪೋಲೀಸ್‌ಠಾಣೆಯಿಂದ ಫೋನ್ ಬರುತ್ತಲೇ ಪುರುಷೋತ್ತಮನು ಕೆಲ ಹೊತ್ತಿನಲ್ಲಿಯೇ ಪೋಲೀಸ್‌ಠಾಣೆಯಲ್ಲಿ ಹಾಜರಾದ.

ಇನ್ಸ್‌ಪೆಕ್ಟರನು ಆತನೊಡನೆ ವಿಷಯವನ್ನು ಹೇಳಲು ಪತ್ತೇದಾರನಿಗೆ ಆಶ್ಚರ್ಯವಾಗದಿರಲಿಲ್ಲ.

'ಸರೋಜಳಿಗೆ ರಾಜಗೋಪಾಲನನ್ನು ಮದುವೆಯಾಗಲು ಇಷ್ಟವಿಲ್ಲ. ಮರಿದಾಸನ ಮೇಲೆ ಮನಸ್ಸಿಲ್ಲ. ಹಾಗಿದ್ದ ಮೇಲೆ ಆಕೆಯು ಬೇರೆ ಯಾರನ್ನೋ ಪ್ರೇಮಿಸಿರಬಹುದು. ಇಂಗ್ಲೇಂಡಿನಿಂದ ಬಂದ ಶ್ರೀಮಂತ ತರುಣನನ್ನೇ ನಿರಾಕರಿಸಿದಳೆಂದ ಬಳಿಕ, ಅವಳ ಹೃದಯವಲ್ಲಭನೆನಿಸಿಕೊಳ್ಳು ವವನು ಬೇರೆ ಯಾರೋ ಇರುವನು. ಆ ಮನುಷ್ಯನೇ ಈಗ ನಡೆದಿರುವ ದುರಂತಗಳಿಗೆ ಕಾರಣನಾಗಿರಬಾರದೇಕೆ? ನನ್ನಲ್ಲಿಗೆ ಪಾರ್ಸಲ್ ಮೂಲಕ ಬಂದ ತರುಣನನ್ನು ತಮ್ಮ ಮಗಳಿಗೆ ಅನ್ನದಾನಪ್ಪನವರು ನಿಶ್ಚಯ ಮಾಡಿರ ಬಹುದು. ತಮ್ಮ ಪ್ರಣಯಕ್ಕೆ ವಿಘ್ನ ಬಂದಿತೆಂಬ ಭಾವನೆಯಿಂದ ಆ ಪ್ರಣಯ ಪುರುಷನು ಅವನನ್ನು ಕೊಲೆ ಮಾಡಿ, ಶವದ ಮುಖವನ್ನು ವಿರೂಪ ಗೊಳಿಸಿ ನನ್ನಲ್ಲಿಗೆ ಕಳುಹಿಸಿರುವನು. ಆ ರೀತಿ ನಡೆದಿದ್ದರೆ ಆ ತರುಣನ ತಂದೆತಾಯಿಯರು ಪೋಲೀಸ್‌ಠಾಣೆಗೆ ದೂರು ಕೊಡುತ್ತಿರಲಿಲ್ಲವೇ? ಆತನು

ಅನಾಥನಿರಬಹುದೇ ? ಅನಾಥನನ್ನು ಮಗಳಿಗೆ ವರನನ್ನಾಗಿ ಅನ್ನದಾನಪ್ಪನವರು ನಿಶ್ಚಯಿಸುವರೇ? ಅಂತಹವನನ್ನು ಕೊಲೆಮಾಡಿದರೇನು ಪ್ರಯೋಜನ? ಅವನ ಕಥೆಯೇನೋ ಹಾಗಾಯಿತು. ರಾಘವಾಚಾರ್ಯರನ್ನು ಕೊಲೆ ಮಾಡಿದ ಕಾರಣವೇನು? ಅವರಿಬ್ಬರ ಪ್ರಣಯ ಸಂಪರ್ಕವನ್ನು ಡಾಕ್ಟರು ನೋಡಿರಬಹುದೇ ? ಇದ್ದರೂ ಇರಬಹುದು. ಸರೋಜಳು ಇಬ್ಬರಲ್ಲಿ ಯಾರನ್ನೂ ಒಪ್ಪದೆ ಹೋದಳು. ಹಾಗಾದ ಮೇಲೆ ತಾನು ಯಾರನ್ನು ಒಪ್ಪಿರುವೆನೆಂದು ತನ್ನ ತಂದೆತಾಯಿಯರ ಹತ್ತಿರ ತಿಳಿಸಬಾರದಿತ್ತೇಕೆ? ಆಕೆಯು ತಿಳಿಸದೆ ಇರುವುದರಿಂದ ಅದರಲ್ಲೇನೋ ರಹಸ್ಯವಿದೆ. ಅವರಿಬ್ಬರ ಪ್ರೇಮ ಸಲ್ಲಾಪವು ರಹಸ್ಯವಾಗಿಯೇ ನಡೆಯುತ್ತಿದೆಯೆಂಬುದರಲ್ಲಿ ಸಂದೇಹವಿಲ್ಲ. ತಾನು ಇಂತಹವನನ್ನು ಮದುವೆಯಾಗುವೆನೆಂದು ತನ್ನ ತಾಯಿ ತಂದೆಯರಲ್ಲಿ ತಿಳಿಸಿದ್ದರೆ, ಆ ವಿಷಯವು ಮರಿದಾಸನಿಗೆ ತಿಳಿಯದಿರುತ್ತಿತ್ತೇ ? ಅವನಿಗೆ ತಿಳಿದಿದ್ದರೆ ಇಲ್ಲಿ ಹೇಳದಿರುತ್ತಿದ್ದನೇ? ಕೊಲೆಗಾರನನ್ನು ಹಿಡಿಯಲು ಹೊಸ ಮಾರ್ಗವನ್ನು ಹುಡುಕಬೇಕೆಂದಿದ್ದೆನು. ಈಗ ತಾನಾಗಿಯೇ ದೊರೆತಂತಾಯಿತು. ಸರೋಜಳ ಮೂಲಕ ಅಪರಾಧಿ ಯಾರೆಂಬುದನ್ನು ಪತ್ತೆ ಮಾಡಿ ಹಿಡಿಯಲು ಸಾಧ್ಯವಾದರೂ ಆಗಬಹುದು'

ಈ ರೀತಿ ಆಲೋಚಿಸಿಕೊಂಡ ಪುರುಷೋತ್ತಮನ ಮುಖವು ಪ್ರಫುಲ್ಲಿತವಾಯಿತು.

"ಪತ್ತೇದಾರರೇ! ಅನ್ನದಾನಪ್ಪನವರು ಕಣ್ಮರೆಯಾಗಿರುವ ಬಗ್ಗೆ ನಿಮ್ಮ ಅಭಿಪ್ರಾಯವೇನು ?"

—ಎಂದು ಪ್ರಶ್ನಿಸಿದ ಚಂದ್ರನಾಥ.

ಪುರುಷೋತ್ತಮನು ತನ್ನ ಯೋಚನಾಭಿಪ್ರಾಯವನ್ನು ಹೇಳಲು, ಚಂದ್ರದಾಥನು—

"ನೀವು ಯೋಚಿಸಿದಂತೆ ನಡೆದಿರುವುದಾದರೆ, ರಾಜಗೋಪಾಲ ಮತ್ತು ಮರಿದಾಸನೂ ಸಹ ಕೊಲೆಯಾಗುವರೆಂದು ಹೇಳಬಹುದು. ಅದಕ್ಕೇನು ಹೇಳುವಿರಿ ?" ಎಂದು ಕೇಳಿದ.

"ಮರಿದಾಸನು ತಾನಾಗಿಯೇ ಸರೋಜಳನ್ನು ಪರಿತ್ಯಜಿಸಿರುವುದರಿಂದ ಅವನಿಗೇನೂ ತೊಂದರೆ ಬರಲಾರದು. ರಾಜಗೋಪಾಲನಿಗೆ ತೊಂದರೆ

ಬಂದರೂ ಬರಬಹುದು. ಆತನು ಸರೋಜಳನ್ನು ವಿವಾಹವಾಗಲು ಒಪ್ಪಿರುವನೇ ?"

"ಆ ವಿಷಯುವು ನನಗೆ ಸರಿಯಾಗಿ ತಿಳಿಯದು. ಆತನಿಗೇನು ಹೆಣ್ಣು ಕೊಡುವವರಿಲ್ಲವೇ ? ಸರೋಜಳೇ ಆಗಬೇಕೇ ? ಅವನನ್ನು ಅಳಿಯನನ್ನಾಗಿ ಮಾಡಿಕೊಳ್ಳಲು ಅನ್ನದಾನಪ್ಪನವರೇ ಅವನಿಗೆ ಮರುಳು ಮಾಡುತ್ತಿರುವರು. ಇನ್ನೊಂದು ವಿಷಯ, ಸರೋಜಳ ಪ್ರಣಯ ಪುರುಷನೇ ಅನ್ನದಾನಪ್ಪನವರನು ತನ್ನ ಗುಪ್ತ ಸೆರೆಮನೆಯಲ್ಲಿ ಬಂಧಿಸಿ, ಸರೋಜಳನ್ನು ತನಗಿತ್ತು ವಿವಾಹ ಮಾಡೆಂದು ಬಲಾತ್ಕಾರ ಪಡಿಸುತ್ತಿರಬಾರದೇಕೆ ? ಆ ಕಾರ್ಯಕ್ಕೆ ಸರೋಜಳು ಬೆಂಬಲವಿತ್ತಿದ್ದರೂ ಇರಬಹುದು."

ಆ ರೀತಿ ನಡೆದಿದ್ದರೂ ನಡೆದಿರಬಹುದೆಂಬ ಭಾವನೆಯು ಪುರುಷೋತ್ತಮನ ಮನಕ್ಕೆ ಹೊಳೆಯದಿರಲಿಲ್ಲ.

ಅಪರಾಧಿಯಾರೆಂದು ಕಂಡುಹಿಡಿಯಬೇಕಾದರೆ ಸರೋಜಳ ಮೂಲಕ ಸಾಧ್ಯವಾದರೂ ಆಗಬಹುದೆಂದುಕೊಂಡನು.

ತನ್ನ ಯೋಚನಾಭಿಪ್ರಾಯವನ್ನು ಚಂದ್ರನಾಥನಲ್ಲಿ ತಿಳಿಸಿ, ಅವಶ್ಯಕತೆಯೊದಗಿದಾಗ ಪೋಲೀಸ್ ಸಹಾಯವೂ ಬೇಕಾಗುವುದೆಂದು ತಿಳಿಸಿ, ಅಲ್ಲಿಂದ ಹಿಂದಿರುಗಿದ.

ಮನೆಗೆ ಬಂದು ನೋಡಲು ರಾಮನಾಥನು ಅವನ ನಿರೀಕ್ಷೆಯಲ್ಲಿ ಕುಳಿತಿದ್ದನು.

ಅವನೊಡನೆ ವಿಷಯವನ್ನು ಹೇಳಲು ಆತನಿಗೂ ಆಶ್ಚರ್ಯವಾಗದಿರಲಿಲ್ಲ.

೧೨

ಮಗನಾದ ರಾಜಗೋಪಾಲನಿಗೆ ಅನುರೂಪಳಾದ ಕನ್ಯೆಯನ್ನು ತಂದು ವೈಭವದಿಂದ ವಿವಾಹ ಮಾಡಿ ತಾವು ಕಣ್ತುಂಬ ನೋಡಿ, ಆನಂದಗೊಳ್ಳಬೇಕೆಂಬ ಆಕಾಂಕ್ಷೆಯು ಅವನ ತಂದೆತಾಯಿಯರ ಮನದಲ್ಲಿದೆ.

ಅನ್ನದಾನಪ್ಪನವರಿಗೆ ಮೊದಲೇ ವಚನವಿತ್ತಿರುವುದರಿಂದ, ಸರೋಜಳನ್ನೇ ತಮ್ಮ ಸೊಸೆಯನ್ನಾಗಿ ಮಾಡಿಕೊಳ್ಳಬೇಕೆಂದು ಸತಿಪತಿಯರು ನಿರ್ಧರ ಮಾಡಿಕೊಂಡಿರುವರು.

ರಾಜಗೋಪಾಲನಿಗೆ ಆ ವಿಷಯವು ತಿಳಿದಿದ್ದರೂ, ಏನೂ ಅರಿಯದವನಂತೆಯೇ ಇರುವನು. ಮಾತು ಬಂದಾಗ ಆಡಬೇಕೆಂದು ಅವನ ಯೋಚನೆಯಾಗಿದೆ.

ರಾಜಗೋಪಾಲನು ಇಂಗ್ಲೇಂಡಿಗೆ ಹೋಗಿದ್ದ ವಿಷಯವು ನಗರದ ಬಂಧುಬಳಗದವರಿಗೂ, ಪರಊರುಗಳಲ್ಲಿರುವ ಬಂಧುವರ್ಗದವರಿಗೂ ತಿಳಿದಿದೆ.

ಸರೋಜಳೊಡನೆ ಅವನ ವಿವಾಹವು ನಡೆಯುವುದೆಂದು ನಗರದಲ್ಲಿರುವ ನೆಂಟರಿಷ್ಟರಿಗಲ್ಲದೆ ಇತರರಿಗೆ ತಿಳಿಯದು.

ಆ ಪ್ರಯುಕ್ತ ಅವನಿಗೆ ಬಹು ಜನರು ಹೆಣ್ಣು ಕೊಡಲು ಮುಂದೆ ಬಂದರು.

ರಾಜಗೋಪಾಲನು ತಮ್ಮ ಮಗಳನ್ನು ನೋಡಿ ಮೆಚ್ಚಲೆಂಬ ಅಭಿಪ್ರಾಯದಿಂದ, ಒಡವೆ, ವಸ್ತ್ರಗಳಿಂದ ಶೃಂಗಾರ ಮಾಡಿ ಕರೆದುಕೊಂಡು ಬಂದರು.

ಅವರೆಣಿಕೆಯಂತೆ ರಾಜಗೋಪಾಲನು ಸುಲಭವಾಗಿ ಮೋಸಹೋಗಲಿಲ್ಲ. ಕನ್ಯೆಯರನ್ನು ನೋಡಿ ಮರುಳಾಗಲಿಲ್ಲ.

ಬಂದವರ ಕ್ಷೇಮಸಮಾಚಾರಗಳನ್ನು ವಿಚಾರಿಸುತ್ತಿದ್ದನಾದರೂ, ಕನ್ಯೆಯ ತಂದೆತಾಯಿಯರಿಗೆ ನಿರ್ದಾಕ್ಷಿಣ್ಯವಾಗಿ ಸವಾಲು ಹಾಕುತ್ತಿದ್ದನು.

'ನಾನು ಇಂಗ್ಲೇಂಡಿನಲ್ಲಿ ಹತ್ತು ವರ್ಷಗಳ ಕಾಲವಿದ್ದು, ಆ ದೇಶದ ವಿವಿಧ ವ್ಯವಹಾರಗಳ ಅನುಭವ ಪಡೆದುಕೊಂಡು ಬಂದಿರುವೆನಲ್ಲದೆ, ನನ್ನ ವ್ಯಾಸಂಗವನ್ನೂ ಮುಗಿಸಿರುವೆನು. ಹತ್ತು ವರ್ಷಗಳ ಕಾಲ ಅಲ್ಲಿ ಇದ್ದುದಕ್ಕೆ ಒಂದು ಲಕ್ಷ ಇಪ್ಪತ್ತುಸಾವಿರ ರೂಪಾಯಿಗಳು ಖರ್ಚಾಗಿವೆ. ಮೊದಲು ಆ ಖರ್ಚನ್ನು ಕೊಡಬೇಕು. ಮದುವೆಯ ಖರ್ಚನ್ನೆಲ್ಲಾ ಕನ್ಯೆಯ ತಂದೆ ತಾಯಿಯರೇ ವಹಿಸಿಕೊಳ್ಳಬೇಕು. ಆ ಮದುವೆಯ ಖರ್ಚು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಕಡಿಮೆ ಆಗಬಾರದು. ಕನ್ಯೆಯ ಮೈಮೇಲೆ ಹತ್ತು ಸಾವಿರ ರೂಪಾಯಿಗಳ ಒಡವೆಗಳಿರಬೇಕು. ಓಡಾಡಿಕೊಂಡಿರಲು ನಾನು ಒಪ್ಪುವ ಮೋಟಾರ್ ಕಾರನ್ನು ಕೊಡಿಸಬೇಕು. ಈ ಶರತ್ತುಗಳಲ್ಲಿ ಯಾವುದೊಂದೂ ವ್ಯತ್ಯಾಸವಾಗಬಾರದು. ವಾಸಮಾಡಿಕೊಂಡಿರಲು ಬಂಗಲೆಯೊಂದನ್ನು ಕೊಡಿಸುವುದೂ ಬಿಡುವುದೂ ಅವರ ಇಷ್ಟ.'

ಇದೇ ರಾಜಗೋಪಾಲನು ಕನ್ಯೆಯರನ್ನು ಕರೆದುಕೊಂಡು ಬಂದವರಿಗೆ ಹಾಕುತ್ತಿದ್ದ ಸವಾಲು.

ಕನ್ಯಾಮಣಿಯರ ಸಮೇತ ಬಂದವರು ಅವನ ಸವಾಲನ್ನು ಕೇಳಿ ದಿಗ್ಭ್ರಮೆಗೊಂಡು, ಊಟ ಉಪಚಾರಗಳಿಗೂ ನಿಲ್ಲದೆ ಹಾಗೇ ಹಿಂದಿರುಗುತ್ತಿದ್ದರು.

ರಾಜಗೋಪಾಲನ ಸವಾಲಿನ ಹಣದ ಸಂಖ್ಯೆಯು ಹೆಚ್ಚು ಕಡಿಮೆ ಎರಡು ಲಕ್ಷಗಳನ್ನು ಮೀರುವುದರಲ್ಲಿ ಸಂದೇಹವಿಲ್ಲ.

ಆ ರೀತಿ ಕೊಡಬೇಕಾದರೆ ಅವರು ಕೋಟ್ಯಾಧೀಶ್ವರರೇ ಆಗಿರಬೇಕು.

ಕನ್ಯೆಯರನ್ನು ಕರೆದುಕೊಂಡು ಬಂದವರು, ರಾಜಗೋಪಾಲನ ಷರತ್ತನ್ನು ಕೇಳಿ ಬಂದ ದಾರಿಗೆ ಸುಂಕವಿಲ್ಲವೆಂದು ಹಾಗೇ ಹಿಂದಿರುಗುತ್ತಿದ್ದರು

ಮಗನ ಸವಾಲನ್ನು ಕೇಳಿ ಅವನ ತಂದೆತಾಯಿಯರೂ ಗಾಬರಿಗೊಂಡರು. ಇವನು ಇದೇ ಹಠ ಹಿಡಿದು ಕುಳಿತರೆ, ತಾವು ಮದುವೆಯನ್ನು ನೋಡಿ ಸಂತೋಷಪಡುವಹಾಗೆಯೇ ಇಲ್ಲವೆಂದುಕೊಂಡರು.

ಅನ್ನದಾನಪ್ಪನವರು ಕಣ್ಮರೆಯಾಗಿರುವ ವಿಷಯವು ಅವರಿಗೆ ತಿಳಿಯದು: ಊರಿನಲ್ಲಿಲ್ಲವೆಂದಷ್ಟು ಮಾತ್ರ ಬಲ್ಲರು. ತಂದೆ ಮಗಳ ವಾಗ್ವಾದವನ್ನು ಅವರು ಅರಿಯದವರಾಗಿರುವರು.

ಸರೋಜಳನ್ನು ತಮ್ಮ ಸೊಸೆಯನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆಯು ಅವರ ಮನದಲ್ಲಿ ಪ್ರಬಲವಾಗಿದೆ. ಆದರೆ ಮಗನ ಸವಾಲಿಗೆ ಜಿಪುಣಾಗ್ರೇಸರ ಚಕ್ರವರ್ತಿಯಾದ ಅನ್ನದಾನಪ್ಪನವರು ಒಪ್ಪುವರೇ ? ಎಂಬುದೊಂದು ಸಂದೇಹ ಬೇರೆ.

ಅನ್ನದಾನಪ್ಪನವರಿಗೂ ಗಂಡುಮಗನೊಬ್ಬನಿರುವನು. ಅವರಿಗೇನು ಮಗನಮೇಲೆ ಆಸೆಯಿರುವುದಿಲ್ಲವೇ ? ತಮ್ಮ ಆಸ್ತಿಯನ್ನೆಲಾ ಅಳಿಯ ಮಗಳಿಗೆ ಧಾರೆಯೆರೆಯುವರೇ ?

ಸರೋಜಳ ವಿವಾಹವು ತಮ್ಮ ಮಗನೊಡನೆ ನಡೆಯದೆಂದು ಅವರಿಗೆ ಖಚಿತವಾಯಿತು.

ಮಗನನ್ನು ಹೇಗಾದರೂ ಮಾಡಿ ಒಪ್ಪಿಸಬೇಕೆಂಬ ನಿರ್ಧಾರವುಳ್ಳವಳಾದ ಕಲ್ಯಾಣಮ್ಮನು—

"ಗೋಪಾಲು ! ನೀನು ಇದೇ ರೀತಿ ಹಠ ಹಿಡಿದು ಕುಳಿತರೆ, ನಿನ್ನ ಮದುವೆಯಾಗುವುದೇ ?" ಎಂದು ಕೇಳಿದಳು.

"ಅಮ್ಮಾ! ನೀನೇಕೆ ಆ ವಿಷಯವಾಗಿ ಯೋಚಿಸುವೆ? ದೈವ ಸಂಕಲ್ಪವಿದ್ದರೆ ಆಗಿಯೇ ತೀರುವುದು."

—ಎಂದು ಸಾವಧಾನದಿಂದ ಉತ್ತರವಿತ್ತ, ರಾಜಗೋಪಾಲ.

"ನಿನ್ನ ಷರತ್ತಿಗೆ ಯಾರು ಒಪ್ಪುವರೋ ಏನೋ. ಈಗ ನಮಗೆ ಕಡಿಮೆಯಾಗಿರುವುದಾದರೂ ಏನು ?"

"ಕೂತು ಉಣ್ಣುವವನಿಗೆ ಕುಡಿಕೆ ಹಣ ಸಾಲದೆಂಬಂತೆ, ಇದನ್ನೇ ನಂಬಿಕೊಂಡು ಕುಳಿತರಾಗುವುದೇ? ಸಂಪಾದನೆಗೆ ದಾರಿ ಹುಡುಕಬೇಡವೇ? ಮುಂದೆ ನಿನ್ನ ಮೊಮ್ಮಕ್ಕಳನ್ನು ಇಂಗ್ಲೇಂಡಿಗೋ, ಅಮೇರಿಕಾಕ್ಕೋ ಕಳುಹಿಸ

ಬೇಕಾದರೆ ಯಾರಲ್ಲಿ ಪರದಾಡಲಿ? ನನ್ನ ಷರತ್ತು ಅದ್ಭುತವಾಗಿಲ್ಲ. ಒಪ್ಪುವವರು ಇದ್ದೇ ಇರುವರು."

"ಮುಂದಿನ ಯೋಚನೆ ಈಗೇಕೆ ಗೋಪಾಲ ?"

"ಹಾಗೆ ಯೋಚನೆ ಮಾಡದೆ ಹೋದರೆ ನಾವು ಉಳಿಯುವಹಾಗಿಲ್ಲ. ಯಾವುದಕ್ಕೂ ದೂರಾಲೋಚನೆಯಿರಬೇಕೆಂದು ಹಿರಿಯರು ಹೇಳುವುದಿಲ್ಲವೆ? ಹಾಗೆ. ನೀವು ಕೊಂಚಕಾಲ ಸುಮ್ಮನಿರಿ, ಆಮೇಲೆ ಎಲ್ಲಾ ಸರಿಹೋಗುತ್ತದೆ."

"ಏನು ಸರಿಹೋಗುವುದೋ, ಏನೋ. ಗೋಪಾಲಾ! ಸರೋಜಳನ್ನು ಸೊಸೆಯನ್ನಾಗಿ ಮಾಡಿಕೊಳ್ಳಬೇಕೆಂದಿದ್ದೆವಲ್ಲಾ? ನೀನು ನೋಡಿದರೆ ಹೀಗೆ ಹೇಳುವೆ?"

"ಅಮ್ಮಾ! ಅನ್ನದಾನಪ್ಪನವರು ನಡೆಯಿಸುತ್ತಿರುವ ವಿದ್ಯಮಾನಗಳನ್ನು ನೋಡುತ್ತಲೇ ಇರುವೆನು. ನನ್ನ ಶರತ್ತಿಗೆ ಒಪ್ಪುವುದಾದರೆ ಸರೋಜಳನ್ನು ವಿವಾಹವಾಗಲು ನನ್ನ ಅಡ್ಡಿಯೇನೂ ಇಲ್ಲ. ಯಾರಾದರೇನು, ನನ್ನ ಶರತ್ತಿಗೆ ಒಪ್ಪಿ ವ್ಯತ್ಯಾಸಬಾರದಂತೆ ನಡೆದುಕೊಂಡರಾಯಿತು."

"ನಮ್ಮ ಈ ಜನ್ಮದಲ್ಲಿ ನಿನ್ನ ಮದುವೆಯನ್ನು ನೋಡಿ ಆನಂದಪಡುವ ಪುಣ್ಯವು ನಮಗಿಲ್ಲ."

"ಅಮ್ಮಾ! ಹಾಗೇಕೆ ಹೇಳುವಿರಿ? ಒಬ್ಬಳೇ ಹೆಣ್ಣು ಮಗಳಿರುವ ಲಕ್ಷಾಧೀಶ್ವರರೆಷ್ಟು ಜನರಿಲ್ಲ ನೀವು ಯೋಚನೆ ಬಿಟ್ಟು ನಿಶ್ಚಿಂತರಾಗಿ. ನಾನು ಹೇಳಿದಂತೆ ನಡೆಯುವುದೋ ಇಲ್ಲವೋ ನೀವೇ ನೋಡುವಿರಿ."

ಕಲ್ಯಾಣಮ್ಮನು ಬಿಸಿಯುಸಿರನ್ನು ಬಿಟ್ಟು ಅಲ್ಲಿಗೇ ತಟಸ್ಥಳಾದಳು.

ಮಗನಿಗೆ ಹಿತೋಪದೇಶ ಹೇಳಿ, ನಿರಾಶನಾಗುವುದಕ್ಕಿಂತ ಹೇಳದೆ ನೆಮ್ಮದಿಯಿಂದಿರುವುದು ಸೂಕ್ತವೆಂದು ಯೋಚಿಸಿ ವೆಂಕಟರತ್ನಂರವರು ಮಗನ ಗೊಡವೆಗೇ ಹೋಗಲಿಲ್ಲ.

ವಿವಾಹವಾಗಲಿ, ಆಗದೆ ಹೋಗಲಿ ತಮ್ಮ ಕಣ್ಣು ಮುಂದೆ ನೆಮ್ಮದಿಯಾಗಿ ಓಡಾಡಿಕೊಂಡಿದ್ದರೆ ಸಾಕೆಂದುಕೊಂಡರು.

ಮಗನ ಮದುವೆ ಸವಾಲನ್ನು ಕೇಳಿ, ಇದೆಲ್ಲಾ ಆಗಿಹೋದ ಕಾರ್ಯವೆಂದು ಅಂತಿಮ ನಿರ್ಧಾರ ಮಾಡಿಕೊಂಡಿರುವರು.

ಕೊಲೆಗಾರನು ರಾಜಗೋಪಾಲನನ್ನೂ ವಿಚಾರಿಸಿಕೊಳ್ಳಬಹುದೆಂದೂ ಆದ್ದರಿಂದ ಅವನ ವಿಷಯದಲ್ಲಿ ಎಚ್ಚರ ವಹಿಸಬೇಕಾದ್ದು ಆಗತ್ಯವೆಂದು ಭಾವಿಸಿದ್ದ ಪುರುಷೋತ್ತಮನು ಆ ವಿಷಯವಾಗಿ ಪರಿಶೋಧನೆಯಲ್ಲಿರಲು, ರಾಜಗೋಪಾಲನ ವಿವಾಹದ ಸವಾಲು ತಿಳಿಯಿತು.

ಆ ಸವಾಲನ್ನು ಕೇಳಿ ಸೋಜಿಗನಾದ ಪುರುಷೋತ್ತಮನ ನೆನಪಿನ ಸುಳಿಗೆ ಪ್ರಭಾಕರನ ನೆನಪು ಬಾರದಿರಲಿಲ್ಲ.

ಅವನ ಹಾಗೆ ಇವನೂ ಒಬ್ಬನೆಂದುಕೊಂಡನಲ್ಲದೆ, ವೆಂಕಟರಾಯರಂತೆ ಯಾರಾದರೂ ಕನ್ಯೆಯನ್ನು ಕೊಡಲು ಮುಂದೆ ಬಂದೇಬರುವರೆಂದುಕೊಂಡನು.

ರಾಜಗೋಪಾಲನು ಸವಾಲಿನ ದೃಷ್ಟಿಯಲ್ಲಿರುವುದರಿಂದ, ಸರೋಜ ಳೊಡನೆ ಅವನ ವಿವಾಹವು ನಡೆಯಲಾರದೆಂದೂ, ಕೊಲೆಗಾರನಿಂದ ಅವನಿಗೆ ಯಾವುದೊಂದು ಬಗೆಯ ತೊಂದರೆಯೂ ಸಂಭವಿಸದೆಂದೂ ಯೋಚಿಸಿಕೊಂಡ ಪುರುಷೋತ್ತಮನು, ಇನ್ನು ಸರೋಜಳ ಪ್ರಣಯಪುರುಷನಾರೆಂಬುದನ್ನು ಪತ್ತೇಮಾಡಿ ಹಿಡಿಯಬೇಕೆಂದುಕೊಂಡನು.

ರಾಜಗೋಪಾಲನ ಸವಾಲನ್ನು ಕೇಳಿ ತಿಳಿದ ಸರೋಜಳಿಗೆ ಅತ್ಯಾನಂದ ವಾಯಿತಲ್ಲದೆ, ಜಿಪುಣರಲ್ಲಿ ಅಗ್ರಗಣ್ಯನಾದ ತನ್ನ ತಂದೆಯು ಅವನು ಕೇಳಿ ದಷ್ಟು ಹಣವನ್ನು ಕೊಡುವುದಿಲ್ಲವಾದ್ದರಿಂದ, ತನ್ನೊಡನೆ ಆತನ ವಿವಾಹವು ನಡೆಯಲಾರದೆಂದು ಭಾವಿಸಿ ಈ ವಿವಾಹವು ತಾನಾಗಿಯೇ ತಪ್ಪಿಹೋಗುವು ದೆಂದುಕೊಂಡಳು.

ರಾಜಗೋಪಾಲನು ಈ ಶರತ್ತನ್ನು ತನ್ನ ಎದುರಿಗೆ ಹೇಳಬಾರದಿತ್ತೇ? ಹೇಳಿದ್ದರೆ ತನಗೂ ಅವರಿಗೆ ವಾಗ್ವಾದ ನಡೆದು ಅವರು ಕಣ್ಮರೆಯಾಗುವ ಕಾರಣವೇ ಬರುತ್ತಿರಲಿಲ್ಲವಲ್ಲಾ ಎಂದುಕೊಂಡಳು.

ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

ಸರೋಜಳ ಹೃದಯ ಮಂದಿರದಲ್ಲಿ ನೆಲೆಯಾಗಿರುವ ವರದರಾಜನಿಗೂ ಸಹ ರಾಜಗೋಪಾಲನ ಸವಾಲಿನ ವಿವರವು ತಿಳಿಯದಿರಲಿಲ್ಲ.

ಜಿಪುಣಾಗ್ರೇಸರ ಅನ್ನದಾನಪ್ಪನವರು ಆ ಶರತ್ತಿಗೆ ಒಪ್ಪಲಾರರೆಂದೂ, ಇನ್ನು ಸರೋಜಳು ತನ್ನವಳೇ ಆದಳೆಂದು ಪರಮಾನಂದಗೊಂಡನು. ತನ್ನ

ತಂದೆತಾಯಿಯರ ಬಳಿಯಲ್ಲಿ ಸರೋಜಳ ವಿಷಯವನ್ನು ತಿಳಿಸಲಿಲ್ಲ. ತಿಳಿಸಿದ ನಂತರ ಜಾಲಿಯಾಗಬಾರದೆಂದೇ ಅವನ ಆಕಾಂಕ್ಷೆಯಾಗಿದೆ.

ರಾಜಗೋಪಾಲನ ಸವಾಲಿನ ವಿವರವು ಅವನ ಬಂಧುಬಳಗದವರಿಗೆಲ್ಲಾ ತಿಳಿದುಹೋದ ಪ್ರಯುಕ್ತ ಯಾರೊಬ್ಬರೂ ಅಲ್ಲಿಗೆ ಬಾರದೋದರು.

ಆದಮಾತ್ರಕ್ಕೆ ರಾಜಗೋಪಾಲನು ಧೈರ್ಯಗುಂದಲಿಲ್ಲ. ಈಗಿರುವ ಎರಡು ಲಕ್ಷ ರೂಪಾಯಿಗಳ ಆಸ್ತಿಗೆ ಇನ್ನೊಂದೆರಡು ಲಕ್ಷ ಸೇರಿಸಿದರೆ, ತನ್ನ ಕಾರ್ಯವು ಪೂರ್ಣವಾಗುವುದೆಂದು ಅವನ ಆಲೋಚನೆಯಾಗಿದೆಯಲ್ಲದೆ, ತಾನು ಕಷ್ಟಪಟ್ಟಿದ್ದಕ್ಕೂ ಸಾರ್ಥಕವಾಗುವುದೆಂದುಕೊಂಡಿರುವನು.

ಹಲವು ದಿನಗಳನಂತರ ವಿಲಾನಗರದ ಶ್ರೀಮಂತರೊಬ್ಬರು ವೆಂಕಟ ರತ್ನಂ ಮನೆಗೆ ಬಂದರು.

ಬಂದವರ ಹೆಸರು ಗೋವಿಂದರಾಜು. ಅವರು ವೆಂಕಟರತ್ನಂಗೆ ದೂರದ ಸಂಬಂಧೀಕರಾಗಿರುವರು.

ವಿಲಾಸನಗರದ ಭಾರಿ ಶ್ರೀಮಂತರಲ್ಲಿ ಗೋವಿಂದರಾಜುರವರು ಒಬ್ಬರು.

ಗೋವಿಂದರಾಜುರವರು ದೊಡ್ಡ ಜಮೀನ್ದಾರರು. ಅವರ ವಾರ್ಷಿಕ ವರಮಾನವು ಲಕ್ಷರೂಪಾಯಿಗಳಾಗಬಹುದು. ರೇಷ್ಮೆ ವ್ಯಾಪಾರಿ ಗೋವಿಂದ ರಾಜು ಎಂದರೆ ವಿಲಾಸನಗರದವರೆಲ್ಲರೂ ಇಂತಹವರೇ ಎಂದು ತಿಳಿಯುವುದು.

ಗೋವಿಂದರಾಜುರವರಿಗೆ ಇಬ್ಬರು ಮಕ್ಕಳು. ಗಂಡುಮಗನು ಡಾಕ್ಟರ್ ಪರೀಕ್ಷೆಗಾಗಿ ಅಮೇರಿಕಾಕ್ಕೆ ಹೋಗಿರುವನು. ಹೆಣ್ಣು ಮಗಳು ಬಾಲ್ಯವನ್ನು ಕಳೆದು ಯೌವನಕ್ಕೆ ಕಾಲಿಟ್ಟಿರುವಳು.

ರಾಜಗೋಪಾಲನು ಇಂಗ್ಲೇಂಡಿಗೆ ಹೋಗಿ ಬಂದಿರುವ ವಿಷಯವನು ಕೇಳಿ ಅವನಿಗೆ ತಮ್ಮ ಮಗಳಾದ ಸೌದಾಮಿನಿಯನ್ನಿತ್ತು ವಿವಾಹ ಮಾಡ ಬೇಕೆಂಬ ಆಕಾಂಕ್ಷೆಯಿಂದ ಬಂದಿರುವರು.

ರಾಜಗೋಪಾಲನು ಗೋವಿಂದರಾಜುರವರ ಮುಂದೆ ತನ್ನ ಸವಾಲನ್ನಿಟ್ಟ.

ತಮ್ಮ ಮಗನ ಶರತ್ತನ್ನು ಕೇಳಿ ಗೋವಿಂದರಾಜುರವರು ಹಾಗೇಹಿಂದಿರುಗುವರೆಂದು ರಾಜಗೋಪಾಲನ ತಂದೆತಾಯಿಯರು ಭಾವಿಸಿಕೊಂಡಿರುವರು.

ರಾಜಗೋಪಾಲನ ಷರತ್ತನ್ನು ಕೇಳಿ ಗೋವಿಂದರಾಜುರವರು ಜೋರಾಗಿ ನಕ್ಕರು.

"ಏಕೆ ನಕ್ಕಿರಿ ? ಈಗ ಚೆನ್ನಾಗಿದ್ದಿರಲ್ಲ. ಏನಾಯಿತು ?"

—ಎಂದ ವ್ಯಂಗ್ಯವಾಗಿ ಪ್ರಶ್ನಿಸಿದ ರಾಜಗೋಪಾಲ.

"ಇಷ್ಟು ಮಾತ್ರವಲ್ಲದೆ ಇನ್ನೂ ಹೆಚ್ಚಿಗೆ ಕೇಳುವುದೇನಾದರೂ ಇದೆಯೋ ?"

—ಎಂದು ಮರುಪ್ರಶ್ನಿಸಿದರು ಗೋವಿಂದರಾಜುರವರು.

ಆಸೆ ಬಿಟ್ಟು ನಿರಾಶರಾಗಿ ಕುಳಿತಿದ್ದ ರಾಜಗೋಪಾಲನ ತಂದೆ-ತಾಯಿಯರ ಮನದಲ್ಲಿ ಆಸೆಯ ಕಣಗಳು ಹುಟ್ಟಿದುವು.

ತಮ್ಮ ಮಗನ ಸವಾಲಿಗೆ ಇವರು ಒಪ್ಪಿಕೊಂಡರೂ ಒಪ್ಪಿಕೊಳ್ಳಬಹುದೆಂದು ವೆಂಕಟರತ್ನಂರವರು ಭಾವಿಸಿಕೊಂಡರು.

"ಅದಕ್ಕಿಂತ ಹೆಚ್ಚಿಗೆ ಇನ್ನೇನು ಕೇಳುವುದಿದೆ ?"

—ಎಂದು ವಿನಯವಾಗಿಯೇ ಕೇಳಿದರು ವೆಂಕಟರತ್ನಂ.

"ಬೇಕಾದಷ್ಟು ಕೇಳುವುದಿದೆ. ಇದೊಂದು ಸವಾಲೇ ? ಇದನ್ನು ಸವಾಲೆಂದು ಹೇಳುವವರು ಮೂರ್ಖರಲ್ಲವೇ ? ಈ ಅಲ್ಪ ಸವಾಲನ್ನು ಯಾರೊಬ್ಬರೂ ಕೊಡದೆ ಹೋದರೇ ? ನನ್ನ ಮಗಳ ಯೋಗವಿರುವಾಗ ಬೇರೆಯವರು ಕೊಡಲು ಸಾಧ್ಯವೇ ?"

"ನೀವು ಇದಕ್ಕೆ ಒಪ್ಪಿಕೊಳ್ಳುವಿರಾ ?"

—ಎಂದು ಗಾಂಭೀರ್ಯದಿಂದ ಕೇಳಿದ ರಾಜಗೋಪಾಲ.

"ಇದೇನು ಮಹಾ. ಇದಕ್ಕೆ ನಾಲ್ಕರಷ್ಟು ಕೇಳಿದ್ದರೂ ಸಂತೋಷದಿಂದ ಕೊಡುತ್ತಿದ್ದೆ. ಈ ಅಲ್ಪ ಸವಾಲನ್ನು ಕೇಳಿ ನನಗೆ ನಗು ಬಂದಿತಲ್ಲದೆ, ಬೇರೆ ಯಾವ ಕಾರಣಕ್ಕಾಗಿಯೂ ನಗಲಿಲ್ಲ. ನಿನ್ನ ಸವಾಲನ್ನು ಅಂಗೀಕರಿಸುವೆನಲ್ಲದೆ, ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆನು."

ರಾಜಗೋಪಾಲನ ತಂದೆತಾಯಿಯರಿಗೆ ಆನಂದವಾಯಿತಲ್ಲದೆ, ದೇವರು ಇಂದಿಗೆ ತಮ್ಮ ಮೇಲೆ ದಯದೋರಿದನೆಂದುಕೊಂಡರು.

ಇಂದಿಗೆ ಸರಿಯಾದ ಬೇಟೆಯು ಸಿಕ್ಕಿತೆಂದು ರಾಜಗೋಪಾಲನಿಗೂ ಸಂತೋಷವುಂಟಾಯಿತು.

ಗೋವಿಂದರಾಜುರವರು ಎರಡು ದಿನಗಳು ಅತಿಥಿಗಳಾಗಿ ಉಳಿದುಕೊಂಡು ಮೂರನೆಯ ದಿನ ಹಿಂದಿರುಗಿದರು.

ಆ ಎರಡು ದಿನಗಳಲ್ಲಿ ಅವರ ವ್ಯವಹಾರಗಳನ್ನೆಲ್ಲಾ ವೆಂಕಟರತ್ನಂರವರು ಕೇಳಿ ತಿಳಿದುಕೊಂಡರು.

ಅಮೇರಿಕಾಕ್ಕೆ ಹೋಗಿರುವ ಮಗನು ಸದ್ಯದಲ್ಲಿಯೇ ಬರುವನೆಂದೂ ಬಂದನಂತರ ವಿವಾಹವೆಂದೂ ತೀರ್ಮಾನವಾಗಿದೆ.

ವೆಂಕಟರತ್ನಂರವರು ಒಪ್ಪಿಕೊಳ್ಳದೆ ವಿಧಿಯಿಲ್ಲ. ಒಪ್ಪಿಕೊಳ್ಳದೆ ಹೋದರೆ ಬೇರೆ ಯಾರು ಆ ಶರತ್ತಿಗೆ ಒಪ್ಪುವರು?

ಗೋವಿಂದರಾಜುರವರು ಹಿಂದಿರುಗಿದನಂತರ—

"ಅಮ್ಮಾ ಈ ಜನ್ಮದಲ್ಲಿ ನನ್ನ ಮದುವೆಯನ್ನು ನೋಡುವ ಪುಣ್ಯವು ನಿಮಗಿಲ್ಲವೇ? ಈಗ ಸಂತೋಷಪಡುವಿರೋ ದುಃಖಪಡುವಿರೋ? ಹೇಳಿ." ಎಂದು ಕೇಳಿದ ರಾಜಗೋಪಾಲ ತನ್ನ ತಾಯಿಗೆ.

"ಎಲ್ಲಾ ನಮ್ಮ ಅದೃಷ್ಟ. ನೀನು ಇಂಗ್ಲೇಂಡಿಗೆ ಹೋಗಿದ್ದಕ್ಕೆ ಸಾರ್ಥಕವಾಯಿತು."

—ಎಂದಳು ಕಲ್ಯಾಣಮ್ಮ.

"ನನ್ನ ಸವಾಲನ್ನು ಪ್ರಮಾದವೆಂದು ಹೇಳುತ್ತಿದ್ದಿರಲ್ಲ. ನೋಡಿದಿರಾ? ಈ ಶ್ರೀಮಂತರ ಮಾತು. ನಮ್ಮನ್ನೇ ಹಾಸ್ಯಮಾಡಿದರಲ್ಲ. ನನ್ನನ್ನು ಇಂಗ್ಲೇಂಡಿಗೆ ಕಳುಹಿಸಿದ್ದರಿಂದ ನಷ್ಟವೇನಾಯಿತೇಳಿ? ಬಹು ಸುಲಭವಾಗಿ ಸಂಪಾದನೆಯಾಯಿತು. ಇಂಗ್ಲೇಂಡ್, ಅಮೇರಿಕಾ, ಜರ್ಮನಿ ಅಥವಾ ಜಪಾನ್ ದೇಶಗಳಿಗೆ ಹೋಗಿ ಬಂದವರಿಗೆ ಎಷ್ಟರಮಟ್ಟಿಗೆ ಮರ್ಯಾದೆಯಿದೆ ಯೆಂದು ಈಗಲಾದರೂ ತಿಳಿದುಕೊಳ್ಳಿ. ನಾನೇನು ಬುದ್ಧಿಯಿಲ್ಲದೆ ಸವಾಲನ್ನು ಹಾಕಲಿಲ್ಲ. ಅನ್ನದಾನಪ್ಪನವರ, ಬಹಿರಾಡಂಬರದ ಬೂಟಾಟಿಕೆಗಳಿಗೆ ನಾನು ಮರುಳಾಗುವೆನೇ? ಹೆಣ್ಣೂ ಸಿಗಬೇಕು, ಹೊನ್ನೂ ಸಿಗಬೇಕು."

"ಅಮೇರಿಕಾಕ್ಕೆ ಹೋಗಿರುವ ಕೇಶವನು ಬಂದ ಮೇಲಲ್ಲವೇ, ಮದುವೆ. ಅಷ್ಟರಲ್ಲಿ ಇನ್ನೇನು ಬದಲಾವಣೆಯಾಗುವುದೋ ಏನೋ."

"ಏನೂ ಆಗುವುದಿಲ್ಲ. ನೀವೇನೂ ಚಿಂತಿಸಬೇಡಿ. ನಾನು ನಾಲ್ಕಾರು ಸಾರಿ ವಿಲಾಸನಗರಕ್ಕೆ ಹೋಗಿ ಬರುವೆನಲ್ಲದೆ, ಅವರೂ ಇಲ್ಲಿಗೆ ಬಂದು ಹೋಗುವಂತೆ ಮಾಡುವೆನು. ನೀವಿಬ್ಬರೂ ಸಹ ಒಂದೆರಡು ಸಾರಿ ಹೋಗಿ ಬನ್ನಿ. ಅದಕ್ಕೆ ಬೇಕಾದ ಏರ್ಪಾಡು ನಾನು ಮಾಡುವೆನು."

"ಏನೋ ಒಟ್ಟಿನಲ್ಲಿ ನಿನ್ನ ಮದುವೆಯೊಂದು ನಡೆದುಹೋದರೆ ಸಾಕು."

"ಮೊಮ್ಮಗನನ್ನು ನೋಡಿ ಮುದ್ದಾಡಬೇಕೆಂಬ ಆಸೆಯಿರುವುದೇ ?"

—ಎಂದು ನಕ್ಕು ಕೇಳಿದ ರಾಜಗೋಪಾಲ.

ಕಲ್ಯಾಣಮ್ಮನು ಮಾತನಾಡದೆ ನಕ್ಕಳು.

ಗೋವಿಂದರಾಜುರವರು ಕಾಂಚೀನಗರಕ್ಕೆ ಬಂದು ಹೋದ ವಿಷಯವು ಒಂದೆರಡು ದಿನಗಳಲ್ಲಿಯೇ ಸರೋಜಳಿಗೆ ತಿಳಿಯದಿರಲಿಲ್ಲ.

ಇಂದಿಗೆ ಆ ಪೀಡೆಯ ತಂಟೆಯೇ ತಪ್ಪಿಹೋಯಿತೆಂದುಕೊಂಡಳು.

ಆ ಸಮಯದಲ್ಲಿ ಅವಳ ತಂದೆಯಿಲ್ಲ. ಇದ್ದಿದ್ದರೆ ಅವರೊಡನೆ, ತನ್ನ ಅಭಿಪ್ರಾಯವನ್ನು ಹೇಳುತ್ತಿದ್ದಳೋ ಏನೋ.

ಪತ್ತೇದಾರರಿಗೂ ಸಹ ರಾಜಗೋಪಾಲನಿಗೆ ಕನ್ಯಾಮಣಿಯು ನಿಶ್ಚಯ ವಾದ ಸಂಗತಿಯು ಗೊತ್ತಾಯಿತು.

ಪ್ರಭಾಕರನಂತೆ ರಾಜಗೋಪಾಲ, ವೆಂಕಟರಾಯರಂತೆ ಗೋವಿಂದ ರಾಜು ಎಂದುಕೊಂಡರು.

ಪ್ರಭಾಕರನು ಬೇರೆ ಕನ್ಯೆಯನ್ನು ನೋಡಿದ್ದರಿಂದ, ಇತರ ಕನ್ಯೆಯ ರನ್ನು ವಿವಾಹವಾಗಲಿಷ್ಟವಿಲ್ಲದೆ ಸವಾಲುಹಾಕಿದ್ದನು.

ರಾಜಗೋಪಾಲನಾದರೋ ಇಂಗ್ಲೇಂಡಿಗೆ ಹೋಗಿಬಂದಿರುವುದರಿಂದ ಸವಾಲುಹಾಕಿ, ಜಯಶಾಲಿಯಾದನೆಂದುಕೊಂಡರು.

ಇಂತಹ ಪರಿಸ್ಥಿತಿಯಲ್ಲೂ ಅನ್ನದಾನಪ್ಪನವರು ಕಾಣದಿರುವುದರಿಂದ, ಅವರು ಕೊಲೆಗಾರನ ದೆಶೆಯಿಂದ ಗುಪ್ತ ಸೆರೆಮನೆಯಲ್ಲಿ ನರಳುತ್ತಿರುವುದರಲ್ಲಿ ಸಂದೇಹವಿಲ್ಲವೆಂದುಕೊಂಡರು.

೧೩

ಮಧ್ಯರಾತ್ರಿಯ ಸಮಯ. ಅಮಾವಾಸ್ಯೆಯ ಕಾರ್ಗತ್ತಲು ಜಗತ್ತನ್ನು ಆವರಿಸಿಕೊಂಡಿದೆ.

ಕಳ್ಳರಿಗೆ ಕಳ್ಳತನ ಮಾಡಲು, ದರೋಡೆಕೋರರಿಗೆ ದರೋಡೆ ಮಾಡಲು ಮತ್ತು ಕೊಲೆಗಾರರಿಗೆ ಕೊಲೆ ಮಾಡಲು ಸುಸಮಯ.

ಸುಖನಿದ್ರೆಯಲ್ಲಿ ಲೋಕವ್ಯವಹಾರವನ್ನು ಮರೆತಿರುವವರೆಷ್ಟೋ ಜನ. ಸ್ವಪ್ನಲೋಕದಲ್ಲಿ ವಿಹಾರಮಾಡುತ್ತಿರುವವರಲವರು. ನಿದ್ದೆ ಬಾರದೆ ಚಿಂತಾ ಸಾಗರದಲ್ಲಿ ಮುಳುಗಿ ಪರಿತಪಿಸುತ್ತಿರುವವರಿಗೂ ಲೆಕ್ಕವಿಲ್ಲ.

ಸರೋಜಳ ಪ್ರತಿಬಿಂಬವನ್ನು ತನ್ನ ಹೃದಯಮಧ್ಯದಲ್ಲಡಗಿಸಿಕೊಂಡಿರುವ ವರದರಾಜನು ಸ್ವಪ್ನಲೋಕದ ಸಾಮ್ರಾಜ್ಯವೈಭವದಲ್ಲಿರುವನು.

ಸರೋಜಳನ್ನು ವಿವಾಹವಾಗಿ ಬಹುಕಾಲವಾದ ಹಾಗೂ, ಅವಳೊಡನೆ ಉದ್ಯಾನವನದಲ್ಲಿ ಸಂತೋಷದಿಂದ ವಿಹರಿಸುತ್ತಿದ್ದ ಹಾಗೆ ಕನಸು ಕಾಣುತ್ತಾ ಆನಂದವೆಂಬ ಮಹಾಸಾಮ್ರಾಜ್ಯದಲ್ಲಿ ಮುಳುಗಿರುವನು.

ಉದ್ಯಾನವನದಲ್ಲಿ ತಿರುಗಾಡಿ ಆಯಾಸಗೊಂಡು ಹುಲ್ಲಿನಮೇಲೆ ಸರೋಜಳು ಕುಳಿತಿರಲು ತಾನು ಅವಳ ತೊಡೆಯಮೇಲೆ ತಲೆಯಿಟ್ಟು ಮಲಗಿರುವನು. ಆಗಿನ ಅವನ ಆನಂದವನ್ನು ಎಷ್ಟು ಹೇಳಿದರೂ ಅಲ್ಪವೇ.

"ಸರೋಜಾ! ಇಂದಿನ ದಿನವೇ ಮಹಾ ಸುದಿನವಲ್ಲವೇ?"

—ಎಂದು ಸರೋಜಳ ಗಲ್ಲವನ್ನು ಚಿವುಟಿ ಕೇಳಿದ ವರದರಾಜ.

"ಅದರಲ್ಲಿ ಅಡ್ಡಿಯೇನಿದೆ?"

—ಎಂದು ಉತ್ತರವಿತ್ತಳು ಸರೋಜ, ವರದರಾಜನ ಕ್ರಾಪನ್ನು ಸರಿ ಪಡಿಸುತ್ತಾ.

"ಕಡೆಗೂ ನಮ್ಮ ಹಠವೇ ಗೆದ್ದಿತು. ನಿನ್ನ ತಂದೆಯು ಒಪ್ಪಿದ್ದೇ ಮಹಾಪ್ರಮಾದ. ನಿನ್ನಂತಹ ಕೋಮಲಾಂಗಿಯನ್ನು ಕೈ ಹಿಡಿಯಲು ನಾನು ಪೂರ್ವಜನ್ಮದಲ್ಲಿ ಪುಣ್ಯ ಮಾಡಿದ್ದೆನು."

—ಎಂದು ನಸುನಕ್ಕ ವರದರಾಜ.

"ನೀವು ಪೂರ್ವಜನ್ಮದಲ್ಲಿ ಪುಣ್ಯಮಾಡಿದ್ದಿರಿ. ನಾನು ಈ ಜನ್ಮದಲ್ಲಿ ತಪಸ್ಸು ಮಾಡಿದೆ. ನಿಷ್ಕಲ್ಮಷವಾದ ಪ್ರೇಮಕ್ಕೆ ದೈವವೂ ಮಣಿಯುತ್ತದೆಂಬು ದಕ್ಕೆ ಇದೊಂದು ನಿದರ್ಶನವೇ ಸಾಕು."

"ನನ್ನ ತ್ಯಾಗವು ಹೆಚ್ಚಿನ ಮಹತ್ವವಲ್ಲ. ನೀನು ಮಾಡಿರುವ ತ್ಯಾಗವೇ ಪ್ರಧಾನವಾದುದು. ನಿನ್ನ ಚರಿತ್ರೆಯನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡ ಬೇಕು."

"ಬೇರೆಯವರು ಬರೆಯುವ ಬದಲು ನೀವೇ ಬರೆಯಿರಿ. ನಾವು ಇಲ್ಲಿಗೆ ಬಂದು ಬಹಳ ವೇಳೆಯಾಯಿತು. ಅತ್ತೇಮಾವರು ನಮ್ಮ ನಿರೀಕ್ಷೆಯಲ್ಲಿರ ಬಹುದು. ನಡೆಯಿರಿ, ಹೋಗೋಣ."

"ನನಗೆ ಇಲ್ಲಿಂದ ಏಳುವುದಕ್ಕೆ ಮನಸ್ಸೇ ಬಾರದು."

"ನಿಮಗೆ ಮನಸ್ಸು ಬಂದಾಗ ಬನ್ನಿ. ನಾನು ಹೋಗುವೆನು."

"ನೀನು ಹೊರಟು ಹೋದರೆ ಈ ಸುಂದರವಾದ ಉದ್ಯಾನವನವು ದುರ್ಗ ಮವಾದ ಅರಣ್ಯದಂತೆ ತೋರುವುದು."

"ನೀವು ಅರಣ್ಯದಲ್ಲಿರುವುದೇ ವಾಸಿ. ಅದಕ್ಕೇ ನೀವು ಯೋಗ್ಯರು. ನಾನು ಹೋಗುವೆನು."

—ಎಂದು ಹೊರಡಲನುವಾದಳು.

ವರದರಾಜನು ಅವಳಿಗೆ ಹೋಗಗೊಡದೆ ತನ್ನ ಎರಡು ಕೈಗಳಿಂದ ತಬ್ಬಿ ಹಿಡಿದನು.

ಹಾಗೆ ಹಿಡಿಯುತ್ತಲೇ ಕನಸಿನ ಲೋಕದಿಂದ ದೂರಾದನು.

ಎಚ್ಚರಗೊಂಡ ವರದರಾಜನು ದೇವರೇ ನನ್ನ ಕನಸನ್ನು ಎಂದಿಗೆ ನನಸು

ಮಾಡುವೆ, ಎಂದು ಬೇಡಿಕೊಂಡನು. ಸ್ವಪ್ನದಲ್ಲಿ ಕಂಡ ದೃಶ್ಯವು ಕಣ್ಣು ಮುಂದೆಯೇ ನಿಂತಂತಾಗಿದೆ.

ಆಗ ರೂಮಿನಲ್ಲಿ ಸರಸರನೆಂದು ಶಬ್ದವಾದಂತಾಯಿತು. ಮುಸುಕೆಳೆದು ಕೊಂಡು ಮಲಗಿದ್ದ ವರದರಾಜನು ಮುಸುಕು ತೆಗೆಯದೆ ಅದೇನು ಶಬ್ದವೆಂದು ಹಾಗೇ ಆಲಿಸಿ ಕೇಳಿದ.

ಇದ್ದಕ್ಕಿದ್ದ ಹಾಗೆಯೇ ಸಣ್ಣ ಧ್ವನಿಯಲ್ಲಿ ವಿಕಾರವಾಗಿ ಕೂಗಿದಂತಾಯಿತು.

ಭೀತಿಗೊಂಡ ವರದರಾಜನು ಇದೇನು ಶಬ್ಧವೆಂದು ನೋಡುವ ನಿಮಿತ್ತ ಮುಖದ ಮೇಲಿದ್ದ ಮುಸುಕೆಳೆದು ನೋಡಿದ.

ಸಣ್ಣದಾಗಿ ಉರಿಯುತ್ತಿದ್ದ ದೀಪದ ಮಬ್ಬು ಬೆಳಕಿನಲ್ಲಿ ಅವನು ನೋಡುವುದೇನು ?

ಭೂತದಂತೆ ಆಕಾರವುಳ್ಳ ವ್ಯಕ್ತಿ. ನೋಡಿದರೆ ಕರಡಿಯಂತೆ ತೋರುತ್ತದೆ. ಶರೀರವೆಲ್ಲಾ ಕೂದಲುಗಳಿಂದ ತುಂಬಿಹೋಗಿದೆ. ಕೈಕಾಲುಗಳು ಸರಿಯಾಗಿ ಕಾಣುತ್ತಿಲ್ಲ. ಮುಖವು ಭಯಂಕರವಾಗಿದ್ದು ಕಣ್ಣುಗಳು ಗಾಜಿನ ಗೋಲಿಗಳಂತೆ ಕಾಣುತ್ತಲಿವೆ. ಆದರ ಕೈಯಲ್ಲಿ ಪಿಸ್ತೂಲು ಆಯುಧಗಳೇನೂ ಇಲ್ಲ.

ಆ ಭೂತಾಕಾರ ವ್ಯಕ್ತಿಯನ್ನು ನೋಡಿ ವರದರಾಜನು ಭಯದಿಂದ ತಲ್ಲಣಿಸಿಹೋದ.

ಈ ಭೂತವೇ ತನ್ನ ಕನಸಿನಲ್ಲಿ ಸರೋಜಳ ರೂಪದಿಂದ ಕಾಣಿಸಿಕೊಂಡಿತೆಂದರಿತು, ಭಯದಿಂದ ಜೋರಾಗಿ ಕಿರುಚಿದ.

ಬೇರೊಂದು ರೂಮಿನಲ್ಲಿ ಮಲಗಿದ್ದ ವರದರಾಜನ ತಂದೆತಾಯಿಯರು ಮಗನು ಕಿರುಚಿದುದನ್ನು ಕೇಳಿ, ಕನಸು ಕಂಡು ಭಯದಿಂದ ಅಬ್ಬರಿಸಿ ಕೂಗಿಕೊಂಡನೆಂದು ಭಾವಿಸಿ ಕೂಡಲೆ ಎದ್ದು ಅವನಲ್ಲಿಗೆ ಬಂದರು.

ಬಂದು ನೋಡಿದರೆ ವರದರಾಜನು ಪ್ರಜ್ಞೆ ತಪ್ಪಿ ಬಿದ್ದಿರುವನು. ಬಾಯಲ್ಲಿ ನೊರೆ ಬರುತ್ತಲಿದೆ. ಗಾಬರಿಗೊಂಡ ತಿಮ್ಮರಾಜುವು ಮಗನ ಹೆಸರಿಡಿದು ಕೂಗಲು ಉತ್ತರವಿಲ್ಲ.

ಸತಿಪತಿಯರಿಬ್ಬರೂ ಗಾಬರಿಗೊಂಡರು.

ತಿಮ್ಮರಾಜುವು ತಕ್ಷಣವೇ ತಣ್ಣೀರು ಸ್ನಾನ ಮಾಡಿ, ಒದ್ದೆ ಬಟ್ಟೆಯಲ್ಲಿಯೇ ದೇವರ ಮುಂದೆ ದೀಪ ಹಚ್ಚಿ ಮಂಗಳಾರತಿ ಮಾಡಿ ಪ್ರಸಾದವನ್ನು ತಂದು ಮಗನ ಹಣೆಗೆ ಹಚ್ಚಿ ತೀರ್ಥವನ್ನು ಬಾಯೊಳಗೆ ಬಿಟ್ಟ.

ವರದರಾಜನು ಕೈಗಳನ್ನು ಬಡಿಯುತ್ತಾ—

"ಅಯ್ಯೋ! ಭೂತ, ಭೂತ" ಎಂದು ಅಬ್ಬರಿಸಿ ಕೂಗಿದ.

ತಮ್ಮ ಮಗನಿಗೆ ಪಿಶಾಚಿ ಹಿಡಿಯಿತೆಂದು ಅವರಿಬ್ಬರೂ ತಲ್ಲಣಿಸಿ, ದೇವರು ತಮಗೆ ಕಷ್ಟವನ್ನು ಕೊಟ್ಟು ಮರೆತಿರುವನೆಂದುಕೊಂಡರು.

ಮಗನನ್ನು ಉಳಿಸಿತೆಂದು ತಮ್ಮ ಮನೆದೇವರಿಗೆ ಹರಕೆ ಹೊತ್ತರು.

ಆಕಸ್ಮಾತ್ ಮಗನು ತಮ್ಮ ಕೈಬಿಟ್ಟರೆ, ತಾವು ವಿಷ ಕುಡಿದು ಪ್ರಾಣ ಕಳೆದುಕೊಳ್ಳಲು ನಿರ್ಧಾರ ಮಾಡಿಕೊಂಡಿರುವರು.

ಇರುವ ಒಬ್ಬ ಮಗನೇ ಹೊರಟುಹೋದರೆ, ತಾವು ಯಾವ ಸುಖ ಸಂತೋಷಕ್ಕಾಗಿ ಬದುಕಿರಬೇಕೆಂದು ಸತಿಪತಿಯರ ಆಲೋಚನೆಯಾಗಿದೆ.

ವರದರಾಜನು ಅಡಿಗಡಿಗೆ 'ಭೂತ ಭೂತ' ಎಂದು ಅಬ್ಬರಿಸಿ ಕಿರುಚಿಕೊಳ್ಳುತ್ತಲೇ ಇದ್ದನು.

ಅಕ್ಕಪಕ್ಕದ ಮನೆಯವರಾರೂ ಅವರ ಸಹಾಯಕ್ಕೆ ಬರಲಿಲ್ಲ.

ಸತಿಪತಿಯರಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಇಬ್ಬರೂ ಮಗನ ಎಡಬಲಗಳಲ್ಲಿ ಕುಳಿತರು.

ಸುಮಾರು ಎರಡು ಘಂಟೆಯವರೆವಿಗೂ ಅಡಿಗಡಿಗೆ ಅಬ್ಬರಿಸಿದ ವರದರಾಜನು ಅನಂತರ ಕಿರುಚಿಕೊಳ್ಳದೆ ನಿದ್ದೆ ಮಾಡಿದ.

ಸತಿಪತಿಯರಿಗೆ ಹೋದ ಜೀವ ಬಂದಂತಾಯಿತು. ಮಗನು ಕೆಟ್ಟ ಕನಸನ್ನು ಕಂಡಿರುವನೆಂದೇ ಮಾತನಾಡಿಕೊಂಡರು.

ಬೆಳಗಿನ ಐದು ಘಂಟೆಯ ವೇಳೆಗೆ ಎಚ್ಚರಗೊಂಡ ವರದರಾಜನಿಗೆ ರಾತ್ರಿ ಕಂಡ ಭೂತಾಕಾರ ವ್ಯಕ್ತಿಯೇ ಎದುರಿಗೆ ನಿಂತಂತಾಗಿದೆ.

ಸರೋಜಳ ನೆನಪೇ ಬಾರದು.

ಭಯದಿಂದ ಕಣ್ಣು ಬಿಟ್ಟು ನೋಡಲು, ಅಕ್ಕಪಕ್ಕ ತನ್ನ ತಂದೆತಾಯಿಯರು ಕುಳಿತಿರುವರು.

ಅವರೂ ಸಹ ಕ್ಷಣಹೊತ್ತು ಅವನ ಕಣ್ಣಿಗೆ ಭೂತದಂತೆಯೇ ಕಂಡರು.

ಮಗನು ಕಣ್ಣುಬಿಟ್ಟುದನ್ನು ನೋಡಿ ಸತಿಪತಿಯರಿಗೆ ಆನಂದವಾಯಿತು.

ಸರಸಮ್ಮನು ಮಗನ ಮೈ ಮುಟ್ಟಿ ನೋಡಲು ಶರೀರವು ಕಾದ ಮರಳಿನಂತಾಗಿದೆ. ಹಣೆಯನ್ನು ಮುಟ್ಟಿ ನೋಡಲು ಅದೂ ಬಿಸಿಯಾಗಿದೆ.

ಭಯದಿಂದ ಜ್ವರ ಬಂದಿದೆಯೆಂದು ಭಾವಿಸಿ ಮಗನೊಡನೆ ಮಾತನಾಡಿದರು.

ವರದರಾಜನು ನರಳುತ್ತಲೇ ರಾತ್ರಿಯ ಅನುಭವವನ್ನು ಹೇಳಿದ. ಕನಸಿನ ವಿವರವನ್ನು ಮಾತ್ರ ಹೇಳಲಿಲ್ಲ.

ಅವರಿಬ್ಬರೂ ಮೊದಲು ನಂಬದೇ ಹೋದರೂ ಕೊನೆಗೆ ನಂಬಲೇಬೇಕಾಯಿತು. ಈ ಮನೆಯಲ್ಲಿ ಯಾವುದೋ ಒಂದು ಗ್ರಹ ಸೇರಿಕೊಂಡಿದೆಯೆಂದೂ, ಇದುವರೆವಿಗೂ ಸುಮ್ಮನಿದ್ದು ಈಗ ತೊಂದರೆ ಕೊಡಲು ಪ್ರಾರಂಭಿಸಿದೆಯೆಂದೂ, ಇನ್ನು ಈ ಮನೆಯಲ್ಲಿ ತಮಗೆ ಕ್ಷೇಮವಿಲ್ಲವೆಂದೂ, ಆದಷ್ಟು ಬೇಗನೆ ಬೇರೆ ಮನೆಗೆ ಹೋಗಬೇಕೆಂದು ತಿಮ್ಮರಾಜು ಯೋಚಿಸಿಕೊಂಡನು.

ಮಗನನ್ನು ಮಂತ್ರವಾದಿಯಲ್ಲಿಗೆ ಕರೆದುಕೊಂಡು ಹೋಗಿ ಮಂತ್ರ ಹಾಕಿಸಿ, ಯಂತ್ರ ಕಟ್ಟಿಸಬೇಕೆಂದು, ತನ್ನ ಪತ್ನಿಗೆ ಅಲ್ಲಿಯೇ ಇರುವಂತೆ ಹೇಳಿ, ಜಟಕಾಗಾಡಿಯಲ್ಲಿ ಹೋಗುವ ನಿಮಿತ್ತ ಗಾಡಿಯನ್ನು ಕರೆತರಲು ಹೊರಗೆ ಹೊರಟನು. ಬಾಗಿಲ ಬಳಿಗೆ ಬಂದು ನೋಡಲು, ಚಿಲಕಗಳು ಮುರಿದು ಹೋಗಿವೆ.

ಅದನ್ನು ನೋಡಿ ತಿಮ್ಮರಾಜನು ಭಯಭ್ರಾಂತನಾದನು. ಯಾವನೋ ಕಳ್ಳನು ಕಳ್ಳತನ ಮಾಡಲು ಪಿಶಾಚಿಯಂತೆ ವೇಷವನ್ನು ಹಾಕಿಕೊಂಡು ಇಲ್ಲಿಗೆ ಬಂದಿದ್ದನೆಂದೂ, ತನ್ನ ಮಗನು ಅವನನ್ನು ನೋಡಿ, ಭೂತವೇ ಪ್ರತ್ಯಕ್ಷವಾಯಿತೆಂಬ ಭೀತಿಯಿಂದ ಕಿರುಚಿಕೊಂಡಿರುವನೆಂದೂ, ಆಗ ಕಳ್ಳನು ಓಡಿ ಹೋಗಿರುವನೆಂದೂ ಊಹೆ ಮಾಡಿಕೊಂಡನು.

ಬಾಗಿಲ ಚಿಲಕಗಳು ಮುರಿದುಹೋಗಿದ್ದ ಪ್ರಯುಕ್ತ, ಕಳ್ಳನೇ ಒಳಗೆ ಬಂದಿದ್ದನೆಂದೂ, ಗ್ರಹವೇನೂ ಸೇರಿಕೊಂಡಿಲ್ಲವೆಂದು ತಿಮ್ಮರಾಜನ ಮನಕ್ಕೆ ನಿರ್ಧಾರವಾಯಿತು.

ಕಳ್ಳನು ತಮ್ಮ ಮನೆಗೆ ಬರುವ ಬದಲು ಶ್ರೀಮಂತರ ಮನೆಗಾದರೂ

ಹೋಗಬಾರದಿತ್ತೇ? ತನ್ನ ಮನೆಯಲ್ಲಿ ಏನು ಸಿಗುವುದೆಂದು ಬಂದಿದ್ದನು? ಎಂದುಕೊಂಡನು.

ಮೊದಲು ಮಗನಿಗೆ ಆರೈಕೆ ಮಾಡಿ ಅನಂತರ ಪೋಲೀಸಿಗೆ ದೂರು ಕೊಡಬೇಕೆಂಬು ಯೋಚಿಸಿ, ಜಟಕಾಗಾಡಿಯನ್ನು ಕರೆತಂದು, ಪತ್ನಿಯನ್ನು ಮನೆಯಲ್ಲಿ ಬಿಟ್ಟು ಮಗನೊಡನೆ ಗಾಡಿಯಲ್ಲಿ ಮಂತ್ರವಾದಿ ವೈದೀಶ್ವರನಲ್ಲಿಗೆ ಹೊರಟನು.

ದೇವರು ಕಷ್ಟದಲ್ಲಿರುವವರಿಗೇ ಇನ್ನೂ ಹೆಚ್ಚಿನ ಕಷ್ಟವನ್ನು ಕೊಡುವುದು. ಅವರ ಮನಸ್ಥೈರ್ಯವನ್ನು ಪರೀಕ್ಷಿಸುವುದಕ್ಕಾಗಿಯೆಂದುಕೊಂಡ ತಿಮ್ಮರಾಜನು ಭಗವಂತನ ಇಚ್ಛೆಯಿದ್ದಂತಾಗಲೆಂದುಕೊಂಡನು.

ಮಂತ್ರವಾದಿಯ ಮನೆಯ ಬಳಿಗೆ ಹೋಗಿ ನೋಡಲು ಅಲ್ಲಿ ನಾಲ್ಕು ಜನರು ಮಾತ್ರವಿದ್ದರು.

ತಿಮ್ಮರಾಜನು ಮಗನೊಡನೆ ಒಂದು ಕಡೆ ಕುಳಿತ. ಜ್ವರದ ಕಾವೇರಿದ್ದ ರಿಂದ ವರದರಾಜನಿಗೆ ಕುಳಿತುಕೊಳ್ಳಲೂ ಶಕ್ತಿಯಿರಲಿಲ್ಲ.

ವೈದೀಶ್ವರನು ನಾಲ್ವರ ಕಷ್ಟಸುಖಗಳನ್ನು ವಿಚಾರಿಸಿ ಅದಕ್ಕೆ ಪರಿಹಾರ ವನ್ನು ಸೂಚಿಸಿ ಕಳುಹಿಸಿ ಬಳಿಕ ತಿಮ್ಮರಾಜುವನ್ನು ವಿಚಾರಿಸಿದ.

ತಿಮ್ಮರಾಜನು ವಿಷಯವನ್ನು ಹೇಳಲು, ಈತನಿಗೆ ಭೀತಿಯಿಂದ ಜ್ವರ ಬಂದಿದೆಯೆಂದರಿತ ವೈದೀಶ್ವರನು ವರದರಾಜನನ್ನು ಮುಂದೆ ಕುಳ್ಳಿರಿಸಿಕೊಂಡು ತಾಮ್ರದ ಬಳೆಯನ್ನು ತನ್ನ ಕೈಗೆ ಏರಿಸಿಕೊಂಡನು.

ಓಂ ನಮೋ ಭಗವತೇ ಭೂತ ಜ್ವರಂ ಬಿಡಾ ।
ಓಂ ನಮೋ ಭಗವತೇ ಕ್ಷಯ ಜ್ವರಂ ಬಿಡಾ ॥
ಓಂ ನಮೋ ಭಗವತೇ ಶೂರ ಜ್ವರಂ ಬಿಡಾ ।
ಓಂ ನಮೋ ಭಗವತೇ ನಾಗ ಜ್ವರಂ ಬಿಡಾ ॥
ಓಂ ನಮೋ ಭಗವತೇ ಸ್ಫೋಟ ಜ್ವರಂ ಬಿಡಾ ।
ಓಂ ನಮೋ ಭಗವತೇ ಪೋಗು ಪೋಗು ಸ್ವಾಹಾ ॥

ಈ ರೀತಿ ಮಂತ್ರವನ್ನುಚ್ಚರಿಸಿದ ಮಂತ್ರವಾದಿಯು ಸರ್ವರೋಗ ನಿವಾರಣ ಯಂತ್ರವನ್ನು ವರದರಾಜನ ಬಲಗೈ ರಟ್ಟೆಗೆ ಕಟ್ಟಿದ.

ತರುವಾಯ ಬಳೆಯನ್ನು ಪಕ್ಕದಲ್ಲಿದ್ದ ಮಣೆಯ ಮೇಲಿರಿಸಿ—

"ಇನ್ನೇನೂ ಭಯಪಡಬೇಡಿ. ನಿಮ್ಮ ಮನೆಯಲ್ಲಿ ಪೀಡೆ, ಪಿಶಾಚಿಗಳೇನೂ ಇಲ್ಲ. ಗೃಹಶಾಂತಿಯನ್ನು ಮಾಡಿಸಬೇಕಾದ ಕಾರಣವಿಲ್ಲ. ಒಂದು ಹೊತ್ತಿನ ಔಷಧವನ್ನು ಕೊಡಿಸಿ. ಮತ್ತೇನೂ ಬೇಕಿಲ್ಲ" ಎಂದು ಹೇಳಿದ.

ಸಂತೋಷಗೊಂಡ ತಿಮ್ಮರಾಜನು ಮಂತ್ರವಾದಿಯು ಕೇಳಿದಂತೆ ಏಳು ರೂಪಾಯಿ ಹದಿಮೂರಾಣೆಯನ್ನು ಕೊಟ್ಟು ಮಗನೊಡನೆ ಗಾಡಿಯಲ್ಲಿಯೇ ಹಿಂದಿರುಗಿದ.

ಮಗನನ್ನು ಮನೆಯಲ್ಲಿ ಬಿಟ್ಟು, ತನ್ನ ಪತ್ನಿಗೆ ಎಚ್ಚರಿಸಿ, ಪೋಲೀಸ್ ಠಾಣೆಗೆ ಹೋಗಿ ಲಿಖಿತ ಮೂಲಕ ದೂರು ಕೊಟ್ಟನಲ್ಲದೆ, ನಡೆದ ವಿಷಯವನ್ನು ವಿವರವಾಗಿ ಹೇಳಿದ.

ಸೋಜಿಗನಾದ ಇನ್ಸ್ಪೆಕ್ಟರನು ಇದರಲ್ಲೇನೋ ಸೂಕ್ಷ್ಮವಿದೆಯೆಂದುಕೊಂಡು ಪುರುಷೋತ್ತಮನಿಗೆ ಫೋನ್ ಮಾಡಿದ.

ಕೆಲಹೊತ್ತಿನಲ್ಲಿಯೇ ಪತ್ತೇದಾರರಿಬ್ಬರು ಪೋಲೀಸ್ ಠಾಣೆಯಲ್ಲಿ ಹಾಜರಾದರು.

ಇನ್ಸ್ಪೆಕ್ಟರನ ಅನುಮತಿಯಂತೆ ತಿಮ್ಮರಾಜನು ಪತ್ತೇದಾರರ ಬಳಿಯಲ್ಲಿ ಒಂದು ಸಾರಿ ನಡೆದ ಪ್ರವರವನ್ನು ಚಾಚೂ ತಪ್ಪದಂತೆ ಹೇಳಿದ.

ವಿಷಯವನ್ನು ಕೇಳಿದ ಪುರುಷೋತ್ತಮನಿಗೆ ಅತ್ಯಂತ ಆಶ್ಚರ್ಯವಾಯಿತಲ್ಲದೆ ರೋಮಾಂಚನವುಂಟಾಯಿತು.

ಕೊಲೆಗಾರನು ಬರೆದಿರುವ ಕಾಗದಗಳ ಕೊನೆಯಲ್ಲಿ ನಿನ್ನ ಚಿರಪರಿಚಿತ ಶತ್ರು, '**ಭಯಂಕರ ಭೂತ**'ನೆಂದು ಬರೆದಿರುವನು. ವರದರಾಜನ ಕಣ್ಣಿಗೆ ಭೂತಾಕಾರವಾಗಿಯೇ ಕಂಡಿರಬೇಕಾದರೆ ಆತನೇ ಆಗಿರಬಾರದೇಕೆಂಬ ಭಾವನೆಯು ಪುರುಷೋತ್ತಮನ ಮನಕ್ಕೆ ಬಾರದಿರಲಿಲ್ಲ.

ಆತನೇ ಆಗಿದ್ದರೆ ಇವರಿಗೂ, ಆತನಿಗೂ ಯಾವುದೋ ಒಂದು ವಿಧದಲ್ಲಿ ಸಂಬಂಧವಿರಬಹುದು. ಸರೋಜಳಿಗೂ ವರದರಾಜನಿಗೂ ಪ್ರಣಯ ಸಂಪರ್ಕವಿರಬಹುದೇ? ಅದನ್ನು ಕೊಲೆಗಾರನು ನೋಡಿರಬಹುದೇ? ಇದ್ದರೂ ಇರಬಹುದು. ಆ ಪ್ರಯುಕ್ತ ವರದರಾಜನಿಗೆ ಏನಾದರೊಂದು ಬಗೆಯಲ್ಲಿ ಅಪಾಯವುಂಟುಮಾಡುವುದಕ್ಕೆ ಹೋಗಿ ಸಾಧ್ಯವಾಗದೆ ಹಿಂದಿರುಗಿರುವನು.

ಎಂಬುದಾಗಿ ಯೋಚಿಸಿಕೊಂಡ ಪುರುಷೋತ್ತಮನು—

"ಅನ್ನದಾನಪ್ಪನವರ ಮಗಳಾದ ಸರೋಜಳನ್ನು ನೀವು ನೋಡಿರುವಿರಲ್ಲವೇ ?" ಎಂದು ತಿಮ್ಮರಾಜುವಿಗೆ ಕೇಳಿದ.

"ಆತನು ನನ್ನ ಸಂಬಂಧೀಕನು. ಅವನ ಮಗಳನ್ನು ನಾನು ನೋಡಿಲ್ಲವೆ ?"

—ಎಂದು ಪ್ರಶ್ನೆಯ ಮೂಲಕ ಉತ್ತರವಿತ್ತ ತಿಮ್ಮರಾಜು:

"ಆ ಸರೋಜಳಿಗೂ ನಿಮ್ಮ ಮಗನಿಗೂ ಏನಾದರೂ........"

ಪುರುಷೋತ್ತಮನು ಮಾತು ಪೂರೈಸುವ ಮೊದಲೇ—

"ಛೀ ! ಛೀ !! ಅಂತಹ ಭಾವನೆಯನ್ನಿಟ್ಟುಕೊಳ್ಳಬೇಡಿ. ನನ್ನ ಮಗನು ಅಂತಹ ಅವಿವೇಕಿಯಲ್ಲ. ಅವನು ದೇವರಂತಹ ಹುಡುಗ" ಎಂದು ಹೇಳಿದ ತಿಮ್ಮರಾಜನು ವಸಂತಳು ಬಂದಾಗ ನಡೆದ ವಿಷಯವನ್ನು ಹೇಳಿದ.

ವರದರಾಜು, ಸರೋಜಳ ಪ್ರಣಯ ಸಂಬಂಧವನ್ನು ಆತನೇನು ಬಲ್ಲನು ?

ಪುರುಷೋತ್ತಮನ ಊಹೆಗಳೆಲ್ಲಾ ಹಿಂದುಮುಂದಾಯಿತು.

ವರದರಾಜನಿಗೂ, ಸರೋಜಳಿಗೂ ಪ್ರೇಮವಿದೆಯೆಂದು ಭಾವಿಸಿದ್ದನು. ಆತನ ತಂದೆಯ ಮಾತಿನಿಂದ ಅವರಿಬ್ಬರಿಗೂ ಸಂಬಂಧವಿಲ್ಲವೆಂದು ತಿಳಿದಂತಾಯಿತು.

ಒಂದು ವೇಳೆ ಅವರಿಬ್ಬರಿಗೂ ರಹಸ್ಯ ಪ್ರಣಯವೇಕಿರಬಾರದೆಂಬ ಯೋಚನೆ ಹೊಳೆದರೂ ಅದನ್ನು ನಂಬಲು ಮನವೊಡಂಬಡಲಿಲ್ಲ.

ಹಾಗಾದರೆ ಆ ಭೂತಾಕಾರ ವ್ಯಕ್ತಿ ಯಾರಿರಬಹುದೆಂಬುದರ ಬಗ್ಗೆ ಪುರುಷೋತ್ತಮನಿಗೆ ದೊಡ್ಡ ಸಮಸ್ಯೆಯುಂಟಾಯಿತು.

ತನಗೆ ಕಾಗದಗಳನ್ನು ಬರೆದವನಿರಬಹುದೇ ? ಅಥವಾ ಬೇರೆಯವನಿರಬಹುದೇ ? ಎಂಬ ವಿಷಯವಾಗಿ ಯೋಚನೆ ಮಾಡಬೇಕಾಯಿತು.

ಭೂತಾಕಾರ ವ್ಯಕ್ತಿಯ ಆಕಾರವನ್ನು ಪ್ರತ್ಯಕ್ಷವಾಗಿ ಕಂಡವನು ವರದರಾಜನಾದ್ದರಿಂದ, ಆತನನ್ನೇ ಕೇಳಿ ತಿಳಿಯುವುದು ಸೂಕ್ತವೆಂದುಕೊಂಡ ಪತ್ತೇದಾರನು ರಾಮನಾಥ ಚಂದ್ರನಾಥರೊಡನೆ ತಿಮ್ಮರಾಜುವಿನ ಮನೆಗೆ ಹೊರಟನು.

ಮನೆಯ ಬಳಿಗೆ ಹೋದನಂತರ ಬಾಗಿಲ ಚಿಲಕಗಳನ್ನು ನೋಡಿ, ಬಳಿಕ ವರದರಾಜನಿಂದ ಭೂತಾಕಾರ ವ್ಯಕ್ತಿಯ ರೂಪರೇಖೆಗಳನ್ನು ಕೇಳಿ ತಿಳಿದುಕೊಂಡ.

ವಿಷಯವನ್ನು ಹೇಳುವಾಗ ವರದರಾಜನ ಶರೀರವು ಕಂಪಿಸುತ್ತಿತ್ತಲ್ಲದೆ, ಮಾತುಗಳಲ್ಲಿ ನಡುಕವಿತ್ತು.

ಈತನು ಪೂರಾ ಭಯಪಟ್ಟಿರುವನೆಂದುಕೊಂಡ ಪುರುಷೋತ್ತಮನು ಆ ರೂಪದಲ್ಲಿ ಇಲ್ಲಿಗೆ ಬಂದು ಈತನಿಗೆ ಭಯಪಡಿಸಿ ಹಿಂದಿರುಗಿರಬೇಕಾದರೆ ಏನೋ ಕಾರಣವಿದೆಯೆಂದುಕೊಂಡು, ಆತನ ಕಾರ್ಯವು ಪೂರ್ಣವಾಗದೆ ಉಳಿಯಿತೆಂದೂ, ಅವನು ತಮ್ಮ ಚಿರಪರಿಚಿತ ವೈರಿ **ಭಯಂಕರ ಭೂತ** ನಾಮಾಂಕಿತನಲ್ಲದೆ ಬೇರೆಯವನಲ್ಲವೆಂದು ಊಹೆ ಮಾಡಿಕೊಂಡನು.

ಅವನ ಊಹೆಗೆ ಆಧಾರವಿಲ್ಲ. ಆದರೂ ನಡೆದಿರುವ ಸನ್ನಿವೇಶಗಳ ಬಗ್ಗೆ ಕರ್ಪೂರದ ಗೋಪುರವನ್ನು ಕಟ್ಟಿರುವನು.

ಆತನ ಕಾರ್ಯವು ಪೂರ್ಣವಾಗದೆ ಉಳಿದಿರುವುದರಿಂದ ಇನ್ನೊಂದು ಸಾರಿ ಇಲ್ಲಿಗೆ ಬರಬಹುದೆಂದೂ ಆ ಪ್ರಯುಕ್ತ ವರದರಾಜುವಿಗೆ ಜೆಂಗಾವಲಾಗಿದ್ದು ಆತನು ಬಂದಾಗ ಹಿಡಿಯಬೇಕೆಂದೂ ಯೋಚಿಸಿಕೊಂಡನು.

ವರದರಾಜುವಿನೊಡನೆ ಸರೋಜಳ ವಿಷಯವನ್ನು ಕೇಳಲಿಲ್ಲ.

ಒಂದು ವೇಳೆ ಕೇಳಿದ್ದರೆ ವರದರಾಜನು ಏನು ಹೇಳುತ್ತಿದ್ದನೋ ಏನೋ.

ಕೊಲೆಯಾದ ಡಾಕ್ಟರ್ ವಿಷಯವಾಗಿ ಪ್ರಶ್ನಿಸಲು ಅವರಿಗೂ, ಇವರಿಗೂ ಯಾವ ವಿಧದಲ್ಲಿಯೂ ಸಂಬಂಧವಿಲ್ಲವೆಂದು ತಿಳಿಯಿತು.

ಈ ವೇಳೆಯಲ್ಲಿ ಕೊಲೆಗಾರನು ತಮ್ಮ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದರೂ ಇರಬಹುದು. ಆದ್ದರಿಂದ ಇಲ್ಲಿ ಹೆಚ್ಚು ಕಾಲ ಇರಬಾರದೆಂದು ಯೋಚಿಸಿ, ತಿಮ್ಮರಾಜುವಿಗೆ ಅಭಯವಿತ್ತು ತನ್ನವರೊಡನೆ ಹಿಂದಿರುಗಿದ.

ಹರಿದಾಸನ ಕಾರ್ಯವಿದ್ದರೂ ಇರಬಹುದೆಂದು ರಾಮನಾಥನು ಆಲೋಚಿಸಿಕೊಂಡನು. ಅವನ ಆಲೋಚನೆಗೆ ಆಧಾರವೇ ಇಲ್ಲ.

ಪೋಲೀಸ್ ಠಾಣೆಯನ್ನು ತಲುಪಿದನಂತರ ಪುರುಷೋತ್ತಮನು ತನ್ನ ಆಲೋಚನೆಯನ್ನು ಹೇಳಲು ಅವರಿಬ್ಬರೂ ಸರಿಯೆಂದು ಒಪ್ಪಿಕೊಂಡರು.

ತಾನೇ ಆ ಕಾರ್ಯವನ್ನು ನಿರ್ವಹಿಸುನೆಂದು ಪುರುಷೋತ್ತಮನು ಹೇಳಲು, ಬಾಲಕೃಷ್ಣನ ಮೇಲೆ ಸಂದೇಹಗೊಂಡಿದ್ದ ರಾಮನಾಥನು ಅವನನ್ನು ಪತ್ತೇಮಾಡಿ ಹಿಡಿಯುವ ಭಾರವನ್ನು ತಾನು ವಹಿಸಿಕೊಳ್ಳುವೆನೆಂದ.

ಹಿಂದಿನ ರಾತ್ರಿ ತಿಮ್ಮರಾಜುವಿನ ಮನೆಯಲ್ಲಿ ನಡೆದ ಪ್ರವರವು ಬಹು ಬೇಗನೆ ಒಬ್ಬರಿಂದೊಬ್ಬರಿಗೆ ಹರಡಿ, ಬಹು ಜನರಿಗೆ ತಿಳಿಯುವಂತಾಯಿತು.

ವಿಷಯವನ್ನರಿತ ಸರೋಜಳು ಅತ್ಯಂತ ವಿಷಾದಗೊಂಡಳು. ಅವರಿಬ್ಬರ ರಹಸ್ಯ ಪ್ರಣಯವನ್ನರಿಯದ ಮನೋರಮೆ, ಮುರಿದಾಸರು ಆ ಬಗ್ಗೆ ಕಿಂಚಿತ್ತೂ ವ್ಯಸನ ಪಡಲಿಲ್ಲ.

ಆ ದಿನವೇ ವರದರಾಜನನ್ನು ಸರೋಜಳು ಉದ್ಯಾನವನದಲ್ಲಿ ರಹಸ್ಯ ವಾಗಿ ಸಂಧಿಸಬೇಕಿತ್ತು.

ವರದರಾಜನು ಜ್ವರದ ಬೇಗೆಯಿಂದ ನರಳಿ ಹಾಸಿಗೆ ಹಿಡಿದಿರುವಾಗ ಅವಳನ್ನು ಸಂಧಿಸಲು ಸಾಧ್ಯವೇ? ಒಂದೆರಡು ದಿನಗಳ ಹಿಂದೆ ತಾವು ಒಬ್ಬರನ್ನೊಬ್ಬರು ಸಂಧಿಸುವ ಕಾಲ ಬಂದಿತೆಂದು ಆನಂದಗೊಂಡಿದ್ದರು. ಈಗ ಆ ಆಸೆಯು ನೆರವೇರುವ ಹಾಗಿಲ್ಲ.

ಒಂದು ವೇಳೆ ಸಂಧಿಸಿದ್ದರೆ ಅವರಿಬ್ಬರ ಮೇಲೂ ಕಣ್ಣಿಟ್ಟಿರುವ ಪುರುಷೋತ್ತಮನ ಕೈಗೆ ಸಿಕ್ಕಿಬೀಳದಿರುತ್ತಿರಲಿಲ್ಲ. ಆ ಸನ್ನಿವೇಶವನ್ನು ದೇವರೇ ತಪ್ಪಿಸಿದಂತಾಗಿದೆ.

ವರದರಾಜನನ್ನು ನೋಡಲು ಸರೋಜಳ ಮನಸ್ಸು ತವಕಗೊಂಡಿದ್ದರೂ ಸಾಧ್ಯವಿಲ್ಲವಾಗಿದೆ. ದೇವರು ತನಗೆಂತಹ ಸಂಕಟವನ್ನು ತಂದಿಟ್ಟನಲ್ಲಾ ಎಂದು ದೇವರನ್ನು ಹಳಿದಳು.

ಅವರಿಬ್ಬರೂ ತಮ್ಮ ಅನುರಾಗವನ್ನು ರಹಸ್ಯವಾಗಿಟ್ಟಿರುವುದರಿಂದಲೇ ಮನೋವೇದನೆಯನ್ನನುಭವಿಸಬೇಕಾದ ಪರಿಸ್ಥಿತಿಯೊದಗಿದೆ. ಪತ್ರವ್ಯವಹಾರ ನಡೆಯಿಸಲೂ ಸಾಧ್ಯವಿಲ್ಲ.

ಜ್ವರದ ತಾಪದಲ್ಲಿ ಬೇಯುತ್ತಿದ್ದರೂ ವರದರಾಜನು ಸರೋಜಳ ವಿಷಯವಾಗಿಯೇ ಯೋಚಿಸುತ್ತಾ ಪರಿತಪಿಸುತ್ತಿರುವನು.

೧೪

ಅನ್ನದಾನಪ್ಪನವರನ್ನು ಪತ್ತೇಮಾಡಿ ಹಿಡಿಯುವ ಜವಾಬ್ದಾರಿಯನ್ನು ನಿರ್ವಹಿಸಿಕೊಂಡಿದ್ದ ಮರಿದಾಸನು ಹಲವು ದಿನಗಳು ತಟಸ್ಥನಾಗಿದ್ದು, ಬಳಿಕ ತನ್ನ ಭಾವನು ಎಲ್ಲಿದ್ದರೂ ಸರಿ, ತಾನಾಗಿಯೇ ಬರುವಂತೆ ಮಾಡಬೇಕೆಂದು ಯೋಚಿಸಿ ಪತ್ರಿಕೆಗಳಲ್ಲಿ ಜಾಹಿರಾತು ಹೊರಡಿಸಿದ.

ಅಂಗಡಿಯಲ್ಲಿ ಮೋಸ ವ್ಯವಹಾರವು ನಡೆಯಬಹುದೆಂಬ ಭಾವನೆಯಿಂದ ತನ್ನ ಸಹೋದರಿಯ ಅನುಮತಿಯನ್ನು ಪಡೆದು ಅಂಗಡಿಯನ್ನು ಮುಚ್ಚಿಸಿದ.

ಕೆಲಸಗಾರರಾರೂ ತಕರಾರು ಮಾಡಲಿಲ್ಲ.

ಮರಿದಾಸನು ಹೊರಡಿಸಿದ್ದ ಜಾಹಿರಾತನ್ನು ನೋಡಿ, ಪತ್ತೇದಾರರು ಆಶ್ಚರ್ಯಪರಾದರು.

ಮರಿದಾಸನನ್ನು ಪೋಲೀಸ್ ಠಾಣೆಗೆ ಕರೆಯಿಸಿ, ವಿಚಾರಿಸಲು, ತನ್ನ ಭಾವನು ಬರುವುದಕ್ಕೆ ಸೂಕ್ತ ಉಪಾಯವೆಂದು ಆತನು ಹೇಳಿದ.

ಪುರುಷೋತ್ತಮನು ಆತನ ಯುಕ್ತಿ, ಕೌಶಲ್ಯಕ್ಕೆ ತನ್ನ ಮೆಚ್ಚಿಗೆಯನ್ನು ಸೂಚಿಸದಿರಲಿಲ್ಲ.

ಆದರೇ! ಅನ್ನದಾನಪ್ಪನವರು ಕೊಲೆಗಾರನ ಸೆರೆಮನೆಯಲ್ಲಿರುವರೆಂದೇ ಆತನ ಭಾವನೆ.

ಮಗಳ ಮೇಲೆ ಸಿಟ್ಟು ಮಾಡಿಕೊಂಡು ಹೊರಟ ಅನ್ನದಾನಪ್ಪನವರು, ಒಂದೆರಡು ದಿನಗಳು ಬಿಗುಮನಸ್ಸಿನಿಂದಿದ್ದರೆ ತಾನಾಗಿಯೇ ಸರಿಹೋಗುವುದಲ್ಲದೆ, ಹಲವು ದಿನಗಳು ಇವರ ಕಣ್ಮರೆಯಾಗಿದ್ದರೆ, ಸರೋಜಳು ಭಯಪಟ್ಟು ತನ್ನ ದಾರಿಗೆ ಬರುವಳೆಂದು ಭಾವಿಸಿದ್ದರು.

ತಾನೊಂದು ಬಗೆದರೆ ದೈವವೊಂದು ಬಗೆಯಿತೆಂಬ ಗಾದೆಯಂತೆ, ವಿಚಿತ್ರ ರೀತಿಯ ಪ್ರಸಂಗವು ನಡೆದು ಹೋಗಿದೆ.

ಮನೆಯಿಂದ ಹೊರಟವರು ಉದ್ಯಾನವನದ ಬಳಿಗೆ ಹೋಗಿ, ಕುಳಿತಾಗ, ಪತ್ರಿಕೆ ಮಾರುವವರು ಕೂಗುತ್ತಾ ಇರಲು, ಮನಶ್ಯಾಂತಿಗಾಗಿ ಪತ್ರಿಕೆಯನ್ನು ಕೊಂಡರು.

ಕಣ್ಣುಗಳು ಪತ್ರಿಕೆಯ ಮೇಲಿದ್ದರೂ ಗಮನವು ಅದರ ಮೇಲಿರಲಿಲ್ಲ.

ಬೇಕಾಬಿಟ್ಟಿಯಾಗಿ ಓದುತ್ತಿರಲು ಪತ್ರಿಕೆಯ ಒಂದು ಭಾಗದಲ್ಲಿ ಬರೆದಿದ್ದ ವಿಷಯವು ಅವರ ಗಮನವನ್ನು ಸೆಳೆಯಿತು.

ಅದ್ಭುತ ಸಾಮರ್ಥ್ಯವುಳ್ಳ ಯಕ್ಷಿಣಿ ಯಂತ್ರ

ವೇದಾಂತ ಶಿರೋಮಣಿ, ದೈವಜ್ಞ ಶಿಖಾಮಣಿ, ಮಹಾ ಮಂತ್ರವಾದಿ, ವಿಭೂತಿಪುರುಷ ಪರಮಶಿವಂಪಿಳ್ಳೆಯವರು, ಗ್ರಹಣ ಕಾಲದಲ್ಲಿ ಸ್ಮಶಾನದಲ್ಲಿ ಕುಳಿತು ರುದ್ರಾದಿ ದೇವತೆಗಳ ಸಮಕ್ಷಮದಲ್ಲಿ ತಯಾರಿಸಿದ ಸರ್ವಾರಿಷ್ಟ ರೋಗ ನಿವಾರಕ ಯಂತ್ರ.

ಜಗತ್ತಿನ ಕಷ್ಟಜೀವಿಗಳ ಕಲ್ಯಾಣಕ್ಕೋಸ್ಕರ ತಯಾರಿಸಿದ ಈ ಯಂತ್ರವನ್ನು ಕಟ್ಟಿಕೊಂಡರೆ, ದುರ್ಬುದ್ಧಿಯು ದೂರಾಗಿ, ಸದ್ಬುದ್ಧಿಯುಂಟಾಗುವುದು. ದಾರಿದ್ರ್ಯವು ನಿವಾರಣೆಯಾಗಿ, ಹಣವಂತನಾಗುವನು. ವ್ಯಾಪಾರದಲ್ಲಿ ಲಾಭವುಂಟಾಗಿ, ಆನಂದವುಂಟಾಗುವುದು. ರೋಗರುಜಿನಾದಿಗಳು ನಾಶವಾಗಿ ಆರೋಗ್ಯವಂತನಾಗುವನು. ಕೋರ್ಟು ಕಛೇರಿಗಳ ವ್ಯವಹಾರವಿದ್ದರೆ ಜಯಲಭಿಸುವುದು. ಶತ್ರುಗಳು ಮಿತ್ರರಾಗುವರು. ಮನೆಯಿಂದ ಓಡಿಹೋದವರು ಹಿಂದಿರುಗಿ ಬರುವರು. ನೀವು ಯೋಚಿಸಿದ ಕಾರ್ಯವು ನಿಮ್ಮ ಮನಸ್ಸಿನಂತೆಯೇ ನಡೆಯುವುದು.

ಮದುವೆಯಾಗಿ ಹತ್ತಾರು ವರ್ಷಗಳು ಮಕ್ಕಳಾಗದೇ ಇದ್ದರೂ ಈ ಯಂತ್ರವನ್ನು ಕಟ್ಟಿಕೊಂಡರೆ ಪುತ್ರಲಾಭವಾಗುತ್ತದೆ.

ಸರ್ಪದೋಷ, ಬಾಲಗ್ರಹದೋಷ, ಪೀಡೆ, ಪಿಶಾಚಿಗಳ ಬಾಧೆಯಿದ್ದವರು ಈ ಯಂತ್ರವನ್ನು ಹೊಂದಿದರೆ ಆ ದೋಷ, ಮತ್ತು ಬಾಧೆಗಳಿಂದ ಮುಕ್ತರಾಗಿ ಸೌಖ್ಯವನ್ನು ಹೊಂದುವರು.

ಹಸು, ಎಮ್ಮೆಗಳು ಹಾಲು ಕೊಡದೆ ಇದ್ದರೆ ಯೋಚನೆ ಮಾಡಬೇಕಿಲ್ಲ. ಈ ಯಂತ್ರವನ್ನು ಅವುಗಳ ಕೊರಳಿಗೆ ಕಟ್ಟಿದರೆ, ಮೊದಲಿಗಿಂತ ಎರಡರಷ್ಟು ಹಾಲು ಕೊಡುತ್ತದೆ. ಅವುಗಳಿಗೆ ರೋಗವಿದ್ದರೂ ಯಂತ್ರ ಸಾಮರ್ಥ್ಯದ ಬಲದಿಂದ ನಿವಾರಣೆಯಾಗುತ್ತದೆ.

ಹಾವು, ಚೇಳು, ಹುಚ್ಚುನಾಯಿ ಮತ್ತು ಇನ್ನಿತರ ದುಷ್ಟ ಪ್ರಾಣಿಗಳು ಕಚ್ಚಿದವರ ರಟ್ಟೆಗೆ ಈ ಯಂತ್ರವನ್ನು ಕಟ್ಟಿದರೆ, ಅಳುತ್ತಿದ್ದವರು ಕೂಡಲೇ ನಗುವರು. ತಮಗೆ ಏನೂ ಕಚ್ಚಲಿಲ್ಲವೆಂದು ಹೇಳುವರು.

ಈ ಯಂತ್ರವು ಮನೆಯೊಳಗಿದ್ದರೆ ಕಳ್ಳತನದ ಭಯವಿರುವುದಿಲ್ಲ. ರಾತ್ರಿಯ ವೇಳೆ ನಿರ್ಭಯರಾಗಿ, ಓಡಾಡಿಕೊಂಡಿರಬಹುದು. ಕಾಡಿನಲ್ಲಿದ್ದರೂ ಸರಿ, ದುಷ್ಟ ಪ್ರಾಣಿಗಳೂ ಸಹ ನಿಮ್ಮ ಹತ್ತಿರ ಬರದೆ ಹಾಗೇ ಹೊರಟು ಹೋಗುವುವು.

ಈ ಯಂತ್ರವೊಂದು ನಿಮ್ಮ ಬಳಿಯಲ್ಲಿದ್ದರೆ, ಗಂಡು ಹೆಣ್ಣಿನ ಸಮಸ್ಯೆಯೂ ಸುಲಭವಾಗಿ ಇತ್ಯರ್ಥವಾಗುತ್ತದೆ. ಯಂತ್ರದ ವಿಷಯವಾಗಿ ಹೆಚ್ಚು ಬರೆದರೆ ನಾವೇ ಹೊಗಳಿಕೊಂಡಂತಾಗುವುದು.

ಬಡವರಿಗೆ ಕಲ್ಪವೃಕ್ಷ, ರೈತರಿಗೆ ಕಾಮಧೇನು. ವ್ಯಾಪಾರಸ್ಥರಿಗೆ ವೃದ್ಧಿರತ್ನವೆಂದು ಯಂತ್ರವನ್ನು ಕೊಂಡವರೇ ವರ್ಣನೆ ಮಾಡಿ ಹೇಳಿರುವಾಗ ನಾವು ಹೊಗಳಿಕೊಳ್ಳುವುದೇನಿದೆ?

ಯಂತ್ರದ ಬೆಲೆ ರೂ. ೭೫-೦೦

ದೊರೆಯುವ ಸ್ಥಳ:

ಪರಮಶಿವಂಪಿಳ್ಳೆ

ಕಾವೇರಿ ಬೀದಿ, ಲಕ್ಷ್ಮೀಸಾಗರ.

ಸೂಚನೆ:- ಅಡ್ವಾನ್ಸ್ ಮೂಲಕ ಆರ್ಡರ್ ಕೊಡುವುದರ ಬದಲು, ಖುದ್ದಾಗಿ ಬಂದು, ತಮ್ಮ ಕಷ್ಟಸುಖಗಳನ್ನು ಹೇಳಿ ಕೊಂಡು ಯಂತ್ರವನ್ನು ಪಡೆಯುವುದು ಉತ್ತಮ. ನಾವು ದಲ್ಲಾಳಿಗಳನ್ನು ನಿಯಮಿಸಿಲ್ಲ. ನಮ್ಮಲ್ಲಿಯಲ್ಲದೆ ಬೇರೆಲ್ಲಿಯೂ ಯಂತ್ರಗಳು ದೂರೆಯುವುದಿಲ್ಲ. ನಕಲಿ ಯಂತ್ರಗಳಿಗೆ ಮೋಸ ಹೋಗಬೇಡಿ.

ಈ ರೀತಿ ಬರೆದಿರುವುದನ್ನು ನೋಡಿ ಅನ್ನದಾನಪ್ಪನವರು ಬೆರಗಾದ ರಲ್ಲದೆ, ಈ ಒಂದು ತಾಯಿತವನ್ನು ತಮ್ಮ ಬಳಿಯಲ್ಲಿಟ್ಟುಕೊಂಡರೆ, ಏನು ಕಾರ್ಯ ಬೇಕಾದರೂ ಸುಲಭವಾಗಿ ಸಿದ್ಧಿಸಿಕೊಳ್ಳಬಹುದೆಂದುಕೊಂಡರು.

ಇಂತಹ ಅದ್ಭುತ ಸಾಮರ್ಥ್ಯವುಳ್ಳ ತಾಯಿತಕ್ಕೆ ಎಪ್ಪತ್ತೈದು ರೂಪಾಯಿ ಗಳು ಹೆಚ್ಚಲ್ಲವೆಂದು ತಿಳಿದರಲ್ಲದೆ, ಅದರ ದೆಸೆಯಿಂದ ಸರೋಜಳು ತನ್ನ ಹಠವನ್ನು ಬಿಟ್ಟು ತಾನೇಳಿದಂತೆ ಕೇಳುವಳಲ್ಲದೆ, ಒಂದು ವೇಳೆ ರಾಜಗೋಪಾ ಲನಿಗೆ ಸರೋಜಳ ಮೇಲೆ ಮನಸ್ಸಿಲ್ಲದೆ ಹೋದರೂ ತಾಯಿತದ ಮಹಿಮೆ ಯಿಂದ ಸರಿಪಡಿಸಬಹುದೆಂದುಕೊಂಡರು.

ಲಕ್ಷ್ಮೀಸಾಗರವು ಕಾಂಚೀನಗರದಿಂದ ಸಾವಿರದ ಇನ್ನೂರೈವತ್ತೇಳು ಮೈಲಿಗಳ ದೂರವಿದೆ.

ಯಾರಲ್ಲಿಯೂ ತಿಳಿಸದೆ ಲಕ್ಷ್ಮೀಸಾಗರಕ್ಕೆ ಹೋಗಿ ತಾಯಿತವನ್ನು ತೆಗೆದುಕೊಂಡು, ಹಿಂದಿರುಗಬೇಕೆಂದು ಯೋಚಿಸಿ, ಹಾಗೇ ಅಂಗಡಿಗೆ ಹೋಗಿ, ವ್ಯಾಪಾರವಾಗಿದ್ದ ಹಣವನ್ನೆಲ್ಲಾ ಜೇಬಿನಲ್ಲಿ ಹಾಕಿಕೊಂಡು, ಅಲ್ಲಿ ಏನೊಂದೂ ವಿಷಯವನ್ನು ಮಾತನಾಡದೆ ರೈಲ್ವೇ ನಿಲ್ದಾಣಕ್ಕೆ ಹೊರಟರು.

ಹಿಂದೆ ಅದೇ ರೀತಿ ನಾಲ್ಕಾರು ಸಾರಿ ಹಣ ತೆಗೆದುಕೊಂಡಿದ್ದ ಪ್ರಯುಕ್ತ ಅಂಗಡಿಯಲ್ಲಿದ್ದವರಾರೂ ಮಾತನಾಡಲಿಲ್ಲ.

ರೈಲ್ವೇ ನಿಲ್ದಾಣಕ್ಕೆ ಹೋದ ಅನ್ನದಾನಪ್ಪನವರು ಲಕ್ಷ್ಮೀಸಾಗರಕ್ಕೆ ಟಿಕೇಟನ್ನು ಕೊಂಡು, ರೈಲು ಬರುವವರೆವಿಗೆ ನಿರೀಕ್ಷಿಸಿ, ಎರಡನೆಯ ತರಗತಿಯಲ್ಲಿ ಕುಳಿತರು. ಆಗ ಅಂಗಡಿ, ಮನೆಯ ವಿಷಯವಾಗಿ ಯೋಚನೆಯನ್ನೇ ಮಾಡಲಿಲ್ಲ.

ಅವರ ಮನದಲ್ಲಿ ಏನೋ ಒಂದು ಬಗೆಯ ಹರ್ಷವು ಒಡಮೂಡಿದೆ.

ದೇವರೇ ತಮಗೆ ಪತ್ರಿಕೆಯನ್ನು ಕರುಣಿಸಿ ಕಾಪಾಡಿದನೆಂದುಕೊಂಡರು.

ಕಾಂಚೀನಗರದಿಂದ ಹೊರಟ ರೈಲು ಆ ವೇಳೆಯಿಂದ ಆರವತ್ತೆರಡು ಘಂಟೆಗಳಿಗೆ ಲಕ್ಷ್ಮೀಸಾಗರವನ್ನು ತಲುಪಿತು.

ಈಗಾಗಲೇ ತಮ್ಮನ್ನು ಕಾಣದೆ ಪರಿತಪಿಸುತ್ತಿರಬಹುದೆಂದುಕೊಂಡ ಅನ್ನದಾನಪ್ಪನವರು, ನಿಲ್ದಾಣದಲ್ಲಿಳಿದು, ಊರಿನೊಳಗೆ ಪ್ರವೇಶಿಸಿ, ನೇರವಾಗಿ ಮಂತ್ರವಾದಿಯಲ್ಲಿಗೆ ಹೋಗಬಾರದೆಂದರಿತು, ಒಂದು ಹೋಟೆಲಿನಲ್ಲಿ ರೂಮನ್ನು ಪಡೆದು, ಆ ದಿನ ಎಲ್ಲಿಗೂ ಹೋಗದೆ ಪ್ರಯಾಣದ ಆಯಾಸವನ್ನು ಕಳೆದುಕೊಂಡರು.

ಪರಮಶಿವಂಪಿಳ್ಳೆಯವರನ್ನು ನೋಡುವವರೆವಿಗೆ ಅವರ ಮನಸ್ಸಿಗೆ ಸಮಾಧಾನವಿಲ್ಲ.

ಮಾರನೆಯ ದಿನ ಕಾವೇರಿ ಬೀದಿ ಎಲ್ಲಿರುವುದೆಂದು ಹೋಟೆಲಿನವನೊಡನೆ ಕೇಳಿ ತಿಳಿದುಕೊಂಡು ಅಲ್ಲಿಗೆ ಹೋದರು.

ಆ ಬೀದಿಗೆ ಪರಮಶಿವಂಪಿಳ್ಳೆಯವರ ಮನೆಯೊಂದೇ ದೊಡ್ಡದಾಗಿರುವುದಲ್ಲದೆ, ಮನೆಯ ಮುಂದೆ ಬೋರ್ಡು ನೇತು ಹಾಕಿದೆ.

ಮನೆಯ ಮುಂದಿದ್ದ ಜಗಲಿಯ ಮೇಲೆ ಆರೇಳು ಜನರು ಕುಳಿತು ಕಾಡುಹರಟೆಯ ಮಾತನಾಡುತ್ತಾ, ಎಲೆ ಅಡಕೆ ಅಗಿಯುತ್ತಿರುವರು.

ಅನ್ನದಾನಪ್ಪನವರು ಅವರ ಸಮೀಪಕ್ಕೆ ಹೋಗಿ—

"ಪರಮಶಿವಂಪಿಳ್ಳೆಯಿರುವರೇ ?" ಎಂದು ತಮ್ಮ ಸ್ವಭಾವಸಿದ್ಧವಾದ ಧ್ವನಿಯಲ್ಲಿ ಕೇಳಿದರು.

ಪಿಳ್ಳೆಯವರು ಸಮೀಪದಲ್ಲಿದ್ದ ಹಳ್ಳಿಗೆ ಹೋಗಿರುವರೆಂದೂ, ಹಿಂದಿರುಗಲು ಮೂರು, ನಾಲ್ಕು ದಿನಗಳಾಗುವುದೆಂದು ಅಲ್ಲಿದ್ದವರಿಂದ ತಿಳಿಯಿತು.

ಹೇಗೂ ಬಂದಿರುವೆನು. ಬಂದ ಕಾರ್ಯವನ್ನು ಮುಗಿಸಿಕೊಂಡೇ ಹಿಂದಿರುಗಬೇಕೆಂದು, ಯೋಚಿಸಿದ ಅನ್ನದಾನಪ್ಪನವರು, ಅಲ್ಲಿದ್ದವರು ಕುಶಲ ಪ್ರಶ್ನೆ ಮಾಡಿದರೂ ಮಾತನಾಡದೆ ಹಿಂದಿರುಗಿದರು.

ದಿನಗಳನ್ನು ಕಳೆಯುವುದೇ ಅವರಿಗೆ ಮಹಾ ಕಠಿಣವಾಯಿತು.

ದಿನವೂ ಪತ್ರಿಕೆಗಳನ್ನು ಓದುತ್ತಾ ಕಾಲಹರಣ ಮಾಡಿದರು. ಹೊತ್ತು ಕಳೆಯಲು ಸಿನಿಮಾ, ನಾಟಕಗಳಿಗೆ ಹೋಗಿ ಬಂದರು.

ಮಾತನಾಡುತ್ತಾ ಬೇಸರ ಕಳೆಯಲು ಆ ಊರಿನಲ್ಲಿ ಅವರಿಗೆ ಸ್ನೇಹಿತರೇ ಇಲ್ಲ.

ಮೂರು ದಿನಗಳನ್ನು ಹೇಗೋ ಕಳೆದು ನಾಲ್ಕನೆಯ ದಿನ ಮಂತ್ರವಾದಿಯನ್ನು ನೋಡುವುದಕ್ಕೆಂದು ಹೋದರು.

ಅಲ್ಲಿಗೆ ಹೋಗಿ ನೋಡಲು ಪರಮಶಿವಂಪಿಳ್ಳೆಯವರು ಬಂದಿರುವರೆಂದು ತಿಳಿಯಿತು.

ಆಗ ಅನ್ನದಾನಪ್ಪನವರಿಗುಂಟಾದ ಸಂತೋಷವನ್ನು ಎಷ್ಟು ವರ್ಣಿಸಿದರೂ ಅಲ್ಪವೇ. ದೇವಲೋಕಕ್ಕೆ ಹೋಗಿ ಅಮೃತವನ್ನು ಕುಡಿದು ಅಮರತ್ವವನ್ನು ಪಡೆದು ಹಿಂದಿರುಗಿದವರೂ, ಅವರಷ್ಟು ಆನಂದಪಡಲಾರರು.

ಬಾಗಿಲ ಬಳಿಯಲ್ಲಿ ಒಬ್ಬ ಸೇವಕನು ಕುರ್ಚಿಯ ಮೇಲೆ ಕುಳಿತಿದ್ದನು. ಅನ್ನದಾನಪ್ಪನವರು ಅವನಲ್ಲಿ ಮಾತನಾಡಿ, ಮಂತ್ರವಾದಿಯಿದ್ದಲ್ಲಿಗೆ ಹೋದರು.

ಪರಮಶಿವಂಪಿಳ್ಳೆಯವರು ವ್ಯಾಘ್ರಾಸನದ ಮೇಲೆ ಗಂಭೀರರಾಗಿ ಕುಳಿತಿರುವರು. ಅವರ ಕೈಯಲ್ಲಿ ಭಗವದ್ಗೀತೆಯಿದೆ.

ಆ ರೂಮಿನಲ್ಲಿ ಯಂತ್ರ, ಮಂತ್ರೋಪಕರಣ ವಸ್ತುಗಳೇನೂ ಇಲ್ಲ.

ರೂಮಿನ ಸುತ್ತಲೂ ದೇಶದ ಮಹಾನಾಯಕರ ಫೋಟೋಗಳಿವೆ. ಒಂದು ಕಡೆ ಪರಮಶಿವಂಪಿಳ್ಳೆಯವರ ಫೋಟೋ ಇದೆ.

ಅನ್ನದಾನಪ್ಪನವರು ಮಂತ್ರವಾದಿಗೆ ನಮಸ್ಕರಿಸಲು, ಅವರು ಪ್ರತಿನಮಸ್ಕರಿಸಿ ಕುಳಿತುಕೊಳ್ಳುವಂತೆ ಹೇಳಿ ಬಳಿಕ ಕಾರಣವನ್ನು ವಿಚಾರಿಸಿದರು.

ಯಾವುದೊಂದು ವಿಷಯವನ್ನೂ ಮುಚ್ಚಿಡದೆ, ಅನ್ನದಾನಪ್ಪನವರು ಸಂಕ್ಷೇಪವಾಗಿ ತಾವು ಬಂದ ಕಾರಣವನ್ನು ಹೇಳಿದರು.

"ಅಷ್ಟು ಮಾತ್ರವೇ? ಅದೇನೂ ಅಂತಹ ಪ್ರಮಾದ ವಿಷಯವಲ್ಲ. ಅಲ್ಪ ದಿನಗಳಲ್ಲಿಯೇ ಸರಿಹೋಗುತ್ತದೆ. ನೀವು ಇಲ್ಲಿಂದ ಹಿಂದಿರುಗಿ ಹೋಗುವುದರೊಳಗೆ ಸರಿಹೋದರೂ ಹೋಗಬಹುದು. ನೀವು ನಾಳೆಯ ದಿನ ಸಾಯಂಕಾಲ ಬನ್ನಿ. ತಾಯಿತಕ್ಕೆ ಪೂಜೆ ಮಾಡಿ ಸಿದ್ಧ ಮಾಡಿಡುವೆನು"

—ಎಂದು ಅನ್ನದಾನಪ್ಪನವರ ಕಾರ್ಯವು ಬಹು ಸುಲಭವಾಗಿ ಜಯವಾಗುವುದೆಂಬ ರೀತಿ ಹೇಳಿದರು.

ಸಂತೋಷಗೊಂಡ ಅನ್ನದಾನಪ್ಪನವರು—

"ಖಂಡಿತಾ ಬರುವೆನು" ಎಂದನು.

"ಪೂಜೆಯ ಖರ್ಚು ಹದಿನೈದು ರೂಪಾಯಿ ಕೊಡಿ"

ಅನ್ನದಾನಪ್ಪನವರು ಪ್ರತಿ ಮಾತನಾಡದೆ, ಹದಿನೈದು ರೂಪಾಯಿ ಕೊಟ್ಟು, ನಾಳೆ ಬರುವೆನೆಂದು ಹೇಳಿ ಹಿಂದಿರುಗಿದರು.

ಸಂಪೂರ್ಣ ತಾಯಿತಕ್ಕೆ ಎಪ್ಪತ್ತೈದು ರೂಪಾಯಿಗಳೆಂದು ಪ್ರಚಾರ ಮಾಡಿ, ಅದರ ಮೇಲೆ ಪೂಜೆಗೆಂದು ಹದಿನೈದು ರೂಪಾಯಿ ತೆಗೆದುಕೊಳ್ಳುವರಲ್ಲ, ಇದೆಂತಹ ನ್ಯಾಯ? ಅದಕ್ಕಾಗಿಯೇ ಖುದ್ದಾಗಿ ಬರಬೇಕೆಂದು ಪ್ರಚುರಪಡಿಸಿರುವರೆಂಬ ಭಾವನೆಯು ಅನ್ನದಾನಪ್ಪನವರ ಯೋಚನಾಸ್ಮೃತಿಗೆ ಹೊಳೆಯದಿರಲಿಲ್ಲ.

ಇನ್ನೂ ಏನೇನು ಖರ್ಚು ಬರುವುದೋ, ಏನೋ ಬಂದ ಮೇಲೆ ಅನುಭವಿಸಿಯೇ ತೀರಬೇಕು. ಎಂದು ಯೋಚಿಸಿ, ಆ ದಿನವನ್ನು ಕಳೆದು ಮಾರನೆಯ ದಿನ ನಿಯಮಿತ ವೇಳೆಗೆ ಮಂತ್ರವಾದಿಯಲ್ಲಿಗೆ ಹೋದರು.

ಪಿಳ್ಳೆಯವರು ಅನ್ನದಾನಪ್ಪನವರಿಗೆ ಕುಳಿತುಕೊಳ್ಳುವಂತೆ ಹೇಳಿ, ಅವರು ಕುಳಿತನಂತರ ತಾವು ಒಳಗೆ ಹೋಗಿ, ಕೆಲವು ನಿಮಿಷಗಳಲ್ಲಿಯೇ ತಾಮ್ರದ ತಾಯಿತವನ್ನು ಕೈಲಿಡಿದುಕೊಂಡು ಬಂದರು.

ಪೂಜೆ, ಪುನಸ್ಕಾರಗಳೆಲ್ಲಾ ಒಳಗೇ ನಡೆಯುವುದೆಂದೂ, ಅಲ್ಲಿಗೆ ಬೇರೆ

ಯವರು ಹೋಗುವ ಹಾಗಿಲ್ಲವೆಂದು ಅನ್ನದಾನಪ್ಪನವರ ಮನಕ್ಕೆ ಹೊಳೆಯಿತು.

ತಾಯಿತವನ್ನು ಕಾಲುಮಣೆಯ ಮೇಲಿಟ್ಟು, ಮಂತ್ರವಾದಿಯು ತನ್ನ ಸ್ಥಾನದಲ್ಲಿ ಕುಳಿತರು.

ಕೆಲಹೊತ್ತು ಮೌನರಾಗಿದ್ದು ಬಳಿಕ—

"ಈ ತಾಯಿತವನ್ನು ಬೆಳ್ಳಿಯ ತಾಯಿತಿಯೊಳಗೆ ಹಾಕಿಟ್ಟುಕೊಳ್ಳಿ. ತಿಂಗಳಿಗೊಂದು ಸಾರಿ ಶುದ್ಧವಾದ ಹಸುವಿನ ಹಾಲಿನಲ್ಲಿ ತೊಳೆದು ದೇವರ ಮುಂದಿಟ್ಟು ಪೂಜೆ ಮಾಡಬೇಕು. ಇದರ ಮೇಲೆ ಮುಟ್ಟಾದ ಸ್ತ್ರೀಯರ ನೆರಳು ಬೀಳಬಾರದು. ಇದನ್ನು ಕಟ್ಟಿಕೊಂಡು ಹೆಂಗಸರ ಬಳಿ ಮಲಗ ಬಾರದು. ಇದನ್ನು ಎಷ್ಟು ಶುದ್ಧವಾಗಿಟ್ಟುಕೊಳ್ಳುವಿರೋ, ಅಷ್ಟು ಜಾಗ್ರತೆ ನಿಮ್ಮ ಕಾರ್ಯದಲ್ಲಿ ಜಯವನ್ನು ಕಾಣುವಿರಿ. ಅಪವಿತ್ರಗೊಳಿಸಿದರೆ, ಕೊಂಚ ತಡವೇ ಆಗುತ್ತದೆ. ಆ ಮೇಲೆ ನನ್ನನ್ನು ದೂರಬೇಡಿ. ಇದ್ದ ವಿಷಯ ತಿಳಿಸಿರುವೆನು. ತಮ್ಮ ತಪ್ಪನ್ನು ತಿದ್ದಿಕೊಳ್ಳದೆ ನನ್ನನ್ನು ದೂರುವುದು ಸರಿ ಯಲ್ಲ. ಈ ವಿಷಯವನ್ನು ತಿಳಿಸುವುದಕ್ಕಾಗಿಯೇ ಖುದ್ದಾಗಿ ಇಲ್ಲಿಗೆ ಬರ ಮಾಡಿಕೊಳ್ಳುವುದು" ಎಂದು ಹೇಳಿದರು.

"ಸರಿ ನೀವು ಹೇಳಿದ್ದೆಲ್ಲಾ ತಿಳಿಯಿತು. ತಿಂಗಳಿಗೊಂದು ಸಾರಿ ಪೂಜೆ ಮಾಡಬೇಕೆಂದಿರಲ್ಲ, ಯಾವ ದಿನ ಮಾಡಬೇಕು? ಒಂದು ವೇಳೆ ಅಪವಿತ್ರವಾದರೆ ಪವಿತ್ರಗೊಳಿಸುವುದೇಗೆ?"

—ಎಂದು ಪ್ರಶ್ನಿಸಿದರು ಅನ್ನದಾನಪ್ಪನವರು.

"ಪ್ರತಿ ಅಮಾವಾಸ್ಯೆ ತಪ್ಪಿದರೆ ಹುಣ್ಣಿಮೆಯ ದಿನ ಪೂಜೆ ಮಾಡಿ. ಅಪವಿತ್ರವಾದರೆ ಹಸುವಿನ ಗಂಜಳದಲ್ಲಿ ತಾಯಿತವನ್ನು ತೊಳೆದು, ದೇವರ ಕಟ್ಟೆಯ ಮೇಲಿಟ್ಟು ಪೂಜೆ ಮಾಡಿ, ಒಬ್ಬ ಸಾಧುವಿಗೆ ಊಟ ಹಾಕಿಸಿ"

"ಸರಿ! ತಿಳಿಯಿತು. ಅಮಾವಾಸ್ಯೆ ಮತ್ತು ಹುಣ್ಣಿಮೆ, ಈ ಎರಡು ದಿನಗಳಲ್ಲಿ ಪೂಜೆ ಮಾಡಿದರೇನಾಗುತ್ತದೆ?"

"ಇನ್ನೂ ಉತ್ತಮವೇ. ಅದರಲ್ಲಿ ತೊಂದರೆಯೇನೂ ಇಲ್ಲ"

ಅನ್ನದಾನಪ್ಪನವರು ಪ್ರತಿ ಮಾತನಾಡದೆ, ತಮ್ಮ ಜೇಬಿನಿಂದ ಎಪ್ಪತ್ತೈದು ರೂಪಾಯಿಗಳನ್ನು ತೆಗೆದು, ಮಂತ್ರವಾದಿಯ ಕೈಗಿತ್ತು, ತಾಯಿತ

ವನ್ನು ತೆಗೆದುಕೊಂಡು, ಭಕ್ತಿಯಿಂದ ಎರಡು ಕಣ್ಣುಗಳಿಗೂ ಒತ್ತಿಕೊಂಡು ಅದನ್ನು ಜೇಬಿನಲ್ಲಿ ಭದ್ರವಾಗಿರಿಸಿಕೊಂಡು, ಪರಮಶಿವಂಪಿಳ್ಳೆಯವರಿಗೆ ವಂದಿಸಿ, ಅಲ್ಲಿಂದ ಎದ್ದು ಹೊರಟರು.

ಹೊರಬಾಗಿಲ ಬಳಿಗೆ ಬರುತ್ತಲೇ ಅಲ್ಲಿದ್ದ ಸೇವಕನು ತಲೆ ಕೆರೆದು ಕೊಳ್ಳುತ್ತಾ ಹಲ್ಲು ಕಿರಿದ.

ಈ ಚಾಳಿಯು ಎಂದಿಗೆ ತಪ್ಪುವುದೋ ಎಂದುಕೊಂಡ ಅನ್ನದಾನಪ್ಪ ನವರು ಅವನಿಗೆ ನಾಲ್ಕಾಣೆಯನ್ನಿತ್ತು ಹಿಂದಿರುಗಿದರು.

ಹೇಗೂ ಬಂದ ಕಾರ್ಯವಾಯಿತು. ಇನ್ನು ಒಂದೆರಡು ದಿನಗಳು ವಿಶ್ರಾಂತಿ ಪಡೆದು ಹೋದರಾಯಿತೆಂದುಕೊಂಡರು.

ಎರಡು ದಿನಗಳು ಕಳೆದು ಮೂರನೆಯ ದಿನ ಮಾಮೂಲಿನಂತೆ ಪತ್ರಿಕೆ ಯನ್ನು ಕೊಂಡು ಓದುತ್ತಿರಲು. ಪತ್ರಿಕೆಯ ಒಂದು ಕಡೆ ಜಾಹಿರಾತು ಹಾಕಿ ದ್ದುದನ್ನು ನೋಡಿ, ತಮ್ಮ ಕಣ್ಣುಗಳನ್ನು ತಾವೇ ನಂಬದೋದರು.

ಈ ಸಂಗತಿಯು ನಿಜವಿರಬಹುದೇ? ಎಂದು ಇನ್ನೊಂದು ಸಾರಿ ಓದಲುಪ ಕ್ರಮಿಸಿದರು.

ತಪ್ಪಿಸಿಕೊಂಡಿದ್ದಾರೆ

ಹೆಸರು ಅನ್ನದಾನಪ್ಪ. ವಯಸ್ಸು ಐವತ್ತು ವರ್ಷಗಳಿರ ಬಹುದು. ಆದರೂ ಯುವಕರಂತೆಯೇ ಇರುವವರು. ಎತ್ತರ ಐದೂವರೆ ಅಡಿ. ತಾ||................ರಲ್ಲಿ ಹೊರಟು ಹೋದವರು ಈ ವರೆವಿಗೆ ಎಲ್ಲಿರುವರೆಂಬುದೇ ತಿಳಿಯದು. ಹುಚ್ಚು ಹಿಡಿದು ತಪ್ಪಿಸಿಕೊಂಡಿಲ್ಲ. ಹುಡುಕಿಕೊಟ್ಟವರಿಗೆ ನೂರು ರೂಪಾಯಿ ಬಹುಮಾನವಲ್ಲದೆ, ಅವರ ಖರ್ಚು ವೆಚ್ಚ ವನ್ನು ಕೊಡಲಾಗುವುದು.

ನಂ. 35, ಮಹಾಲಕ್ಷ್ಮಿ ರೋಡು, ಕಾಂಚೀನಗರ.

ಸಹಿ, ಮುರಿದಾಸ.

ಎಂದು ಬರೆದಿತ್ತಲ್ಲದೆ ಅನ್ನದಾನಪ್ಪನವರ ಆಕಾರ, ನಡಿಗೆಯ ವರ್ಣನೆ, ಮೈಬಣ್ಣ ಮತ್ತು ಮನೆಯಿಂದ ಹೊರಡುವಾಗ ಹಾಕಿಕೊಂಡಿದ್ದ ಉಡುಪುಗಳ ವಿವರವನ್ನೂ ಬರೆದಿತ್ತು.

ಅದನ್ನು ಓದಿ ಅನ್ನದಾನಪ್ಪನವರು ದಿಗ್ಮೂಢರಂತಾದರು.

ತಾವು ಕಣ್ಮರೆಯಾಗಿರುವುದರಿಂದ ಜನಿವಾರ ಗ್ರಾಮಕ್ಕೆ ಕಾಗದ ಬರೆದಿರುವರೆಂದೂ, ಮರಿದಾಸನು ಕಾಂಚೀನಗರಕ್ಕೆ ಅವರಿವರ ಸಲಹೆಯನ್ನು ಪಡೆದು ಈ ರೀತಿ ಜಾಹಿರಾತು ಹೊರಡಿಸಿರುವನೆಂದು ಭಾವಿಸಿಕೊಂಡರು.

ಈ ರೀತಿಯಾಗಲೂ ತಾಯಿತದ ಮಹಿಮೆಯೇ ಇರಬೇಕೆಂದುಕೊಂಡು ಇನ್ನು ಈ ಊರಿನಲ್ಲಿರುವುದು ಅನಾವಶ್ಯಕವೆಂದು ಭಾವಿಸಿ ಕಾಂಚೀನಗರಕ್ಕೆ ಹಿಂದಿರುಗಲು ಸನ್ನದ್ಧರಾದರು.

೧೫

ವರದರಾಜನಿಗೆ ತೊಂದರೆ ಕೊಡಲು ಭೂತಾಕಾರ ವ್ಯಕ್ತಿಯು ಪುನಃ ಬರುವನೆಂಬ ನಂಬಿಕೆಯ ಮೇಲೆ ಪುರುಷೋತ್ತಮನು ವೇಷಾಂತರದಿಂದ ಆತನ ಮನೆಯ ಬಳಿಯಲ್ಲಿ ಕಾವಲಾದರೂ ಪ್ರಯೋಜನವೆನಿಸಲಿಲ್ಲ.

ಇಂದು ಬರಬಹುದು, ನಾಳೆಯ ದಿನ ಬರಬಹುದು. ಎಂಬ ಯೋಚನೆಯ ಮೇಲೆ ದಿನಗಳನ್ನು ತಳ್ಳುತ್ತಾ ಬಂದನು.

ಆದರೇ! ಭೂತಾಕಾರ ವ್ಯಕ್ತಿಯು ಅಲ್ಲಿಗೆ ಬರಲಿಲ್ಲ.

ವರದರಾಜನು ಮನೆಯಿಂದ ಹೊರಗೇ ಬರುತ್ತಿರಲಿಲ್ಲ, ಅವನ ಮುಖ ನೋಡುವುದೇ ಪುರುಷೋತ್ತಮನಿಗೆ ಕಷ್ಟವಾಯಿತು. ಆದಮಾತ್ರಕ್ಕೆ ಆತನು ನಿರುತ್ಸಾಹನಾಗಲಿಲ್ಲ.

ಹಲವು ದಿನಗಳು ಮನೆಯಿಂದ ಹೊರಗೆ ಕಾಲಿಡಬಾರದೆಂದು ವರದ ರಾಜನ ತಂದೆಯು ಮಗನಿಗೆ ಆಜ್ಞೆ ಮಾಡಿರುವನು. ತಂದೆತಾಯಿಯರಿಗೆ ವಿಧೇಯನಾದ ಮಗನು ಅವರ ಅಪ್ಪಣೆಯನ್ನು ಮೀರಲಿಲ್ಲ.

ಈ ಮಧ್ಯೆ ಪುರುಷೋತ್ತಮನು ಸರೋಜಳ ಮೇಲೂ ಕಣ್ಣಿಟ್ಟು ಕಾಯುತ್ತಿದ್ದನು.

ಆದರೇ! ಬಹು ಬೇಗನೆ ಅವನ ಕಾರ್ಯವು ನೆರವೇರುವ ಸೂಚನೆ ಗಳೇನೂ ಕಂಡುಬರಲಿಲ್ಲ.

ರಾಮನಾಥನು ಮಾತ್ರ ಬಾಲಕೃಷ್ಣನ ಶೋಧನೆಯಲ್ಲಿರುವನು.

ಒಂದೊಂದು ಸಾರಿ ಪುರುಷೋತ್ತಮನು ಯೋಚನೆಯಲ್ಲಿ ನಿರತನಾದಾಗ ಇಂತಹ ಸ್ಥಳಕ್ಕೆ ಹೋದರೆ ತನ್ನ ಕಾರ್ಯವಾಗುವುದೆಂದು ಯೋಚಿಸಿ ಆದರಂತೆ ಆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡುತ್ತಿದ್ದನು.

ಇದ್ದಕ್ಕಿದ್ದ ಹಾಗೆ ಯಾರು ಯಾರ ಮೇಲೋ ಸಂದೇಹಗೊಂಡು ಅವರ ನಡವಳಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದನು.

ಒಂದು ದಿನ ರಾತ್ರಿ ಹತ್ತು ಘಂಟೆಯ ಸಮಯದಲ್ಲಿ ಮನೆಯಲ್ಲಿಯೇ ಇರಲು ಟೆಲಿಫೋನ್ ಘಂಟೆಯು ಬಾರಿಸಿತು.

ರಿಸೀವರನ್ನು ಕೈಗೆ ತೆಗೆದುಕೊಂಡ ಪುರುಷೋತ್ತಮನು—

"ಹಲೋ ಯಾರು?" ಎಂದು ಕೇಳಿದ.

"ನಾನು ಚಂದ್ರನಾಥ. ಪೋಲೀಸ್ ಠಾಣೆಯಿಂದ ಮಾತನಾಡುತ್ತಿರುವೆನು."

—ಎಂದು ಉತ್ತರ ಬಂದಿತಲ್ಲದೆ,

"ಬಾಲಕೃಷ್ಣನನ್ನು ಯಾಮಿಕರು ಕರೆದುಕೊಂಡು ಬಂದಿರುವರು. ನೀವು ಈಗಲೇ ಬನ್ನಿ" ಎಂದು ಹೇಳಲು ಈಗಲೇ ಬರುವೆನೆಂದು ತಿಳಿಸಿದ ಪುರುಷೋತ್ತಮನು ರಿಸೀವರನ್ನು ಕೆಳಗಿಟ್ಟನು.

ಚಂದ್ರನಾಥನೊಡನೆ ಫೋನಿನಲ್ಲಿ ಸಾವಿರಾರು ಸಾರಿ ಮಾತನಾಡಿರುವುದರಿಂದ ಪುರುಷೋತ್ತಮನಿಗೆ ಆತನ ಧ್ವನಿಯ ಪರಿಚಯವು ಸಂಪೂರ್ಣವಾಗಿ ತಿಳಿದಿದೆ.

ಈ ಸಾರಿ ಧ್ವನಿಯು ವ್ಯತ್ಯಾಸವಾಗಿ ಕಂಡುಬಂದ ಪ್ರಯುಕ್ತ ಪುರುಷೋತ್ತಮನಿಗೆ ಸಂದೇಹವು ಬಾರದಿರಲಿಲ್ಲ. ತನ್ನೊಡನೆ ಮಾತನಾಡಿದವನು ಕೊಲೆಗಾರನೇ ಇರಬಹುದೆಂದೂ, ತಾನು ಮನೆಯಿಂದ ಹೊರಟರೆ ಇಲ್ಲಿ ಏನಾದರೂ ತೊಂದರೆಯುಂಟು ಮಾಡಬಹುದೆಂದೂ, ತಪ್ಪಿದರೆ ಮಾರ್ಗದಲ್ಲಿ ತನಗೆ ಗಂಡಾಂತರವುಂಟುಮಾಡಬಹುದೆಂದು ಯೋಚಿಸಿಕೊಂಡನು.

ಕೊಲೆಗಾರನು ಈ ಮನೆಯ ಸಮೀಪದಲ್ಲಿಯೇ ಇರಬಹುದೆಂದೂ, ಈಗ ಹೋಗದೆ ಹೋದರೆ ಆತನಿಗೆ ಸಂದೇಹವುಂಟಾಗುವುದೆಂದೂ ಯೋಚಿಸಿಕೊಂಡನು.

ರಾಮನಾಥನ ಮನೆಗೆ ಫೋನ್ ಮಾಡಲು ಆತನು ಮನೆಯಲ್ಲಿಲ್ಲವೆಂದು ತಿಳಿಯಿತು.

ಪೋಲೀಸ್ ಠಾಣೆಗೆ ಫೋನ್ ಮಾಡಲು ಇನ್ಸ್ಪೆಕ್ಟರಿಂದಲೇ ಉತ್ತರ ಬಂದಿತು. ಆಗಿನ ಧ್ವನಿಯೇ ಬೇರೆಯಾಗಿದೆ.

ಕೆಲನಿಮಿಷಗಳ ಹಿಂದೆ ಫೋನ್ ಮಾಡಲಿಲ್ಲವೆಂದು ಇನ್ಸ್‌ಪೆಕ್ಟರನ ಮೂಲಕ ತಿಳಿದುಕೊಂಡನು.

ಈಗ ಕೊಲೆಗಾರನನ್ನು ಹಿಡಿಯಲು ಸಾಧ್ಯವಾದರೂ ಆಗಬಹುದೆಂಬ ಯೋಚನೆಯ ಮೇಲೆ ತನ್ನ ಮಗನಾದ ವಿಜಯಕೇಸರಿಗೆ ತನ್ನ ಉಡುಪುಗಳನ್ನು ತೊಡಿಸಿ, ಅವನನ್ನು ಪೋಲೀಸ್ ಠಾಣೆಗೆ ಕಳುಹಿಸಿದನಲ್ಲದೆ, ಅವನ ಸಹಾಯಕ್ಕೆ ಎರಡನೆಯ ಮಗನಾದ ವಿಜಯೇಂದ್ರನನ್ನು ಹಿಂಬಾಗಿಲ ಮೂಲಕ ಕಳುಹಿಸಿದನು.

ಚತುರನಾದ ವಿಜಯಕೇಸರಿಯು ತನ್ನ ಮುಖವನ್ನು ಇತರರು ನೋಡ ಬಾರದೆಂಬ ಅಭಿಪ್ರಾಯದ ಮೇಲೆ ತನ್ನ ಮುಖವನ್ನು ಆದಷ್ಟು ಮರೆಮಾಡಿ ಕೊಂಡು ಹೋದನು.

ಅವನ ಹಿಂದೆ ವಿಜಯೇಂದ್ರನಿರುವನು. ಇಬ್ಬರ ಹತ್ತಿರವೂ ಆತ್ಮ ರಕ್ಷಣೆಗೆ ಬೇಕಾದ ಸಾಧನಗಳಿವೆ.

ಮಕ್ಕಳನ್ನು ಕಳುಹಿಸಿದ ಪುರುಷೋತ್ತಮನು ಮಹಡಿಯ ಮೇಲೆ ಹೋಗಿ ದೀಪವನ್ನಾರಿಸಿ ಕಿಟಕಿಯ ಮೂಲಕ ಹೊರಗಿನ ವ್ಯವಹಾರವನ್ನು ನೋಡುತ್ತಾ ಕುಳಿತನು.

ಕೊಲೆಗಾರನು ಯಾವುದಾದರೊಂದು ವೇಷದಲ್ಲಿ ಇಲ್ಲಿಗೆ ಬರುವನೆಂದೂ, ಆಗ ಆತನಾರೆಂಬುದನ್ನು ನೋಡಿ ತಿಳಿದರೆ ಸಾಕು, ಮುಂದೆ ಸುಲಭವಾಗಿ ಹಿಡಿಯಬಹುದೆಂದು ಪುರುಷೋತ್ತಮನ ಭಾವನೆಯಾಗಿದೆ.

ಪತ್ತೇದಾರನ ಎಣಿಕೆಯಂತೆ ಯಾರೊಬ್ಬರೂ ಬರಲಿಲ್ಲ. ಸಂದೇಹ ಗೊಂಡ ಪುರುಷೋತ್ತಮನು ಆತನು ತನ್ನ ಕಾರ್ಯಕಲಾಪಗಳನ್ನು ನೋಡಿರ ಬಹುದೆಂದುಕೊಂಡನು.

ಆದರೂ ನಿರಾಶನಾಗದೆ ಮನದಲ್ಲಿ ಏನೋ ಒಂದು ಬಗೆಯ ಆಸೆಯಿಟ್ಟು ಕೊಂಡು ಅಲ್ಲಿಯೇ ಕುಳಿತನು.

ಕೆಲಹೊತ್ತಿನಲ್ಲಿಯೇ ಮನೆಯ ಮುಂದೆ ಆಟೋರಿಕ್ಷಾ ಬಂದು ನಿಂತಿತು.

ಅದನ್ನು ನೋಡಿದ ಪುರುಷೋತ್ತಮನು ಸೋಜಿಗನಾಗಿ ಕೊಲೆಗಾರನು ಇದರಲ್ಲಿ ಬಂದಿರುವನೆಂದುಕೊಂಡು, ಪಿಸ್ತೂಲನ್ನು ಹಿಡಿದುಕೊಂಡು ಮುಂದಿನ ಪ್ರಸಂಗಗಳನ್ನು ನೋಡುವ ಕುತೂಹಲವುಳ್ಳವನಾದನು.

ಆಟೋರಿಕ್ಷಾದಲ್ಲಿ ಕುಳಿತಿದ್ದವರಿಬ್ಬರು ಕೆಳಗಿಳಿದರು. ಒಬ್ಬನು ರಿಕ್ಷಾದವನಿಗೆ ಬಾಡಿಗೆಯನ್ನು ಕೊಟ್ಟನು.

ಬೀದಿಯ ದೀಪದ ಬೆಳಕಿನಲ್ಲಿ ಬಂದವರಾರೆಂಬುದನ್ನು ನೋಡಿದ ಪುರುಷೋತ್ತಮನಿಗೆ ತನಗೆ ತಾನೇ ನಾಚಿಕೊಳ್ಳುವಂತಾಯಿತು.

ರಿಕ್ಷಾದಲ್ಲಿ ಬಂದವರಾರು? ಅವನ ಮಕ್ಕಳೆ. ಪೋಲೀಸ್‌ಠಾಣೆಯವರೆವಿಗೂ ಹೋಗಿ ಒಳಗೆ ಹೋಗದೆ ಅಲ್ಲಿಂದ ಆಟೋರಿಕ್ಷಾದಲ್ಲಿ ಕುಳಿತು ಅವರಿಬ್ಬರೂ ಹಿಂದಿರುಗಿರುವರು.

ಕೊಲೆಗಾರನು ತನ್ನ ಕಾರ್ಯ ಕಲಾಪಗಳನ್ನು ಗಮನಿಸಿರುವನೆಂದೂ ಆ ಪ್ರಯುಕ್ತ ಆತನು ಬರಲಿಲ್ಲವೆಂದು ಪುರುಷೋತ್ತಮನ ಮನಕ್ಕೆ ಹೊಳೆಯದಿರಲಿಲ್ಲ.

ವಿಜಯಕೇಸರಿ, ವಿಜಯೇಂದ್ರರು ತಮ್ಮ ವೇಷಗಳನ್ನು ಕಳಚಿ ಮಲಗಿಕೊಂಡರು.

ಅವರಿಬ್ಬರಿಗೆ ಮಾರ್ಗದಲ್ಲಿ ಕೊಲೆಗಾರನಿಂದ ತೊಂದರೆ ಸಂಭವಿಸದೆ ಇದ್ದುದು ಅವರ ಪುಣ್ಯವೇ ಸರಿಯೆಂದುಕೊಂಡ ಪುರುಷೋತ್ತಮನು ಆತನು ಮಹಾ ಕುಶಲಬುದ್ಧಿಯುಳ್ಳವನೆಂದು ಯೋಚಿಸುತ್ತಿರಲು ಟೆಲಿಫೋನ್ ಬೆಲ್ಲಾಯಿತು.

ಕೂಡಲೆ ಅಲ್ಲಿಂದ ಹೊರಟು ಟೆಲಿಫೋನಿದ್ದಲ್ಲಿಗೆ ಬಂದು ರಿಸೀವರನ್ನು ಕೈಗೆ ತೆಗೆದುಕೊಂಡು ಯಾರೆಂದು ಕೇಳಿದ.

ಕೂಡಲೇ ಉತ್ತರ ಬರಲಿಲ್ಲ. ವಿಕಟವಾಗಿ ನಗೆಯಾಡಿದಂತೆ ಕೇಳಿಸಿತು.

ಕೊಲೆಗಾರನೇ ತನ್ನೊಡನೆ ಮಾತನಾಡುತ್ತಿರುನೆಂದು ಭಾವಿಸಿದ ಪುರುಷೋತ್ತಮನು—

"ನೀನು 'ಭಯಂಕರ ಭೂತ' ನಾಮನಾಧಾರಿಯಾದ ಚೋರಾಗ್ರೇಸರನಲ್ಲವೇ?" ಎಂದು ಕೇಳಿದ.

"ಹೌದು! ನಾನೇ ನಿನ್ನೊಡನೆ ಮಾತನಾಡುತ್ತಿರುವೆನು. ಪುರುಷೋತ್ತಮಾ! ನಾನೊಬ್ಬ ಮಹಾ ಬುದ್ಧಿವಂತನೆಂದು ನೀನು ತಿಳಿದಿರುವೆಯಲ್ಲವೇ? ನೀನು ನಿನ್ನ ವೇಷದಲ್ಲಿ ವಿಜಯಕೇಸರಿಯನ್ನು ಮುಂಬಾಗಿಲ ಮೂಲಕ ಕಳುಹಿಸಿದನಲ್ಲದೆ, ಅವನ ರಕ್ಷಣೆಗಾಗಿ ವಿಜಯೇಂದ್ರನನ್ನು

ಹಿಂಬಾಗಿಲ ಮೂಲಕ ಕಳುಹಿಸಿದ್ದನ್ನು ನಾನು ನೋಡಲಿಲ್ಲವೆಂದು ತಿಳಿದೆಯಾ? ಅವಿವೇಕಿ ಪತ್ತೇದಾರನೇ! ನನ್ನನ್ನು ಬಹು ಸುಲಭವಾಗಿ ಮೋಸಗೊಳಿಸಬಹುದೆಂದು ಭಾವಿಸಿದ್ದೆಯಲ್ಲವೇ? ಆ ರೀತಿ ಭಾವಿಸಿದ್ದ ನೀನೊಬ್ಬ ಪತ್ತೇದಾರನೇ? ನೀನು ಮನೆಯಿಂದ ಹೊರಡಬೇಕಿತ್ತು, ಆಗ ನಿನ್ನ ಅವಸ್ಥೆಯೇನಾಗುತ್ತಿತ್ತೆಂದು ತಿಳಿಯುತ್ತಿತ್ತು. ಈಗ ಹೇಳಿ ಫಲವಿಲ್ಲ. ಆ ಒಂದು ವಿಷಯದಲ್ಲಿ ನೀನು ಜಾಗರೂಕನಾದೆ. ನಿನ್ನ ಅದೃಷ್ಟವು ಚೆನ್ನಾಗಿದೆಯೆಂದೇ ಹೇಳಬಹುದು. ಈ ದಿನ ಉಳಿದೆನೆಂದು ಸಂತೋಷಪಡಬೇಡ. ಕರ್ಣನಿಗಾಗಿ ಅರ್ಜುನನು, ದುರ್ಯೋಧನನಿಗಾಗಿ ಭೀಮನು ಹುಟ್ಟಿಕೊಂಡಿದ್ದಂತೆ ನಾನು ನಿನಗಾಗಿ ಹುಟ್ಟಿಕೊಂಡಿರುವೆನು. ನಿನ್ನ ಮಕ್ಕಳನ್ನು ಕಳುಹಿಸಿ ನನ್ನನ್ನು ಹಿಡಿಯಬೇಕೆಂದಿದ್ದೆಯಲ್ಲವೇ? ಅವರನ್ನೇ ವಿಚಾರಿಸಿಕೊಳ್ಳುತ್ತಿದ್ದೆನು. ನನಗೆ ಮನಸ್ಸು ಬಾರದೋಯಿತು. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇ? ನೀನೇ ಮನೆಯಿಂದ ಹೊರಟಿದ್ದರೆ ಈ ವೇಳೆಗೆ ಏನಾಗುತ್ತಿದ್ದೆಯೋ ಏನೋ. ಇರಲಿ, ಇಲ್ಲಿಗೇ ಮುಗಿಯಲಿಲ್ಲ. ನಾನಿನ್ನು ಹೋಗುವೆನು. ನೀನು ನಿನ್ನ ಪರಾಕ್ರಮವನ್ನು ನನ್ನೊಡನೆ ಹೇಳಿಕೊಳ್ಳಬೇಕಾದ ಪ್ರಮೇಯವೇನೂ ಇಲ್ಲ."

ಪುರುಷೋತ್ತಮನು ಮಾತನಾಡುವಷ್ಟರಲ್ಲಿಯೇ ಕೊಲೆಗಾರನು ರಿಸೀವರನ್ನು ಕೆಳಗಿಟ್ಟಂತೆ ಶಬ್ದವಾಯಿತು. ಆತನು ಹೊರಟುಹೋದನೆಂದು ಭಾವಿಸಿಕೊಂಡ ಪತ್ತೇದಾರನು ರಾಮನಾಥ, ಚಂದ್ರನಾಥರಿಬ್ಬರಿಗೂ ಫೋನ್ ಮಾಡಿದ.

ಕೊಲೆಗಾರನು ಆ ರೀತಿ ಮಾತನಾಡಿದ ಮಾತ್ರಕ್ಕೆ ಪುರುಷೋತ್ತಮನು ಲೇಶಮಾತ್ರವೂ ಅಂಜಿ ಅಳುಕಲಿಲ್ಲ. ಅವನ ಹಾಗೆ ಮಾತನಾಡಿದವರು ಈಗ ಸೆರೆಮನೆಯಲ್ಲಿ ತಮ್ಮ ದುರದೃಷ್ಟಗಳನ್ನಳಿದುಕೊಳ್ಳುತ್ತಾ ಬಿದ್ದಿರುವರು.

ಆದರೆ ಆತನು ನಡೆಯಿಸಿದ ಕಾರ್ಯಚತುರತೆಗೆ ಪುರುಷೋತ್ತಮನು ಬೆರಗಾಗದಿರಲಿಲ್ಲ.

ಕೊಲೆಗಾರನನ್ನು ಹಿಡಿಯಬೇಕಾದರೆ, ಮನೆಗೆ ಬಾರದೆ ಹೊರಗಡೆಯೇ ವೇಷಾಂತರದಿಂದ ಓಡಾಡಿಕೊಂಡಿದ್ದು, ಅವನಾರೆಂಬುದನ್ನು ಪತ್ತೆಮಾಡಿ ಹಿಡಿಯಬೇಕಲ್ಲದೆ ಮನೆಗೆ ಬಂದು ಹೋಗುತ್ತಿದ್ದರೆ ಸಾಧ್ಯವಾಗದೆಂದುಕೊಂಡನು.

ನಡೆದುಹೋದ ವಿಚಿತ್ರ ಪ್ರಸಂಗದ ಬಗ್ಗೆ ಯೋಚನೆಯಲ್ಲಿ ತಲ್ಲೀನನಾಗಿರಲು, ರಾಮನಾಥ, ಚಂದ್ರನಾಥರಿಬ್ಬರು ಒಂದೇ ಸಾರಿಗೆ ಬಂದರು.

ಪುರುಷೋತ್ತಮನು ಅವರೊಡನೆ ನಡೆದ ವಿಷಯವನ್ನು ಹೇಳಲು ಅವರಿಬ್ಬರೂ ಆಶ್ಚರ್ಯರಾಗದಿರಲಿಲ್ಲ

"ಪತ್ತೇದಾರರೇ! ನೀವೇ ಹೊರಟದ್ದರೆ ಆತನೇನು ಮಾಡುತ್ತಿದ್ದ?"

—ಎಂದು ಕೇಳಿದ ಚಂದ್ರನಾಥ.

"ಎಲ್ಲಿಯಾದರೊಂದು ಕಡೆ ಕತ್ತಲಿನಲ್ಲಿ ನಿಂತು ಪಿಸ್ತೂಲಿನಿಂದ ಹೊಡೆಯುತ್ತಿದ್ದನೋ ಏನೋ. ಅವನ ಮನದಲ್ಲಿ ಏನು ಆಲೋಚನೆಯಿತ್ತೋ ಏನೋ. ಅಥವಾ ಅತನ ಸಂಗಡಿಗರು ನನಗೆ ಅಡ್ಡ ಹಾಕಿ, ಹಗ್ಗದಿಂದ ಬಂಧಿಸಿ ತಮ್ಮ ಸ್ಥಾನಕ್ಕೆ ಕರೆದುಕೊಂಡು ಹೋಗಿ ಚಿತ್ರಹಿಂಸೆ ಕೊಡುತ್ತಿದ್ದರೋ ಏನೋ ದೇವರೇ ತಪ್ಪಿಸಿದ. ನನ್ನ ಕಾರ್ಯವೇನೋ ಹೀಗಾಯಿತು. ಮುಂದೆ ನಿಮ್ಮಿಬ್ಬರಿಗೂ ಮೋಸಪಡಿಸಬಹುದು. ಆದ್ದರಿಂದ ಜಾಗರೂಕರಾಗಿರಿ. ಯಾರು ಕರೆಯುವುದಕ್ಕೆ ಬಂದರೂ, ಎಲ್ಲಿಗೆ ಹೋಗಬೇಕಾಗಿದ್ದರೂ ಎಚ್ಚರಿಕೆಯಿಂದಿರಿ. ಆಹಾರ ಪಾನೀಯಗಳು ವಿಷಮಿಶ್ರವಾಗಬಹುದು. ಆ ವಿಷಯದಲ್ಲಿ ಉದಾಸೀನರಾಗದಿರಿ. ಫೋನ್ ಮಾಡಿದರೆ ಮೊದಲು ಸಂಕೇತ ಶಬ್ದವನ್ನು ಕೇಳಿ. ಆ ವಿಷಯವು ಬಾರದೆ ಹೋದರೆ ಬೇರೆಯವರೆಂದು ಭಾವಿಸಿ."

—ಎಂದು ಎಚ್ಚರಿಕೆಯಿತ್ತ ಪುರುಷೋತ್ತಮನು.

"ಏನು ಸಂಕೇತ ವಿಷಯ ?"

"ನನ್ನ ಹಾಗೆ ಮಾತನಾಡಿದರೆ ನಮ್ಮ ಸಂಕೇತ ಚಿನ್ಹೆ ಏನೆಂದು ಕೇಳಿ. 'ಶ್ರೀ ಶೈಲ' ಎಂದು ಹೇಳಿದರೆ ನಾನೆಂದು ತಿಳಿಯಿರಿ. ಇಲ್ಲದೆ ಹೋದರೆ ಅದರ ಕಡೆ ಗಮನವನ್ನೇ ಕೊಡಬೇಡಿ."

"ಸರಿ! ತಿಳಿಯಿತು. ಈ ದಿನ ಒಂದು ದೊಡ್ಡ ಗಂಡಾಂತರವನ್ನೇ ತಪ್ಪಿಸಿಕೊಂಡಂತಾಯಿತು."

"ಎಲ್ಲಾ ದೈವೇಚ್ಛೆ. ಇರಲಿ, ನಿಮಗೆ ನಾನು ಹೇಳಿದ ವಿಷಯವೆಲ್ಲಾ ಚೆನ್ನಾಗಿ ನೆನಪಿನಲ್ಲಿರಲಿ."

ಚಂದ್ರನಾಥನು ಆಗಬಹುದೆಂಬಂತೆ ತಲೆಯಾಡಿಸಿ ಮಾತನಾಡಲು ಬಾಯಿ ಬಿಡಬೇಕೆಂದಿರಲು ಟೆಲಿಫೋನ್ ಬೆಲ್ಲು ಬಾರಿಸಿತು.

ಇನ್ಸ್‌ಪೆಕ್ಟರನ ಬಾಯಿಗೆ ಬೀಗಮುದ್ರೆ ಹಾಕಿದಂತಾಯಿತು.

ಪುನಃ ಕೊಲೆಗಾರನೇ ಫೋನ್ ಮಾಡಿದನೆಂದರಿತ ಪುರುಷೋತ್ತಮನು ರಿಸೀವರನ್ನು ಕೈಗೆ ತೆಗೆದುಕೊಂಡು—

"ಹಲೋ! ಯಾರು? ಎಲ್ಲಿಂದ ಮಾತನಾಡುತ್ತಿರುವಿರಿ?" ಎಂದು ಸ್ವಭಾವಸಿದ್ಧವಾಗಿಯೇ ಕೇಳಿದ.

"ನಾನು ದಫೇದಾರ್ ಅಬ್ದುಲ್ ಖುದ್ದೂಸ್. ಪೋಲೀಸ್ ಸ್ಟೇಷನ್ನಿನಿಂದ ಮಾತನಾಡುತ್ತಿರುವೆನು. ನನ್ನೊಡನೆ ಮಾತಾಡುತ್ತಿರುವ ನೀವಾರು?"

—ಎಂದು ಉತ್ತರ ಬಂದಿತು.

ಕೊಲೆಗಾರನೇ ಈ ರೀತಿ ಮಾತನಾಡುತ್ತಿರಬಹುದೆಂದು ಭಾವಿಸಿದ ಪತ್ತೇದಾರನು—

"ನಾನು ಪುರುಷೋತ್ತಮ. ಏಕೆ ಏನಾಗಬೇಕು?" ಎಂದು ಮರು ಪ್ರಶ್ನಿಸಿದ.

"ನಮ್ಮ ಇನ್ಸ್‌ಪೆಕ್ಟರ್ ಸಾಹೇಬರಿರುವರೇ?"

"ಇರುವರು. ಏಕೆ?"

"ಬಾಲಕೃಷ್ಣನು ಬಂದಿರುವನೆಂದು ಅವರೊಡನೆ ಹೇಳಿ ಸಾರ್. ಈಗಲೇ ಅವರನ್ನು ನೋಡಬೇಕಂತೆ. ಅವರ ಮನೆಗೆ ಫೋನ್ ಮಾಡಿದೆ. ಅಲ್ಲಿಲ್ಲವೆಂದು ತಿಳಿದುದರಿಂದ ನಿಮ್ಮ ಮನೆಯಲ್ಲಿರಬಹುದೆಂದು ಫೋನ್ ಮಾಡಿದೆ."

ವಿಷಯವನ್ನು ಕೇಳಿ ಪುರುಷೋತ್ತಮನು ಸ್ಥಂಭೀಭೂತನಾದನು.

ಕೊಲೆಗಾರನು ನಮ್ಮನ್ನು ಪರಿಹಾಸ್ಯ ಮಾಡುವಂತಾಯಿತೇ? ಎಂದುಕೊಂಡನು.

"ನಿಜವಾಗಿಯೂ ಬಂದಿರುವನೇ?"

—ಎಂದು ಕೇಳಲು ಹೌದೆಂದು ಉತ್ತರ ಬಂದಿತು.

"ಒಂದು ನಿಮಿಷ ತಾಳಿ."

—ಎಂದು ಪುರುಷೋತ್ತಮನು ರಿಸೀವರನ್ನು ಪಕ್ಕದಲ್ಲಿಟ್ಟು ಫೋನಿನಲ್ಲಿ ಬಂದ ವಿಷಯವನ್ನು ಅವರಿಬ್ಬರೊಡನೆ ಹೇಳಿದ.

ಇಬ್ಬರೂ ಸ್ತಂಭೀಭೂತರಾದರಲ್ಲದೆ, ಕೊಲೆಗಾರನು ಸಾಮಾನ್ಯನಲ್ಲ ವೆಂದುಕೊಂಡರು.

ಇನ್ಸ್ಪೆಕ್ಟರನು ಕ್ಷಣಹೊತ್ತು ಯೋಚಿಸಿ ರಿಸೀವರನ್ನು ಕೈಗೆ ತೆಗೆದು ಕೊಂಡು—

"ಖುದ್ದೂಸ್, ಈಗ ಮಾತನಾಡುತ್ತಿರುವವನು ನಾನೇ ಇನ್ಸ್ಪೆಕ್ಟರ್. ಠಾಣೆಯಲ್ಲಿ ಬೇರೆ ಯಾರಿರುವರು?" ಎಂದು ಕೇಳಿದ.

"ನಾನು ಮತ್ತು ಕಾನ್ಸ್ಟೇಬಲ್‌ಗಳು ಇಬ್ಬರೇ ಸಾರ್."

"ಕಾನ್ಸ್ಟೇಬಲ್‌ಗಳಾರು?"

"ರಾಘವರೆಡ್ಡಿ, ಗಿರಿಗೌಡ."

"ಅವರಿಬ್ಬರನ್ನು ಅಲ್ಲಿ ಬಿಟ್ಟು ಎಚ್ಚರಿಕೆಯಿಂದಿರುವಂತೆ ಹೇಳಿ, ಬಾಲ ಕೃಷ್ಣನನ್ನು ಕರೆದುಕೊಂಡು ಇಲ್ಲಿಗೆ ಬನ್ನಿ. ಬರುವಾಗ ಎಚ್ಚರಿಕೆ."

"ಆಗಲಿ ಸಾರ್, ಬರುವೆನು."

ಇನ್ಸ್ಪೆಕ್ಟರನು ಆತನಿಗೆ ಇನ್ನೊಂದು ಸಾರಿ ಎಚ್ಚರಿಸಿ, ರಿಸೀವರನ್ನು ಕೆಳಗಿಟ್ಟು, ತನ್ನ ಕಾರ್ಯಕೌಶಲ್ಯವನ್ನು ಪತ್ತೇದಾರರೊಡನೆ ಹೇಳಿದ.

ಕೆಲ ನಿಮಿಷಗಳ ಹಿಂದೆ, ಇದೇ ವಿಷಯವನ್ನು ಇನ್ಸ್ಪೆಕ್ಟರನಂತೆ ಮಾತ ನಾಡಿ, ಈಗ ಪರಿಹಾಸ್ಯಮಾಡಲು ದಫೇದಾರನಂತೆ ಮಾತನಾಡಿದನೆಂದು ಕೊಂಡ ಪುರುಷೋತ್ತಮನು ತನ್ನ ಮನದಲ್ಲಿ, ಕೊಲೆಗಾರನು ತಮ್ಮ ಚಲನ ವಲನಗಳಮೇಲೇ ಕಣ್ಣಿಟ್ಟು ಕಾಯುತ್ತಿರುವನೆಂದುಕೊಂಡನು.

ಫೋನಿನಲ್ಲಿ ಮಾತನಾಡಿದವನು ಕೊಲೆಗಾರನೇ ಎಂದೂ, ಈಗ ಯಾರೂ ಬರಲಾರರೆಂದು ತಿಳಿಸಲು ಅವರಿಬ್ಬರೂ ನಂಬದೆ ವಿಧಿಯಿಲ್ಲ.

ಆದರೆ ಈ ಸಾರಿ ಪುರುಷೋತ್ತಮನ ಊಹೆಯಂತೆ ನಡೆಯಲಿಲ್ಲ.

ಕೆಲಹೊತ್ತಿನಲ್ಲಿಯೇ ಜಟಕಾ ಗಾಡಿಯಲ್ಲಿ ಅಬ್ದುಲ್ ಖುದ್ದೂಸ್ ಮತ್ತು ಬಾಲಕೃಷ್ಣರಿಬ್ಬರೂ ಬಂದರು.

ಬಾಲಕೃಷ್ಣನನ್ನು ನೋಡಿ ಮೂವರೂ ವಿಸ್ಮಿತರಾಗದಿರಲಿಲ್ಲ.

"ಏನು, ಮೂವರು ತ್ರಿಮೂರ್ತಿಗಳೂ ಒಟ್ಟಾಗಿ ಸೇರಿರುವಿರಲ್ಲ. ಏನೋ ಗುಪ್ತಸಭೆ ನಡೆಯುತ್ತಲಿದೆ. ನಿಮ್ಮಂತವರು ನಡೆಯಿಸಬೇಕಾದ್ದು

ಸಹಜವೆ. ನಾನು ಬಂದುದರಿಂದ ನಿಮ್ಮ ಕಾರ್ಯಕ್ಕೆ ವಿಘ್ನವುಂಟಾಗಿರ ಬಹುದು."

—ಎಂದು ಹಿಂದೆ ಯಾವ ರೀತಿ ಸಲಿಗೆಯಿಂದ ಮಾತನಾಡಿದ್ದನೋ ಅದೇ ರೀತಿ ಮಾತನಾಡಿದ.

ಬಾಲಕೃಷ್ಣನ ಮಾತನ್ನು ಕೇಳಿ ಮೂವರೂ ಸೋಜಿಗಗೊಂಡರು.

ಕೊಲೆಯ ಸಂಬಂಧದಲ್ಲಿ ತನ್ನ ಕೈವಾಡವೇನೂ ಇಲ್ಲವೆಂದು ಪುರು ಷೋತ್ತಮನು ಆಲೋಚಿಸಿಕೊಂಡರೆ, ತಾನು ನಿರಪರಾಧಿಯೆಂದು ತೋರಿಸಿ ಕೊಳ್ಳಲು ಇವನು ಇಲ್ಲಿಗೆ ಬಂದಿರುವನೆಂದು ರಾಮನಾಥನರಿತನು.

"ನೀವು ಪೋಲೀಸ್‌ಠಾಣೆಗೆ ಹೋಗಿದ್ದ ಉದ್ದೇಶವೇನು? ನೀವಾಗಿಯೇ ಹೋದಿರೋ? ಅಥವಾ ಯಾರಾದರೂ ಹೇಳಿಕಳುಹಿಸಿದರೋ?"

—ಎಂದು ಪ್ರಶ್ನಿಸಿದ ಪುರುಷೋತ್ತಮ.

"ನಾನಾಗಿಯೇ ಹೋಗಬೇಕಾದ ಕಾರಣವೇ ಇಲ್ಲ. ನನ್ನ ಮಿತ್ರ ಪದ್ಮಾಚಾರಿಯ ದೆಶೆಯಿಂದ ಹೋಗಬೇಕಾಯಿತು. ಇಲ್ಲದೇ ಹೋದರೆ ನನಗೆ ಅಲ್ಲೇನು ಕೆಲಸವಿದೆ?"

—ಎಂದು ಪ್ರಶ್ನೆಯ ಮೂಲಕ ಉತ್ತರವಿತ್ತ ಬಾಲಕೃಷ್ಣ.

"ಈಗ ಅವರನ್ನು ನೋಡಿದ್ದಿರಾ?"

—ಎಂದು ಇನ್ಸ್ಪೆಕ್ಟರನು ಕೇಳಿದ.

"ಹೌದು! ಅವರೇ ನನ್ನನ್ನು ನಿಮ್ಮಲ್ಲಿಗೆ ಹೋಗುವಂತೆ ಹೇಳಿದರು. ಮೋಟಾರ್ ಸೈಕಲ್ಲಿನ ವಿಷಯವಾಗಿ ದೊಡ್ಡ ರಾಮಾಯಣವನ್ನೇ ಹೇಳಿದರು. ಅದಕ್ಕಾಗಿ ನಿಮ್ಮಲ್ಲಿಗೆ ಬರಬೇಕಾಯಿತು. ಅದೇನು ವಿಷಯ, ನನ್ನನ್ನು ನೋಡಬೇಕೆಂದಿದ್ದಿರಂತಲ್ಲ?"

—ಎಂದು ಇನ್ಸ್ಪೆಕ್ಟರನಿಗೇ ಪ್ರಶ್ನೆ ಹಾಕಿದ.

"ಆ ವಿಷಯವಿರಲಿ. ರಾಜಗೋಪಾಲನಿಗೆ ಗೌರವ ಸತ್ಕಾರಕೊಟ ವಿಟ್ಟಾಗ ನಾನು ನಿಮ್ಮನ್ನು ನೋಡಿದ್ದು. ಈಚೆ ನಿಮ್ಮನ್ನು ಎಲ್ಲಿಯೂ ನೋಡ ಲಿಲ್ಲ. ಆಗ ನೋಡಿದ್ದು ಮತ್ತೆ ನೋಡುತ್ತಿರುವುದು ಈಗಲೇ. ನಿಮ್ಮಲ್ಲಿ ಕೆಲವು ವಿಷಯಗಳ ಬಗ್ಗೆ ಮಾತನಾಡುವ ಪ್ರಮೇಯವಿತ್ತು. ಅದಕ್ಕಾಗಿ ಈ ಇನ್ಸ್ಪೆಕ್ಟರಲ್ಲಿ ಕೇಳಿದೆ.

—ಎಂದು ಸಾವಧಾನವಾಗಿ ನುಡಿದ ಪುರುಷೋತ್ತಮ.

"ನನ್ನಿಂದ ಆಗಬೇಕಾದ ಕೆಲಸವೇನಿತ್ತು ?"

"ನಿಮ್ಮಿಂದ ಆಗಬೇಕಾದ ಕಾರ್ಯವು ಬೇರೆಯವರಿಂದ ಆಗಿ ಹೋಯಿತು. ಈಗ ಆ ಮಾತಿನಿಂದ ಪ್ರಯೋಜನವಿಲ್ಲ. ಇಷ್ಟು ದಿನಗಳು ನೀವೆಲ್ಲಿದ್ದಿರಿ ? ಈ ನಗರದಲ್ಲಿರಲಿಲ್ಲವೇ ?"

"ಇರಲಿಲ್ಲ ಬೊಂಬಾಯಿಗೆ ಹೋಗಿದ್ದೆ."

"ಏಕೆ ? ಅಲ್ಲೇನು ಕೆಲಸವಿತ್ತು ?"

"ನನಗೇನೂ ಕೆಲಸವಿರಲಿಲ್ಲ. ಶೇಟ್ ಮುಕ್ರಿಮಲ್‌ರವರಿಗೆ ಕೆಲಸವಿತ್ತು."

"ಯಾರು ? ಹೇಮಾಜಿ ಬೀದಿಯಲ್ಲಿರುವರಲ್ಲ, ಬ್ಯಾಂಕರ್ ಅವರೇ ?"

"ಹೌದು ಅವರೆ."

"ನಿಮ್ಮನ್ನು ತಮ್ಮ ಸಂಗಡ ಕರೆದುಕೊಂಡು ಹೋಗಿದ್ದರೆ ?"

"ಹೌದು ! ನಿಮ್ಮೊಡನೆ ಮಾತನಾಡಿದ ಮಾರನೆಯ ದಿನ ಇಲ್ಲಿಂದ ಹೊರಟಿದ್ದು. ಇಲ್ಲಿಗೆ ಬಂದು ಒಂದೆರಡು ಘಂಟೆಗಳಾಯಿತು ಅಷ್ಟೇ."

"ನಿಮ್ಮನ್ನು ಕರೆದುಕೊಂಡು ಹೋಗುವ ಉದ್ದೇಶವೇನು ?"

"ಇದೇನು ಕಳ್ಳನಿಗೆ ಕೇಳಿದಂತೆ ಕೇಳುವಿರಲ್ಲ ? ಏಕೆ ನನ್ನ ಮೇಲೇನಾದರೂ ಸಂದೇಹವಿರುವುದೇ ? ಅನುಮಾನವಿದ್ದರೆ ಶೇಟನ್ನು ಇಲ್ಲಿಗೇ ಕರೆಯಿಸಿ ಕೇಳಿ."

"ಅಂತಹ ಅನುಮಾನವೇನೂ ಇಲ್ಲ. ನೀವು ಇಲ್ಲಿಗೆ ಬಂದುದಕ್ಕಾಗಿ ಕೇಳಿದೆನಲ್ಲದೆ, ಬೇರೆ ಯಾವ ಅಭಿಪ್ರಾಯವೂ ಇಲ್ಲ."

"ಹಾಗೋ ! ಅವರು ಪರಸ್ಥಳಗಳಿಗೆಲ್ಲಿಗೆ ಹೋಗಬೇಕಾಗಿದ್ದರೂ ಸರಿ ನನ್ನನ್ನು ತಮ್ಮ ಸಂಗಡ ಕರೆದುಕೊಂಡು ಹೋಗುವರು."

"ಸರಿ ಬಿಡಿ. ಇನ್ನು ಕೇಳಬೇಕಾದ್ದೇನೂ ಇಲ್ಲ."

ಬಾಲಕೃಷ್ಣನು ಒಂದೆರಡು ನಿಮಿಷ ಕುಳಿತಿದ್ದು ಅವಶ್ಯಕತೆಯಿದ್ದಾಗ ಬರುವೆನೆಂದು ಹೇಳಿ ಹಿಂದಿರುಗಿದ.

ಅಬ್ದುಲ್ ಖುದ್ದೂಸನೂ ಹಿಂದಿರುಗಿ ಹೊರಟನು.

"ರಾಮನಾಥ! ಬಾಲಕೃಷ್ಣನ ಮೇಲೆ ಸಂಪೂರ್ಣ ಸಂದೇಹಗೊಂಡಿದ್ದೆಯಲ್ಲ? ಈಗೇನು ಹೇಳುವೆ?"

—ಎಂದು ಪುರುಷೋತ್ತಮನು ಕೇಳಿದ.

ರಾಮನಾಥನಿಗೆ ಮಾತನಾಡಲು ಬಾಯಿ ಬಾರದೆ ಹೋಯಿತು.

"ನೀವು ಹೇಳಿದಂತೆಯೇ ನಡೆದಿದೆ. ಇನ್ನು ಅನ್ನದಾನಪ್ಪನವರೊಬ್ಬರಿದ್ದಾರೆ."

—ಎಂದು ನುಡಿದ ಚಂದ್ರನಾಥ.

"ಅವರು ಕೊಲೆಗಾರನ ಸೆರೆಮನೆಯಲ್ಲಿರುವರೆಂದೇ ನನ್ನ ಭಾವನೆ. ಅವನನ್ನು ಹಿಡಿದನಂತರವೇ ಅವರ ಬಿಡುಗಡೆಯಾಗುವುದು."

ರಾಮನಾಥನೇ ಆಗಲಿ, ಚಂದ್ರನಾಥನೇ ಆಗಲಿ ಪುನಃ ಮಾತನಾಡಲಿಲ್ಲ. ಪುರುಷೋತ್ತಮನೂ ತಟಸ್ಥನಾದ.

೧೬

ಮಂತ್ರವಾದಿ ಪರಮಶಿವಂಪಿಳ್ಳೆಯವರಿಂದ ಯಕ್ಷಿಣೀಯಂತ್ರವನ್ನು ಪಡೆದು, ಲಕ್ಷ್ಮೀಸಾಗರದಿಂದ ಹೊರಟ ಅನ್ನದಾನಪ್ಪನವರು, ಜೀವಸಹಿತ ಸ್ವರ್ಗಲೋಕಕ್ಕೆ ಹೋಗಿ, ಅಲ್ಲಿನ ವಿಶೇಷ ವೈಭವವನ್ನು ನೋಡಿಕೊಂಡು, ಹಿಂದಿರುಗಿದವರಂತೆ ಆನಂದಭರಿತರಾಗಿರುವರು.

ತಾಯಿತದ ದೆಸೆಯಿಂದ ತಾವು ಕೋಟ್ಯಾಧೀಶ್ವರರಾಗುವೆವೆಂದೂ, ತಾವು ವಾಸಮಾಡಿಕೊಂಡಿರುವ ಬೀದಿಯ ಒಂದು ಸಾಲು ಮನೆಗಳನ್ನೇ ಕ್ರಯಕ್ಕೆ ಪಡೆಯಬೇಕೆಂಬ ಆಲೋಚನೆಯಲ್ಲಿರುವರು.

ಕಷ್ಟಸುಖಗಳ ಪರಿವೆಯಿಲ್ಲದ ರೈಲು, ಸುಖದುಃಖಗಳಿಂದ ಕೂಡಿದ ಸಾವಿರಾರು ಜನರನ್ನು ತನ್ನ ಮಡಿಲಲ್ಲಿರಿಸಿಕೊಂಡು ಮುಂದುವರಿಯುತ್ತಾ ಚಿತ್ರಾಪುರವೆಂಬ ನಿಲ್ದಾಣದಲ್ಲಿ ನಿಂತಿತು.

ಆ ನಿಲ್ದಾಣವು ಜಂಕ್ಷನ್ ಆದುದರಿಂದಲೂ, ರೈಲು ಇಪ್ಪತ್ತು ನಿಮಿಷ ನಿಲ್ಲುವುದರಿಂದಲೂ, ಅನ್ನದಾನಪ್ಪನವರು ಕಾಫಿ ಕುಡಿಯಲು ರೈಲಿನಿಂದ ಕೆಳಗಿಳಿದರು.

ಆ ವೇಳೆಯಲ್ಲಿ ಆ ನಿಲ್ದಾಣದಲ್ಲಿಯೇ ಓಡಾಡುತ್ತಿದ್ದ ಕೆಂಪಯ್ಯನೆಂಬ ಯಾಮಿಕನು ಅಕಸ್ಮಾತ್ ಅನ್ನದಾನಪ್ಪನವರನ್ನು ನೋಡಿದ.

ಅವರನ್ನು ನೋಡಿ ಬೆರಗಾದ ಯಾಮಿಕನು ತನ್ನ ಜೇಬಿನಲ್ಲಿದ್ದ ಪತ್ರಿಕೆಯನ್ನು ತೆಗೆದು ಮರಿದಾಸನು ಹೊರಡಿಸಿದ್ದ ಪ್ರಕಟಣೆಯನ್ನು ನೋಡಲು, ಆ ಪ್ರಕಟಣೆಗೂ, ಅನ್ನದಾನಪ್ಪನವರ ಆಕಾರಕ್ಕೂ ವ್ಯತ್ಯಾಸವೇ ಕಾಣಲಿಲ್ಲ.

ಅನ್ನದಾನಪ್ಪನವರು ಉಟ್ಟ ಬಟ್ಟೆಯಲ್ಲಿಯೇ ಹೊರಟು, ಹಾಗೇ ಹಿಂದಿರುಗಿರುವರು. ಬೇರೆ ಇದ್ದರಲ್ಲವೇ ಬದಲಾಯಿಸುವುದು ?

ಕೆಂಪಯ್ಯನು ಆ ಪ್ರಕಟಣೆಯನ್ನು ಓದಿದಲಾಗಾಯ್ತು, ಪತ್ರಿಕೆಯನ್ನು ಜೇಬಿನಲ್ಲಿಟ್ಟುಕೊಂಡು ಆ ಪರಿಚಯದ ಮನುಷ್ಯನಿಗಾಗಿ ನೋಡುತ್ತಿದ್ದನು.

ಅನ್ನದಾನಪ್ಪನವರನ್ನು ನೋಡುತ್ತಲೇ ನೂರು ರೂಪಾಯಿಗಳ ನೆನಪು ಬಂದು, ಅವರ ಸಮೀಪಕ್ಕೆ ಬಂದು—

"ನಿಮ್ಮ ಹೆಸರು ಅನ್ನದಾನಪ್ಪನೆಂದಿರುವುದೇ ?" ಎಂದು ಕೇಳಿದ.

ಸೋಜಿಗರಾದ ಅನ್ನದಾನಪ್ಪನವರು ಕೆಂಪಯ್ಯನ ಮುಖವನ್ನು ನೋಡಲು, ಗುರುತು ಸಿಗಲಿಲ್ಲ.

ತಾವು ಈತನನ್ನು ನೋಡದೆ ಇದ್ದರೂ, ಈತನು ತಮ್ಮನ್ನು ನೋಡಿರುವನೆಂಬ ಸಂತೋಷದಿಂದ ಹೌದೆಂದು ತಲೆಯಾಡಿಸಿದರು.

ಕೆಂಪಯ್ಯನಿಗೆ ಆನಂದವಾಯಿತು.

"ನೀವು ಈಗಲೇ ಪೋಲೀಸ್ ಠಾಣೆಗೆ ಬರಬೇಕು"

—ಎಂದು ಹೇಳಿದ ಕೆಂಪಯ್ಯ.

ಗಾಬರಿಯಾದ ಅನ್ನದಾನಪ್ಪನವರು—

"ಏಕೆ ? ನಾನೇನು ತಪ್ಪು ಮಾಡಿರುವೆನು" ಎಂದು ಕೇಳಿದರು.

ಕೆಂಪಯ್ಯನು ತನ್ನಲ್ಲಿದ್ದ ಪತ್ರಿಕೆಯನ್ನು ಅವರ ಮುಖಕ್ಕೆ ಹಿಡಿದ. ಅದರಲ್ಲಿದ್ದ ಪ್ರಕಟಣೆಯನ್ನು ನೋಡಿದ ಅನ್ನದಾನಪ್ಪನವರು, ನಕ್ಕು 'ಹೋ, ಹೀಗೋ' ಎಂದುಕೊಂಡರು.

"ಇದನ್ನು ಹುಡುಗಾಟಕ್ಕಾಗಿ ಹಾಕಿಸಿರುವ ಪ್ರಕಟಣೆ. ಇದನ್ನು ಹಾಕಿಸಿರುವವನು ನನ್ನ ಭಾವಮೈದುನನೇ. ಇದರಲ್ಲಿಯೇ ಬರೆದಿಲ್ಲವೇ-ಹುಚ್ಚು ಹಿಡಿದಿಲ್ಲವೆಂದು. ಬಹುಮಾನದ ಆಸೆಗಾಗಿ ನನ್ನಲ್ಲಿಗೆ ಬಂದಿರಾ ?"

—ಎಂದು ಕೇಳಿದರು.

"ಏನಾದರೂ ಆಗಲಿ. ಪೋಲೀಸ್ ಠಾಣೆಗೆ ಬನ್ನಿ"

—ಎಂದು ಹಟ ಹಿಡಿದವನಂತೆ ನುಡಿದ ಕೆಂಪಯ್ಯ.

"ನಾನು ಅಲ್ಲಿಗೇ ಹೊರಟಿರುವೆನು. ಬೇಕಾದರೆ ಟಿಕೇಟು ತೋರಿಸುವೆನು"

"ಅವೆಲ್ಲಾ ನನಗೆ ಬೇಡ. ನೀವು ಏನು ಹೇಳುವುದಿದ್ದರೂ ಸಬ್ ಇನ್ಸ್ಪೆಕ್ಟರ್ ಮುಂದೆ ಹೇಳಿ"

"ರೈಲು ತಪ್ಪಿಹೋದರೆ ?"

"ಅದಕ್ಕೆ ನಾವು ಜವಾಬ್ದಾರರೇ ? ಮುಂದಿನ ರೈಲಿಗೆ ಇದೇ ಟಿಕೇಟಿನಲ್ಲಿ ಹೋಗಬಹುದು"

"ಈಗ ಬರುವುದಿಲ್ಲವೆಂದರೆ ಏನು ಮಾಡುವಿರಿ ?"

"ಮರ್ಯಾದೆಯಿಂದ ಬಾರದೆ ಹೋದರೆ ಬಲಾತ್ಕಾರದಿಂದ ಕರೆದು ಕೊಂಡು ಹೋಗಬೇಕಾಗುವುದು"

ಅನ್ನದಾನಪ್ಪನವರಿಗೆ ತಾಳ್ಮೆ ಮೀರಿತು. ಮರಿದಾಸನ ಮೇಲೆ ಕ್ರೋಧದ ಕಿಡಿಗಳನ್ನು ಕಾರಿದರು.

ಆಗ ಇದ್ದಕ್ಕಿದ್ದ ಹಾಗೆ ತಾಯಿತದ ನೆನಪು ಬಂದು ಸಿಟ್ಟು ಕ್ಷಣಮಾತ್ರ ದಲ್ಲಿ ದೂರವಾಯಿತು.

ತಾಯಿತದ ಪ್ರಯೋಗವನ್ನು ನೋಡಲು ಈಗ ಸರಿಯಾದ ಸಮಯ. ಇದು ಪ್ರಥಮ ಪರೀಕ್ಷೆಯೆಂದುಕೊಂಡು, ಜೇಬಿನಿಂದ ತಾಯಿತವನ್ನು ತೆಗೆದು ಎರಡು ಕಣ್ಣುಗಳಿಗೆ ಒತ್ತಿಕೊಂಡು "ಈ ಪೋಲೀಸನು ನನ್ನ ಸಹವಾಸಕ್ಕೆ ಬಾರದಿರಲಿ" ಎಂದು ಮನದಲ್ಲಿಯೇ ಹೇಳಿಕೊಂಡು ತಮ್ಮ ಜೇಬಿನಲ್ಲಿಟ್ಟು ಕೊಂಡರು.

ಅವರ ವರ್ತನೆಯನ್ನು ನೋಡಿ ಕೆಂಪಯ್ಯನಿಗೆ ನಗು ಬಂದಿತಲ್ಲದೆ, ಇವರಿಗೆ ಅಲ್ಪಸ್ವಲ್ಪವಾದರೂ ಹುಚ್ಚು ಹಿಡಿದಿದೆಯೆಂಬುದರಲ್ಲಿ ಸಂದೇಹವಿಲ್ಲ ವೆಂದು ಭಾವಿಸಿಕೊಂಡನು.

ಸುತ್ತಮುತ್ತಲಿದ್ದವರೂ ಸಹ ಅನ್ನದಾನಪ್ಪನವರನ್ನು ನೋಡಿ ಇವರಿ ಗೇನು ತಲೆ ಸರಿಯಾಗಿಲ್ಲವೇ ? ಎಂದುಕೊಂಡರು.

"ಅದೇನು ಯಕ್ಷಿಣೀ ಯಂತ್ರವೇ ? ಅದೆಲ್ಲಾ ಇಲ್ಲಿ ನಡೆಯದು. ನೀವು ಈಗಲೇ ಸ್ಟೇಷನ್ನಿಗೆ ಬಂದರೆ ಈ ರೈಲಿಗೆ ಹೋಗುವಿರಿ. ಇಲ್ಲದೆ ಹೋದರೆ ಸಾಧ್ಯವಿಲ್ಲ. ಏನಾದರೂ ಸರಿ. ನಾನು ಮಾತ್ರ ನಿಮ್ಮನ್ನು ಬಿಡಲಾರೆ"

—ಎಂದು ದಿಟ್ಟತನದಿಂದ ನುಡಿದ ಕೆಂಪಯ್ಯ.

ಗಾಬರಿಯಾದ ಅನ್ನದಾನಪ್ಪನವರು, ಇದೇನು ತಾಯಿತವು ಕೆಲಸ ಮಾಡದೆ ಹೋಯಿತು. ಈತನು ಯಂತ್ರವನ್ನೇ ಜರಿಯುವನಲ್ಲ. ಏನಾದರೂ ಅಪವಿತ್ರವಾಯಿತೇ? ಎಂದುಕೊಂಡರು.

ಆಗ ಅಲ್ಲಿದ್ದವರು ವಿಷಯವನ್ನು ಕೆಂಪಯ್ಯನಿಂದ ಕೇಳಿ ತಿಳಿದು, ಪೋಲೀಸ್‌ಠಾಣೆಗೆ ಹೋಗಿಯೇ ಬರುವಂತೆ ಅನ್ನದಾನಪ್ಪನವರಿಗೆ ಸೂಚಿಸಿದರು.

ಹತ್ತು ಜನರಿಗೆ ವಿರೋಧವಾಗಿ ನಡೆಯಲು ಒಬ್ಬರಿಂದ ಸಾಧ್ಯವೇ?

ಕೆಂಪಯ್ಯನಿಗೆ ಮನದಲ್ಲಿಯೇ ಶಪಿಸುತ್ತಾ ಆತನ ಹಿಂದೆ ಹೊರಟರು. ರೈಲಿನಲ್ಲಿ ಸಾಮಾನುಗಳೇನೂ ಇಲ್ಲದ ಪ್ರಯುಕ್ತ ಆ ಬಗ್ಗೆ ಯೋಚಿಸಬೇಕಾದ ಪ್ರಮೇಯವಿರಲಿಲ್ಲ.

ಹೋಗುವಾಗ ಹತ್ತು ರೂಪಾಯಿಗಳನ್ನು ಕೊಡುವೆನು. ನನ್ನನ್ನು ಬಿಟ್ಟುಬಿಡೆಂದು ಕೆಂಪಯ್ಯನಲ್ಲಿ ಕೇಳಿಕೊಂಡರು.

ನೂರು ರೂಪಾಯಿಗಳ ಕನಸು ಕಾಣುತ್ತಿರುವ ಕೆಂಪಯ್ಯನು ಹತ್ತು ರೂಪಾಯಿಗಳಿಗೆ ಸೋಲುವನೇ? ಅಲ್ಲದೆ ಗಲಾಟೆಗೆ ಆಸ್ಪದವಾಗಿ ಕರೆದುಕೊಂಡು ಹೊರಟಿರುವನು. ಇಂತಹ ಪ್ರಸಂಗದಲ್ಲಿ ಆತನು ಒಪ್ಪುವನೇ. ತನ್ನನ್ನು ಪರೀಕ್ಷಿಸಲು ಈ ರೀತಿ ಹೇಳಿದ್ದರೂ ಹೇಳಿರಬಹುದೆಂದುಕೊಂಡು ಆತನು ಒಪ್ಪಲಿಲ್ಲ.

ಹತ್ತು ರೂಪಾಯಿಗಳಿಗೂ ಹೆಚ್ಚಾಗಿ ಕೇಳುವ ಆಸೆಯಿರುವುದೆಂದುಕೊಂಡ ಅನ್ನದಾನಪ್ಪನವರು ಅಲ್ಲಿಗೇ ತಟಸ್ಥರಾದರು. ಅದಕ್ಕಿಂತ ಹೆಚ್ಚಿಗೆ ಕೊಡಲು ಅವರ ಮನ ಒಡಂಬಡಲಿಲ್ಲ.

ಇಬ್ಬರೂ ಪೋಲೀಸ್‌ಠಾಣೆಯ ಬಳಿಗೆ ಹೋಗುತ್ತಲೇ ಅಲ್ಲಿದ್ದ ರೈಲ್ವೇ ಇನ್‌ಸ್ಪೆಕ್ಟರ್ ಭದ್ರಪ್ಪನು ಅನ್ನದಾನಪ್ಪನವರನ್ನು ನೋಡಿ—

"ಏನು ಶ್ರೀಮಂತರು ಬಹುದೂರ ಬಂದಿರುವಿರಲ್ಲ. ಎಲ್ಲಿಗೆ ಪ್ರಯಾಣ" ಎಂದು ಕೇಳಿದ.

ಭದ್ರಪ್ಪನು ಮೊದಲು ಕಾಂಚೀನಗರದಲ್ಲಿಯೇ ರೈಲ್ವೇ ಇನ್‌ಸ್ಪೆಕ್ಟರಾಗಿದ್ದು ಈಗ ಚಿತ್ರಾಪುರದಲ್ಲಿರುವರು.

ಅನ್ನದಾನಪ್ಪನವರಿಗೂ, ಭದ್ರಪ್ಪನಿಗೂ ಹಲವಾರು ವರ್ಷಗಳಿಂದ ಸ್ನೇಹವಿದೆ.

ಭದ್ರಪ್ಪನನ್ನು ನೋಡಿದ ಅನ್ನದಾನಪ್ಪನವರಿಗೆ ಅಮೃತವನ್ನು ಕುಡಿದಷ್ಟು ಆನಂದವಾಯಿತು. ಈ ರೀತಿಯಾಗಲು ತಾಯಿತದ ಮಹಿಮೆಯೇ ಎಂದು ಕೊಂಡರು.

ಸ್ವರ್ಗಲೋಕ ಸ್ವಪ್ನವನ್ನು ಕಾಣುತ್ತಿದ್ದ ಕೆಂಪಯ್ಯನನ್ನು ಪಾತಾಳಕ್ಕೆ ತಳ್ಳಿದಂತಾಯಿತು.

ನೂರು ರೂಪಾಯಿಗಳಲ್ಲ, ನೂರು ನಯೇ ಪೈಸೆ ಸಹ ಸಿಗಲಾರದೆಂದು ಕೊಂಡನು.

ಅನ್ನದಾನಪ್ಪನವರಿಗೆ ಮೊದಲೇ ಕೆಂಪಯ್ಯನು ಪ್ರಕಟಣೆಯ ವಿವರ ವನ್ನು ಹೇಳಿದ.

ರೈಲು ಹೊರಟು ಹೋಗುವುದೆಂದು ಗಡಬಡಿಸುತ್ತಿದ್ದ ಅನ್ನದಾನಪ್ಪ ನವರು, ತಾನು ಮನೆಯವರಲ್ಲಿ ಹೇಳದೆ, ಬಾಕಿ ವಸೂಲಿಗಾಗಿ ಹೋಗಿದ್ದುದ ರಿಂದ ಅವರು ಅಪಾರ್ಥ ಕಲ್ಪಿಸಿಕೊಂಡು, ಈ ರೀತಿ ಪ್ರಕಟಣೆ ಹೊರಡಿಸಿರುವ ರೆಂದು, ಅತ್ಯವಸರವಾಗಿ ಹೇಳಲು, ಪೂರ್ವ ಪರಿಚಯದ ಭದ್ರಪ್ಪನು ಅವರ ಮಾತು ನಿಜವೆಂದು ನಂಬಿ, ಹಿಂದಿರುಗುವಂತೆ ಹೇಳಿದ.

ಭದ್ರಪ್ಪನಿಗೆ ತಮ್ಮ ಮನದಲ್ಲಿಯೇ ಸಹಸ್ರ ವಂದನೆಗಳನ್ನರ್ಪಿಸಿದ ಅನ್ನದಾನಪ್ಪನವರು, ಕಾಂಚೀನಗರಕ್ಕೆ ಬಂದಾಗ ತಮ್ಮನ್ನು ಕಾಣದಿರಬೇಡಿ ರೆಂದು ಹೇಳಿ, ಕೆಂಪಯ್ಯನನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಾ ಹಿಂದಿರು ಗಿದರು.

ಆ ವೇಳೆಗೆ ಗಾರ್ಡು ವಿಷಲ್ ಊದಿ ಹಸಿರು ಬಾವುಟವನ್ನು ತೋರಿ ಸಿರುವನು.

ಏದುತ್ತಾ ಓಡಿದ ಅನ್ನದಾನಪ್ಪನವರು ರೈಲನ್ನು ಹತ್ತಿ ಕುಳಿತರು.

ಬರುವ ಹತ್ತು ರೂಪಾಯಿಗೂ ಕಲ್ಲು ಬಿತ್ತೇ? ಭದ್ರಪ್ಪನವರ ಬದಲು ಬೇರೆಯವರಿರಬಾರದಿತ್ತೇ? ಹೀಗೆಂದು ತಿಳಿದಿದ್ದರೆ, ಅವರನ್ನು ಇಲ್ಲಿಗೆ ಕರೆದು ಕೊಂಡೇ ಬರುತ್ತಿರಲಿಲ್ಲವಲ್ಲಾ, ಎಂದುಕೊಂಡ ಕೆಂಪಯ್ಯನು ವಿಧಿಯನ್ನು ಶಪಿಸಿ, ತನಗೆ ಅದೃಷ್ಟವಿಲ್ಲವೆಂದುಕೊಂಡನು.

ಗಾಡಿಯಲ್ಲಿ ಕುಳಿತಿದ್ದವರು ಏನಾಯಿತೆಂದು ಅನ್ನದಾನಪ್ಪನವರಿಗೆ ಕೇಳಲು, ಅವರು ನಡೆವ ವಿಷಯವನ್ನು ಹೇಳಿ, ಹೆಮ್ಮೆಯಿಂದ ನಕ್ಕರು.

ಹೋಗುವಾಗ ಎರಡನೇ ತರಗತಿಯ ಟಿಕೇಟು ಪಡೆದಿದ್ದರು. ಹಿಂದಿರುಗುವಾಗ ಇಂಟರ್ ಕ್ಲಾಸ್ ಟಿಕೇಟು ಪಡೆದಿರುವರು.

ತಮ್ಮನ್ನು ಅಪರಿಚಿತ ಯಾಮಿಕನು ಹಿಡಿದು, ತಮ್ಮ ಪೂರ್ವಪರಿಚಿತನಾದ ಭದ್ರಪ್ಪನು ಚಿತ್ರಾಪುರದಲ್ಲಿರುವುದೆಂದರೆ ತಾಯಿತದ ಅದ್ಭುತ ಪರೀಕ್ಷೆಯೇ ಸರಿ. ಪ್ರಥಮದಲ್ಲಿಯೇ ಈ ರೀತಿ ಜಯ ಲಭಿಸಿತೆಂದ ಬಳಿಕ ಇನ್ನು ಕೇಳಬೇಕೇ? ಎಂದುಕೊಂಡರು.

ಆದರೇ! ಮರಿದಾಸನ ಮೇಲೆ ಮಾತ್ರ ವಿಶೇಷ ಕ್ರೋಧಗೊಂಡಿರುವರು.

ತನಗಾಗಿ ಹುಡುಕುತ್ತಿರುವವರಾರ ಕಣ್ಣಿಗಾದರೂ ಮತ್ತೆ ಬಿದ್ದರೆ, ಕಾರಣವಿಲ್ಲದೆ ತೊಂದರೆ ಪಡಬೇಕಾಗುವುದೆಂದೂ, ಆ ಪ್ರಯುಕ್ತ ಕಾಂಚೀನಗರವನ್ನು ಸೇರುವವರೆವಿಗೆ ರೈಲಿನಿಂದಿಳಿಯಬಾರದೆಂದೂ ತೀರ್ಮಾನ ಮಾಡಿಕೊಂಡರು.

ಒಂದು ವೇಳೆ ಯಾರಾದರೂ ಸರಿ, ತಮ್ಮನ್ನು ಹಿಡಿದರೆ, ತಾಯಿತದ ಸಾಮರ್ಥ್ಯವು ಅವರನ್ನು ಮಂಕರನ್ನಾಗಿ ಮಾಡುವುದೆಂಬ ನಂಬಿಕೆಯೂ ಅವರ ಮನದಲ್ಲಿದೆ.

ರೈಲು ಇನ್ನೂರಿಪ್ಪತ್ತು ನಿಮಿಷ ತಡವಾಗಿ ಕಾಂಚೀನಗರವನ್ನು ತಲುಪಿತು.

ರೈಲು ನಿಲ್ಲುತ್ತಲೇ, ಗಡಿಬಿಡಿಯಿಂದ ಇಳಿದು ಮನೆಯ ಕಡೆ ಹೊರಟರು.

ಆ ವೇಳೆಯಲ್ಲಿ ಅವರ ಸ್ನೇಹಿತರೇ ಆಗಲಿ, ನೆಂಟರಿಷ್ಟರೇ ಆಗಲಿ ಅವರನ್ನು ಸಂಧಿಸಲಿಲ್ಲ.

ಆಗ ಸಾಯಂಕಾಲ ಆರು ಘಂಟೆಯ ಸಮಯ.

ಮನೋರಮೆ, ಮರಿದಾಸ ಮತ್ತು ಸರೋಜ ಇವರು ಮೂವರೂ ಅನ್ನದಾನಪ್ಪನವರ ವಿಷಯವಾಗಿಯೇ ಮಾತನಾಡುತ್ತಿರುವಾಗಲೇ ಅವರ ಆಗಮನವಾಯಿತು.

ಅವರನ್ನು ನೋಡಿ ಮನೋರಮೆ, ಸರೋಜಳು ಆಶ್ಚರ್ಯವನ್ನು ವ್ಯಕ್ತ ಪಡಿಸದೆ ಇದ್ದರೂ, ಮರಿದಾಸನು ಸಂತೋಷಭರಿತನಾದನು.

ಕೂಡಲೇ ಎದ್ದು ನಗುಮುಖದಿಂದ—

"ಭಾವಾ! ಯಾವಾಗ ಬಂದಿರಿ?" ಎಂದು ಕೇಳಿದ.

"ಛೀ! ಅಧಮಾ, ನನ್ನನ್ನು ಭಾವನೆನ್ನುವೆಯಾ? ನನ್ನನ್ನು ಹುಡುಕಿ ಕೊಟ್ಟವರಿಗೆ ನೂರು ರೂಪಾಯಿ ಕೊಡುವೆಯಾ? ರೂಪಾಯಿಗಳನ್ನು ನಿನ್ನಪ್ಪನು ಕೊಡುವನೇ? ನನ್ನ ವಿಷಯದಲ್ಲಿ ಜಾಹಿರಾತು ಹೊರಡಿಸಲು ನೀನಾರು? ನಾನೇನು ನಿನ್ನ ಮನೆಯಿಂದ ಏನಾದರೂ ವಸ್ತುವನ್ನು ಕದ್ದು ಕೊಂಡು ಬಂದಿರುವೆನೇ? ತಪ್ಪಿಸಿಕೊಂಡಿದ್ದಾರೆ ಎಂದು ಪ್ರಕಟಣೆ ಹೊರಡಿ ಸಿರುವೆಯಲ್ಲ. ನನ್ನ ಮನೆಯ ಕೂಳನ್ನು ತಿನ್ನುವುದಕ್ಕಾಗಿ ಬಂದ ನಿನಗೆ ಅಹಂಕಾರವೆಷ್ಟು? ನನ್ನ ಮಗಳನ್ನು ಮರುಳು ಮಾಡಲು ಇಲ್ಲಿಗೆ ಬಂದಿರು ವೆಯಾ? ನಿನಗೆ ಇನ್ನು ಸ್ಥಳವಿಲ್ಲ. ಈಗಲೇ ಹೊರಡು. ನನ್ನ ಕಣ್ಣೆದುರಿಗಿರ ಬೇಡ"

—ಎಂದು ಒಂದೇ ಸಮನಾಗಿ ಗುಡುಗಿದರು, ಅನ್ನದಾನಪ್ಪನವರು.

ಮರಿದಾಸನಲ್ಲದೆ ಬೇರೆ ಯಾರಾದರೂ ಆಗಿದ್ದರೆ, ಸಿಟ್ಟಿನ ಆವೇಶದಲ್ಲಿ ಅನ್ನದಾನಪ್ಪನವರಿಗೆ ಹೊಡೆಯದೆ ಬಿಡುತ್ತಿರಲಿಲ್ಲ.

ತಾನು ಹೊರಡಿಸಿದ ಜಾಹಿರಾತಿನಿಂದ ಇವರಿಗೆ ತೊಂದರೆಯಾಗಿದೆ ಯೆಂದೂ ಆ ಪ್ರಯುಕ್ತ ಹೀಗೆ ಸಿಟ್ಟಾಗಿರುವರೆಂದು ಭಾವಿಸಿ, ಆಗ ಏನೊಂದೂ ಮಾತನಾಡದೆ ಗೋಡೆಯೊರಗಿ ನಿಂತುಕೊಂಡ.

ಮನೋರಮೆ, ಸರೋಜರಿಬ್ಬರೂ ಮಂಕು ಹಿಡಿದವರಂತೆ ನಿಂತು ಕೊಂಡರು.

ಅನ್ನದಾನಪ್ಪನವರು ಹಾವಿನಂತೆ ಬುಸುಗುಟ್ಟುತ್ತಾ, ರೂಮಿನೊಳಗೆ ಹೋಗಿ ಮಂಚದ ಮೇಲೆ ಕುಳಿತರು.

ಕೆಲಹೊತ್ತು ಆ ಸ್ಥಳದಲ್ಲಿ ಶಾಂತಿಯ ನಿಶ್ಶಬ್ದತೆಯು ತಾನೇತಾನಾಗಿ ನೆಲಸಿತು.

ಸರೋಜಳು ಮೆಲ್ಲಮೆಲ್ಲನೆ ಅಡಿಯಿಡುತ್ತಾ ತಂದೆಯ ಎದುರಿಗೆ ಹೋಗಿ ನಿಂತಳು. ಅವಳ ಹಿಂದೆಯೇ ಮನೋರಮೆಯೂ ಹೋದಳು.

ಸಿಟ್ಟಿನ ಪ್ರತಿಮೂರ್ತಿಯಾಗಿ ಕುಳಿತಿದ್ದ ಅನ್ನದಾನಪ್ಪನವರು ತಲೆ ಯೆತ್ತಿ ನೋಡಿ, ತಮ್ಮ ಸಿಟ್ಟನ್ನು ಅಡಗಿಸಿಕೊಂಡರು.

ಆದರೂ ಈಗ ಬಿಗುಮಾನದಿಂದಲೇ ಇರಬೇಕೆಂದು ಭಾವಿಸಿ, ಯಾರೊಡನೆಯೂ ಮಾತನಾಡದೆ, ಮೌನರಾಗಿಯೇ ಇದ್ದರು.

ಇನ್ನೂ ಇವರ ಸಿಟ್ಟು ಅಡಗಿಲ್ಲನೆಂದು ಭಾವಿಸಿ, ಎಲ್ಲರೂ ಹೊರಗೆ ಬಂದರು.

ಅನ್ನದಾನಪ್ಪನವರು ಯೋಚನೆಯಲ್ಲಿ ಲೀನರಾಗಿ ಕುಳಿತುಬಿಟ್ಟರು.

ಸರೋಜಳು ಮುರಿದಾಸನಿಗೆ ಬಹುವಿಧದಲ್ಲಿ ಸಮಾಧಾನ ಪಡಿಸಿ, ತಂದೆಯು ಸಿಟ್ಟಿನಲ್ಲಿ ಆಡಿದ ಮಾತುಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬಾರ ದೆಂದು ಬೇಡಿಕೊಂಡಳು.

ಕಟುವಾಕ್ಯಗಳನ್ನು ಕೇಳಿ, ಶೋಕ ಸಂತಪ್ತನಾಗಿದ್ದ ಮುರಿದಾಸನು ಅಮೃತದಂತಹ ಮಧುರ ವಾಕ್ಯಗಳಿಗೆ ಮನಸೋತು, ಹೇಗೋ ಭಾವನವರು ಬಂದರಲ್ಲ, ಅಷ್ಟೇ ಸಾಕೆಂದುಕೊಂಡನು.

ಊಟದ ವೇಳೆಯಾಯಿತು.

ಸರೋಜಳು ತಂದೆಯನ್ನು ಊಟಕ್ಕೆ ಕರೆಯಲು ಅವರು ಊಟ ಮಾಡಲೊಪ್ಪಲಿಲ್ಲ.

ಮಗಳನ್ನು ಹೊರಗೆ ಕಳುಹಿಸಿ, ಬಾಗಿಲನ್ನು ಹಾಕಿ ಕುಳಿತುಕೊಂಡರು.

ತಾಯಿತದ ಮಹಿಮೆಯಿಂದ ತಾವು ಯೋಚಿಸಿಕೊಂಡ ಕಾರ್ಯವೆಲ್ಲಾ ನಿರ್ವಿಘ್ನವಾಗಿ ನಡೆಯುವುದೆಂದು ಭಾವಿಸಿರುವರಾದರೂ, ಕೊಂಚ ಬಿಗುಮಾನ ದಿಂದಿದ್ದರೆ ಉತ್ತಮವೆಂದು ಅವರ ಭಾವನೆಯಾಗಿದೆ.

ಅನ್ನದಾನಪ್ಪನವರು ಊಟ ಮಾಡಲಿಲ್ಲವೆಂದು ಉಳಿದವರು ಉಪವಾಸ ವಿರಲಿಲ್ಲ. ಮಾಮೂಲಿನಂತೆ ಊಟ ಮಾಡಿ ಮಲಗಿಕೊಂಡರು.

ಉಪವಾಸ ಮಲಗಿದರೂ ಅನ್ನದಾನಪ್ಪನವರು ನಿದ್ದೆ ಮಾಡದಿರಲಿಲ್ಲ. ಪ್ರಯಾಣದ ಆಯಾಸವಿದ್ದ ಪ್ರಯುಕ್ತ ಬಹು ಬೇಗನೆ ನಿದ್ರಾದೇವಿಯನ್ನಾ ಲಂಗಿಸಿಕೊಂಡರು.

ಅನ್ನದಾನಪ್ಪನವರು ಬಂದಿರುವ ವಿಷಯವು ಅವರ ಮನೆಯವರ ವಿನಃ ಬೇರೆ ಯಾರಿಗೂ ತಿಳಿಯದು.

ರಾಜಗೋಪಾಲನು ಸೌದಾಮಿನಿಯನ್ನು ಒಪ್ಪಿರುವುದರಿಂದ, ತನ್ನ ತಂದೆಯು ಆ ವಿಷಯವನ್ನು ಕೇಳಿ ತಿಳಿದು, ಆ ಪ್ರಸ್ತಾಪವನ್ನು ಮರೆಯುವರಲ್ಲದೆ ತನ್ನಿಷ್ಟದಂತೆ, ವರದರಾಜನಿಗೆ ತನ್ನನ್ನಿತ್ತು ವಿವಾಹ ಮಾಡುವರೆಂದು ಸರೋಜಳು ನಂಬಿರುವಳು.

ಆ ರಾತ್ರಿಯು ಹೇಗೋ ಕಳೆದುಹೋಯಿತು.

ಬೆಳಗಾದನಂತರ ಅನ್ನದಾನಪ್ಪನವರು ಸಂಪೂರ್ಣವಾಗಿ ಬದಲಾವಣೆಗೊಂಡರು.

ತಾವು ಮರಿದಾಸನಿಗೆ ನಿಂದಾವಾಕ್ಯಗಳನ್ನಾಡಿದ್ದಕ್ಕೆ ಪಶ್ಚಾತ್ತಾಪಗೊಂಡರು.

ಆ ರೀತಿ ಪ್ರಕಟಣೆ ಹೊರಡಿಸಿದ್ದರಿಂದ ಚಿತ್ರಾಪುರದಲ್ಲಿ ತಾಯಿತದ ಅದ್ಭುತ ಸಾಮರ್ಥ್ಯವು ತಿಳಿದಂತಾಯಿತೆಂದುಕೊಂಡರು.

ಬಾಗಿಲು ತೆಗೆದು ಹೊರಗೆ ಬಂದು ಖಿನ್ನವದನನಾಗಿ ನಿಂತುಕೊಂಡಿದ್ದ ಮರಿದಾಸನೊಡನೆ ನಗುನಗುತ್ತಾ ಮಾತನಾಡಿದರಲ್ಲದೆ, ರಾತ್ರಿ ಸಿಟ್ಟಿನಿಂದ ಮಾತನಾಡಿದ್ದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಡವೆಂದು ಹೇಳಿದರು.

ಅವರೇ ಆ ರೀತಿ ಹೇಳಿದ ಮೇಲೆ ಮರಿದಾಸನು ಸಂತೋಷ ಹೊಂದದಿರುತ್ತಾನೆಯೇ ?

ಬೆಳಗ್ಗೆ ಇನ್ನೇನು ರಾಮಾಯಣವಾಗುವುದೋ ಎಂದು ಮನೋರಮೆಯು ಭಾವಿಸಿದ್ದಳು.

ಒಂದು ರಾತ್ರಿಯಲ್ಲಿಯೇ ಅನ್ನದಾನಪ್ಪನವರ ಗುಣವು ಮಾರ್ಪಾಟಾದುದನ್ನು ನೋಡಿ ತಾಯಿ, ಮಗಳಿಗೂ ಸಂತೋಷವಾಯಿತು.

ತಾಯಿತದ ದೆಸೆಯಿಂದ ಎಲ್ಲಾ ಕಾರ್ಯವೂ ತಮ್ಮ ಆಲೋಚನೆಯಂತೆ ನಡೆಯುವಾಗ, ತಾವೇಕೆ ಹಿಂದಿನಂತೆ ಕಷ್ಟಪಡಬೇಕೆಂದು ಅನ್ನದಾನಪ್ಪನವರ ಭಾವನೆಯಾಗಿದೆ.

ಅನ್ನದಾನಪ್ಪನವರು ಮನೆ ಬಿಟ್ಟು ಹೋದಲಾಗಾಯ್ತು ಆ ವರೆವಿಗೆ ನಡೆದ ಪ್ರಸಂಗ, ಪ್ರವರಗಳನ್ನೆಲ್ಲಾ ಸರೋಜಳು ಅವರೊಡನೆ ಹೇಳಿದಳು.

ರಾಜಗೋಪಾಲನ ವಿಷಯವನ್ನು ಕೇಳಿ ತನ್ನ ತಂದೆಯು ಅವನಿಗೆ ಛೀಮಾರಿ ಮಾಡುವರೆಂದು ಸರೋಜಳು ಭಾವಿಸಿದಳು.

ಆವರೇ! ಅನ್ನದಾನಪ್ಪನವರು ಲೇಶಮಾತ್ರವೂ ಅಂಜಿ ಅಳುಕಲಿಲ್ಲ.

ಬೇಡಿದ ವಸ್ತುವನ್ನು ಕೊಡುವ ಕಲ್ಪವೃಕ್ಷದಂತೆ, ಮನದಿಷ್ಟಾರ್ಥವನ್ನು ನೆರವೇರಿಸುವ ಯಕ್ಷಿಣಿಯಂತ್ರವಿರುವಾಗ ತಾವೇಕೆ ಆ ವಿಷಯವಾಗಿ ಚಿಂತಿಸಿ, ಕಂಗೆಡಬೇಕೆಂದುಕೊಂಡರು.

ತಾಯಿತವನ್ನು ತೆಗೆದುಕೊಂಡು ರಾಜಗೋಪಾಲನಲ್ಲಿಗೆ ಹೋದರೆ ಅವನೇ ಒಪ್ಪುವನೆಂದು ಅವರ ಭಾವನೆ.

ಕಾಂಚೀನಗರದಲ್ಲಿ ನಡೆದ ವಿಷಯವನ್ನು ಕೇಳಿ ತಿಳಿದುದೆಷ್ಟೋ ಅಷು ಮಾತ್ರವಲ್ಲದೆ, ತಾವು ಹೋಗಿಬಂದ ವಿಷಯವನ್ನು ಅವರೊಡನೆ ಹೇಳಲಿಲ್ಲ.

ಕೆಲಹೊತ್ತು ಯಾವುಯಾವುದೋ ವಿಷಯವಾಗಿ ಮಾತನಾಡುತ್ತಾ, ವೇಳೆಯನ್ನು ಕಳೆದು ಬಳಿಕ, ಮನೆಯಿಂದ ಹೊರಗೆ ಹೊರಟರು.

ಅವರು ಮನೆಯಿಂದ ಹೊರಡುವುದಕ್ಕೂ, ಪುರುಷೋತ್ತಮನು ಅಲ್ಲಿಗೆ ಬರುವುದಕ್ಕೂ ಸರಿಹೋಯಿತು.

ಅನ್ನದಾನಪ್ಪನವರನ್ನು ನೋಡಿ ಪುರುಷೋತ್ತಮನಿಗುಂಟಾದ ಆಶ್ಚರ್ಯಕ್ಕೆ ಮೇರೆಯೇ ಇಲ್ಲವಾಯಿತು.

ತನ್ನ ಊಹೆಯಂತೆ ಇವರು ಕೊಲೆಗಾರನ ಸೆರೆಮನೆಯಲ್ಲಿ ನರಳುತ್ತಿರಲಿಲ್ಲವೆಂದೂ, ಬಾಲಕೃಷ್ಣನಂತೆ ಇವರೂ ಸಹ ಪರ ಊರಿಗೆ ಹೋಗಿ ನೆನ್ನೆಯ ದಿನ ಹಿಂದಿರುಗಿರುವರೆಂದು ಯೋಚಿಸಿ, ಅವರ ಪರಿಚಯವಿದ್ದ ಪ್ರಯುಕ್ತ, ಅವರನ್ನು ಕಂಡು ಅಕಸ್ಮಾತ್ ಕಂಡವನಂತೆ ನಟಿಸಿ, ಹಾಗೇ ಮಾತನಾಡುತ್ತಾ ತನ್ನ ಮನೆಗೆ ಕರೆದುಕೊಂಡು ಹೋದನು.

ಮನೆಗೆ ಕರೆದುಕೊಂಡು ಹೋದನಂತರ ಔಪಚಾರಿಕವಾಗಿ ಮಾತನಾಡುತ್ತಾ—

"ನೀವು ನಿಮ್ಮ ಮಗಳ ಮೇಲೆ ಕೋಪಗೊಂಡು ಮನೆಯಿಂದ ಹೊರಟವರು ಇದುವರೆವಿಗೆ ಎಲ್ಲಿದ್ದಿರಿ? ಏನೇನು ಕಾರ್ಯ ಸಾಧಿಸಿದಿರಿ? ಪ್ರತಿಯೊಂದು ವಿಷಯವನ್ನೂ ಚಾಚೂ ತಪ್ಪದೆ ಹೇಳಿ. ನನ್ನಲ್ಲಿ ಮುಚ್ಚುಮರೆ ಮಾಡಿದರೆ ನಿಮಗೆ ತೊಂದರೆ ತಪ್ಪದು. ನಿಜ ಹೇಳಿದರೆ ನಿಮಗೇನೂ ತೊಂದರೆಯಾಗದು" ಎಂದು ಪ್ರಶ್ನೆ ಹಾಕಿದ.

ಪತ್ತೇದಾರನ ಮಾತಿಗೆ ಬೆರಗಾದ ಅನ್ನದಾನಪ್ಪನವರು, ಇದರಲ್ಲೇನೋ ಮಹತ್ವವಿದೆಯೆಂದರಿತು, ತಾವು ಸುಳ್ಳು ಹೇಳಿದರೆ ಮುಂದೆ ತೊಂದರೆ ಒಂದರೂ ಬರಬಹುದೆಂದು ಯೋಚಿಸಿ, ತಾವು ಮನೆಯಿಂದ ಹೊರಟ ಲಾಗಾಯ್ತು, ಹಿಂದಿರುಗಿ ಮನೆಯನ್ನು ಸೇರುವವರೆವಿಗೆ ನಡೆದ ವಿಷಯ ವನ್ನೆಲ್ಲಾ ಅದ್ಯಂತವಾಗಿ ಹೇಳಿದರಲ್ಲದೆ, ಈ ವಿಷಯುವನ್ನು ಯಾರಲ್ಲಿಯೂ ಹೇಳಬಾರದೆಂದು ಪ್ರಾರ್ಥಿಸಿಕೊಂಡರು.

ಅವರ ಹುಚ್ಚುತನವನ್ನು ನೋಡಿ ಪುರುಷೋತ್ತಮನಿಗೆ ನಗು ಬಾರ ದಿರಲಿಲ್ಲ.

ತಾಯಿತದ ವಿಷಯವಾಗಿ ಹಳಿದರೆ ನೊಂದುಕೊಳ್ಳುವರೆಂದು ಯೋಚಿ ಸಿವನಲ್ಲದೆ, ಅವರ ಯೋಗ್ಯತೆಯು ಎಷ್ಟರ ಮಟ್ಟಿಗಿದೆಯೆಂದು ಮುಂದೆ ಇವರಿಗೆ ತಾನಾಗಿಯೇ ತಿಳಿಯದೆ ಇರುವುದಿಲ್ಲವೆಂದುಕೊಂಡು, ಅದರ ಬಗ್ಗೆ ಯಾವ ವಿಷಯವನ್ನೂ ಮಾತನಾಡದೆ, ಉಪಚಾರದ ಮಾತುಗಳಾಡಿ ಅವರನ್ನು ಕಳುಹಿಸಿಕೊಟ್ಟನು.

ಬಳಿಕ ಚಂದ್ರನಾಥ, ರಾಮನಾಥರನ್ನು ಫೋನ್ ಮೂಲಕ ಬರಮಾಡಿ ಕೊಂಡು, ಅನ್ನದಾನಪ್ಪನವರ ವಿಷಯವನ್ನು ಅವರೊಡನೆ ಹೇಳಲು, ಅವರಿಗೂ ಸಹ ನಗು ಬಾರದಿರಲಿಲ್ಲ.

“ಅನ್ನದಾನಪ್ಪನವರು ಕೊಲೆಗಾರನ ಸೆರೆಮನೆಯಲ್ಲಿ ನರಳುತ್ತಿರುವ ರೆಂದು ಹೇಳಿದ್ದೆಯಲ್ಲ, ಈಗ ನೀನೇನು ಹೇಳುವೆ ?”

—ಎಂದು ಮುಗುಳ್ನಕ್ಕು ಪ್ರಶ್ನಿಸಿದ ರಾಮನಾಥ.

ಪುರುಷೋತ್ತಮನು ನಸುನಕ್ಕನಲ್ಲದೆ ಮಾತಿಗೆ ಮಾತು ಬೆಳೆಯಿಸಲಿಲ್ಲ. ಹಾಸ್ಯದ ಹೊನಲಿನಲ್ಲೇ ಎಲ್ಲಾ ತೇಲಿ ಹೋಯಿತು.

೧೭

ಮಗನು ಅಮೇರಿಕಾದಿಂದ ಹಿಂದಿರುಗುತ್ತಲೇ ಮಗನ ಮತ್ತು ಮಗಳ ವಿವಾಹವನ್ನು ಒಟ್ಟಿಗೇ ಮಾಡಬೇಕೆಂಬ ಹಂಬಲವುಳ್ಳವರಾದ ಗೋವಿಂದ ರಾಜುರವರು ಕೇಶವನು ಬರುವುದನ್ನೇ ನಿರೀಕ್ಷಿಸುತ್ತಿರುವರು.

ರಾಜಗೋಪಾಲನ ತಂದೆತಾಯಿಯರಿಗೂ ಸಹ ಆತುರವೇ. ಆದಷ್ಟು ಬೇಗನೆ ವಿವಾಹವನ್ನು ಮಾಡಿ, ಸಂತೋಷಪಡಬೇಕೆಂದಿರುವರು.

ಅವರಿಬ್ಬರಿಗೂ ಪತ್ರವ್ಯವಹಾರವು ನಡೆಯುತ್ತಿರುವುದಲ್ಲದೆ, ರಾಜಗೋಪಾಲನು ಎರಡು ಸಾರಿ ವಿಲಾಸನಗರಕ್ಕೆ ಹೋಗಿ ಸೌದಾಮಿನಿಯನ್ನು ನೋಡಿ ಮೆಚ್ಚಿಕೊಂಡಿರುವನು. ಅವನ ತಂದೆತಾಯಿಯರೂ ಒಂದು ಸಾರಿ ಹೋಗಿ ಬಂದಿರುವರು.

ಅನ್ನದಾನಪ್ಪನವರು ಅವರ ವ್ಯವಹಾರಗಳನ್ನು ನೋಡುತ್ತಿರುವರಾದರೂ ಏನೂ ಅರಿಯದವರಂತೆಯೇ ಇರುವರು.

ತಾಯಿತವಿರುವುದರಿಂದ ತಾವು ಯೋಚನೆ ಪಡಬೇಕಾದ ಕಾರಣವಿಲ್ಲ ವೆಂದೂ, ಕೇಶವನು ಅಮೇರಿಕಾದಿಂದ ಹಿಂದಿರುಗಿದನಂತರ, ತಾಯಿತದ ಮಹಿಮೆಯನ್ನು ಆಗ ತೋರಿಸಬೇಕೆಂದು ಯೋಚಿಸಿಕೊಂಡಿರುವರು.

ತನ್ನ ತಂದೆಯು ಮೌನವಾಗಿರುವುದನ್ನು ನೋಡಿ, ಇವರು ರಾಜ ಗೋಪಾಲನ ಆಸೆಯನ್ನು ತ್ಯಜಿಸಿರುವರೆಂದು ಸರೋಜಳು ಭಾವಿಸಿಕೊಂಡಳು.

ಮರಿದಾಸನು ಜನಿವಾರ ಗ್ರಾಮಕ್ಕೆ ಹಿಂದಿರುಗಿ ಹೊರಟುಹೋಗಿರುವನು. ಹೋಗುವಾಗ ತನ್ನ ಕಾರ್ಯಕೌಶಲ್ಯತೆಗಳ ಪರಿಣಾಮವಾಗಿ ಅನ್ನ ದಾನಪ್ಪನವರಿಂದ ಮೆಚ್ಚಿಗೆ ಪಡೆಯದಿರಲಿಲ್ಲ.

ಮಣಿದಾಸನು ಸರೋಜಳನ್ನು ತನ್ನ ಸಹೋದರಿಯಂತೆ ಕಾಣಲು ತಾಯಿತದ ಮಹಿಮೆಯೋ ಎಂದು ಅನ್ನದಾನಪ್ಪನವರ ಯೋಚನಾಲಹರಿಗೆ ಹೊಳೆಯುದಿರಲಿಲ್ಲ.

ತಮ್ಮ ಯೋಚನಾ ನಿರ್ಧಾರದಂತೆ ಪತ್ತೇದಾರರು ಆಯಾ ಕಾರ್ಯಗಳಲ್ಲಿ ನಿರತರಾದರು.

ವರದರಾಜನು ಭೂತಾಕಾರ ವ್ಯಕ್ತಿಯನ್ನು ಕಂಡ ಪ್ರಯುಕ್ತ ಸರೋಜಳೊಡನೆ ಸಂಧಿಸಲಾಗಲಿಲ್ಲ. ಆ ಪ್ರಯುಕ್ತ ಆತನು ತನ್ನ ಹೃದಯದೇವತೆಯನ್ನು ಎಂದಿಗೆ ಸಂಧಿಸಿಯೇನೆಂದು ತವಕಪಡುತ್ತಿದ್ದನು.

ಅನ್ನದಾನಪ್ಪನವರು ಬಂದಿರುವುದರಿಂದ ಸರೋಜಳು ಅವರೊಡನೆ ತಮ್ಮ ವಿಷಯವನ್ನು ಹೇಳಿದರೂ ಹೇಳಬಹುದೆಂದುಕೊಂಡಿರುವನು.

ಸರೋಜಳೂ ಸಹ ವರದರಾಜನನ್ನು ಸಂಧಿಸಲು ಆತುರಗೊಂಡಿರುವಳು.

ಪ್ರಣಯಿಗಳಿಗೆ ದಿನಗಳನ್ನು ಕಳೆಯುವುದೇ ಮಹಾ ಕಠಿಣವಾಗಿದೆ.

ಚಾತಕಪಕ್ಷಿಗಳು ಮಳೆಯ ಹನಿಯನ್ನು ಎದುರು ನೋಡುವಂತೆ, ತಾವು ಸಂಧಿಸುವ ಕಾಲವನ್ನು ನಿರೀಕ್ಷಿಸುತ್ತಾ, ಆ ದಿನ ರಾತ್ರಿ ಒಂಭತ್ತು ಘಂಟೆಯ ವೇಳೆಗೆ ಪ್ರಣಯಿಗಳಿಬ್ಬರೂ ಉದ್ಯಾನವನದಲ್ಲಿ ರಹಸ್ಯವಾಗಿ ಸೇರಿದರು.

ಒಬ್ಬರನ್ನೊಬ್ಬರು ನೋಡಿ ಆನಂದ ಅತಿರೇಕದಲ್ಲಿ ಆಲಂಗಿಸಿಕೊಂಡು ಬಳಿಕ ಹುಲ್ಲಿನ ಮೇಲೆ ಕುಳಿತರು.

"ಸರೋಜಾ! ನಾನು ನಿನ್ನನ್ನು ಸಂಧಿಸುವೆನೋ ಇಲ್ಲವೋ? ಎಂದು ಭಾವಿಸಿದ್ದೆ."

—ಎಂದು ಸಣ್ಣ ಧ್ವನಿಯಲ್ಲಿ ನುಡಿದ ವರದರಾಜ.

"ಏಕೆ? ಆ ರೀತಿ ಭಾವಿಸುವ ಕಾರಣವೇನು?"

—ಎಂದು ಕುತೂಹಲವಾಗಿಯೇ ಪ್ರಶ್ನಿಸಿದಳು ಸರೋಜ.

"ನಡೆದ ವಿಷಯವು ನಿನಗೆ ತಿಳಿಯದೇ?"

"ನಿಮ್ಮ ಕಣ್ಣಿಗೆ ಭೂತದಂತಹ ವ್ಯಕ್ತಿಯು ಕಂಡ ವಿಷಯವಲ್ಲವೇ?"

"ಹೌದು! ಅದೇ ಪ್ರಸಂಗ."

"ನನಗೆ ಮಾರನೆಯ ದಿನವೇ ತಿಳಿಯಿತು. ವಿಷಯವನ್ನು ಕೇಳಿ ನಾನು ನೊಂದುಕೊಂಡೆನು. ನಿಮ್ಮನ್ನು ನೋಡಬೇಕೆಂದರೆ ಸಾಧ್ಯವಿಲ್ಲ. ನಿಮ್ಮ ಸೌಖ್ಯಕ್ಕಾಗಿ ಕಂಡಕಂಡ ದೇವರಿಗೆಲ್ಲಾ ಹರಕೆ ಹೊತ್ತೆನು."

"ಅಷ್ಟಾದರೂ ನನ್ನ ಮೇಲೆ ಕರುಣವಿರುವುದಲ್ಲ."

"ಆ ವಿಷಯವಿರಲಿ. ನೀವು ಕಂಡ ಭೂತಾಕಾರ ವ್ಯಕ್ತಿಯ ವಿಷಯ ವೇನು?"

"ಆ ವಿಷಯ ಬೇಡ ಸರೋಜ. ನೆನಪಿಗೆ ಬಂದರೆ ಈಗಲೂ ಮೈ 'ಜುಂ' ಎನ್ನುತ್ತದೆ. ನಿನ್ನ ತಂದೆಯ ವಿಷಯವೇನು?"

"ಇಷ್ಟು ದಿನಗಳು ಎಲ್ಲಿ ಹೋಗಿದ್ದರೋ ಏನೋ. ಅದೇನು ವಿಷಯ ವನ್ನೂ ನನ್ನಲ್ಲಿ ತಿಳಿಸಲಿಲ್ಲ."

"ನೀನು ಅವರೊಡನೆ ನಮ್ಮ ವಿಷಯವನ್ನು ಹೇಳಿದೆಯಾ?"

"ಇಲ್ಲಾ! ಅವರೂ ವಿವಾಹದ ವಿಷಯವನ್ನೇ ಮಾತನಾಡದಿರುವರು. ಆ ವಿಷಯ ಬಂದಾಗ ಹೇಳಬೇಕೆಂದು ನಾನೂ ಸುಮ್ಮನಿರುವೆನು."

"ರಾಜಗೋಪಾಲನು ಸೌದಾಮಿನಿಯನ್ನು ವಿವಾಹವಾಗಲಿರುವನೆಂಬ ವಿಷಯವು ಅವರಿಗೆ ತಿಳಿಯದೇ?"

"ತಿಳಿಯದೆ ಏನು, ನಾನೇ ಎಲ್ಲಾ ಹೇಳಿದೆ. ಆದರೇ! ಅವರು ಎಲ್ಲಿಗೂ ಹೋಗದೆ, ಏನೂ ಅರಿಯದವರಂತೆ ವ್ಯವಹಾರದಲ್ಲಿರುವರು."

"ಹಾಗಾದರೇ! ರಾಜಗೋಪಾಲನನ್ನು ಇನ್ನೂ ಮರೆತಿಲ್ಲವೇ? ನೋಡಿ ದರೆ ಹಾಗೇ ತೋರುತ್ತದೆ?"

"ಅದೇನೋ ನನಗೆ ತಿಳಿಯದು. ಈ ಸಾರಿ ನನ್ನ ವಿವಾಹದ ಪ್ರಸ್ತಾಪ ಬಂದಾಗ ನಾನು ಮನೋಭಿಪ್ರಾಯವನ್ನು ಹೇಳದಿರುವುದಿಲ್ಲ."

"ನಾನೂ ನನ್ನ ತಂದೆತಾಯಿರ ಬಳಿಯಲ್ಲಿ ತಿಳಿಸಿ ಅವರ ಒಪ್ಪಿಗೆ ಪಡೆಯುವೆನು."

ಪ್ರಣಯಿಗಳು ಹೊತ್ತು ಕಳೆದುದೇ ತಿಳಿಯಲಿಲ್ಲ. ಘಂಟೆಗಳು ನಿಮಿಷ ಗಳಂತೆ ಕಳೆದುಹೋದುವು.

ವಿನೋದ ಮತ್ತು ವಿಷಾದಕರವಾದ ಮಾತುಗಳನ್ನಾಡಿ ವೇಳೆಯನ್ನು ಕಳೆದರು.

ಆದಷ್ಟು ಬೇಗನೆ ತಮ್ಮ ಮನೋಭೀಷ್ಟವನ್ನು ನೆರವೇರಿಸಿಕೊಳ್ಳಬೇಕೆಂಬ ಹಂಬಲವು ಅವರಿಬ್ಬರ ಮನದಲ್ಲಿಯೂ ಇದೆ.

ಸರೋಜಳು ಅವರೆವಿಗೆ ನಡೆಯಿಸಿದ ಕಾರ್ಯೋದ್ಯಮಗಳನ್ನು ಕೇಳಿ ವರದರಾಜನು ಬೆರಗಾಗದಿರಲಿಲ್ಲ. ಈಕೆಯು ತನ್ನ ಮೇಲೆ ನಿಷ್ಕಳಂಕವಾದ ಪ್ರೇಮವನ್ನಿಟ್ಟಿರುವಳೆಂದು ಆನಂದಗೊಂಡನು.

ಪುನಃ ಇಬ್ಬರೂ ಸಂಧಿಸುವ ಕಾಲವನ್ನು ಗೊತ್ತುಮಾಡಿಕೊಂಡು, ಅಲ್ಲಿಂದ ಹೊರಡಲಣಿಯಾದರು.

ಒಬ್ಬರನ್ನೊಬ್ಬರು ಬಿಟ್ಟು ಹೋಗಲು ಮನಸ್ಸು ಬಾರದು. ಹೋಗದೆ ಇರಲು ಸಾಧ್ಯವಿಲ್ಲ.

ವರದರಾಜನ ಬಾಹುಗಳಲ್ಲಿ ಬಂಧಿತಳಾದ ಸರೋಜಳು ಆ ಬಂಧನವನ್ನು ಮೆಲ್ಲನೆ ಬಿಡಿಸಿಕೊಂಡು, ಆತನಿಗೆ ಅಭಯಮುದ್ರೆಯನ್ನಿತ್ತಳು.

ಪ್ರಣಯಿಗಳು ಅಲ್ಲಿಂದ ಹೊರಡಬೇಕು ಎನ್ನುವಷ್ಟರಲ್ಲಿ ಅವರ ಎದುರಿಗೆ ಪಿಸ್ತೂಲು ಹಿಡಿದ ವ್ಯಕ್ತಿಯೊಬ್ಬನು ಹಾಜರಾದನು.

ಪಿಸ್ತೂಲು ಹಿಡಿದ ವ್ಯಕ್ತಿ ಯಾರು ?

ಪತ್ತೇದಾರ ಪುರುಷೋತ್ತಮ.

ಕೊಲೆಗಾರನು ಸರೋಜಳ ಪ್ರಣಯಪುರುಷನೆಂದೂ, ಆತನೇ ಈ ದುರಂತಗಳಿಗೆ ಕಾರಣನೆಂದು ಭಾವಿಸಿ, ಸರೋಜಳು ಎಂದಿದ್ದರೂ ತನ್ನ ಪ್ರಣಯಪುರುಷನನ್ನು ಸಂಧಿಸದಿರಲಾರಳೆಂದು ತಿಳಿದು, ಅವಳಿಗೆ ಕಾವಲಾಗಿ, ಆ ದಿನ ಆಕೆಯು ವರದರಾಜನನ್ನು ಕಾಣುವ ನಿಮಿತ್ತ ಹೊರಡಲು, ಪುರುಷೋತ್ತಮನು ಅವಳ ಹಿಂದೆಯೇ ಹೊರಟು, ಉದ್ಯಾನವನದಲ್ಲಿ ವರದರಾಜನನ್ನು ನೋಡಿರುವನು.

ಆತನನ್ನು ನೋಡಿದಾಗ ಪುರುಷೋತ್ತಮನ ಆಶ್ಚರ್ಯಕ್ಕೆ ಮೇರೆಯೇ ಇಲ್ಲವಾಯಿತು.

ವರದರಾಜನು ಸರೋಜಳ ಪ್ರಣಯಪುರುಷನೆಂದು ಪತ್ತೇದಾರನು ಕನಸುಮನಸಿನಲ್ಲಿಯೂ ತಿಳಿದಿರಲಿಲ್ಲ.

ಭೂತಾಕಾರ ವ್ಯಕ್ತಿಯು ವರದರಾಜನ ಮನೆಗೆ ಹೋಗಿ ಅವನಿಗೆ ಬೆದರಿಸಿದ್ದನ್ನು ಕೇಳಿ, ಸರೋಜಳ ಪ್ರಣಯಪುರುಷನು ಬೇರೆ ಯಾರೋ ಇರುವರೆಂದು ಊಹಿಸಿದ್ದನು. ಈಗ ಆತನಾರೆಂದು ತಿಳಿಯಿತು.

ಭೂತಾಕಾರ ವ್ಯಕ್ತಿಯು ವರದರಾಜನ ಮನೆಗೆ ಹೋಗಿ ಬೆದರಿಸುವ ಉದ್ದೇಶವೇನು? ಅಥವಾ ಆ ಪ್ರಸಂಗವು ಈತನ ಕಪಟನಾಟಕವಿರಬಹುದೇ? ಎಂಬ ಯೋಚನೆಯೂ ಪುರುಷೋತ್ತಮನ ಮನಕ್ಕೆ ಹೊಳೆಯದಿರಲಿಲ್ಲ.

ಮರೆಯಲ್ಲಿ ಅಡಗಿ ಕುಳಿತು ಆ ಪ್ರಣಯಿಗಳ ಮಾತುಗಳನ್ನು ಕೇಳಿ, ಪತ್ತೇದಾರನ ಮನದಲ್ಲಿದ್ದ ಭ್ರಾಂತಿಯೂ ದೂರಾಗದಿರಲಿಲ್ಲ.

ಈ ಪ್ರಣಯಿಗಳಿಬ್ಬರು ನಿಷ್ಕಲ್ಮಶ ಹೃದಯದವರೆಂದು ಭಾವಿಸಿದನಲ್ಲದೆ, ಇವರಿಬ್ಬರ ವ್ಯವಹಾರವು ಇವರ ತಂದೆತಾಯಿಯರಿಗೂ ಸಹ ತಿಳಿಯದೆ ಅತಿ ರಹಸ್ಯವಾಗಿ ನಡೆಯುತ್ತಿದೆಯೆಂದುಕೊಂಡನು.

ಅವರಿಬ್ಬರ ಮಾತುಗಳು ಮುಗಿದು ಹೊರಡುವವರೆವಿಗೆ ಅಲ್ಲಿಯೇ ಅಡಗಿ ಕುಳಿತಿದ್ದು, ಅವರು ಹೊರಡಲಣಿಯಾಗುತ್ತಲೇ ಪಿಸ್ತೂಲು ಸಮೇತ ಅವರ ಎದುರಿಗೆ ಪ್ರತ್ಯಕ್ಷನಾಗಿರುವನು.

ಪ್ರಣಯಿಗಳಿಬ್ಬರೂ ಆತನನ್ನು ನೋಡಿ ಭಯಭ್ರಾಂತರಾದರು. ಬಾಯಿ ಒಣಗಿ ಮಾತನಾಡಲು ಬಾಯೇ ಬಾರದಂತಾಯಿತು.

ಈತನಾರೋ ಕಳ್ಳನಿರಬಹುದೆಂದು ಭಾವಿಸಿದರಲ್ಲದೆ, ಈಗ ಹೆಚ್ಚು ಮಾತನಾಡಿದರೆ ಪ್ರಾಣವನ್ನರ್ಪಿಸಬೇಕಾಗುವುದೆಂದೂ, ಇಲ್ಲದೆಹೋದರೆ ಮೈ ಮೇಲಿನ ಒಡವೆಗಳನ್ನು ಕೊಡಬೇಕಾಗುವುದೆಂದೂ ಭಾವಿಸಿಕೊಂಡರು.

ವರದರಾಜನ ಮೈಮೇಲೆ ಒಡವೆಗಳಿಲ್ಲದೆ ಇದ್ದರೂ ಸರೋಜಳ ಮೈ ಮೇಲೆ ಸಾವಿರಾರು ರೂಪಾಯಿಗಳ ಒಡವೆಗಳಿವೆ.

ಒಡವೆಗಳು ಹೋದರೂ ಚಿಂತೆಯಿಲ್ಲ, ತಮ್ಮ ರಹಸ್ಯವು ಬಯಲಾಗದೆ ಇದ್ದರೆ ಸಾಕೆಂಬ ಭಾವನೆಯು ಸರೋಜಳ ಮನದಲ್ಲಿದೆ.

ಈ ನೀಚ ಕಳ್ಳನು ಈ ದಿನವೇ ಬರಬೇಕೇ? ನಮ್ಮ ವಿನಃ ಬೇರೆ ಯಾರೂ ಈತನ ಕಣ್ಣಿಗೆ ಕಾಣಲಿಲ್ಲವೇ? ಎಂದು ಯೋಚಿಸಿದ ವರದರಾಜನು ಮಾತನಾಡಲು ಬಾಯಿ ಬಿಡಬೇಕೆಂದರೂ ಧೈರ್ಯ ಸಾಲದಾಗಿದೆ.

ಸರೋಜಳು ವರದರಾಜನ ದೇಹಕ್ಕೆ ಒರಗಿ ನಿಂತಿರುವಳು.

ಕತ್ತಲಿನಲ್ಲಿ ಪುರುಷೋತ್ತಮನ ಮುಖವು ಸರಿಯಾಗಿ ಕಾಣುತ್ತಿಲ್ಲ.

ಅವರಿಬ್ಬರೂ ಮಾತನಾಡದೆ ಭಯಭ್ರಾಂತರಾಗಿ ನಿಂತಿರಲು ಪುರುಷೋತ್ತಮನು—

"ನೀವು ಯಾರು? ಎಲ್ಲಿಂದ ಬಂದಿರಿ? ಇಲ್ಲಿ ಏನೇನು ವಿಷಯ ಮಾತನಾಡಿದಿರೆಂಬುದೆಲ್ಲಾ ನನಗೆ ತಿಳಿಯಿತು. ನೀವಿಬ್ಬರೂ ಮಾತನಾಡದೆ ನನ್ನ ಹಿಂದೆ ಬರುವಿರಾದರೆ ಪ್ರಾಣವುಳಿಯುತ್ತದೆ. ಇಲ್ಲದೆ ಹೋದರೆ ಉಳಿಸುಲಾರದು" ಎಂದು ಗಡಸುಧ್ವನಿಯಲ್ಲಿ ಹೇಳಿದ.

ಪ್ರಣಯಿಗಳ ಜಂಘಾಬಲವೇ ಉಡುಗಿಹೋದಂತಾಯಿತು. ಆತನು ತಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುವನೆಂದು ತಿಳಿಯದು.

ಈತನು ಪೋಲೀಸ್ ಸಿ.ಐ.ಡಿ.ಯಾಗಿದ್ದರೆ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗುವನೆಂದೂ, ಕಳ್ಳನಾಗಿದ್ದರೆ ತನ್ನ ಮನೆಗೆ ಕರೆದುಕೊಂಡು ಹೋಗುವನೆಂದೂ ವರದರಾಜನರಿತನು.

ಎಲ್ಲಿಗೆ ಹೋದರೂ ತಮಗೆ ತೊಂದರೆ ತಪ್ಪದು. ಆದ್ದರಿಂದ ಪ್ರಾಣ ಹೋದರೂ ಚಿಂತೆಯಿಲ್ಲ, ಇವನ ಹಿಂದೆ ಹೋಗಬಾರದೆಂದು ವರದರಾಜನು ಸಂಕಲ್ಪ ಮಾಡಿಕೊಂಡನಲ್ಲದೆ ಈ ವೇಳೆಯಲ್ಲಿ ಅಂಜಬಾರದೆಂದುಕೊಂಡನು.

ಈತನೇ ಭೂತಾಕಾರ ವ್ಯಕ್ತಿಯಾಗಿ ತನ್ನ ಮನೆಗೆ ಬಂದಿರಬಾರದೇಕೆಂಬ ಭಾವನೆಯೂ ಅವನ ಮನಕ್ಕೆ ಹೊಳೆಯದಿರಲಿಲ್ಲ.

"ನಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುವೆ? ನೀನಾರು?"

—ಎಂದು ಪ್ರಶ್ನೆ ಹಾಕಿದ ಮನಸ್ಸಿಗೆ ಧೈರ್ಯವನ್ನು ತಂದುಕೊಂಡ ವರದರಾಜು.

"ಯಾರಾದರೂ ಆಗಿರಲಿ, ನನ್ನ ಇಷ್ಟಬಂದಲ್ಲಿಗೆ ಕರೆದುಕೊಂಡು ಹೋಗುವೆನು. ಬರುವಿರೋ, ಇಲ್ಲವೋ?"

—ಎಂದು ಗರ್ಜಿಸಿದ ಪುರುಷೋತ್ತಮ.

"ಬರುವುದಿಲ್ಲವೆಂದರೇನು ಮಾಡುವೆ?"

"ಪಿಸ್ತೂಲಿಗೆ ಬಲಿಯಾಗುವಿರಿ."

"ನಾವು ಸಾಯಲು ಸಿದ್ಧರಾಗಿರುವೆವು. ನಿನಗೆ ಧೈರ್ಯವಿದ್ದರೆ ಹೊಡೆ. ಈ ಲೋಕದಲ್ಲಿ ತಪ್ಪಿದರೂ ಚಿಂತೆಯಿಲ್ಲ. ಪರಲೋಕದಲ್ಲಿಯಾದರೂ ಸುಖ ಪಡುವೆವು."

"ಇಬ್ಬರಲ್ಲಿ ಒಬ್ಬರನ್ನು ಸಾಯಿಸಿ, ಉಳಿದವರು ಜೀವಾವಧಿ ಸಂಕಟ ಪಡುವಂತೆ ವಿಷಮಪರಿಸ್ಥಿತಿಯನ್ನು ತರುವೆನು."

ಆ ಮಾತಿಗೆ ಕೋಪಗೊಂಡ ಸರೋಜಳು—

ಅದೆಂದಿಗೂ ಸಾಧ್ಯವಿಲ್ಲ. ನಮ್ಮಿಬ್ಬರಲ್ಲಿ ಯಾರನ್ನು ಕೊಲೆ ಮಾಡಿದರೂ ಸರಿ, ಉಳಿದವರು ತಕ್ಷಣವೇ ಆತ್ಮಹತ್ಯೆ ಮಾಡಿಕೊಳ್ಳುವರೆಂದು ಭಾವಿಸು. ನೀನೊಬ್ಬ ದರೋಡೆಕೋರನೋ, ಕಳ್ಳನೋ ಆಗಿರುವೆ. ಇಲ್ಲದೇ ಹೋಗಿದ್ದರೆ ಈ ವೇಳೆಯಲ್ಲಿ ಇಲ್ಲಿಗೇಕೆ ಬರುತ್ತಿದ್ದೆ? ಮರ್ಯಾದೆಯಿಂದ ಹೊರಟು ಹೋಗು. ಇಲ್ಲದೇ ಹೋದರೆ ನಿನ್ನ ಕಾರ್ಯ ಸಾಧಿಸಿಕೊ. ಹೆಚ್ಚು ಕಡಮೆ ಯಾದರೆ ಪೋಲೀಸರನ್ನು ಕರೆಯುವೆನು"

—ಎಂದು ದಿಟ್ಟತನದಿಂದಲೇ ಹೇಳಿದಳು.

ಸರೋಜಳ ಮಾತಿಗೆ ಸಂತೋಷ ಮತ್ತು ಸೋಜಿಗನಾದ ಪುರುಷೋತ್ತಮನು—

"ನಿನಗಷ್ಟು ಧೈರ್ಯವಿರುವುದೇ?" ಎಂದು ಕೇಳಿದ.

"ಏಕಿಲ್ಲ? ಹೆಣ್ಣಾದ ಮಾತ್ರಕ್ಕೆ ಅಬಲೆಯೆಂದು ಭಾವಿಸಿದೆಯಾ?"

"ನಾನೇ ಪೋಲೀಸ್ ಸಿ.ಐ.ಡಿ.ಯಾಗಿರುವಾಗ ಬೇರೆ ಯಾರನ್ನು ಕರೆಯುವೆ? ಎದುರಿಗೇ ಇರುವೆನಲ್ಲ. ಏನಾಗಬೇಕು?"

—ಎಂದು ನಕ್ಕು ನುಡಿದ ಪುರುಷೋತ್ತಮ.

"ಈ ಬೂಟಾಟಿಕೆಯ ಮಾತು ನನ್ನಲ್ಲಿ ನಡೆಯದು. ನೀನೊಬ್ಬ ಕಳ್ಳನೇ ಸರಿ. ನನ್ನ ಆಟವು ನಡೆಯಲಿಲ್ಲವೆಂದು ಈ ರೀತಿ ಕಪಟನಾಟಕವನ್ನು ಪ್ರಾರಂಭ ಮಾಡಿರುವೆ."

"ಪೋಲೀಸ್ ಠಾಣೆಗೆ ಬಂದನಂತರ ನಾನು ಕಳ್ಳನೋ, ನೀವು ಕಳ್ಳರೋ ಎಂಬುದು ತಿಳಿಯುತ್ತದೆ. ನಾನು ಕಳ್ಳನೆಂಬ ನಂಬಿಕೆಯಿದ್ದರೆ ಪೋಲೀಸ್ ಠಾಣೆಗೆ ಬರಲು ಅಭ್ಯಂತರವೇನಿದೆ? ನಾನು ಹೋದ ದಾರಿಯಲ್ಲಿ ಬರಬೇಡಿ. ನೀವು ಹೇಳಿದ ದಾರಿಯಲ್ಲಿ ಬರುವೆನು. ನಡೆಯಿರಿ ಹೋಗೋಣ."

ಆ ಮಾತನ್ನು ಕೇಳಿ ಸರೋಜಳ ಬಾಯಿಂದ ತಕ್ಷಣವೇ ಮಾತುಗಳು ಹೊರಡಲಿಲ್ಲ. ಈತನಾರೋ ಸಿ.ಐ.ಡಿ.ಯೇ ಇರಬಹುದೆಂದುಕೊಂಡಳಲ್ಲದೆ, ಪೋಲೀಸ್ ಠಾಣೆಗೆ ಹೋದರೆ ತಾವು ಉಳಿಯುವ ಹಾಗೆಯೇ ಇಲ್ಲವೆಂದು ಕೊಂಡಳು. ಆಕೆಗೆ ಏನು ಮಾಡಬೇಕೆಂದೇ ತೋಚದಂತಾಯಿತು.

ಅವರೆವಿಗೆ ಮೌನವಾಗಿದ್ದ ವರದರಾಜನು—

"ನಾವು ಏನು ತಪ್ಪು ಮಾಡಿರುವೆವೆಂದು ಪ್ರೋಲೀಸ್ ಸ್ಟೇಷನ್ನಿಗೆ ಬರಬೇಕು?" ಎಂದು ಕೇಳಿದ.

"ನಿಮ್ಮ ಮೇಲೆ ನನಗೆ ಸಂದೇಹವುಂಟಾಗಿದೆ. ಆದ್ದರಿಂದ ಬರಬೇಕು. ನೀವು ನಿರಪರಾಧಿಗಳಾಗಿದ್ದರೆ ಭಯವೇನಿದೆ? ಅಲ್ಲಿಗೆ ಬಂದು ನಿಮ್ಮ ಹೇಳಿಕೆಯನ್ನಿತ್ತು ಹಿಂದಿರುಗಿ."

—ಎಂದು ಹೇಳಿದ ಪುರುಷೋತ್ತಮನು.

ಇಬ್ಬರೂ ನಿರ್ವಿಣ್ಣವದನರಾದರು. ಈತನು ಕಳ್ಳನಿರಬಹುದೆಂದು ತಿಳಿದು, ಬಾಯಿಗೆ ಬಂದ ಹಾಗೆ ಮಾತನಾಡಿದ್ದು ತಮ್ಮ ತಪ್ಪೆಂಬ ಭಾವನೆಯು ವರದರಾಜನ ಮನಸ್ಸಿಗೆ ಬಾರದಿರಲಿಲ್ಲ.

"ನೀವು ಪೋಲೀಸ್ ಸಿ ಐ ಡಿ ಗಳೆಂದು ತಿಳಿಯದೆ ಏನೇನೋ ಮಾತನಾಡಿದೆವು. ಅದೇನನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಕ್ಷಮಿಸಿ. ನಾವು ಪೋಲೀಸ್ ಠಾಣೆಗೆ ಬರುವುದೆಂದರೆ ನಮ್ಮ ಗೌರವಕ್ಕೆ ಕುಂದುಂಟಾಗುವುದು. ಆದ್ದರಿಂದ ನಾವು ಬರಲಾರೆವು."

— ಎಂದು ದೀನತೆಯಿಂದ ನುಡಿದ ವರದರಾಜು.

"ಪೋಲೀಸ್ ಠಾಣೆಗೆ ಬಂದರೆ ಅಗೌರವವಾಗುವುದೇ? ಹಾಗೆಂದು ಹೇಳಿದವರಾರು? ನಿಮ್ಮ ಮನೆಯಲ್ಲಿ ಏನಾದರೂ ಅಕೃತ್ಯ ನಡೆದರೆ ಪೋಲೀಸ್ ಠಾಣೆಗೆ ಬಂದು ದೂರು ಕೊಡುವುದಿಲ್ಲವೇ? ಆಗ ಅಗೌರವವಾಗುವುದೇ? ಇಲ್ಲಿಯುವರೆವಿಗೆ ನಿಮ್ಮಿಬ್ಬರನ್ನು ಸತಿಪತಿಯರೆಂದು ಭಾವಿಸಿದ್ದೆನು. ಈಗ ಹೇಳುವುದನ್ನು ಕೇಳಿದರೆ ನನಗೇ ಅನುಮಾನವುಂಟಾಗುತ್ತದೆ. ನೀವಾರು? ನಿಮ್ಮ ಹೆಸರೇನು? ನೀವಿರುವುದೆಲ್ಲಿ?"

—ಎಂದು ಆಶ್ಚರ್ಯಗೊಂಡವನಂತೆ ಕೇಳಿದ ಪುರುಷೋತ್ತಮನು.

ಪ್ರಣಯಿಗಳು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಯಾರ ಬಾಯಿಂದಲೂ ಮಾತುಗಳೇ ಹೊರಡಲಿಲ್ಲ.

ತಮಗೇನೋ ಈ ದಿನ ಗ್ರಹಚಾರವು ಸನ್ನಿಹಿತವಾಯಿತೆಂದು ವರದ ರಾಜನು ಭಾವಿಸಿಕೊಂಡನು.

ಅವರಿಬ್ಬರೂ ಮಾತನಾಡದಿರಲು ಪುರುಷೋತ್ತಮನೇ ಮತ್ತೆ—

"ನೀವು ಮಾತನಾಡದಿರುವುದರಿಂದ ನನಗೆ ಅನುಮಾನವೇ ಆಯಿತು. ನಿಮ್ಮ ಹೆಸರೇನು ಹೇಳಿ?" ಎಂದು ಕೇಳಿದ.

ಸುಳ್ಳು ಹೆಸರುಗಳನ್ನು ಹೇಳಿ ತಪ್ಪಿಸಿಕೊಳ್ಳಬೇಕೆಂದು ಭಾವಿಸಿದ ಸರೋಜಳು—

"ನನ್ನ ಹೆಸರು ಹೇಮಾಕುಮಾರಿ. ಇವರ ಹೆಸರು ಸುಬ್ಬರಾಮಯ್ಯ" ಎಂದಳು.

ಮನದಲ್ಲಿಯೇ ನಕ್ಕ ಪುರುಷೋತ್ತಮನು—

"ಇವರು ನಿಮಗೇನಾಗಬೇಕು?" ಎಂದು ಕೇಳಿದ.

"ಪತಿಯಾಗಬೇಕು."

"ಮೊದಲೇಕೆ ಗಾಬರಿಯಾದಿರಿ? ಇರಲಿ, ನಿಮ್ಮ ವಿವಾಹವಾಗಿದ್ದರೆ ಮಾಂಗಲ್ಯವೆಲ್ಲಿದೆ?"

"ಅದು ನಿಮ್ಮಂತವರ ಕಣ್ಣಿಗೆ ಕಾಣುವುದಿಲ್ಲ."

"ಹಾಗೋ! ನೀವು ಈ ಕಲಿಕಾಲದ ಚಂದ್ರಮತಿಯೇ ಇರಬಹುದು. ಸುಳ್ಳು ಹೇಳುವುದರಲ್ಲಿ ನೀವು ನಿಸ್ಸೀಮರೆಂದು ತೋರುತ್ತದೆ."

"ಸುಳ್ಳೆಂಬುದೇ ನನ್ನ ಬಳಿಯಲ್ಲಿ ಸುಳಿಯದು."

"ಸುಳಿಯದೇ? ಈಗ ಸುಳ್ಳು ಹೇಳಿಲ್ಲವೇ?"

"ಇಲ್ಲವೇ ಇಲ್ಲ."

"ಈ ಸ್ಥಳದಲ್ಲಿ ನಿಮ್ಮೊಡನೆ ಈ ರೀತಿ ಮಾತನಾಡುವುದು ನನಗೆ ಸರಿಯಲ್ಲ. ನೀವು ಯಾರು? ನಿಮ್ಮ ಕುಲಗೋತ್ರಗಳೇನೆಂಬುದು ನನಗೆ ತಿಳಿದಿದೆ. ಹೆಚ್ಚು ಮಾತನಾಡುವುದರಿಂದ ಫಲವಿಲ್ಲ. ಮರ್ಯಾದೆ ಬೇಕಿದ್ದರೆ ನನ್ನ ಹಿಂದೆ ಬನ್ನಿ. ನಾನೇ ಪೋಲೀಸರನ್ನು ಕರೆದು ಬಲಾತ್ಕಾರದಿಂದ ಕರೆದುಕೊಂಡು ಹೋಗುವೆನು."

ಪ್ರಣಯಿಗಳಿಗೆ ಪ್ರಾಣವೇ ಹೋದಂತಾಯಿತು.

"ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುವೆನು. ನಮ್ಮನ್ನು ಬಿಟ್ಟುಬಿಡಿ."

—ಎಂದು ದೀನಳಾಗಿ ಪ್ರಾರ್ಥಿಸಿದಳು.

"ನೀವು ಪೋಲೀಸ್ ಠಾಣೆಗೆ ಬರಬೇಡಿ. ಪತ್ತೇದಾರ ಪುರುಷೋತ್ತಮ ನನ್ನು ನೋಡಿರುವಿರಲ್ಲವೇ? ನೋಡದೆ ಇದ್ದರೆ ಹೆಸರನ್ನಾದರೂ ಕೇಳಿರ ಬಹುದು. ಅಲ್ಲಿಗೆ ಹೋಗೋಣ ಬನ್ನಿ. ನಿಮ್ಮ ರಹಸ್ಯವು ಬಯಲಾಗದಂತೆ ನಾನು ನೋಡಿಕೊಳ್ಳುವೆನು. ಆತನಿಗೂ ಎಚ್ಚರಿಸುವೆನು."

—ಎಂದು ಹೇಳಿದ ಪತ್ತೇದಾರ.

ಪುರುಷೋತ್ತಮನೆನ್ನುತ್ತಲೇ ಅವರಿಬ್ಬರಿಗೆ ಇನ್ನೂ ಹೆಚ್ಚಿನ ಭಯ ವಾಯಿತು. ತಾವು ಈ ದಿನ ಮನೆ ಬಿಟ್ಟ ಗಳಿಗೆಯು ಸರಿಯಾಗಿಲ್ಲವೆಂದು ಕೊಂಡರು.

"ಅವರ ಮನೆಗೆ ಕರೆದುಕೊಂಡು ಹೋಗುವ ನೀವಾರು? ಮೊದಲು ಹೇಳಿ?"

—ಎಂದು ಮೆಲ್ಲನೆ ಕೇಳಿದ ವರದರಾಜು.

"ಯಾರಾದರೂ ಆಗಿರಲಿ ಸುಮ್ಮನೆ ಬನ್ನಿ."

ಇಂದಿಗೆ ತಮ್ಮ ರಹಸ್ಯವು ಬಯಲಾಯಿತೆಂದುಕೊಂಡ ಪ್ರಣಯಿಗಳು ವೇಷಧಾರಿ ಪುರುಷೋತ್ತಮನ ಹಿಂದೆ ಹೊರಟರು. ಹೋಗದೆ ವಿಧಿಯಿಲ್ಲ.

ಅವರಿಗಾಗಿ ವಿಶೇಷ ಶ್ರಮ ಪಟ್ಟಿರುವ ಪುರುಷೋತ್ತಮನು ಅವರನ್ನು ಬಿಡುವನೇ?

ಆತನು ವೇಷಾಂತರದಲ್ಲಿದ್ದ ಪ್ರಯುಕ್ತ ವರದರಾಜನಿಗೆ ಗುರುತು ಸಿಗಲಿಲ್ಲ.

ಮಾರ್ಗದಲ್ಲಿ ಪ್ರಣಯಿಗಳು ತಪ್ಪಿಸಿಕೊಳ್ಳದಂತೆ ಜಾಗರೂಕತೆ ವಹಿಸಿದ ಪುರುಷೋತ್ತಮನು ಇತರರ ಕಣ್ಣಿಗೆ ಬೀಳಬಾರದೆಂಬ ಯೋಚನೆಯುಳ್ಳವ ನಾಗಿ ಕತ್ತಲಾಗಿದ್ದ ಪ್ರದೇಶದಲ್ಲಿಯೇ ಅವರಿಬ್ಬರನ್ನು ಕರೆದುಕೊಂಡು ಹೋಗಿ ಮನೆಯನ್ನು ತಲುಪಿದ.

ಪುರುಷೋತ್ತಮನ ಬಳಿಯಲ್ಲಿ ಏನು ವಿಷಯ ಮಾತನಾಡಬೇಕೆಂಬು ದನ್ನಾಗಲೇ ಪ್ರಣಯಿಗಳು ತೀರ್ಮಾನ ಮಾಡಿಕೊಂಡರು.

ಪತ್ತೇದಾರನು ಅವರಿಬ್ಬರನ್ನು ಹಾಲಿನಲ್ಲಿ ಕಳ್ಳಿರಿಸಿ ತಾನು ಒಳಗೆ ಹೋಗಿ ಬರುವುದರಲ್ಲಿ ಅವರು ಅಲ್ಲಿಂದ ಪರಾರಿಯಾದಂತೆ ಏರ್ಪಾಟು ಮಾಡಿ ಬಳಿಕ ಒಳಗೆ ಹೋಗಿ ತನ್ನ ವೇಷವನ್ನು ಬದಲಾಯಿಸಿಕೊಂಡು, ಹಿಂಬಾಗಿಲ ಮೂಲಕ ಹೊರಗೆ ಹೋಗಿ, ಮುಂಬಾಗಿಲ ಮೂಲಕ ಒಳಗೆ ಬಂದನು.

ಪುರುಷೋತ್ತಮನನ್ನು ನೋಡಿ ಅವರಿಬ್ಬರಿಗೂ ಗಾಬರಿಯಾಯಿತು. ತಮ್ಮನ್ನು ಕರೆದುಕೊಂಡು ಬಂದ ವೇಷಧಾರಿಯೇ ಈತನೆಂದು ಗುರುತಿಸಲಾಗ ಲಾಗಲಿಲ್ಲ. ಅಲ್ಲದೆ ಕಂಠಧ್ವನಿಯೂ ಬದಲಾವಣೆಯಾಗಿದೆ.

ಪುರುಷೋತ್ತಮನು ಅವರಿಬ್ಬರನ್ನು ಹೊಸದಾಗಿ ಕಂಡವನಂತೆ ನಟಿಸಿ—

"ನೀವು ಅನ್ನದಾನಪ್ಪನವರ ಮಗಳಲ್ಲವೇ? ನನ್ನಿಂದ ಏನಾಗಬೇಕು?" ಎಂದು ಸರೋಜಳಿಗೆ ಕೇಳಿ ಆಕೆಯು ಉತ್ತರ ಕೊಡುವುದಕ್ಕೆ ಮೊದಲೇ ವರದ ರಾಜನಿಗೆ—

"ನೀವು ಭೂತಾಕಾರ ವ್ಯಕ್ತಿಯನ್ನು ಕಂಡು ಭಯಭೀತರಾದ ವರದ ರಾಜು ಅಲ್ಲವೇ? ನೀವೂ ಸಹ ಬಂದಿರುವಿರಲ್ಲ. ಏನು ವಿಶೇಷ? ಮತ್ತೇ ನಾದರೂ ಅಂತಹ ಸನ್ನಿವೇಶವೊದಗಿತೇ?" ಎಂದು ಕೇಳಿದ.

"ಪತ್ತೇದಾರರೇ! ನಾವಿಬ್ಬರೂ ವಿಷಮಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದಿರು ವೆವು. ಅದಕ್ಕಾಗಿ ಇಲ್ಲಿಗೆ ಬರಬೇಕಾಯಿತು."

—ಎಂದು ದೀನನಂತೆ ನುಡಿದ ವರದರಾಜು.

"ಅದೇನು ಅಂತಹ ಪರಿಸ್ಥಿತಿ? ನನ್ನಲ್ಲಿ ಏನೊಂದ ವಿಷಯವನ್ನೂ ಮುಚ್ಚು ಮರೆಯಿಲ್ಲದೆ ತಿಳಿಸಿ. ನನ್ನಿಂದಾಗುವ ಸಹಾಯವನ್ನು ನಾನು ಮಾಡುವೆನು."

—ಎಂದು ಅಭಯ ಇತ್ತ ಪುರುಷೋತ್ತಮ.

ಆ ವೇಳೆಗೆ ರಾಮನಾಥನು ಅಲ್ಲಿಗೆ ಆಗಮಿಸಿದ. ಪುರುಷೋತ್ತಮನು ಅವರಿಬ್ಬರಿಗೂ ಆತನ ಪರಿಚಯ ಮಾಡಿಸಿದ. ಅವರನ್ನು ನೋಡಿದ ರಾಮ ನಾಥನೂ ಸಹ ಸೋಜಿಗನಾಗದಿರಲಿಲ್ಲ.

ವರದರಾಜನು ತಮ್ಮ ಸಂಪೂರ್ಣ ಆತ್ಮಕಥೆಯನ್ನು ಪತ್ತೇದಾರರ ಬಳಿಯಲ್ಲಿ ಹೇಳಿದ. ನಡುನಡುವೆ ಆತನು ಮರೆತ ಪ್ರಸಂಗವನ್ನು ಸರೋಜಳು ಜ್ಞಾಪಕ ಮಾಡಿ ಕೊಡುತ್ತಿದ್ದಳು.

ಅವರ ನಿಷ್ಕಲ್ಮಶವಾದ ಪ್ರೇಮವನ್ನು ಕಂಡ ಪತ್ತೇದಾರರಿಗೆ ಆಶ್ಚರ್ಯ ವಾಗದಿರಲಿಲ್ಲ.

ಇವರಿಬ್ಬರನ್ನು ಇಲ್ಲಿಗೆ ಕರೆದುಕೊಂಡು ಬಂದವನು ವೇಷಾಂತರದ ಪುರುಷೋತ್ತಮನೇ ಎಂಬ ಭಾವನೆಯು ರಾಮನಾಥನ ಮನಕ್ಕೆ ಹೊಳೆಯದೆ ಇರಲಿಲ್ಲ.

"ನೀವು ನಿಮ್ಮ ತಂದೆ ತಾಯಿ:ರಿಗೆ ತಿಳಿಸದೆ ಈ ವ್ಯವಹಾರಕ್ಕೆ ಇಳಿದಿರು ವುದು ಶುದ್ಧ ತಪ್ಪು. ಆದರೇ! ನಿಮ್ಮ ಅನ್ಯೋನ್ಯ ಅನುರಾಗವನ್ನು ನೋಡಿ ನನಗೆ ಸಂತೋಷವಾಯಿತು. ದಿಟ್ಟತನದಿಂದ ಒದಗಿ ಬಂದ ಕಷ್ಟಗಳನ್ನು ಎದುರಿಸಿರುವಿರಿ. ಈಗ ನನ್ನಿಂದ ನಿಮಗಾಗಬೇಕಾದ ಸಹಾಯವೇನು ?"

—ಎಂದು ವಿನಯದಿಂದಲೇ ಕೇಳಿದ ಪುರುಷೋತ್ತಮ.

"ನಾವು ಈವರೆವಿಗೆ ರಹಸ್ಯವಾಗಿದ್ದೆವು. ನಿಮ್ಮವರಾರೋ ನಮ್ಮನ್ನು ಪತ್ತೇಮಾಡಿ ಹಿಡಿದು ಇಲ್ಲಿಗೆ ಕರೆದುಕೊಂಡು ಬಂದರು. ಇಂದಿಗೆ ನಮ್ಮ ಮರ್ಮವು ಬಯಲಾಯಿತು. ಈ ನಮ್ಮ ವ್ಯವಹಾರವು ನಮ್ಮ ಹಿರಿಯರಿಗೆ ತಿಳಿದರೆ ನೊಂದುಕೊಳ್ಳುವರು. ಒಂದು ವೇಳೆ ಗಲಾಟೆಗೆ ಆಸ್ಪದವಾದರೂ ಆಗಬಹುದು. ನಾವು ಅವರನ್ನು ಸರಿಪಡಿಸುವ ಪ್ರಯತ್ನದಲ್ಲಿರುವೆವು. ಆವರೆ ವಿಗೆ ನೀವು ನಮ್ಮ ಈ ರಹಸ್ಯವನ್ನು ಬಯಲು ಮಾಡಬಾರದಾಗಿ ಪ್ರಾರ್ಥಿಸು ವೆನು. ನಮ್ಮ ವಿವಾಹವು ಆದಷ್ಟು ಬೇಗನೆ ನೆರವೇರಲು ನೀವೂ ಸಹ ನಮ್ಮ ಮೇಲೆ ಕೃಪೆಯಿಟ್ಟು ಸಹಾಯ ಮಾಡಬೇಕಾಗಿ ಕೋರುವೆನು. ನಿಷ್ಕಲ್ಮಶ ವಾದ ಪ್ರೇಮಕ್ಕೆ ದೈವವೂ ಮಾರುಹೋಗುತ್ತದೆಂದು ನಿಮಗೆ ನಾನು ಹೇಳ ಬೇಕಾಗಿಲ್ಲ. ಇಷ್ಟು ಮಾತ್ರ ನಡೆಯಿಸಿಕೊಟ್ಟರೆ ನಾವು ನಮ್ಮ ಜೀವಾವಧಿ ನಿಮ್ಮ ಉಪಕಾರವನ್ನು ಮರೆಯುವುದಿಲ್ಲ. ಈ ವಿಷಯದಲ್ಲಿ ನೀವು ಉದಾ ಸೀನರಾಗಬಾರದಾಗಿ ಬೇಡಿಕೊಳ್ಳುವೆನು."

—ಎಂದು ಬೇಡಿಕೊಂಡ ವರದರಾಜು.

"ಶ್ರೀಮಂತ ತರುಣಿಯು ತನ್ನ ಅಂತಸ್ತಿಗೆ ತಕ್ಕವನನ್ನು ವರಿಸದೆ, ಪ್ರೇಮಕ್ಕೆ ಮಾರುಹೋಗಿ ನಿಮ್ಮನ್ನು ವರಿಸುವುದೊಂದು ಆಶ್ಚರ್ಯವೇನಲ್ಲ. ಇದೇ ರೀತಿ ನಡೆದರೆ ಮೇಲು ಕೀಳೆಂಬ ಭಾವನೆಯು ತಪ್ಪಿ, ಸರ್ವರೂ ಸರಿ ಸಮಾನತೆಯ ಹಕ್ಕು ಪಡೆಯುವರು. ನಿಮ್ಮ ವಿವಾಹವು ಯಶಸ್ವಿಯಾಗಿ

ನಡೆಯಲು ನಾನು ಪ್ರಯತ್ನ ಪಡುವೆನು. ದೇವರು ನಿಮಗೆ ಶುಭವುಂಟು ಮಾಡಲಿ."

ಆನಂದಭರಿತರಾದ ಪ್ರಣಯಿಗಳು ಪತ್ತೇದಾರರ ಪಾದಗಳಿಗೆರಗಿ ಆಶೀರ್ವಾದವನ್ನು ಪಡೆದರು.

ಪುರುಷೋತ್ತಮನು ಅವರಿಬ್ಬರಿಗೂ ಸೂಕ್ತರೀತಿ ಹಿತವಾದವನ್ನು ಹೇಳಲು, ತಮ್ಮ ಶುಭೋದಯಕ್ಕೆ ಇದು ಪ್ರಥಮ ಮೆಟ್ಟಲೆಂದರಿತ ಪ್ರಣಯಿಗಳು ಪತ್ತೇದಾರರಿಂದ ಬೀಳ್ಕೊಂಡು ಹಿಂದಿರುಗಿದರು.

ಅವರು ಹಿಂದಿರುಗುತ್ತಲೇ ಪುರುಷೋತ್ತಮನು ಯೋಚನೆಗೊಳಗಾದನು.

೧೬

ಅಮೆರಿಕಾಕ್ಕೆ ಹೋಗಿದ್ದ ಕೇಶವನು ತನ್ನ ವ್ಯಾಸಂಗವನ್ನು ಮುಗಿಸಿ ಕೊಂಡು ಹಿಂದಿರುಗಿದ.

ಆತನು ಹಿಂದಿರುಗುತ್ತಲೇ ಗೋವಿಂದರಾಜುರವರು ಕಾಂಚೀನಗರಕ್ಕೆ ಬಂದು ಮಗನು ಬಂದ ವಾರ್ತೆಯನ್ನರುಹಲು, ಅವರಿಗೆಲ್ಲಾ ಆನಂದವಾಯಿತು.

ವೆಂಕಟರತ್ನಂ, ಗೋವಿಂದರಾಜುರವರು ಜೋಯಿಸರಲ್ಲಿಗೆ ಹೋಗಿ ಮುಹೂರ್ತವನ್ನು ವಿಚಾರಿಸಿಕೊಂಡು ಬಂದರು.

ಒಂದು ತಿಂಗಳ ಕಾಲ ವಿವಾಹ ಮಾಡಲು ಮುಹೂರ್ತವು ಪ್ರಶಸ್ತ ವಾಗಿದೆಯೆಂದೂ, ಅನಂತರ ಅಷ್ಟು ಯೋಗ್ಯವಿಲ್ಲವೆಂದೂ, ಜೋಯಿಸರು ತಿಳಿಸಿದ ಪ್ರಯುಕ್ತ, ಈ ಒಂದು ತಿಂಗಳಲ್ಲಿಯೇ ಮಾಡಬೇಕೆಂದು ನಿರ್ಧಾರ ಮಾಡಿಕೊಂಡರು.

ವಿವಾಹದ ದಿನವನ್ನು ಗೊತ್ತುಪಡಿಸಿಕೊಂಡನಂತರ ಮದುವೆಯು ವಿಲಾಸನಗರದಲ್ಲಿಯೇ ನಡೆಯಬೇಕೆಂದು ತೀರ್ಮಾನವಾಯಿತು.

ಕೇಶವನಿಗೆ ಅವನ ಸೋದರಮಾವನ ಮಗಳಾದ ಸರಸಳನ್ನಿತ್ತು ವಿವಾಹ ಮಾಡಲು ಅಮೇರಿಕಾಕ್ಕೆ ಹೋಗುವ ಮೊದಲೇ ತೀರ್ಮಾನವಾಗಿದ್ದ ಪ್ರಯುಕ್ತ ಕನ್ಯೆಯನ್ನು ನೋಡಬೇಕಾದ ಪ್ರಮೇಯವಿರಲಿಲ್ಲ.

ನಿನ್ನ ಸವಾಲನ್ನು ಪೂರೈಸುವೆನೆಂದು ಭಾವಿ ಅಳಿಯನಿಗೆ ಹೇಳಿದ ಗೋವಿಂದರಾಜುರವರು ಅವನ ಉಡುಪುಗಳಿಗೆಂದು ಎರಡು ಸಾವಿರ ರೂಪಾಯ ಗಳನ್ನು ಕೊಟ್ಟು ಹಿಂದಿರುಗಿದರು.

ಗೋವಿಂದರಾಜುರವರು ಬಂದು ಹೋದ ವಿಷಯವು ಅನ್ನದಾನಪ್ಪನವರಿಗೆ ತಿಳಿಯದಿರಲಿಲ್ಲ.

ಈಗ ತಾಯಿತದ ಮಹಿಮೆಯನ್ನು ತೋರಿಸಬೇಕೆಂದುಕೊಂಡು ವೆಂಕಟರತ್ನಂರವರ ಮನೆಗೆ ಹೋದರು.

ತಾಯಿತವು ಅವರ ಜೇಬಿನಲ್ಲಿ ಭದ್ರವಾಗಿದೆ. ಮನೆಯಿಂದ ಹೊರಡುವಾಗ ಅದನ್ನು ದೇವರ ಜಗಲಿಯ ಮೇಲಿಟ್ಟು ಕರ್ಪೂರ ಬೆಳಗಿರುವರು.

ಸತಿಪತಿಯರು ಅನ್ನದಾನಪ್ಪನವರನ್ನು ಆದರದಿಂದಲೇ ಕಂಡು, ಕ್ಷೇಮ ಸಮಾಚಾರವನ್ನು ವಿಚಾರಿಸಿ, ತರುವಾಯ ತಮ್ಮ ಮಗನ ವಿವಾಹ ವಿಷಯವನ್ನು ತಿಳಿಸಿದರು.

"ನೀವು ನನ್ನ ಮಗಳಿಗೆ ಮಾತು ಕೊಟ್ಟಿರುವಿರಲ್ಲವೇ ?"

—ಎಂದು ಕೇಳಿದರು ಅನ್ನದಾನಪ್ಪನವರು.

"ನಾವು ಮಾತು ಕೊಟ್ಟಿದ್ದೆವು. ಆದರೇ ! ರಾಜಗೋಪಾಲನು ಒಪ್ಪಲಿಲ್ಲ. ಮುಂದೆ ತನ್ನ ಸತಿಯನ್ನು ಬಾಳಿಸುವವನು ಅವನೇ ಅಲ್ಲವೇ ? ಅವನಿಗಿಷ್ಟವಿಲ್ಲದ ಕನ್ಯೆಯನ್ನು ತಂದು ವಿವಾಹ ಮಾಡಿದರೆ ಬಾಳು ಸುಗಮವಾಗುವುದೇ ? ಅಲ್ಲದೇ ಅವನ ಸವಾಲನ್ನು ಒಪ್ಪುವರಾರೂ ಇಲ್ಲಿಲ್ಲ. ಗೋವಿಂದರಾಜುರವರು ಒಪ್ಪಿದ ಪ್ರಯುಕ್ತ ಅವರ ಮಗಳನ್ನು ನಿಶ್ಚಯ ಮಾಡಬೇಕಾಯಿತು. ಅವರ ಮಗಳಾದ ಸೌದಾಮಿನಿಯನ್ನು ನೋಡಿದ ರಾಜಗೋಪಾಲನೂ ಒಪ್ಪಿರುವನು. ಏನೋ ಆಗಿಹೋಯಿತು. ಇದನ್ನು ನೀವು ಮನಸ್ಸಿನಲ್ಲಿಟ್ಟುಕೊಳ್ಳದೆ, ಮುಹೂರ್ತಕ್ಕೆ ಆಗಮಿಸಿ ವಧೂವರರಿಗೆ ಆಶೀರ್ವಾದ ಮಾಡಿ. ನಮಗೂ ನಿಮಗೂ ಋಣಾನುಬಂಧವಿಲ್ಲ"

—ಎಂದು ಶಾಂತರಾಗಿಯೇ ವೆಂಕಟರತ್ನಂರವರು ಹೇಳಿದರು.

ಆ ವೇಳೆಗೆ ರಾಜಗೋಪಾಲನು ಆಗಮಿಸಿ, ಅನ್ನದಾನಪ್ಪನವರನ್ನು ಕಂಡರೂ ಕಾಣದಂತೆ ನಟಿಸಿದ.

ಆ ಅವಮಾನವನ್ನು ಅನ್ನದಾನಪ್ಪನವರಿಂದ ಸಹಿಸಲಾಗಲಿಲ್ಲ.

ಒಳಜೇಬಿಗೆ ಕೈ ಹಾಕಿ ತಾಯಿತವನ್ನು ಮುಟ್ಟಿನೋಡಿ 'ರಾಜಗೋಪಾಲನು ಸರೋಜಳನ್ನು ಮದುವೆಯಾಗುವಂತಾಗಲಿ. ಈ ಸತಿಪತಿಯರಿಗೆ

ಮಂಕು ಕವಿಯಲಿ' ಎಂದು ತಮ್ಮ ಮನದಲ್ಲಿ ಹೇಳಿಕೊಂಡು ಏನೋ ಯೋಚಿಸುವವರಂತೆ ಕುಳಿತರು.

"ಏನು ಯೋಚಿಸುತ್ತಿರುವಿರಿ ? ನಿಮ್ಮ ಮಗಳಿಗೆ ನಮ್ಮ ಮಗನಂತವನೇ ಸಿಗಲೆಂದು ಆಶೀರ್ವದಿಸುವೆನು. ಸರೋಜಳಿಗೆ ವರನು ಸಿಗುವುದಿಲ್ಲವೇ ?"

—ಎಂದು ಹೇಳಿದರು ವೆಂಕಟರತ್ನಂರವರು.

ಅನ್ನದಾನಪ್ಪನವರು ಮಾತನಾಡಲಿಲ್ಲ. ಇನ್ನು ಕೆಲ ಹೊತ್ತಿನಲ್ಲಿಯೇ ಇವರಿಗೆ ಮಂಕು ಹಿಡಿದು ರಾಜಗೋಪಾಲನು ತಾನಾಗಿಯೇ ಒಪ್ಪಿಕೊಳ್ಳುವನೆಂದುಕೊಂಡಿರುವರು.

ಅನ್ನದಾನಪ್ಪನವರ ಆಗಿನ ಪರಿಸ್ಥಿತಿಯನ್ನು ನೋಡಿ, ಆ ಸತಿಪತಿಯರಿಗೆ ಆಶ್ಚರ್ಯವಾಗದಿರಲಿಲ್ಲ.

ಸುಮಾರು ಅರ್ಧ ಘಂಟೆ ಕಳೆಯಿತು. ಅನ್ನದಾನಪ್ಪನವರು ಯೋಚಿಸಿಕೊಂಡಂತೆ ನಡೆಯಲಿಲ್ಲ.

ಇವರಿಗೇನೋ ಮಂಕು ಕವಿದಂತಾಯಿತೆಂದುಕೊಂಡ ಸತಿಪತಿಯರು ತಮ್ಮ ಕಾರ್ಯಗಳಲ್ಲಿ ನಿರತರಾದರು.

ಅನ್ನದಾನಪ್ಪನವರಿಗೆ ಸಹಿಸಲಾಗಲಿಲ್ಲ. ತಮ್ಮ ತಾಯಿತವು ಕೆಲಸ ಮಾಡದೆ ಹೋಯಿತೇ ? ಹಾಗಾಗಲು ಕಾರಣವೇನಿರಬಹುದು ? ಏನಾದರೂ ಅಪವಿತ್ರವಾಯಿತೇ ? ಎಂದುಕೊಂಡರು.

ಮನಸ್ಸು ತಡೆಯದೆ ರಾಜಗೋಪಾಲನೊಡನೆ ಮಾತನಾಡಿದರು. ಆತನು ವಿನಯದಿಂದಲೇ ಮಾತನಾಡಿದನಲ್ಲದೆ, ಸರೋಜಳನ್ನು ವಿವಾಹವಾಗಲು ಒಪ್ಪಲಿಲ್ಲ. ಆ ಪ್ರಸ್ತಾಪ ಬಂದಾಗ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದ.

ಅವರಿಬ್ಬರಿಗೂ ಕೊಂಚ ಬಿರುಸಾಗಿಯೇ ಮಾತುಕತೆಗಳು ನಡೆದುವು.

ತಾಯಿತದಪ್ರಯೋಜನವೇನೂ ಅನ್ನದಾನಪ್ಪನವರಿಗೆ ಕಾಣದೋಯಿತು. ಆದರೂ ಅವರಿಗೆ ತಾಯಿತದ ವಿಷಯದಲ್ಲಿ ನಂಬಿಕೆಯಿದೆ. ಅದು ಅಪವಿತ್ರವಾಗಿದೆಯೆಂದೇ ಅವರ ಭಾವನೆ.

ರಾಜಗೋಪಾಲನು ಲೇಶಮಾತ್ರವೂ ಹಿಂಜರಿಯದೆ ಅನ್ನದಾನಪ್ಪನವರಿಗೆ ಅವಮಾನಕರವಾದ ಮಾತುಗಳನ್ನಾಡಿದ.

ಅನ್ನದಾನಪ್ಪನವರು ಹಿಂದೆ ಯಾವ ಸಮಯದಲ್ಲಿಯೂ ಅಂತಹ ಮಾತುಗಳನ್ನು ಕೇಳಿರಲಿಲ್ಲ.

ಇನ್ನು ಈ ಮನೆಯಲ್ಲಿ ಒಂದು ಕ್ಷಣವೂ ಇರಬಾರದೆಂದುಕೊಂಡು, ತುಳಿಸಿಕೊಂಡ ಹಾವಿನಂತೆ ಬುಸುಗುಟ್ಟುತ್ತಾ ಇದರ ಪ್ರತೀಕಾರವನ್ನು ತೀರಿಸಿಕೊಳ್ಳದೆ ಬಿಡಲಾರೆನೆಂದುಕೊಂಡು ಹಿಂದಿರುಗಿದರು.

ಗೋವಿಂದರಾಜುರವರು ನಗರಕ್ಕೆ ಬಂದು ಹೋದ ವಿಷಯವು ಪತ್ತೇದಾರರಿಗೆ ತಿಳಿಯದಿರಲಿಲ್ಲ. ಆ ಪ್ರಯತ್ನದಲ್ಲಿಯೇ ಇರುವಾಗ ಅವರಿಗೆ ತಿಳಿಯದಿರುತ್ತದೆಯೇ?

ಈಗ ಅನ್ನದಾನಪ್ಪನವರ ತಾಯಿತದ ಮಹಿಮೆಯನ್ನು ಕೇಳಿ ತಿಳಿಯ ಬೇಕೆಂದುಕೊಂಡು, ಅವರನ್ನು ತನ್ನ ಮನೆಗೆ ಕರೆಯಿಸಿಕೊಂಡ.

ಆ ವೇಳೆಗೆ ಅನ್ನದಾನಪ್ಪನವರು ರಾಜಗೋಪಾಲನಿಂದ ಅವಮಾನಿತರಾಗಿ ಹಿಂದಿರುಗಿರುವರು. ಆ ವಿಷಯವು ಪುರುಷೋತ್ತಮನಿಗೆ ತಿಳಿಯದು.

ಮನೆಗೆ ಕರೆಯಿಸಿಕೊಂಡನಂತರ—

"ಈಗ ನಿಮ್ಮ ತಾಯಿತದ ಮಹಿಮೆಯನ್ನು ಪ್ರದರ್ಶಿಸಲು ಸಕಾಲ ಪೊದಗಿದೆಯಲ್ಲವೇ?" ಎಂದು ನಸುನಗುತ್ತಾ ಕೇಳಿದ.

ಗಾಯದ ಮೇಲೆ ಮೆಣಸಿನಪುಡಿ ಹಾಕಿದಂತಾಯಿತು, ಅನ್ನದಾನಪ್ಪ ನವರಿಗೆ.

ಅವರ ಮುಖವು ಇದ್ದಕ್ಕಿದ್ದ ಹಾಗೆ ಕೆಂಪುವರ್ಣವನ್ನು ತಾಳಿ, ರೌದ್ರತೆ ಗೇರಿತು.

ಆ ಪರಿಸ್ಥಿತಿಯನ್ನು ನೋಡಿದ ಪುರುಷೋತ್ತಮನು ಏನೋ ವಿಶೇಷವು ನಡೆದಿದೆಯೆಂದು ಊಹೆ ಮಾಡಿ ಆ ಬಗ್ಗೆ ಪ್ರಶ್ನಿಸಿದ.

ಅನ್ನದಾನಪ್ಪನವರು ಪುರುಷೋತ್ತಮನ ಬಳಿಯಲ್ಲಿ ಏನೊಂದು ವಿಷಯ ವನ್ನೂ ಮುಚ್ಚಿಡುವವರಲ್ಲವಾದ್ದರಿಂದ ವೆಂಕಟರತ್ನಂ ಮನೆಗೆ ಹೋದಾಗ, ತಮಗಾದ ಅವಮಾನವನ್ನು ಹೇಳಿದರು.

"ನಾನು ತಾಯಿತದ ವಿಷಯವನ್ನು ಮೊದಲೇ ನಿಮ್ಮಲ್ಲಿ ಹೇಳುತ್ತಿದ್ದೆನು. ನೀವು ನೊಂದುಕೊಳ್ಳಬಹುದೆಂದು ಹೇಳಲಿಲ್ಲ. ತಾಯಿತವು ಅಷ್ಟರಮಟ್ಟಿಗೆ ಕೆಲಸ ಮಾಡುವುದಾದರೆ, ನಮ್ಮ ಭಾರತವು ರಾಮರಾಜ್ಯ

ವಾಗುತ್ತದೆ. ತಪ್ಪಿದರೆ ದರೋಡೆಕೋರರ ಆವಾಸಸ್ಥಾನವಾಗುತ್ತದೆ. ತಾಯಿತವು ಅಷ್ಟರಮಟ್ಟಿಗೆ ಕೆಲಸ ಮಾಡುವುದಾದರೆ ಖಜಾನೆ ಮತ್ತು ಬ್ಯಾಂಕಿನಲ್ಲಿರುವ ಹಣವನ್ನು ಮನೆಗೆ ತರಿಸಿಕೊಳ್ಳಬಹುದು. ಶತ್ರುಗಳೇ ಇಲ್ಲದಂತೆ ನಾಶಪಡಿಸಬಹುದು. ಮಿತ್ರರನ್ನು ಶತ್ರುಗಳನ್ನಾಗಿ, ಶತ್ರುಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳಬಹುದು. ತಾಯಿತಕ್ಕೆ ಅಷ್ಟು ಅದ್ಭುತ ಶಕ್ತಿ ಯಿದ್ದರೆ ಅದು ಖರ್ಚಾಗಲು ಆ ರೀತಿ ಪ್ರಚಾರ ಮಾಡುವರೇ? ಮೋಸಗಾರಿ ಕೆಯ ವಿದ್ಯೆಗಳಲ್ಲಿ ಅದೂ ಒಂದು ಬಗೆಯ ಮೋಸ ವಿದ್ಯೆಯೇ ಸರಿ. ಈಗ ನಿಮಗೇ ಅನುಭವವಾಯಿತು. ಇನ್ನು ಮುಂದಾದರೂ ಆ ಭ್ರಾಂತಿಯನ್ನು ಬಿಡಿ. ಮುಂದೆ ನಿಮ್ಮ ಅಭಿಪ್ರಾಯವೇನು? ಹೇಳಿ?"

—ಎಂದು ಸಮಾಧಾನವಿತ್ತು ಕೇಳಿದ ಪುರುಷೋತ್ತಮ.

"ನನಗೇನೂ ತೋಚದಂತಾಗಿದೆ"

—ಎಂದು ಸಣ್ಣ ಧ್ವನಿಯಲ್ಲಿ ನುಡಿದರು ಅನ್ನದಾನಪ್ಪನವರು.

"ಈಗ ರಾಜಗೋಪಾಲನು ನಿಮ್ಮ ಮಗಳನ್ನು ವಿವಾಹವಾಗುವುದಿಲ್ಲ. ಆದ್ದರಿಂದ ನೀವು ಈ ವೇಳೆಯಲ್ಲಿ ಸುಮ್ಮನೆ ಕೂರಬೇಡಿ. ಅವರ ಪ್ರತಿಸ್ಪರ್ಧಿ ಯಾಗಿ ನಿಮ್ಮ ಮಗಳ ಮದುವೆಮಾಡಿ. ವಿಲಾಸನಗರದಲ್ಲಿ ಯಾವ ದಿನ ಮುಹೂರ್ತವಿರುವುದೋ, ಅದೇ ಮುಹೂರ್ತದಲ್ಲಿ ನಿಮ್ಮ ಮಗಳ ಮುಹೂರ್ತ ವನ್ನಿಟ್ಟು, ಈ ನಗರದಲ್ಲಿ ವಿಜೃಂಭಣೆಯಿಂದ ಮದುವೆ ಮಾಡಿ, ಬಡಬಗ್ಗರಿಗೆ ಅನ್ನಸಂತರ್ಪಣೆಯನ್ನಿಡಿಸಿ. ನಾನು ಹೇಳಿದಂತೆ ನಡೆದರೆ ನಿಮಗೆ ಸೌಖ್ಯ ವಿದೆ. ರಾಜಗೋಪಾಲನಿಗೂ, ಸರೋಜಳಿಗೂ ಋಣಾನುಬಂಧವಿಲ್ಲ. ಆ ವಿಷಯವಾಗಿ ಚಿಂತಿಸುವುದೂ ಅನಾವಶ್ಯಕ"

ಪುರುಷೋತ್ತಮನ ಮಾತು ಸಮಂಜಸವೆಂದು ಅನ್ನದಾನಪ್ಪನವರ ಮನಕ್ಕೆ ಹೊಳೆಯಿತು.

ಪುನಃ ಪುರುಷೋತ್ತಮನು—

"ನೀವು ವರನಿಗಾಗಿ ಅಲೆಯಬೇಕಾದ ಪ್ರಮೇಯವಿಲ್ಲ. ನಿಮ್ಮ ಕಡೆಯವನೊಬ್ಬನನ್ನೇ ನಾನು ನೋಡಿರುವೆನು. ಆತನು ವಿದ್ಯಾವಂತ, ಮೇಲಾಗಿ ಬುದ್ಧಿವಂತ. ಹಣ, ಹಣ ಎಂದು ಬಾಯಿ ಬಿಡಬೇಡಿ. ಹಣಕ್ಕೆ ಬಲಿ ಬೀಳುವುದಾದರೆ ನಿಮ್ಮ ಮಗಳನ್ನು ಹಣಕ್ಕೇ ಕೊಟ್ಟು ಮದುವೆ ಮಾಡಿ.

ಅದನ್ನು ನೋಡಿ ನಿಮ್ಮ ಮಗಳು ಸದಾಕಾಲ ಸಂತೋಷಪಡುತ್ತಿರಲಿ" ಎಂದು ಹೇಳಿದ.

ಸೋಜಿಗರಾದ ಅನ್ನದಾನಪ್ಪನವರು—

"ಯಾರು ವರ ?" ಎಂದು ಕೇಳಿದರು.

"ತಿಮ್ಮರಾಜುವಿನ ಮಗನಾದ ವರದರಾಜು. ಆತನು ನಿಮ್ಮ ಮಗಳಿಗೆ ಸರಿಯಾದ ವರ"

ಅನ್ನದಾನಪ್ಪನವರು ನಕ್ಕು—

"ಸರಿಯಾದ ಮಾತು ಹೇಳಿದಿರಿ. ರಾಜಗೋಪಾಲನನ್ನೇ ಒಪ್ಪದ ನನ್ನ ಮಗಳು ವರದರಾಜನನ್ನು ಒಪ್ಪುವಳೇ ? ಅದೆಂದಿಗೂ ಆಗದು. ಬ್ರಹ್ಮ ನನ್ನು ಬೇಕಾದರೂ ಒಪ್ಪಿಸಬಹುದು. ಸರೋಜಳನ್ನು ಒಪ್ಪಿಸುವುದು ಕಷ್ಟ" ಎಂದರು.

"ಈಗ ನನ್ನಲ್ಲಿ ಚರ್ಚೆ ಮಾಡುತ್ತಾ ವಾಗ್ವಾದ ಮಾಡುವುದು ಸರಿಯಲ್ಲ. ನೀವು ನಿಮ್ಮ ಮಗಳೊಡನೆ ಮೊದಲು ಕೇಳಿ. ಆಕೆಯು ಒಪ್ಪಿದರೆ ಮಾಡಿ. ಇಲ್ಲದೇ ಹೋದರೆ ಬೇಡ. ಒಪ್ಪಿಯೇ ಒಪ್ಪುವಳೆಂದು ನನ್ನ ಭಾವನೆ"

"ನನಗೇನೋ ನಂಬಿಕೆಯಿಲ್ಲ"

"ಈಗ ಮೊದಲು ಮನೆಗೆ ಹೋಗಿ ಸರೋಜಳನ್ನು ವಿಚಾರಿಸಿ. ಆಮೇಲೆ ಮುಂದಿನ ವಿಷಯ"

ಅನ್ನದಾನಪ್ಪನವರು ಪ್ರತಿ ಮಾತನಾಡದೆ ಅಲ್ಲಿಂದ ಹಿಂದಿರುಗಿದರು.

ಮನೆಗೆ ಬಂದು ತಾವು ಹೋಗಿದ್ದ ವಿಷಯವನ್ನು ಹೇಳದೆ, ಮಗಳನ್ನು ರೂಮಿಗೆ ಕರೆಯಿಸಿಕೊಂಡು ಮೃದುವಾಗಿ ಮಾತನಾಡುತ್ತಾ—

"ಸರೋಜಾ ! ರಾಜಗೋಪಾಲನೊಡನೆ ನಿನ್ನ ವಿವಾಹವು ನಡೆಯುವ ಸ್ಥಿತಿಯಲ್ಲಿಲ್ಲ. ಆ ಅವಿವೇಕಿಗೆ ನಿನ್ನನ್ನು ಕೊಡಲೂ ನನಗಿಷ್ಟವಿಲ್ಲ. ಸೌದಾಮಿನಿಯೊಡನೆ ಆತನ ವಿವಾಹವು ಸದ್ಯದಲ್ಲಿಯೇ ಆಗುವ ನಿರೀಕ್ಷೆಯಿದೆ. ಆ ವೇಳೆಯಲ್ಲಿಯೇ ನಾನು ನಿನ್ನ ಮದುವೆ ಮಾಡಬೇಕೆಂದಿರುವೆನು. ನಾನೀಗ ಒಬ್ಬ ವರನನ್ನು ಗೊತ್ತು ಮಾಡಿರುವೆನು. ನೀನು ನನ್ನ ಮಾತಿಗೆ ಪ್ರತ್ಯುತ್ತರ ಕೊಡದೆ ಒಪ್ಪಿಕೊಳ್ಳಬೇಕು. ಸರೀಕರ ಎದುರಿಗೆ ನಾವು ತಲೆ ತಗ್ಗಿಸುವುದು ಸರಿಯಲ್ಲ" ಎಂದು ಹೇಳಿದರು.

"ಅಪ್ಪಾ! ನೀವು ಹೇಳುವುದೇನೋ ಸರಿ. ಆದರೇ! ನನಗೆ ಮಾಂಗಲ್ಯ ಕಟ್ಟುವ ವರನಾರು?"

—ಎಂದು ಕೇಳಿದಳು ಸೋಜಿಗಳಾದ ಸರೋಜ.

"ಯಾರಾದರೂ ಆಗಿರಲಿ ನೀನು ಒಪ್ಪಬೇಕು. ಹಿಂದಿನಂತೆ ಹಠ ಹಿಡಿಯಬಾರದು"

"ವರನಾರೆಂದು ತಿಳಿಸಿದರೆ ನಾನು ಹೇಳುವೆನು"

"ಹೇಳಲೇಬೇಕೇ?"

"ಹೌದು! ಹೇಳಲೇಬೇಕು"

"ತಿಮ್ಮರಾಜುವಿನ ಮಗನಾದ ವರದರಾಜು. ಆತನು ಬಡವನೆಂದು ತಿರಸ್ಕರಿಸಬೇಡ. ಆತನು ಬಡವನಾದರೂ ವಿದ್ಯಾವಂತ ಮತ್ತು ಬುದ್ಧಿವಂತ. ತನ್ನ ತಂದೆತಾಯಿಯರಿಗೆ ಅಚ್ಚುಮೆಚ್ಚಾಗಿರುವನು. ನೀನು ನನ್ನ ಮಾತಿಗೆ ಮರ್ಯಾದೆ ಕೊಡು. ನೀವಿಬ್ಬರೂ ಸೌಖ್ಯವಾಗಿರುವಂತೆ ನಾನು ಬೇಕಾದ ಏರ್ಪಾಡು ಮಾಡುವೆನು"

ಸರೋಜಳ ಕಣ್ಣುಗಳಿಂದ ಆನಂದಭಾಷ್ಪಗಳುದುರಿದುವು. ತಂದೆಯು ಅಪಹಾಸ್ಯಕ್ಕಾಗಿ ಹೇಳುವನೇ? ಅಥವಾ ನಿಜವಾಗಿ ಹೇಳುವನೇ? ಎಂಬುದನ್ನು ಗ್ರಹಿಸದೋದಳು. ಆದರೂ ಸಂತೋಷವೆಂಬ ಸಾಗರ ಮಧ್ಯದಲ್ಲಿ ಮುಳುಗಿ ಹೋಗಿರುವಳು.

"ಅಪ್ಪಾ! ನೀವು ಹೇಳುತ್ತಿರುವುದು ನಿಜವೇ?"

—ಎಂದು ಪ್ರಶ್ನಿಸಿದಳು ಸರೋಜ.

"ಸರೋಜಾ! ನಿನ್ನೊಡನೆ ಪರಿಹಾಸ್ಯವೇ? ನಿಜವಾಗಿ ಹೇಳುತ್ತಿರುವೆನು. ವರದರಾಜನನ್ನು ವರಿಸುವೆಯಾ? ಅವನ ಮನೆಗೆ ಹೋಗಿ ಮಾತನಾಡಿ ಬರಲೇ?"

—ಎಂದು ಸಹಜವಾಗಿ ಮರುಪ್ರಶ್ನಿಸಿದರು ಅನ್ನದಾನಪ್ಪನವರು.

"ಅಪ್ಪಾ ನಿಮ್ಮ ಮಾತಿಗೆ ಎದುರು ಹೇಳಲಾರೆ"

ರೋಗಿ ಬಯಸಿದ ವಸ್ತುವನ್ನೇ ವೈದ್ಯರು ಹೇಳಿದರೆ ರೋಗಿಗೆ ಸಂತೋಷವಾಗುವುದಿಲ್ಲವೇ? ಹಾಗಾಯಿತು ಸರೋಜಳ ಸ್ಥಿತಿ.

ಮಗಳು ಒಪ್ಪಿಕೊಂಡಿದ್ದನ್ನು ನೋಡಿ ಅನ್ನದಾನಪ್ಪನವರಿಗೆ ಆನಂದ ವಾಯಿತು. ತಮ್ಮ ಮಗಳ ಮತ್ತು ವರದರಾಜನ ಪ್ರಣಯ ಪ್ರಸಂಗವನ್ನು ಅವರೇನು ಬಲ್ಲರು?

ಮಗಳಿಗೆ ಆಶೀರ್ವಾದ ಮಾಡಿ ಆಗಲೇ ತಿಮ್ಮರಾಜುವಿನ ಮನೆಗೆ ಹೋದರು.

ಸರೋಜಳ ಮೂಲಕ ವಿಷಯವನ್ನರಿತ ಮನೋರಮೆಯು ಅವಳ ಅದೃಷ್ಟವಿದ್ದಂತಾಗಲೆಂದುಕೊಂಡಳು.

ತನ್ನ ತಂದೆಯು ಇದ್ದಕ್ಕಿದ್ದ ಹಾಗೆ ಈ ರೀತಿ ಬದಲಾವಣೆಗೊಂಡ ಕಾರಣವೇನಿರಬಹುದು? ಪುರುಷೋತ್ತಮನ ಸಲಹೆಯಾಯಿತೇ? ಎಂಬು ದಾಗಿ ಯೋಚಿಸಿ ಇದ್ದರೂ ಇರಬಹುದೆಂದುಕೊಂಡಳು.

ಅನ್ನದಾನಪ್ಪನವರು ತಿಮ್ಮರಾಜುವಿನ ಮನೆಗೆ ಹೋಗುತ್ತಲೇ ಅಕಸ್ಮಾತ್ ಬಂದ ಅವರನ್ನು ನೋಡಿ, ಆ ಸತಿಪತಿಯರಿಗೆ ಆಶ್ಚರ್ಯವಾಗಿ, ಆದರದಿಂದ ಸತ್ಕರಿಸಿ, ಕುಶಲ ಪ್ರಶ್ನೆ ಮಾಡಿದರು.

ತರುವಾಯ ತಿಮ್ಮರಾಜನು—

"ಸ್ವಾಮಿ! ನೀವು ಬಂದದ್ದು ಬಡವರ ಮನೆಗೆ ಭಾಗ್ಯ ಬಂದಂತಾ ಯಿತು. ಇಷ್ಟು ದೂರ ಪಾದ ಬೆಳೆಯಿಸಿರುವಿರಲ್ಲ, ಏನು ವಿಶೇಷ?" ಎಂದು ಕೇಳಿದ.

ಅನ್ನದಾನಪ್ಪನವರು ತಮ್ಮ ಮನೋಭಿಪ್ರಾಯವನ್ನು ಹೇಳಿದರು. ಆ ವೇಳೆಯಲ್ಲಿ ವರದರಾಜನೂ ಸಹ ಅಲ್ಲಿಯೇ ಇರುವನು.

ಅನ್ನದಾನಪ್ಪನವರಾಡಿದ ಮಾತುಗಳನ್ನು ಕೇಳಿ ಅವರು ತಮ್ಮ ಕಿವಿ ಗಳನ್ನು ತಾವೇ ನಂಬದೋದರು. ವರದರಾಜನಿಗುಂಟಾದ ಆನಂದವನ್ನು ಎಷ್ಟು ವರ್ಣಿಸಿದರೂ ಅಲ್ಪವೇ.

ತಿಮ್ಮರಾಜನು ಅನುಮಾನದ ಮೇಲೆ ಪ್ರಶ್ನಿಸಲು ಅನ್ನದಾನಪ್ಪನವರು, ಮೂವರೂ ನಂಬಿಕೆಯುಂಟಾಗುವಂತೆ ಹೇಳಿ, ತಿಮ್ಮರಾಜನನ್ನು ಕರೆದುಕೊಂಡು ಆಗಲೇ ಜೋಯಿಸರಲ್ಲಿಗೆ ಹೋಗಿ, ವಧೂವರರ ಹೆಸರುಗಳನ್ನು ತಿಳಿಸಿ, ಯಾವ ದಿನ ರಾಜಗೋಪಾಲನ ಮುಹೂರ್ತವು ನಡೆಯುವುದೋ, ಅದೇ ದಿನ, ಆ

ಮುಹೂರ್ತಕ್ಕೆ ನಾಲ್ಕು ನಿಮಿಷ ಮೊದಲು ಮುಹೂರ್ತವಿಡಿಸಿಕೊಂಡು ಹಿಂದಿರುಗಿದರು.

ತನ್ನ ಬಳಿ ಹಣವಿಲ್ಲವೆಂದು ತಿಮ್ಮರಾಜನು ಹೇಳಲು, ಆ ವಿಷಯವಾಗಿ ಯೋಚಿಸಬೇಕಾದ ಪ್ರಮೇಯವಿಲ್ಲವೆಂದು ಅನ್ನದಾನಪ್ಪನವರು ಅಭಯ ವಿತ್ತರು.

ತಿಮ್ಮರಾಜನನ್ನು ತಮ್ಮ ಮನೆಗೆ ಕರೆದುಕೊಂಡು ಬಂದು, ಪತ್ನಿ ಮತ್ತು ಮಗಳನ್ನು ಕೂರಿಸಿಕೊಂಡು, ತಾವು ರಾಜಗೋಪಾಲನ ಮನೆಗೆ ಹೋದ ಲಾಗಾಯ್ತು ಆ ವರೆವಿಗೆ ನಡೆದ ಪ್ರಸಂಗವನ್ನು ಚಾಚೂ ತಪ್ಪದೆ ಹೇಳಿದರು.

ಸರೋಜಳು ಪುರುಷೋತ್ತಮನಿಗೆ ತನ್ನ ಮನಪಲ್ಲಿಯೇ ಸಹಸ್ರ ವಂದನೆ ಗಳನ್ನರ್ಪಿಸಿದಳು.

ತಿಮ್ಮ ರಾಜನು ದೈವ ಮಹಿಮೆಗೆ ತಲೆದೂಗಿ, ಅವರಿಂದ ಸತ್ಕರಿಸಲ್ಪಟ್ಟು ಮನೆಗೆ ಹಿಂದಿರುಗಿ, ನಡೆದ ವಿಷಯವನ್ನು ಪತ್ನೀ ಪುತ್ರರೊಡನೆ ತಿಳಿಸಿದ.

ವರದರಾಜನೂ ಸಹ ಪುರುಷೋತ್ತಮನಿಗೆ ತನ್ನ ಮನಪಲ್ಲಿಯೇ ಧನ್ಯ ವಾದಗಳನ್ನರ್ಪಿಸದಿರಲಿಲ್ಲ. ಆತನು ತಮ್ಮನ್ನು ಆ ದಿನ ನೋಡಿದ್ದು ದೈವ ನಿಯಾಮಕವೇ ಎಂದುಕೊಂಡನು.

ಒಬ್ಬರನ್ನೊಬ್ಬರು ಮೀರಿ ವಿವಾಹವನ್ನು ವಿಜೃಂಭಣೆಯಿಂದ ಮಾಡಲು, ಆ ಕಾರ್ಯರಂಗಕ್ಕಿಳಿದರು.

ಲಗ್ನಪತ್ರಿಕೆಗಳು ಅಚ್ಚಾಗಿ, ಬಂಧುಮಿತ್ರರಿಗೆಲ್ಲಾ ಹಂಚಲಾಯಿತು.

ವಿವಾಹ ಮುಹೂರ್ತಕ್ಕೆ ನಾಲ್ಕು ದಿನ ಮೊದಲೇ ವೆಂಕಟರತ್ನಂರವರು ತಮ್ಮ ಪತ್ನೀಪುತ್ರ ಮತ್ತು ಬಂಧುಮಿತ್ರರೊಡನೆ ವಿಲಾಸನಗರಕ್ಕೆ ಹೊರಟರು.

ಜಿಪುಣಾಗ್ರೇಸರರೆಂದು ಬಿರುದು ಪಡೆದ ಅನ್ನದಾನಪ್ಪನ ವರು ಆ ವೇಳೆ ಯಲ್ಲಿ ಹಣವನ್ನು ಧಾರಾಳವಾಗಿ ಖರ್ಚು ಮಾಡಿದರು.

ವಿವಾಹವು ಅತ್ಯಂತ ವೈಭವದಿಂದಲೇ ನಡೆದು ಸಾವಿರಾರು ಜನ ಬಡ ಬಗ್ಗರಿಗೆ ಅನ್ನಸಂತರ್ಪಣೆ ನಡೆಯಿತು.

ಎರಡು ನಗರಗಳಲ್ಲಿ ನಡೆದ ಸಂಭ್ರಮದ ವಿವಾಹವನ್ನು ನೋಡಿದವರು, ಹಾಡಿ ಹೊಗಳಿ ಹರಸಿದರು.

ಪತ್ತೇದಾರರಿಗೆ ರಾಜಗೋಪಾಲನ ವಿವಾಹದ ಆಹ್ವಾನ ಪತ್ರ ಬಂದಿ ದ್ದರೂ, ವಿಲಾಸನಗರಕ್ಕೆ ಹೋಗದೆ, ಕಾಂಚೀನಗರದಲ್ಲಿಯೇ ಇದ್ದು ವಧೂವರ ರಿಗೆ ಆಶೀರ್ವದಿಸಿದರು.

೧೯

ಎರಡು ತಿಂಗಳು ಕಳೆಯಿತು.

ನೂತನ ವಧೂವರರು ಆನಂದಮಯರಾಗಿ ಕಾಲ ಕಳೆದುಕೊಂಡಿರು ವರು.

ಈ ಎರಡು ತಿಂಗಳ ಮಧ್ಯೆ ವಿಸ್ಮಯ ಅಥವಾ ರೋಮಾಂಚನಗೊಳಿ ಸುವ ಘಟನೆಗಳೇನೂ ನಡೆಯುಲಿಲ್ಲ.

ಪತ್ತೇದಾರರು ಕೊಲೆಗಾರನ ಶೋಧನೆಗಾಗಿ ತಮ್ಮ ಯತ್ನ ಮೀರಿ ಪರಿಶೋಧನೆ ನಡೆಯಿಸಿದರು. ಆತನಾರು? ಎಲ್ಲಿರುವನೆಂಬ ಸುಳಿವೇ ಸಿಗಲಿಲ್ಲ.

ಯಾರ ಮೇಲೆಯೋ ಕೊಲೆಯ ಸಂಬಂಧವಾಗಿ ಅನುಮಾನಗೊಳ್ಳಲು ಆಸ್ಪದವೂ ದೊರೆಯುಲಿಲ್ಲ.

ಹಿಂದಿನಂತೆ ಕೊಲೆಗಾರನಿಂದ ಕಾಗದಪತ್ರಗಳೂ ಸಹ ಇಲ್ಲವಾಗಿದೆ.

ಕೊಲೆಗಾರನು ಈ ನಗರದಲ್ಲಿರುವನೇ? ಇಲ್ಲವೇ? ಎಂಬುದರ ಬಗ್ಗೆ ಪುರುಷೋತ್ತಮನು ಯೋಚಿಸಬೇಕಾದ ಪ್ರಮೇಯವೊದಗಿತು.

ಕೊಲೆಗಾರನು ಯಾವುದೋ ಒಂದು ರೂಪದಲ್ಲಿ ತಮ್ಮೆದುರಿಗೆ ಇರುವ ನೆಂದು, ಒಂದೊಂದು ಸಾರಿ ಯೋಚಿಸುತ್ತಿದ್ದನು. ಪುನಃ ಆತನು ದ್ವೀಪಾಂ ತರ ಹೊರಟು ಹೋಗಿರಬಹುದೇ? ಎಂದುಕೊಳ್ಳುವನು.

ದ್ವೀಪಾಂತರ ಹೊರಟು ಹೋಗುವುದಾದರೆ ಈ ವರೆವಿಗೆ ನಡೆಯಿಸಿದ ಕೃತ್ಯಗಳ ಅಂತರಾರ್ಥವೇನಿರಬಹುದೆಂಬುದರ ವಿಷಯವಾಗಿ ಚಿಂತೆಗೊಳಗಾಗು ತ್ತಿದ್ದನು.

ಆದರೂ ಪುರುಷೋತ್ತಮನು ನಿರಾಶನಾಗದೆ ತನ್ನ ಕಾರ್ಯವನ್ನು ಮುಂದುವರಿಸಿದ.

ಹೀಗಿರಲೊಂದು ದಿನ ವಿಲಾಸನಗರದಲ್ಲಿದ್ದ ಕೇಶವನು ಸಿನಿಮಾಕ್ಕೆ ಹೋಗಿ, ಹಿಂದಿರುಗಿ ತನ್ನ ಮನೆಯ ಸಮೀಪಕ್ಕೆ ಬಂದಾಗ, ಆ ಮನೆಯ ಸಮೀಪದಲ್ಲಿಯೇ ಅಡಗಿ ಕುಳಿತಿದ್ದ ನಾಲ್ಕು ಜನರು ಅವನ ಮೇಲೆ ಬಿದ್ದು, ಆಯುಧಗಳಿಂದ ಅವನ ದೇಹವನ್ನು ಇರಿದು ಪರಾರಿಯಾದರು.

ಕೇಶವನು ಕೊಲೆಯಾದನೆಂಬ ವಾರ್ತೆಯು ಕಾಂಚೀನಗರದಲ್ಲಿರುವ ವೆಂಕಟರತ್ನಂಗೆ ಟೆಲಿಗ್ರಾಂ ಮೂಲಕ ಬರುತ್ತಲೇ, ಅವರು ತನ್ನ ಪತ್ನಿ, ಮಗ ಮತ್ತು ಸೊಸೆಯ ಸಮೇತ ಅಲ್ಲಿಗೆ ಹೊರಟರು.

ವಿಷಯವನ್ನು ತಿಳಿದ ಅನ್ನದಾನಪ್ಪನವರಿಗೆ ಸಂತೋಷವಾಗದಿರಲಿಲ್ಲ. ಆ ರೀತಿ ದುರ್ಮರಣವುಂಟಾಗಲು ತಮ್ಮಲ್ಲಿರುವ ತಾಯಿತದ ಮಹಿಮೆಯೇ ಕಾರಣವೆಂದುಕೊಂಡರು.

ತಾಯಿತದ ವಿಷಯವನ್ನು ಮರೆತಿದ್ದವರು ಕೇಶವನು ಅಕಸ್ಮಾತ್ ಕೊಲೆಯಾದುದನ್ನು ಕೇಳಿ, ಪುನಃ ಅದನ್ನು ಜ್ಞಾಪಿಸಿಕೊಳ್ಳುವಂತಾಯಿತು.

ಇತರರು ಆ ಬಗ್ಗೆ ವಿಷಾದಗೊಳ್ಳದಿರಲಿಲ್ಲ.

ಪತ್ತೇದಾರರು ಕೊಲೆಯ ವಾರ್ತೆಯನ್ನು ಕೇಳಿ ಅತ್ಯಾಶ್ಚರ್ಯಗೊಂಡರು.

ಪುರುಷೋತ್ತಮನ ಮನದಲ್ಲಿ ನಾನಾ ಬಗೆಯ ಊಹಾಪೋಹಗಳೆದ್ದುವು.

'ಕೇಶವನನ್ನು ಕೊಲೆ ಮಾಡಿದವನಾರಿರಬಹುದು? "ಭಯಂಕರ ಭೂತ" ವೇಷಧಾರಿಯೇ ಇರಬಹುದೇ? ಆತನನ್ನು ಯಾವ ಕಾರಣಕ್ಕಾಗಿ ಕೊಲೆ ಮಾಡಿರಬಹುದು? ಅದರಿಂದ ಅವನಿಗೇನು ಲಾಭವಿದೆ? ಈ ವರೆವಿಗೆ ನಡೆಯುತ್ತಿರುವ ಘಟನೆಗಳಲ್ಲಿ ಎಲ್ಲಿಯೇ ಆಗಲಿ, ವಸ್ತ್ರಾಭರಣಗಳು ಕಳುವಾಗಿಲ್ಲ. ಹಾಗಿದ್ದ ಮೇಲೆ ಯಾವ ಉದ್ದೇಶಕ್ಕಾಗಿ ಈ ಕೃತ್ಯಗಳನ್ನು ಜರುಗಿಸುತ್ತಿರುವನು?'

ಇವೇ ಮುಂತಾದ ಯೋಚನೆಗಳು ಪುರುಷೋತ್ತಮನ ಮೆದುಳನ್ನು ಕಲಕಿದುವು.

ಒಂದು ಯೋಚನೆಯಿಂದ ಬಿಡುಗಡೆಯಾಗುತ್ತಲೇ ಇನ್ನೊಂದು ಯೋಚನೆಯು ಅವನ ತಲೆಯನ್ನು ಮುತ್ತಿಕೊಳ್ಳುತ್ತಿತ್ತು.

'ಸಾಮಾನ್ಯವಾಗಿ ಈ ಗುಂಪಿಗೆ ಬಂಬಂಧಪಟ್ಟವರು ಒಂದಲ್ಲ, ಒಂದು ವಿಧದಿಂದ ಕೊಲೆಗಾರನ ದೆಶೆಯಿಂದ ಗಾಸಿಪಟ್ಟಿರುವರು. ಅವರಲ್ಲಿ ಉಳಿದವ ರೆಂದರೆ ಅನ್ನದಾನಪ್ಪ ಮತ್ತು ರಾಜಗೋಪಾಲ. ವರದರಾಜನು ಸತ್ತು ಬದುಕಿರುವನು. ಕೊಲೆಗಾರನು ಮುಂದೆ ಅವನ ಸಹವಾಸಕ್ಕೆ ಹೋಗಲಾ ರನು. ಈಗ ಈ ಇಬ್ಬರಲ್ಲಿ ಯಾರಾದರೊಬ್ಬರನ್ನು ಕೊಲೆ ಮಾಡಿದರೂ ಮಾಡ ಬಹುದು. ಕೊಲೆಗಾರನಾರೆಂಬುದನ್ನು ಪತ್ತೇಮಾಡಿ ಹಿಡಿಯಬೇಕಾದರೆ, ಇವರ ಮೂಲಕವೇ ಸರಿ. ಇವರೊಬ್ಬರಿಗೂ ತಿಳಿಯದಂತೆ ವೇಷಾಂತರದಿಂದ ರಾಜಗೋಪಾಲನ ಹಿಂದೆ ಓಡಾಡಿಕೊಂಡಿದ್ದರೆ, ಕೊಲೆಗಾರನು ಅವನನ್ನು ಕೊಲೆ ಮಾಡಲು ಬಂದಾಗ ಹಿಡಿಯಬಹುದು. ಆತನು ನಮ್ಮ ಚಲನವಲನ ಗಳ ಮೇಲೆ ಸದಾ ಕಣ್ಣಿಟ್ಟಿರುವುದರಿಂದ ನಾನು ಕಣ್ಮರೆಯಾದರೆ ಅನುಮಾನ ಗೊಳ್ಳಬಹುದು. ಆ ಪ್ರಯುಕ್ತ ಆತನು ಮೋಸ ಹೋಗುವಂತೆ, ನನ್ನ ಹಾಗೆಯೇ ಇರುವ ವೇಷಧಾರಿಯೊಬ್ಬನು, ಬಹಿರಂಗವಾಗಿ ಓಡಾಡಿಕೊಂಡಿರು ವಂತೆ ಮಾಡಬೇಕು. ಹಾಗೆ ಮಾಡಿದರೆ ಕೊಲೆಗಾರನು ಸುಲಭವಾಗಿ ಮಾರು ಹೋಗುವನಲ್ಲದೆ, ಆತನಾರೆಂಬುದನ್ನು ತಿಳಿಯಲೂ ಅನುಕೂಲವಾಗುತ್ತದೆ'

ಈ ರೀತಿ ಆಲೋಚಿಸಿಕೊಂಡ ಪುರುಷೋತ್ತಮನು ತನ್ನ ಅಭಿಪ್ರಾಯ ವನ್ನು ರಾಮನಾಥ, ಚಂದ್ರನಾಥರಲ್ಲಿ ಹೇಳಲು ಅವರಿಬ್ಬರೂ ಆತನ ಸಲಹೆಗೆ ತಮ್ಮ ಒಪ್ಪಿಗೆಯಿತ್ತರು.

ಹೆಚ್ಚು ಕಡಿಮೆ ಪುರುಷೋತ್ತಮನ ಆಕಾರವುಳ್ಳ ಒಬ್ಬ ಯಾಮಿಕನಿಗೆ ಪತ್ತೇದಾರನ ವೇಷವನ್ನು ಹಾಕಿದರು.

ದೂರದಿಂದ ನೋಡಿದರೆ ಆತನು ಪುರುಷೋತ್ತಮನಂತೆಯೇ ಕಾಣು ವನು. ಹತ್ತಿರ ಹೋಗಿ ನೋಡಿದರೆ ಬೇರೆಯವನಾಗಿ ತೋರುವನು.

ಆ ಯಾಮಿಕನ ಹೆಸರು ಕರದಪ್ಪ. ಆತನು ಯಾವ ರೀತಿ ನಡೆದು ಕೊಳ್ಳಬೇಕೆಂಬುದನ್ನೆಲ್ಲಾ ಪುರುಷೋತ್ತಮನು ಹೇಳಿಕೊಟ್ಟು, ತನಗೆ ಬೇಕಾದ ಅನುಕೂಲತೆಗಳೊಡನೆ ಆ ದಿನ ರಾತ್ರಿಯೇ ಕಣ್ಮರೆಯಾದನು.

ವೇಷಧಾರಿ ಕದರಪ್ಪನಿಗೆ ಪುರುಷೋತ್ತಮನ ಮನೆಯಲ್ಲಿ ಒಂದು ರೂಮನ್ನು ಬಿಟ್ಟುಕೊಡಲಾಯಿತು. ಆತನು ರಾತ್ರಿ ಹತ್ತು ಘಂಟೆಯ ವೇಳೆಗೆ ಮನೆಗೆ ಹೋಗಿ ಬೆಳಿಗ್ಗೆ ಏಳು ಘಂಟೆಗೆ ಮನೆ ಬಿಡುವನು.

ಹೆಚ್ಚು ವೇಳೆಯನ್ನು ಪೋಲೀಸ್ ಠಾಣೆಯಲ್ಲಿಯೇ ಕಳೆಯುವನು. ಹೊರಗೆ ತಿರುಗಾಡುವಾಗ ಯಾರೊಡನೆಯೂ ಮಾತನಾಡುವುದಿಲ್ಲ. ಹೋಟೇಲಿಗೆ ಹೋಗಿ ಕುಳಿತರೆ ತನ್ನ ಮುಖವು ಇತರರಿಗೆ ಕಾಣಬಾರದೆಂದು ಪತ್ರಿಕೆಯನ್ನು ಓದುವವನಂತೆ ನಟಿಸಿ ಮುಖಕ್ಕೆ ಅಡ್ಡ ಹಿಡಿದುಕೊಳ್ಳುವನು.

ಒಂದೊಂದು ಸಾರಿ ರಾಮನಾಥನೂ ಅವನ ಸಂಗಡ ತಿರುಗಾಡುತ್ತಿದ್ದನು.

ಪುರುಷೋತ್ತಮನು ಎಲ್ಲಿರುವನು? ಏನು ಮಾಡಿಕೊಂಡಿರುವನೆಂದು ಅವರಾರಿಗೂ ತಿಳಿಯದಂತಾಯಿತು.

ಕೇಶವನ ಶವ ಸಂಸ್ಕಾರಕ್ಕೆ ಕಾಂಚೀನಗರದಿಂದ ಹೋದವರು ಅವನ ತಿಥಿ ಕರ್ಮಾದಿಗಳನ್ನೆಲ್ಲಾ ಮುಗಿಸಿಕೊಂಡು ಹಿಂದಿರುಗಿದರು.

ಕೇಶವನ ಪತ್ನಿಯ ಹೆಸರು ಸರಸ. ವಿವಾಹವಾದ ಮೂರು ತಿಂಗಳಲ್ಲಿಯೇ ಪತಿಯನ್ನು ನುಂಗಿ ನೀರು ಕುಡಿದಳೆಂದು ಎಲ್ಲರೂ ಆಕೆಯನ್ನು ದೂರತೊಡಗಿದರು.

ಅವರವರು ಪಡೆದು ಬಂದ ಪ್ರಾರಬ್ಧ ಕರ್ಮ ಫಲವನ್ನು ಅವರವರೇ ಅನುಭವಿಸಬೇಕೆಂದು ವಿಧಿಯುಸಂಕಲ್ಪವಿರುವಾಗ ತಪ್ಪಿಸುವವರಾರು? ಅದಕ್ಕಾಗಿ ಏನಾದರೊಂದು ನೆವವನ್ನು ಕಲ್ಪಿಸಿಕೊಂಡು ನಿರಪರಾಧಿಯ ಮೇಲೆ ಆ ತಪ್ಪು ಹೊರಿಸಿ ದೂರುವುದು ಯಾವ ಧರ್ಮ?

ಮಗನನ್ನು ಕಳೆದುಕೊಂಡ ಗೋವಿಂದರಾಜುರವರ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಇದ್ದವನು ಒಬ್ಬನೇ ಮಗ. ಅವನನ್ನು ಅಮೇರಿಕಾ ದೇಶಕ್ಕೆ ಕಳುಹಿಸಿದ್ದರು. ಲಕ್ಷಾಂತರ ರೂಪಾಯಿಗಳ ಆಸ್ತಿಯಿದೆ. ಬೇರೆ ಮಕ್ಕಳಿಲ್ಲ. ಮೊಮ್ಮಗನನ್ನು ಕಾಣುವ ಯೋಗವಿಲ್ಲ. ವಿವಾಹವಾಗಿ ಮೂರು ತಿಂಗಳಲ್ಲಿಯೇ ಮಗನು ಕೊಲೆಯಾಗಿರುವಾಗ ಇನ್ನು ಮೊಮ್ಮಗನನ್ನು ಕಾಣುವುದೆಲ್ಲಿ ಬಂತು?

ಆಸ್ತಿಯೆಲ್ಲಾ ಅಳಿಯ ಮಗಳ ಪಾಲಾಗುವುದರಲ್ಲಿ ಸಂದೇಹವಿಲ್ಲ. ಯಾರನ್ನಾದರೂ ದತ್ತು ತೆಗೆದುಕೊಳ್ಳಬೇಕೆಂದರೂ ಅವರಿಗೆ ಮನಸ್ಸಿಲ್ಲ. ವಿಧವೆಯಾದ ಸೊಸೆಯ ಮುಖವನ್ನು ನೋಡುತ್ತಾ ಹೋದ ಹಾಗೆ ಅವರ ದುಃಖವು ಹೆಚ್ಚಾಗುವುದಲ್ಲದೆ ಕಡಿಮೆಯಾಗುತ್ತಿಲ್ಲ.

ಪುತ್ರಶೋಕವು ಮರಣಪರ್ಯಂತರ ಎಂಬ ಗಾದೆಯಿದ್ದೇ ಇದೆ.

ಆಸ್ತಿಯನ್ನೆಲ್ಲಾ ಅಳಿಯ, ಮಗಳ ಹೆಸರಿಗೆ ಬರೆದು, ಸರಸಳ ಜೀವನೋಪಾಯಕ್ಕೆ ಬೇಕಾದ ಏರ್ಪಾಡು ಮಾಡಿ, ತಾವು ಕಾಶಿಗೆ ಹೋಗಿ ಅಲ್ಲಿಯೇ ತಮ್ಮ ಅಂತ್ಯ ಕಾಲವನ್ನು ಕಳೆಯಬೇಕೆಂದು ಕೇಶವನ ತಂದೆತಾಯಿಯರು ನಿರ್ಧಾರ ಮಾಡಿಕೊಂಡರು.

ಕೇಶವನನ್ನು ಕೊಲೆ ಮಾಡಿದವನಾರೆಂಬುದನ್ನು ಪತ್ತೇ ಮಾಡಿ ಹಿಡಿಯಲು ವಿಲಾಸನಗರದ ತುಂಬಾ ಸಿ.ಐ.ಡಿ.ಗಳು ಹುಟ್ಟಿಕೊಂಡರು. ಆ ಸಂಬಂಧದಲ್ಲಿ ನಾಲ್ಕು ಜನರನ್ನು ದಸ್ತಗಿರಿ ಮಾಡಿ ಅವರ ಮನೆಗಳನ್ನು ಶೋಧಿಸಲಾಯಿತು.

ಆದರೇ ! ಅದರಿಂದ ಪ್ರಯೋಜನವೇನೂ ಕಾಣಲಿಲ್ಲ.

ಪರಿಸ್ಥಿತಿಯು ಹಾಗಿರಲೊಂದು ದಿನ ವಣಿಕ ಶ್ರೇಷ್ಠರಾದ ರಂಗಯ್ಯ ಶೆಟ್ಟಿಯವರು ತಮ್ಮ ಸ್ವಗೃಹದಲ್ಲಿ ಕೊಲೆಯಾದರೆಂಬ ವಾರ್ತೆಯು ಬರಲು ದಿಗ್ಭ್ರಮನಂತಾದ ಇನ್ಸ್‌ಪೆಕ್ಟರನು ರಾಮನಾಥ ಮತ್ತು ವೇಷಧಾರಿ ಕದರಪ್ಪನೊಡನೆ ಅಲ್ಲಿಗೆ ಹೋದನು.

ಪುರುಷೋತ್ತಮನಿಲ್ಲದಿರುವುದರಿಂದ ಚಂದ್ರನಾಥನ ಮನಸ್ಸು ಬಹಳ ಬೇಸರಗೊಂಡಿದೆ.

ಕದರಪ್ಪನಿಗೆ ವಿಶೇಷ ರೀತಿಯಲ್ಲಿ ಎಚ್ಚರಿಕೆಯಿತ್ತಿರುವನು.

ರಂಗಯ್ಯಶೆಟ್ಟಿಯವರು ತಾವು ಮಲಗುವ ರೂಮಿನಲ್ಲಿ ಕೊಲೆಯಾಗಿ ಬಿದ್ದಿರುವರು. ಅವರ ಎದೆಗೆ ಪಿಸ್ತೂಲಿನ ಏಟುಗಳು ಬಿದ್ದಿವೆ. ಮುಖವನ್ನು ನೋಡಿದರೆ ಇನ್ನೂ ನಿದ್ರಿಸುತ್ತಿರುವರೇನೋ ಎಂಬಂತೆ ತೋರುತ್ತಲಿದೆ. ಹಾಸಿಗೆ ಬಟ್ಟೆಗಳೆಲ್ಲಾ ರಕ್ತಮಯವಾಗಿ ಕೆಂಪು ವರ್ಣವನ್ನು ತಾಳಿವೆ.

ಚಂದ್ರನಾಥನು ರೂಮಿನ ಸುತ್ತಮುತ್ತಲೂ ನೋಡಲು ಏನೊಂದು ವಸ್ತುವೂ ಕದಲಿದಂತೆ ತೋರಲಿಲ್ಲ. ಪೆಟ್ಟಿಗೆ, ಖಜಾನೆಗಳ ಬೀಗಗಳು ಹಾಕಿದ ಹಾಗೆಯೇ ಇವೆ.

ಆ ಪರಿಸ್ಥಿತಿಯನ್ನು ನೋಡಿ, ಈ ಕೃತ್ಯವನ್ನು ಮಾಡಿದವನು 'ಭಯಂಕರ ಭೂತ' ನಾಮಧಾರಿಯೇ ಎಂಬ ಭಾವನೆಯು ರಾಮನಾಥ, ಚಂದ್ರನಾಥರ ಮನಸ್ಸಿಗೆ ಹೊಳೆಯದಿರಲಿಲ್ಲ.

ರಂಗಯ್ಯಶೆಟ್ಟಿಯವರು ಮಾಡಿದ ದಾನ-ಧರ್ಮ ಮತ್ತು ಗುಣಗಳನು ವರ್ಣನೆ ಮಾಡುತ್ತಾ ಎದೆ ಬಡಿದುಕೊಂಡು ಅಳುತ್ತಿದ್ದ ಅವರ ಪತ್ನೀಪುತ್ರರ ಆಗಿನ ಸ್ಥಿತಿಯನ್ನು ಕಠಿಣ ಹೃದಯವವರ ಕಣ್ಣುಗಳಲ್ಲಿಯೇ ಆಗಲಿ ನೀರು ಬಾರದಿರುತ್ತಿರಲಿಲ್ಲ.

ಕದರಪ್ಪನು ಮಾತ್ರ ಅವರಾರನ್ನೂ ವಿಚಾರಿಸದೆ ಗಂಭೀರ ಪ್ರಕೃತಿಯುಳ್ಳವನಾಗಿ ಏನೋ ಪರೀಕ್ಷಿಸುವವನಂತೆ ಸುತ್ತಮುತ್ತಲೂ ನೋಡುತ್ತಾ ಓಡಾಡುತ್ತಿರುವನು.

ಚಂದ್ರನಾಥನು ಅವನ ಪಾಡಿಗೆ ಅವನನ್ನು ಬಿಟ್ಟು ತನ್ನ ಕಾರ್ಯದಲ್ಲಿ ನಿರತನಾಗಿರುವನು.

ಡಾಕ್ಟರ್ ದಯಾನಂದನು ಕೊಲೆಯ ಬಗ್ಗೆ ತನ್ನ ಸೂಕ್ತವಾದ ಹೇಳಿಕೆಯಿತ್ತನು.

ಚಂದ್ರನಾಥನು ರಂಗಯ್ಯ ಶೆಟ್ಟಿಯವರ ಪತ್ನೀಪುತ್ರರನ್ನು ವಿಚಾರಿಸಲು ಅವರು ತಮಗೇನೂ ತಿಳಿಯದೆಂದರು.

ಹಲವು ವರುಷಗಳಿಂದ ಮೃತರು ಒಂಟಿಯಾಗಿಯೇ ರೂಮಿನಲ್ಲಿ ಮಲಗುತ್ತಿದ್ದರೆಂದೂ, ಉಳಿದವರು ಅವರವರ ನಿಯಮಿತ ಸ್ಥಳಗಳಲ್ಲಿ ಮಲಗುತ್ತಿದ್ದರೆಂದೂ ಚಂದ್ರನಾಥನಿಗೆ ತಿಳಿಯಿತು.

ಪತ್ನಿಯಿದ್ದರೂ ಆ ರೀತಿ ಒಬ್ಬರೇ ಮಲಗಲು ಡಾಕ್ಟರಿತ್ತ ಸಲಹೆಯೇ ಕಾರಣವೆಂದು ರಾಮನಾಥ, ಚಂದ್ರನಾಥರಿಗೆ ತಿಳಿಯದಿರಲಿಲ್ಲ.

ಹಿಂದಿನ ರಾತ್ರಿ ಹೊಸಬರ್‍ಯಾರಾದರೂ ಬಂದಿದ್ದರೇ? ಎಂದು ಚಂದ್ರನಾಥನು ಮೃತರ ಪತ್ನೀಪುತ್ರರಿಗೆ ಕೇಳಲು ಅವರು ಇಲ್ಲವೆಂದರು.

ಬಾಗಿಲು ಕಿಟಕಿಗಳಾವುದಕ್ಕೂ ಅಪಾಯವಾಗದಿರುವಾಗ ಕೊಲೆಗಾರನು ಹೇಗೆ ಒಳಗೆ ಬಂದನೆಂಬುದೇ ಅವರಿಗೆ ಆಶ್ಚರ್ಯ.

ಪುರುಷೋತ್ತಮನಿಲ್ಲದಿರುವುದರಿಂದ ಚಂದ್ರನಾಥನ ಮನಸ್ಸು ಕಸಿವಿಸಿಯಾದಂತಾಗಿದೆ.

ತಾನೊಂದು ಬಗೆದರೆ ದೈವವೊಂದು ಬಗೆಯಿತೆಂಬ ಗಾದೆಯಂತೆ ಪುರುಷೋತ್ತಮನೊಂದು ಕಾರ್ಯದಲ್ಲಿ ತೊಡಗಿದ್ದರೆ ನಡೆದಿರುವ ದೃಶ್ಯವೇ ಒಂದು ವಿಧವಾಗಿದೆಯೆಂದುಕೊಂಡನು.

"ಪತ್ತೇದಾರರೇ ! ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?"

—ಎಂದು ಚಂದ್ರನಾಥನು ಬೇಕೆಂದೇ ವೇಷಧಾರಿ ಪುರುಷೋತ್ತಮನಿಗೆ ಕೇಳಿದ.

ಕದರಪ್ಪನು ಮೊದಲೇ ತರಪೇತು ಹೊಂದಿದ್ದನಾದ್ದರಿಂದ ಚಂದ್ರನಾಥನ ಪ್ರಶ್ನೆಗೆ ಯೋಚಿಸಬೇಕಾದ ಪ್ರಮೇಯವಿರಲಿಲ್ಲ.

"ನಾನು ಇಲ್ಲಿನ ಪರಿಸ್ಥಿತಿಯನ್ನು ನೋಡಿಯಾಯಿತು. ಕೇಳಿಯೂ ಆಯಿತು. ನೀವು ಮುಂದಿನ ಕಾರ್ಯವನ್ನು ನಡೆಯಿಸಿಕೊಳ್ಳಿ. ಕೊಲೆಗಾರನಾರೆಂಬುದನ್ನು ಪತ್ತೇಮಾಡಿ ಹಿಡಿಯುವ ಕಾರ್ಯವು ನನಗಿರಲಿ."

—ಎಂದು ನುಡಿದ ಕದರಪ್ಪನು ಪುರುಷೋತ್ತಮನಂತೆಯೇ ನಟಿಸಿ, ರಾಮನಾಥನೊಡನೆ ಆಗಲೇ ಹಿಂದಿರುಗಿದ.

ಆ ಸಮಯದಲ್ಲಿ ಅಲ್ಲಿದ್ದವರು ಕದರಪ್ಪನನ್ನು ಪುರುಷೋತ್ತಮನೆಂದೇ ಭಾವಿಸಿದರು.

ಶವದ ಮಹಜರಿಗೆ ತೊಡಗಿದ ಇನ್ಸ್‌ಪೆಕ್ಟರನು ತನ್ನ ಕಾರ್ಯವನ್ನು ಮುಗಿಸಿದ.

ನಗರನಿವಾಸಿಗಳಾರ ಬಾಯಲ್ಲಿ ನೋಡಿದರೂ ವಣಿಕ ಶ್ರೇಷ್ಠರು ಕೊಲೆಯಾದ ವಿಷಯವೇ.

ಪತ್ರಿಕೆಗಳಲ್ಲೆಲ್ಲಾ ವಿಷಯವು ಪ್ರಕಟವಾಯಿತು.

ರಂಗಯ್ಯಶೆಟ್ಟಿಯವರು ಗೌರವ ವ್ಯಕ್ತಿಯಾದುದರಿಂದ ಅವರ ಅಂತ್ಯಸಂಸ್ಕಾರಕ್ಕೆ ಉನ್ನತ ಅಧಿಕಾರಿಗಳು ಇನ್ನಿತರ ಮಹನೀಯರೂ ಸೇರಿದ್ದರು.

ಪೋಲೀಸ್ ಅಧಿಕಾರಿಗಳು ತಮ್ಮ ಕಾರ್ಯಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿಲ್ಲವೆಂದೂ, ಅವರ ಉದಾಸೀನತೆಯೇ ಈ ರೀತಿ ಕೊಲೆ ಕಳ್ಳತನಗಳು, ಹೆಚ್ಚಲು ಕಾರಣವೆಂದು ಸಾರ್ವಜನಿಕರು ಮಾತನಾಡಿಕೊಳ್ಳುವಂತಾಯಿತು.

ಕೊಲೆಗಾರನಾರೆಂಬುದನ್ನು ಪತ್ತೇಮಾಡಿ ತಿಳಿಯುವವರೆವಿಗೆ ಪುರುಷೋತ್ತಮನು ತಮ್ಮಲ್ಲಿಗೆ ಬಾರನೆಂದು ಚಂದ್ರನಾಥ, ರಾಮನಾಥರು ಭಾವಿಸಿಕೊಂಡಿರುವರು.

ನಾಲ್ಕು ದಿನಗಳು ಕಳೆಯಿತು.

ಕೊಲೆಯ ಬಿಸಿಯು ಆರಲಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇದೆ. ಜನರು ಮಾತನಾಡಿಕೊಳ್ಳುತ್ತಲೇ ಇರುವರು.

ಏಳನೆಯ ದಿನ ರಾತ್ರಿ ಇನ್ಸ್ಪೆಕ್ಟರನು ಪೋಲೀಸ್ ಠಾಣೆಯಲ್ಲಿ ಯೋಚನಾಕ್ರಾಂತನಾಗಿ ಕುಳಿತಿರಲು ಟೆಲಿಫೋನ್ ಬೆಲ್ಲು ಬಾರಿಸಿತು.

ರಿಸೀವರನ್ನು ಕೈಗೆ ತೆಗೆದುಕೊಂಡು—

"ಹಲೋ! ಯಾರು? ಎಲ್ಲಿಂದ ಮಾತನಾಡುತ್ತಿರುವಿರಿ?" ಎಂದು ಕೇಳಿದ ಚಂದ್ರನಾಥ.

"ನಾನು ಪುರುಷೋತ್ತಮ. ಡಾಕ್ಟರ್ ದಯಾನಂದನ ಬಂಗಲೆಯಿಂದ ಮಾತನಾಡುತ್ತಿರುವೆನು."

—ಎಂದು ಉತ್ತರ ಬಂದಿತು.

ಹರ್ಷಿತನಾದ ಚಂದ್ರನಾಥನು—

"ಪತ್ತೇದಾರರೇ! ಏನು ವಿಶೇಷ?" ಎಂದು ಕೇಳಿದ.

"ನೀವು ಈಗಲೇ ನನ್ನ ಮನೆಗೆ ಸಿವಿಲ್ ಉಡುಪಿನಲ್ಲಿ ಇತರರಿಗೆ ತಿಳಿಯದಂತೆ ಹೋಗಿ ಕದರಪ್ಪನ ವೇಷವನ್ನು ಕಳಚಿ, ಅವನನ್ನು ಹಿಂಬಾಗಿಲ ಮೂಲಕ ಮನೆಗೆ ಕಳುಹಿಸಿ, ನಾನು ಕೆಲಹೊತ್ತಿನಲ್ಲಿಯೇ ಅಲ್ಲಿಗೆ ಬರುವೆನು."

"ನಮ್ಮ ಸಂಕೇತ ಶಬ್ದವೇನು?"

"ನೀವು ಆ ವಿಷಯವನ್ನೆಲ್ಲಿ ಮರೆತಿರುವಿರೋ ಎಂದು ಭಾವಿಸಿದ್ದೆ. ಜ್ಞಾಪಕವಿದೆ. ಆ ಸಂಕೇತವು 'ಶ್ರೀ ಶೈಲ' ತಿಳಿಯಿತೇ? ನಾನು ರಾಮನಾಥನಿಗೂ ಫೋನ್ ಮಾಡಿರುವೆನು. ಆತನೂ ಬರುವನು. ನೀವು ಈಗಲೇ ಹೊರಡಿ."

ಹೋಗುವೆನೆಂದು ತಿಳಿಸಿದ ಚಂದ್ರನಾಥನು ರಿಸೀವರನ್ನು ಕೆಳಗಿಟ್ಟು ಕೂಡಲೆ ತನ್ನ ಮನೆಗೆ ಹೋಗಿ ವೇಷವನ್ನು ಮಾರ್ಪಡಿಸಿಕೊಂಡು ಪುರುಷೋತ್ತಮನ ಮನೆಗೆ ಹೋದನು.

ಆ ವೇಳೆಗೆ ಅಲ್ಲಿ ರಾಮನಾಥನು ಹಾಜರಾಗಿರುವನು. ಇಬ್ಬರೂ ಪರಸ್ಪರ ಮಾತನಾಡಿಕೊಂಡು, ಕದರಪ್ಪನನ್ನು ಅವನ ನಿಜವೇಷದಲ್ಲಿ ಹಿಂಬಾಗಿಲ ಮೂಲಕ ಕಳುಹಿಸಿದರು.

ಇಬ್ಬರೂ ಪುರುಷೋತ್ತಮನ ನಿರೀಕ್ಷೆಯಲ್ಲಿರಲು ಕೆಲಹೊತ್ತಿನಲ್ಲಿಯೇ ಆತನು ಆಗಮಿಸಿದ.

ಆತನ ಆಗಿನ ವೇಷವನ್ನು ನೋಡಿ ಇಬ್ಬರೂ ಚಕಿತರಾಗದಿರಲಿಲ್ಲ.

"ಪತ್ತೇದಾರರೇ! ಸರಿಯಾದ ವೇಷವನ್ನೇ ಹಾಕಿಕೊಂಡಿರುವಿರಿ. ಈ ವೇಷವನ್ನು ನೋಡಿ ನಿಮ್ಮನ್ನು ಗುರುತಿಸುವವರಾರು? ದಯಾನಂದನು ಮೊದಲು ಬಹು ಸುಲಭವಾಗಿ ಮೋಸ ಹೋಗಿರುವನಲ್ಲದೆ, ಗಾಬರಿಯೂ ಆಗಿರಬಹುದು."

—ಎಂದು ನಕ್ಕು ಹೇಳಿದ ಚಂದ್ರನಾಥ.

"ಅದರಲ್ಲಿ ಸಂದೇಹವೇ ಇಲ್ಲ."

—ಎಂದು ಪುರುಷೋತ್ತಮನೂ ಸಹ ನಗುತ್ತಲೇ ಹೇಳಿದ.

"ಆ ವಿಷಯವಿರಲಿ. ನೀವು ಕೈಗೊಂಡಿದ್ದ ಕಾರ್ಯವೇನಾಯಿತು? ರಂಗಯ್ಯ ಶೆಟ್ಟಿಯವರು ಕೊಲೆಯಾದ ವಿಷಯವು ನಿಮಗೆ ತಿಳಿದಿದೆಯೇ?"

"ತಿಳಿದಿದೆ. ನಾನು ಕೈಗೊಂಡಿದ್ದ ಕಾರ್ಯವು ಯಶಸ್ವಿಯಾದಂತೆಯೆ."

"ಕೊಲೆಗಾರನಾರೆಂದು ಪತ್ತೇಮಾಡಿ ಕಂಡು ಹಿಡಿದುದಾಯಿತೇ?"

"ಆಯಿತೆಂದೇ ಭಾವಿಸಿ. ಇನ್ನು ಹಲವು ಕಾರ್ಯಗಳನ್ನು ಮಾಡಿ ಮುಗಿಸಬೇಕಾಗಿದೆ."

"ಅದೇನು ಅಂತಹ ಕಾರ್ಯ?"

ಪುರುಷೋತ್ತಮನು ಇಬ್ಬರನ್ನು ರಹಸ್ಯ ಕಿರುಮನೆಯೊಳಗೆ ಕರೆದುಕೊಂಡು ಹೋದನು.

ಸುಮಾರು ಎರಡು ಘಂಟೆಗಳವರೆವಿಗೆ ಮೂವರೂ ರಹಸ್ಯವಾಗಿ ಮಾತನಾಡಿದರು. ಪುರುಷೋತ್ತಮನ ಕಾರ್ಯಕೌಶಲ್ಯತೆಗೆ ರಾಮನಾಥ, ಚಂದ್ರನಾಥರು ಬೆರಗಾಗದಿರಲಿಲ್ಲ.

೨೦

ರಂಗಯ್ಯಶ್ರೇಷ್ಠಿಯವರು ಆಕಸ್ಮಾತ್ ಕೊಲೆಯಾದ ಪ್ರಯುಕ್ತ, ಅವರ ಗೌರವಾರ್ಥವಾಗಿ ಸಂತಾಪಸೂಚಕ ಸಭೆಗಳು ಏರ್ಪಟ್ಟುವು.

ಹಲವಾರು ಸಂಸ್ಥೆ. ಸಂಘಗಳಿಗೆ ಸಾವಿರಾರು ರೂಪಾಯಿ ದಾನ ಮಾಡಿರುವುದರಿಂದ ಅವರೆಲ್ಲರೂ ಸಂತಾಪ ಸಭೆಗಳನ್ನಿಟ್ಟು, ಶೆಟ್ಟರಿಗೆ ತಮ್ಮಲ್ಲಿದ್ದ ಗೌರವವನ್ನು ತೋರಿಸಿಕೊಂಡರು.

ನಗರದ ಪಶುವೈದ್ಯಶಾಲೆಗೆ ಹೆಚ್ಚಿನ ಹಣಸಹಾಯ ಮಾಡಿರುವುದರಿಂದ ಆ ಸಂಸ್ಥೆಗೆ ಸಂಬಂಧಪಟ್ಟವರೂ ಸಂತಾಪ ಸೂಚಕ ಸಭೆಯನ್ನು ನಡೆಯಿಸಲು ಏರ್ಪಾಡು ಮಾಡಿಕೊಂಡರು.

ಆ ಸಭೆಯ ಅಧ್ಯಕ್ಷತೆಯನ್ನು ವಹಿಸಲು ರಾಜಗೋಪಾಲನು ಒಪ್ಪಿಕೊಂಡನು.

ಪತ್ತೇದಾರರಾದಿಯಾಗಿ ಇತರ ಮಹನೀಯರೂ ಆಹ್ವಾನಿತರಾಗಿ, ಸಭೆಯನ್ನಲಂಕರಿಸಿದರು.

ಸ್ವಾಗತಭಾಷಣ, ಇನ್ನಿತರರು ರಂಗಯ್ಯಶ್ರೇಷ್ಠಿಯವರ ಗುಣಗಳನ್ನು ಹೊಗಳಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದನಂತರ, ಅಧ್ಯಕ್ಷತೆ ವಹಿಸಿದ್ದ ರಾಜಗೋಪಾಲನು ಎದ್ದು ನಿಂತನು.

"ಮಾನ್ಯ ಸನ್ಮಿತ್ರರೇ! ಈ ಸಂತಾಪಸೂಚಕ ಸಭೆಯು ಸೇರಿರುವ ಕಾರಣವು ತಮಗೆಲ್ಲಾ ತಿಳಿದೇ ಇದೆ. ಇಲ್ಲಿ ಸೇರಿರುವರೆಲ್ಲರೂ ಗಣ್ಯ ವ್ಯಕ್ತಿಗಳೇ ಆಗಿರುವುದರಿಂದ, ರಂಗಯ್ಯಶ್ರೇಷ್ಠಿಯವರ ಬಗ್ಗೆ ಎಷ್ಟರಮಟ್ಟಿನ ಗೌರವ ತೋರಿಸ ಬೇಕೆಂಬುದು ಇದರಿಂದಲೇ ವ್ಯಕ್ತಪಡುತ್ತದೆ. ದಿವಂಗತರ ಗುಣ ವರ್ಣ

ದಲ್ಲಿ ನೋಡು, ಎಂದು ಹಿರಿಯರು ಹೇಳುವುದಿಲ್ಲವೇ ಹಾಗೆ. ಶ್ರೀಯುತರು ಬಡತನದ ಕುಟುಂಬವೊಂದರಲ್ಲಿ ಜನಿಸಿ ಸ್ವಸಾಮರ್ಥ್ಯದಿಂದ ಶ್ರೀಮಂತಪದವಿಗೇರಿ, ತಾವು ಗಳಿಸಿದುದನ್ನು ಮುಚ್ಚಿಡದೆ, ದಾನಧರ್ಮಾದಿಗಳನ್ನು ಮಾಡಿ ಲೋಕಮಾನ್ಯರಾಗಿದ್ದರು. ಎಡಗೈ ದಾನಮಾಡಿದರೆ ಬಲಗೈಗೆ ತಿಳಿಯುತ್ತಿರಲಿಲ್ಲ. ಇಂತಹ ಮಹನೀಯರ ಸ್ಮಾರಕವೇರ್ಪಡಬೇಕಾದ್ದು ಅವಶ್ಯಕ. ಭಗವಂತನು ಅವರಿಗೆ ಸದ್ಗತಿಯನ್ನು ಕರುಣಿಸಿ, ಮೃತರ ಕುಟುಂಬದವರಿಗೂ, ಬಂಧುಬಳಗದವರಿಗೂ ಆತ್ಮಶಾಂತಿಯುಂಟುಮಾಡಲೆಂದು ಹಾರೈಸುವೆನು. ನಿಮ್ಮೆಲ್ಲರ ಪರವಾಗಿ ಮೃತರ ಬಂಧುವರ್ಗದವರಿಗೆ ನನ್ನ ಸಹಾನುಭೂತಿಯನ್ನು ಅರ್ಪಿಸುವೆನು."

ರಾಜಗೋಪಾಲನ ಭಾಷಣವು ಮುಗಿಯುತ್ತಲೇ ಸಭೆಯಲ್ಲಿ ಕರತಾಡನವಾಯಿತು.

ಮೃತರ ಆತ್ಮಶಾಂತಿಗಾಗಿ ಎಲ್ಲರೂ ಎದ್ದುನಿಂತು ನಿಶ್ಯಬ್ದರಾಗಿ ಗೌರವವನ್ನು ಸೂಚಿಸಿ ಬಳಿಕ ಕುಳಿತರು.

ತರುವಾಯ ರಾಜಗೋಪಾಲನು ತನ್ನ ಭಾಷಣವನ್ನು ಪ್ರಾರಂಭಿಸಿದ.

"ಶ್ರೀಯುತರು ದುರ್ಮರಣಕ್ಕೀಡಾದುದರಿಂದ ಪ್ರತಿಯೊಬ್ಬರಿಗೂ ಅತ್ಯಂತ ವ್ಯಸನವುಂಟಾಗಿದೆ. ಹಿಂದೆ ಡಾಕ್ಟರ್ ರಾಘವಾಚಾರ್ಯರು ಕೊಲೆಯಾದರು. ಅವರನ್ನು ಕೊಲೆ ಮಾಡಿದ ಕೊಲೆಗಾರರಾರೆಂದು ಪತ್ತೇಮಾಡಿ ಹಿಡಿಯುವುದರಲ್ಲಿಯೇ ವಣಿಕಶ್ರೇಷ್ಠರು ಕೊಲೆಯಾದರು. ಈ ಪ್ರಸಂಗವನ್ನು ನೋಡಿದರೆ ನಮ್ಮವರ ಪೋಲೀಸ್ ಆಡಳಿತದಲ್ಲಿ ಸರಿಯಾದ ವ್ಯವಸ್ಥೆಯಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಇಂಗ್ಲೇಂಡಿನಲ್ಲಿ ಈ ರೀತಿ ಘಟನೆಗಳು ನಡೆದರೆ ಅಪರಾಧಿಯನ್ನು ಬಹು ಬೇಗನೆ ಹಿಡಿಯುವರು. 'ಸ್ಕಾಟ್ ಲೆಂಡ್‌ಯಾರ್ಡ್' ಪೋಲೀಸ್ ದಳವು ಕಾರ್ಯದಕ್ಷತೆಯಲ್ಲಿ ಪ್ರಸಿದ್ಧಿ ಪಡೆದಿದೆ. ಆ ಪೋಲೀಸ್ ಇಲಾಖೆಯಲ್ಲಿ ನೂರಾ ಇಪ್ಪತ್ತಾರು ಭಾಗಗಳಿವೆ. ಪ್ರತಿಯೊಂದು ಭಾಗಗಳ ವ್ಯವಸ್ಥೆ ಮತ್ತು ಮೇಲ್ವಿಚಾರಣೆಯು 'ಮೆಟ್ರೋ ಪಾಲಿಟನ್' ಶಾಖೆಯವರಿಗೆ ಸೇರಿದೆ. ಆ ಶಾಖೆಯ ಪೋಲೀಸ್ ಕಮಿಷನರನು ಗೃಹಮಂತ್ರಿಗಳಿಗೆ ಜೊತೆಗಾರನಾಗಿರುವನು. ಕರ್ತವ್ಯದಕ್ಷತೆಯಲ್ಲಿ ಜಗತ್ತಿನಲ್ಲಿಯೇ ಪ್ರಸಿದ್ಧಿಯನ್ನು ಪ್ರಖ್ಯಾತಿಗೊಂಡಿರುವ 'ಸ್ಕಾಟ್‌ಲೆಂಡ್‌ಯಾರ್ಡ್'

ಕಛೇರಿಯು 'ಥೇಮ್ಸ್' ನದಿಯ ದಡದಲ್ಲಿದೆ. ಮೊದಲು ಅದು ಪೋಲೀಸ್ ಕಛೇರಿಯಾಗಿತ್ತು. ಅಲ್ಲಿ ಸ್ಕಾಟ್‌ಲೆಂಡ್ ಅರಸು ಮನೆತನದವರು ಇಳಿದು ಕೊಳ್ಳುತ್ತಿದ್ದರು. ಅದೇ ರಾಜಗೃಹವು ಪೋಲೀಸ್ ಕಮಿಷನರ ವಶವಾಗಿ ಆ ಪೋಲೀಸ್ ದಳಕ್ಕೆ 'ಸ್ಕಾಟ್‌ಲೆಂಡ್‌ಯಾರ್ಡ್' ಎಂಬ ಹೆಸರು ಬಂದಿದೆ. ಆ ದಳದ ಪೋಲೀಸರು ಸಾರ್ವಜನಿಕರ ರಕ್ಷಣೆಗೆ ಸದಾ ಸಿದ್ಧರಾಗಿರುತ್ತಾರೆ. ಆ ದಳದ ಫೋನ್ ನಂಬರ್ ೯೯೯. ಲಂಡನ್ನಿನ ಯಾವ ಭಾಗದಿಂದಲೇ ಆಗಲಿ ಆ ನಂಬರಿಗೆ ಫೋನ್ ಮಾಡಿದರೆ ಮೂರು ನಾಲ್ಕು ನಿಮಿಷಗಳಲ್ಲಿಯೇ ಪೋಲೀಸರು ಅಲ್ಲಿ ಹಾಜರಾಗಿ ಕರ್ತವ್ಯನಿಷ್ಠರಾಗುವರು. ಅಲ್ಲಿನ ಕೆಳದರ್ಜೆಯ ಪೋಲೀಸನಿಗೆ ತಿಂಗಳಿಗೆ ಐನೂರು ರೂಪಾಯಿ ಸಂಬಳ ದೊರೆಯುತ್ತದೆ. ನಮ್ಮ ದೇಶದಲ್ಲಿ ಅಂತಹ ವ್ಯವಸ್ಥೆಯಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಪೋಲೀಸರಿಗೆ ದೊರೆಯುವ ಸಂಬಳವೂ ತೀರಾ ಅತ್ಯಲ್ಪ. ಎಲ್ಲಿಯಾದರೂ ಕೊಲೆಯಾಗಿ, ಪೋಲೀಸರಿಗೆ ವರ್ತಮಾನ ಹೋದರೂ, ಕೂಡಲೇ ಅವರು ಅಲ್ಲಿ ಹಾಜರಾಗುವುದಿಲ್ಲ. ಆ ಉದಾಸೀನತೆಗೆ ಕಾರಣವೇನು ? ಮನಶ್ಶಾಂತಿಯಿಲ್ಲದ ಜೀವನವೇ ಕಾರಣವೆಂದು ಹೇಳಬಹುದು. ಕೆಳದರ್ಜೆಯವರು ಕಳ್ಳ ಕೊಲೆಗಾರರನ್ನು ಹಿಡಿದರೆ, ಹೆಸರು ಪಡೆಯುವುದು ಮೇಲುದರ್ಜೆಯವರು. ಇಂತಹ ಭೇದೋಪಾಯವು ನಮ್ಮವರಲ್ಲಿದೆ. 'ಸ್ಕಾಟ್‌ಲೆಂಡ್‌ಯಾರ್ಡ್' ಪೋಲೀಸ್ ದಳದಂತೆ ನಮ್ಮ ದೇಶದಲ್ಲಿಯೂ ಜನ್ಮತಾಳಿದರೆ, ಸಾರ್ವಜನಿಕರಿಗೆ ನೆಮ್ಮದಿಯಿರುವುದಲ್ಲದೆ, ಕಳ್ಳ ಕೊಲೆಗಾರರಿಗೆ ಭಯವಿರುತ್ತದೆ. ನಮ್ಮ ನಗರದಲ್ಲಿರುವ ಪತ್ತೇದಾರರಾದ ಪುರುಷೋತ್ತಮ, ರಾಮನಾಥರ ಹೆಸರುಗಳನ್ನು ಕೇಳದವರಿಲ್ಲ. ಇವರು ಈ ನಗರದಲ್ಲಿರುವುದು ನಮ್ಮೆಲ್ಲರ ಪುಣ್ಯವೇ ಸರಿ. ಇಂತಹವರ ಕಣ್ಣು ತಪ್ಪಿಸಿ ತಿರುಗುತ್ತಿರುವ ಕೊಲೆಗಾರನು ಚತುರನಾಗಿದ್ದರೂ ಆಗಿರಬಹುದು. ಕೆಲದಿನಗಳ ಹಿಂದೆ ವಿಲಾಸನಗರದಲ್ಲಿ ನನ್ನ ಭಾವಮೈದುನನ ಕೊಲೆಯಾಯಿತು. ಅವನನ್ನು ಕೊಲೆಮಾಡಿದ ಕೊಲೆಗಾರನೂ ಸಿಕ್ಕಿಲ್ಲ. ಈವರೆವಿಗೆ ನೂರಾರು ಜನ ಕಳ್ಳರು, ಕೊಲೆಗಾರರು ಮತ್ತು ದರೋಡೆಕೋರರನ್ನು ತಮ್ಮ ಚತುರೋಪಾಯಗಳಿಂದ ಸೆರೆ ಹಿಡಿದು ಜಯಶಾಲಿಗಳಾಗಿರುವರು. ಈಚೆಗೆ ಈ ದುರಂತಗಳಿಗೆ ಕಾರಣನಾದ ಕೊಲೆಗಾರನನ್ನು ಸೆರೆ ಹಿಡಿಯುವರಾಗಿ ನಾನು ನಂಬಿರುವೆನು. ಇವರ ಕಾರ್ಯನ

ಯಶಸ್ವಿಯಾಗಲೆಂದು ತಮ್ಮೆಲ್ಲರ ಪರವಾಗಿ ಹಾರೈಸಿ, ಮೃತರ ಆತ್ಮಗಳಿಗೆ ಶಾಂತಿಯನ್ನು ಕೋರಿ ಈ ನನ್ನ ಪುಟ್ಟ ಭಾಷಣವನ್ನು ಮುಕ್ತಾಯ ಮಾಡಿರುವೆನು."

ಸಭೆಯಲ್ಲಿ ಕರತಾಡನವಾಯಿತು.

ಆಗ ಸಭೆಯ ಮಧ್ಯದಲ್ಲಿ ಕುಳಿತ ಪುರುಷೋತ್ತಮನು ಎದ್ದು ನಿಂತು--

"ಕೊಲೆಗಾರನು ನಮ್ಮೆಲ್ಲರ ಕಣ್ಣು ಮುಂದೆಯೇ ಇದ್ದರೂ, ಅವನಾರೆಂಬುದನ್ನು ತಿಳಿಯದೆ, ಅವನಿಗಾಗಿ ಅಲೆಯುತ್ತಾ, ಅವನಿಗೆ ಗೌರವ ಸ್ಥಾನವಿತ್ತು ಸತ್ಕರಿಸುವ ನಾವೆಲ್ಲರೂ ಹುಚ್ಚರೇ ಸರಿ" ಎಂದು ಹೇಳಿದ

ಆ ಮಾತನ್ನು ಕೇಳಿ ಸಭೆಯಲ್ಲಿ ನಿಶ್ಶಬ್ದತೆಯು ಮೂಡಿತಲ್ಲದೆ, ಒಬ್ಬರ ಮುಖವನ್ನೊಬ್ಬರು ನೋಡಿದರು.

ಕುಳಿತಿದ್ದ ರಾಜಗೋಪಾಲನು ಎದ್ದು ನಿಂತನು.

ಪುರುಷೋತ್ತಮನು ತಕ್ಷಣವೇ ತನ್ನ ಜೇಬಿನಿಂದ ಪಿಸ್ತೂಲನ್ನು ತೆಗೆದು ರಾಜಗೋಪಾಲನ ಮುಖಕ್ಕೆ ಹಿಡಿದು, ಗಂಭೀರವಾಗಿ--

"ರಾಜಗೋಪಾಲ! ನಿಂತಹಾಗೆಯೇ ನಿಂತುಕೊ. ಕದಲಬೇಡ. ಇಲ್ಲಿಯವರೆವಿಗೆ ನಡೆದಂತೆ ಇನ್ನು ಮುಂದೆ ನಿನ್ನ ಆಟವು ನನ್ನ ಬಳಿಯಲ್ಲಿ ನಡೆಯದು" ಎಂದು ಹೇಳಿದ.

ರಾಜಗೋಪಾಲನು ತನ್ನ ಜೇಬಿಗೆ ಕೈ ಹಾಕುವುದರೊಳಗಾಗಿ ರಾಮನಾಥ, ಚಂದ್ರನಾಥರಿಬ್ಬರು ಮುಂದೆ ನುಗ್ಗಿ ಅವರ ಎರಡು ರೆಟ್ಟೆಗಳನ್ನು ಹಿಡಿದುಕೊಂಡರು.

ರಾಜಗೋಪಾಲನು ಬಿಡಿಸಿಕೊಳ್ಳಲು ಪ್ರಯತ್ನ ಮಾಡಿದನಾದರೂ ಸಾಧ್ಯವಾಗಲಿಲ್ಲ.

ಚಂದ್ರನಾಥನು ತನ್ನ ಜೇಬಿನಿಂದ ಕೋಳವನ್ನು ತೆಗೆದು ಅವನ ಕೈಗಳಿಗೆ ತೊಡಿಸಿದ.

ಗೋಪಾಲನ ಅವಸ್ಥೆಯು ಬೋನಿನಲ್ಲಿ ಆಕಸ್ಮಾತ್ ಸಿಕ್ಕಿಬಿದ್ದ ಹುಲಿಯಂತಾಯಿತು.

ಈ ಕಾರ್ಯವು ಕೆಲ ನಿಮಿಷಗಳಲ್ಲಿಯೇ ನಡೆದುಹೋದ ಪ್ರಯುಕ್ತ ಸಭೆಯಲ್ಲಿದ್ದವರಿಗೆ ಮಂಕು ಹಿಡಿದಂತಾಗಿ, ಈ ಪತ್ತೇದಾರರಿಗೆ ಹುಚ್ಚು ಹಿಡಿಯಿತೇ? ಹೇಗೆ? ವಿನಾಕಾರಣ ಲಕ್ಷಾಧೀಶ್ವರನನ್ನು ಬಂಧಿಸಿದರಲ್ಲಾ.

ಈತನು ನಮ್ಮೆಲ್ಲರನ್ನೂ ಸಾಕ್ಷಿಯನ್ನಾಗಿಟ್ಟುಕೊಂಡು ಪತ್ತೇದಾರನ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿದರೇನು ಗತಿಯೆಂದುಕೊಂಡರು.

ವೆಂಕಟರತ್ನಂರವರೂ ಸಹ ಅಲ್ಲಿ ಹಾಜರಾಗಿದ್ದ ಪ್ರಯುಕ್ತ, ಮಗನಿಗಾದ ಅವಮಾನವನ್ನು ನೋಡಿ ಅವರಿಂದ ಸಹಿಸಲಾಗಲಿಲ್ಲ.

ಅವರು ಸಿಟ್ಟಿನಿಂದ ಎದ್ದು ನಿಂತು:—

"ಪತ್ತೇದಾರರೇ! ಇದೇನು ನಿಮ್ಮ ಕಾರ್ಯದಕ್ಷತೆ? ನನ್ನ ಮಗನೇನು ತಪ್ಪು ಮಾಡಿದನೆಂದು ಬಂಧಿಸಿದಿರಿ? ಈ ಸಭೆಯಲ್ಲಿ ಅನುಮಾನ ಮಾಡಬೇಕೆಂದು ಯೋಚಿಸಿಕೊಂಡಿದ್ದಿರಾ? ಅಥವಾ ನನ್ನ ಮಗನೇಳಿದ ಹಿತೋಪದೇಶವನ್ನು ಕೇಳಿ ಕೋಪಗೊಂಡು ಇಂತಹ ಅನುಚಿತ ಕಾರ್ಯಕ್ಕೆ ಇಳಿದಿರಾ? ನಿಮ್ಮ ಈ ಕಾರ್ಯವು ನಿಮಗೆ ಗೌರವ ತರಲಾರದು. ಇದೇನು ನಿಮ್ಮ ಅಸಭ್ಯ ವರ್ತನೆ" ಎಂದು ಗುಡುಗಿದರು.

ಸಭೆಯಲ್ಲಿ ಕುಳಿತಿದ್ದ ಬಹುಜನರು ಅವರ ಪರವಾಗಿ ಮಾತನಾಡಿದರು.

ಆದರೇ! ಪುರುಷೋತ್ತಮನು ಸಿಟ್ಟಾಗಲಿಲ್ಲ.

"ಶ್ರೀಮಂತರೇ! ಏಕೆ ಸಿಟ್ಟಾಗುವಿರಿ? ನಿಮ್ಮ ಮಗನ ಪ್ರತಾಪವನ್ನು ಹೇಳುವೆನು. ಕೊಂಚ ಹೊತ್ತು ಮೌನವಾಗಿರಿ. ಆತುರಪಡಬೇಡಿ."

—ಎಂದು ಹೇಳಿ ಅವರನ್ನು ಕೂರಿಸಿದ.

ವೆಂಕಟರತ್ನಂರವರು ಬುಸುಗುಟ್ಟುತ್ತಾ ಕುಳಿತರು.

ತರುವಾಯ ಪುರುಷೋತ್ತಮನು ಅಧ್ಯಕ್ಷ ಸ್ಥಾನದಲ್ಲಿ ನಿಂತು ತನ್ನ ಉಪನ್ಯಾಸವನ್ನು ಪ್ರಾರಂಭಿಸಿದ.

"ಗುರುಹಿರಿಯರ ಸಮಾನರಾದ ಬಂಧುಮಿತ್ರರೇ! ನಾವು ಈ ಶ್ರೀಮಂತ ತರುಣನನ್ನು ದಸ್ತಗಿರಿ ಮಾಡಿರುವುದರಿಂದ ನಿಮ್ಮೆಲ್ಲರ ಮನಸ್ಸಿಗೆ ಅಸಮಾಧಾನವಾಗಿದೆ. ಕೆಲಹೊತ್ತು ಮೌನವಾಗಿದ್ದರೆ ಆ ಅಸಮಾಧಾನವು ದೂರಾಗುವುದರಲ್ಲಿ ಸಂದೇಹವಿಲ್ಲ. ಕೆಲವು ವರ್ಷಗಳ ಹಿಂದೆ ರಾಜನಗರದ ಸಮೀಪದಲ್ಲಿರುವ ಒಂದು ಕಾಡಿನ ಮಧ್ಯದಲ್ಲಿ ವಾಸ ಮಾಡಿಕೊಂಡಿದ್ದು ನೂರಾರು ಕೊಲೆಗಳನ್ನು ಮಾಡಿ ಹತ್ತಾರು ದರೋಡೆಗಳನ್ನು ನಡೆಯಿಸಿದನಂತರ ಕಡೆಗೊಂದು ದಿನ ಪೋಲೀಸ್ರಿ ಪಡೆಯು ಆ ಅರಣ್ಯವನ್ನು ಮುತ್ತಿದಾಗ ತನ್ನವರನ್ನು

ಬಲಿಗೊಟ್ಟು ತಲೆತಪ್ಪಿಸಿಕೊಂಡು ದ್ವೀಪಾಂತರ ಹೊರಟುಹೋದನೆಂದು ಹೇಳಲಾದ ಮೋಹನ್‌ಸಿಂಗ್ ಎಂಬುವನೇ ಇವನು."

ಹಾಗೆನ್ನುತ್ತಲೇ ಸಭೆಯಲ್ಲಿ ಗುಜು ಗುಜು ಆರಂಭವಾಯಿತು. ಎಲ್ಲರ ದೃಷ್ಟಿಯೂ ರಾಜಗೋಪಾಲನ ಕಡೆ ಹೋಯಿತು. ಆತನು ಬೇಡಿಗಳಿಂದಲಂಕೃತನಾಗಿದ್ದರೂ ಗಂಭೀರ ಪ್ರಕೃತಿಯುಳ್ಳವನಾಗಿ ಕಾಳುತಿರುವನು.

ವೆಂಕಟರತ್ನಂರವರು ಗಾಬರಿಯಿಂದ ಎದ್ದು ನಿಂತು—

"ಏನೂ........! ಈತನು ದರೋಡೆಕೋರ ಮೋಹನ್‌ಸಿಂಗನೇ? ನನ್ನ ಮಗ ರಾಜಗೋಪಾಲನಲ್ಲವೇ?" ಎಂದು ಕೇಳಿದರು.

"ಎಲ್ಲಾ ವಿವರವಾಗಿ ಹೇಳುವೆನು ಕೇಳಿ. ಸಣ್ಣ ವಯಸ್ಸಿನಲ್ಲಿಯೇ ದರೋಡೆಕೋರನಾದ ಈತನು ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಂಡು ಚೆನ್ನಿಗರಾಯ ಎಂಬ ಹೆಸರಿನಲ್ಲಿ ಲಂಡನ್ನಿಗೆ ಹೊರಟುಹೋದನು. ಆ ವೇಳೆಯಲ್ಲಿ ಈ ವೆಂಕಟರತ್ನಂರವರ ಮಗನಾದ ರಾಜಗೋಪಾಲನು ಇಂಗ್ಲೆಂಡಿನಲ್ಲಿದ್ದನು. ಅಲ್ಲಿ ಇಬ್ಬರಿಗೂ ಪರಿಚಯವಾಯಿತು. ಅವನಲ್ಲಿ ಈತನು ತನ್ನ ರಹಸ್ಯವನ್ನು ಹೇಳದೆ ಅವನ ಕುಟುಂಬದ ಪೂರ್ಣ ವಿಷಯವನ್ನು ತಿಳಿದುಕೊಂಡನು. ಆಕಾರದಲ್ಲಿ ಇಬ್ಬರೂ ಒಂದೇ ರೀತಿಯಿರುವರು. ಈತನು ಅವನ ಸಂಗಡವೇ ಓಡಾಡಿಕೊಂಡಿದ್ದು ಅವನ ನಡೆನುಡಿಗಳೆಲ್ಲವನ್ನೂ ಕಲಿತನು. ಹತ್ತು ವರ್ಷಗಳವರೆವಿಗೆ ಅವನನ್ನು ಇಲ್ಲಿಗೆ ಬರಗೊಡಲಿಲ್ಲ. ಬಳಿಕ ಇಬ್ಬರೂ ಅಲ್ಲಿಂದ ಒಂದೇ ಸಾರಿ ಹೊರಟಿರುವರು. ಬೊಂಬಾಯಿ ಬಂದರಿನಲ್ಲಿಳಿದು ಅಲ್ಲಿಂದ ಸುಲ್ತಾನನಗರಕ್ಕೆ ಬಂದನಂತರ ಈ ಚಂಡಾಲನು ರಾಜಗೋಪಾಲನನ್ನು ಕೊಲೆ ಮಾಡಿ ಮುಖದ ಗುರುತು ಸಿಕ್ಕದಂತೆ ವಿಕಾರ ಮಾಡಿ, ಶವವನ್ನು ಪಾರ್ಸೆಲ್ಲಿನ ಮೂಲಕ ನನಗೆ ಕಳುಹಿಸಿದ."

—ಎಂದು ತನಗೆ ಪಾರ್ಸೆಲ್ಲಿನ ಮೂಲಕ ಪೆಟ್ಟಿಗೆಯಲ್ಲಿ ಶವವು ಬಂದುದನ್ನೂ, ಅದರಲ್ಲಿ ಬರೆದಿಟ್ಟಿದ್ದ ಕಾಗದದ ವಿವರವನ್ನೂ ಪುರುಷೋತ್ತಮನು ಹೇಳಿದ.

ಆ ವಿಷಯವನ್ನು ಕೇಳಿ ಸಭೆಯಲ್ಲಿದ್ದವರಿಗೆ ದಿಗ್ಭ್ರಮೆ ಹಿಡಿದಂತಾಯಿತು.

ಮಗನು ಕೊಲೆಯಾದನೆಂಬುದನ್ನು ಕೇಳಿ ವೆಂಕಟರತ್ನಂರವರಿಗೆ ದುಃಖ ಉಕ್ಕಿ ಬಂತು. ಕುಳಿತಲ್ಲಿಯೇ ಮೂರ್ಛೆ ಹೋಗುವಂತಾದರು.

ಮತ್ತೆ ಪುರುಷೋತ್ತಮನು ಪ್ರಾರಂಭ ಮಾಡಿದ,

"ಮಿಲ್ಟ್ರಿ ಪಡೆ ಮತ್ತು ದರೋಡೆಕೋರರ ಯುದ್ಧರಂಗದಲ್ಲಿ ಬಹುಜನ ದರೋಡೆಕೋರರು ತಪ್ಪಿಸಿಕೊಂಡು ತಿರುಗುತ್ತಿದ್ದರು. ಅವರನ್ನೆಲ್ಲಾ ಈತನು ಸಂಧಿಸಿ, ತನ್ನ ವಿಷಯವನ್ನು ತಿಳಿಸಿ, ತನ್ನ ಸಹಾಯಕ್ಕೆ ನಿಯಮಿಸಿಕೊಂಡು ರಾಜಗೋಪಾಲನಾಗಿ ಇಲ್ಲಿಗೆ ಬಂದನು. ರಾಜಗೋಪಾಲನ ಕುಟುಂಬ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದ ಪ್ರಯುಕ್ತ ಇಲ್ಲಿನವರನ್ನು ಬಹು ಸುಲಭವಾಗಿ ಮೋಸಗೊಳಿಸಿರುವನು. ಆಕಾರದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ ಇಂಗ್ಲೇಂಡಿಗೆ ಹೋಗಿ ಅಲ್ಲಿ ಹತ್ತು ವರ್ಷಗಳಿದ್ದ ಪ್ರಯುಕ್ತ ಬದಲಾವಣೆ ಹೊಂದಿರುವನೆಂದು ಇವನ ಪರಿಚಯವಿದ್ದವರು ಭಾವಿಸಿರುವರು. ವೃದ್ಧರಾದ ರಾಜಗೋಪಾಲನ ಮಾತಾಪಿತೃಗಳು ಈ ದರೋಡೆಕೋರನನ್ನೇ ತಮ್ಮ ಮಗನೆಂದು ಭಾವಿಸಿರುವರು."

ವೆಂಕಟರತ್ನಂರವರು ದುಃಖವನ್ನು ತಡೆಯಲಾರದೆ ಮೋಹನ್‌ಸಿಂಗನಿಗೆ ಹೊಡೆಯುವುದಕ್ಕೆ ಹೋದರು.

ರಾಮನಾಥನು ಅವರನ್ನು ತಡೆದು ಕೂರಿಸಿದ.

ಸಭಿಕರು ಮೂಕರಂತಾಗಿ ಪುರುಷೋತ್ತಮನ ಮಾತುಗಳನ್ನು ಆಲಿಸಿ ಕೇಳುತ್ತಿದ್ದರು.

ಪುರುಷೋತ್ತಮನು ಮತ್ತೆ ಪ್ರಾರಂಭ ಮಾಡಿದ,

"ರಾಜಗೋಪಾಲನ ಸಹೋದರಿ ಮತ್ತು ಆಕೆಯ ಪತಿ, ಪುತ್ರರು ಮೋಟಾರು ಅನಾಹುತಕ್ಕೆ ಒಳಗಾಗಿ ಮರಣವನ್ನಪ್ಪಿದ ವಿಷಯವು ನಿಮಗೆಲ್ಲಾ ತಿಳಿದೇ ಇದೆ. ಅದರಲ್ಲಿ ಇವನ ಕೈವಾಡವೇನೂ ಇಲ್ಲ. ಅವರು ಬದುಕಿದ್ದರೆ ಅವರನ್ನೂ ಕೊಲ್ಲದೆ ಬಿಡುತ್ತಿರಲಿಲ್ಲ. ಇಂಗ್ಲೇಂಡಿನಲ್ಲಿ ಹತ್ತು ವರ್ಷಗಳಿದ್ದ ಪ್ರಯುಕ್ತ, ಅಲ್ಲಿನ ವಿಶೇಷ ಸಂಗತಿಗಳನ್ನೆಲ್ಲಾ ತಿಳಿದುಕೊಂಡು ಇಲ್ಲಿನವರನ್ನು ಬೆರಗುಗೊಳಿಸಿದ. ಆ ಪ್ರಯುಕ್ತ ಇವನನ್ನು ಎಲ್ಲರೂ ರಾಜಗೋಪಾಲನೆಂದೇ ತಿಳಿದರಲ್ಲದೆ, ದರೋಡೆಕೋರ ಮೋಹನ್‌ಸಿಂಗ್ ಎಂದು ಹೇಳಲಾಗಲಿಲ್ಲ. ಇವನ ಕಡೆಯವರು ಪೋಲೀಸ್ ಸಿ.ಐ.ಡಿ.ಗಳ ಮತ್ತು ನಮ್ಮ ವಿಷಯಗಳನ್ನು

ಸಂಗ್ರಹಿಸುವುದರಲ್ಲಿ ನಿರತರಾದರು. ಪುರುಷೋತ್ತಮನಿಗೆ ನನ್ನ ಮೇಲೆ ಸಂದೇಹ ಬಾರದಿರಲೆಂಬ ಅಭಿಪ್ರಾಯವುಳ್ಳವನಾಗಿ ಡಾಕ್ಟರ್ ರಾಘವಾಚಾರ್ಯರನ್ನು ಕೊಲೆ ಮಾಡಿ ನನ್ನ ಗಮನವನ್ನು ಇನ್ನೊಂದು ಕಡೆ ಸೆಳೆಯುವಂತೆ ಮಾಡಿದ. ಆ ವೇಳೆಯಲ್ಲಿ ಬಾಲಕೃಷ್ಣ ಮತ್ತು ಅನ್ನದಾನಪ್ಪನವರು ಕಣ್ಮರೆಯಾಗಿದ್ದ ಪ್ರಯುಕ್ತ ನಮಗೆ ಅವರ ಮೇಲೆ ಮತ್ತು ಡಾಕ್ಟರ್ ವೈರಿ ದಾಸಪ್ಪನವರ ಮೇಲೆ ನಮಗೆ ಅನುಮಾನವುಂಟಾಯಿತು. ನಮ್ಮ ಪರಿಶೋಧನೆಯ ಪ್ರತಿಫಲವಾಗಿ ಅವರು ನಿರಪರಾಧಿಗಳೆಂದು ತಿಳಿಯಿತು."

—ಎಂದು ಹೇಳಿದ ಪುರುಷೋತ್ತಮನು ಅವರ ಬಗ್ಗೆ ನಡೆಯಿಸಿದ ತಮ್ಮ ಕಾರ್ಯಕೌಶಲ್ಯಗಳನ್ನು ಹೇಳಿ ಮತ್ತೆ ಆರಂಭಿಸಿದ,

"ವೆಂಕಟರತ್ನಂರವರ ಆಸ್ತಿಯು ತನಗೆ ಸೇರಿಹೋಯಿಂದು ತಿಳಿದು ಅದರ ಸಂಗಡ ಇನ್ನೂ ಸೇರಿಸಲು ತನ್ನ ಮದುವೆಯ ಸವಾಲನ್ನು ಹಾಕಿದ. ಆ ಸವಾಲಿಗೆ ಇಲ್ಲಿನವರಾರೂ ಒಪ್ಪಲಿಲ್ಲ. ವಿಲಾಸನಗರದ ಶ್ರೀಮಂತ ಗೋವಿಂದರಾಜುರವರು ಒಪ್ಪಿದರು. ಅಮೇರಿಕಾಕ್ಕೆ ಹೋಗಿರುವ ಕೇಶವನು ಬಂದನಂತರ ವಿವಾಹವೆಂದು ತೀರ್ಮಾನವಾಯಿತು. ಅನಂತರ ಈತನು ಭೂತಾಕಾರ ವೇಷದಿಂದ ವರದರಾಜನ ಮನೆಗೆ ಹೋಗಿ ಆತನಿಗೆ ಹೆದರಿಸಿದ. ಆ ರೀತಿ ಮಾಡಲು ಕಾರಣವೇನೆಂದರೆ: ನಮ್ಮ ಗಮನವು ಒಂದೇ ಕಡೆ ಇರದೆ ಚಿತ್ತಚಂಚಲವಾಗಬೇಕೆಂಬ ಅಭಿಪ್ರಾಯದಿಂದ. ಆ ಮಧ್ಯೆ ನನಗೊಂದು ಕಾಗದವನ್ನು ಬರೆದು ಬೆದರಿಸಿದ. ಇಷ್ಟು ಕಾರ್ಯವೂ ಸರೋಜಳ ಪ್ರಣಯ ಪುರುಷನದಿರಬಹುದೆಂದು ಊಹಿಸಿ ನಾವು ಅವಳ ಮೇಲೆ ಕಣ್ಣಿಟ್ಟೆವು. ಆಕೆಯ ಪ್ರಣಯ ಕಥೆಯು ಬಹು ವಿಚಿತ್ರವಾಗಿದ್ದು ನಾವು ಆಶ್ಚರ್ಯಗೊಳ್ಳುವಂತಾಯಿತು."

—ಎಂದು ಹೇಳಿದ ಪುರುಷೋತ್ತಮನು, ವರದರಾಜು–ಸರೋಜಳ ಪ್ರಣಯಕತೆ, ತಾನು ಪತ್ತೇಮಾಡಿ ಹಿಡಿದ ಬಗೆ, ಮುಂದೆ ನಡೆದ ವಿವಾಹವನ್ನೂ ಹೇಳಿ ಮುಗಿಸಿದ.

ಪುರುಷೋತ್ತಮನ ಕಾರ್ಯಕೌಶಲ್ಯತೆಗೆ ಬೆರಗಾಗಿ ತಲೆದೂಗದವರೇ ಅಲ್ಲಿರಲಿಲ್ಲ. ಆತನ ಯುಕ್ತಿ ಚತುರತಗೆ ರಾಜಗೋಪಾಲನೂ ಆಶ್ಚರ್ಯ ಪಡುವಂತಾದನು.

“ರಾಜಗೋಪಾಲ ಹೆಸರಿನ ಈ ದರೋಡೆಕೋರನು ಸೌದಾಮಿನಿಯನ್ನು
ವಿವಾಹವಾದ ವಿಷಯವು ನಿಮಗೆಲ್ಲಾ ತಿಳಿದೇ ಇದೆ. ವಿವಾಹವಾದ ಹಲವು
ತಿಂಗಳನಂತರ ಕೇಶವನನ್ನು ಇವನ ಕಡೆಯವರು ಇವನಿಂದ ಪ್ರೇರೇಪಿತರಾಗಿ
ಕೊಲೆ ಮಾಡಿದರು. ಗೋವಿಂದರಾಜುರವರಿಗೆ ಇರುವವನೊಬ್ಬನೇ ಗಂಡು
ಮಗ. ಅವನು ಕೊಲೆಯಾದರೆ ಅವರ ಆಸ್ತಿಯೆಲ್ಲಾ ತನಗೆ ಸೇರುವುದೆಂಬ
ಅಭಿಪ್ರಾಯದ ಮೇಲೆ ಆತನನು ಕೊಲೆ ಮಾಡಿಸಿರುವನು. ಆತನು ಕೊಲೆ
ಯಾದುದನ್ನು ಕೇಳಿ ಸೋಜಿಗನಾದ ನಾನು, ಕೇಶವನು ಕೊಲೆಯಾದ
ಮೇಲೆ ರಾಜಗೋಪಾಲನೂ ಕೊಲೆಯಾಗಬಹುದು. ಆ ಪ್ರಯುಕ್ತ ಈತನಿಗೆ
ಅರಿಯದಂತೆ ಕಾವಲಾಗಿದ್ದು ಕೊಲೆಗಾರನು ಇವನನ್ನು ಕೊಲೆ ಮಾಡುವುದ
ಕ್ಕೆಂದು ಬಂದಾಗ ಅವನನ್ನು ಹಿಡಿಯಬೇಕೆಂದು ನಿರ್ಧಾರ ಮಾಡಿಕೊಂಡು
ಆ ಬಗ್ಗೆ ರಾಮನಾಥ, ಚಂದ್ರನಾಥರೊಡನೆ ಆಲೋಚಿಸಿ ಸೂಕ್ತ ಕ್ರಮ ಕೈ
ಗೊಂಡೆವು.”

—ಎಂದು ಹೇಳಿದ ಪುರುಷೋತ್ತಮನು ಕದರಪ್ಪನನ್ನು ತನ್ನಂತೆ
ಮಾಡಿ ಕೂಡಿಸಿದ ವಿಷಯವನ್ನೆಲ್ಲಾ ಹೇಳಿದ.

ಪತ್ತೇದಾರರು ನಡೆಯಿಸಿದ ಚತುರೋಪಾಯ ಸಾಹಸಕ್ಕೆ ಸರ್ವರೂ
ನಮ್ಮ ಮನದಲ್ಲಿಯೇ ಮೆಚ್ಚಿಕೊಂಡರು.

“ನಾನು ವೇಷಾಂತರಗಳಿಂದ ಇವನ ರಕ್ಷಣೆಗಾಗಿ ಈತನ ಹಿಂದೆ ಓಡಾಡಿ
ಕೊಂಡಿರಲು ಇವನ ರಹಸ್ಯವೆಲ್ಲಾ ನನಗೆ ತಿಳಿದು ಅತ್ಯಂತ ಆಶ್ಚರ್ಯ
ಗೊಂಡೆನು. ಯಾರ ರಕ್ಷಣೆಗೆಂದು ನಾನು ನಿಯಮಿತನಾದೆನೋ ಅವನೇ
ಕೊಲೆಗಾರನೆಂದರೆ ಆಶ್ಚರ್ಯವಲ್ಲವೇ ? ರಂಗಯ್ಯ ಶೆಟ್ಟರನ್ನು ಕೊಲೆ ಮಾಡಿ
ಸಲು ನಡೆಯಿಸಿದ ಸಂಧಾನಗಳನ್ನೆಲ್ಲಾ ನೋಡಿದೆ. ಇವನ ಸಹಾಯಕ
ರಾರೆಂಬುದನ್ನೆಲ್ಲಾ ನೋಡಿ ತಿಳಿದೆ. ಒಟ್ಟು ಹದಿನಾಲ್ಕು ಜನರು ಇವನಿಗೆ
ಸಹಾಯಕರಾಗಿರುವರು. ಅವರೆಲ್ಲರ ಗುರುತು ಪರಿಚಯಗಳನ್ನು ಮಾಡಿ
ಕೊಂಡು, ಅವರ ನಿವಾಸಗಳನ್ನು ನೋಡಿ ತಿಳಿದೆ. ರಂಗಯ್ಯಶೆಟ್ಟರು ಕೊಲೆ
ಯಾಗುವುದನ್ನು ತಪ್ಪಿಸಬೇಕೆಂದು ಶತಪ್ರಯತ್ನಪಟ್ಟೆ. ಅವರನ್ನು ಉಳಿಸಲು
ಸಾಧ್ಯವಾಗಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಾನು ಈ ಕಪಟಿ
ರಾಜಗೋಪಾಲನ ಹಿಂದೆಯೇ ಇರುವಾಗ ಇವನ ಕಡೆಯವರು ಅವರನ್ನು

ಕೊಲೆ ಮಾಡಿದರು. ನಾನು ಚಂದ್ರನಾಥ, ರಾಮನಾಥರಿಗೆ ಎಚ್ಚರಿಕೆ ಕೊಡಲು ಸಾಧ್ಯವಾಗದೆ ಹೋಯಿತು. ಆ ಶೆಟ್ಟರ ಬಳಿ ಕೆಲಸಕ್ಕಿರುವ ಜವಾನನೂ ಇವನ ಗುಂಪಿಗೆ ಸೇರಿದವನಾಗಿರುವನು. ಅವನೇ ಕೊಲೆಗಾರರಿಗೆ ಬಾಗಿಲು ತೆಗೆದು ಒಳಗೆ ಬಿಟ್ಟವನು. ಅವನ ಮತ್ತು ಇವನ ಸಹಾಯಕರೆಲ್ಲರ ವಿಷಯಗಳನ್ನೆಲ್ಲಾ ತಿಳಿದನಂತರ ಇನ್ನು ತಡ ಮಾಡುವುದು ಅನಾವಶ್ಯಕವೆಂದು ಭಾವಿಸಿ ರಾಮನಾಥ, ಚಂದ್ರನಾಥರೊಡನೆ ಗುಪ್ತವಾಗಿ ಸಂಧಾನ ನಡೆಯಿಸಿದೆ. ಈ ದಿನ ಇಲ್ಲಿ ಕೊಲೆಗಾರನ ಅಧ್ಯಕ್ಷತೆಯಲ್ಲಿ ಸಂತಾಪ ಸೂಚಕ ಸಭೆಯು ಏರ್ಪಟ್ಟಿದ್ದನ್ನು ಕೇಳಿ ಸಮಯ ನಿರೀಕ್ಷೆಯಲ್ಲಿದ್ದು ಇವನು ಇಲ್ಲಿಗೆ ಬರುತ್ತಲೇ ಇವನ ಸಹಾಯಕರೆಲ್ಲರನ್ನೂ ಪೋಲೀಸ್ ಸಹಾಯದಿಂದ ದಸ್ತಗಿರಿ ಮಾಡಿ ಇಲ್ಲಿಗೆ ಬಂದೆವು. ಆ ಗಲಾಟೆಯಲ್ಲಿ ತಪ್ಪಿಸಿಕೊಂಡು ಈಗ ಇವನಿಗೆ ಬೆಂಬಲವಾಗಿದ್ದವರೆಲ್ಲರೂ ಸೆರೆಮನೆಯಲ್ಲಿರುವರು. ಇನ್ನು ಇವನನ್ನು ಅಲ್ಲಿಗೆ ಕರೆದೊಯ್ಯಬೇಕಾದ್ದೊಂದೇ ಬಾಕಿ. ಆ ಮಧ್ಯೆ ಚಂದ್ರನಾಥನಂತೆ ಫೋನಿನಲ್ಲಿ ನನ್ನೊಡನೆ ಮಾತನಾಡಿ, ನನ್ನನ್ನು ಮಾರ್ಗಮಧ್ಯದಲ್ಲಿ ಕೊಲ್ಲಲು ಸಂಚುಮಾಡಿದ್ದನು. ಆಗ ದೇವರು ಕಾಪಾಡಿದ."

—ಎಂದು ನುಡಿದ ಪುರುಷೋತ್ತಮನು ಅಂದಿನ ಘಟನೆಯನ್ನೂ ಹೇಳಿದ.

ಪತ್ತೇದಾರರ ಪತ್ತೇದಾರಿಕೆಯ ಪರಿಶೋಧನಾ ಕೌಶಲ್ಯಕ್ಕೆ ಅಲ್ಲಿದ್ದವರೆಲ್ಲರೂ ಬೆರಗಾದರು.

ಬಳಿಕ ಪುರುಷೋತ್ತಮನು—

"ಮೋಹನ್‌ಸಿಂಗ್, ನಾನು ಸಂಗ್ರಹಿಸಿರುವ ವಿಷಯಗಳನ್ನು ಸತ್ಯವೆಂದು ಒಪ್ಪಿಕೊಳ್ಳುವೆಯಾ ?" ಎಂದು ಕೊಲೆಗಾರನಿಗೆ ಕೇಳಿದ.

ಮೋಹನ್‌ಸಿಂಗನು ಕುಳಿತಹಾಗೆಯೇ—

"ನೀನು ಸಂಗ್ರಹಿಸಿದ ವಿಷಯವೆಲ್ಲಾ ಸತ್ಯವೆಂದು ಒಪ್ಪಿಕೊಳ್ಳುವೆನು." ಎಂದು ಗಂಭೀರಭಾವದಿಂದ ಹೇಳಿದ.

"ನೀನು ಫೋನ್ ಮಾಡಿದಾಗ ನಾನೇ ಹೊರಟದ್ದರೆ ಏನು ಮಾಡುತ್ತಿದ್ದೆ ?"

"ಮಾರ್ಗಮಧ್ಯದಲ್ಲಿ ಕೊಲ್ಲುತ್ತಿದ್ದೆ."

"ನೀನು ನಮ್ಮನ್ನು ಕೊಲ್ಲುವುದಕ್ಕಾಗಿ ಹುಟ್ಟಿಕೊಂಡಿರುವೆಯಲ್ಲವೇ? ನಿನ್ನನ್ನು ಹಿಡಿಯಲು ನನ್ನಂತವರು ಎಷ್ಟು ಜನರು ಬೇಕು? ನಿನ್ನನ್ನು ಹಿಡಿಯಲು ಇಂಗ್ಲೇಂಡ್‌ದೇಶದ ಪತ್ತೇದಾರರೇ ಆಗಬೇಕಲ್ಲವೇ?"

"ಪುರುಷೋತ್ತಮಾ! ನಿನ್ನ ವಿನಃ ಈ ಭೂಮಂಡಲದಲ್ಲಿರುವ ಯಾವ ಪತ್ತೇದಾರನಿಂದಲೂ ಹಿಡಿಯಲು ಸಾಧ್ಯವಾಗುತ್ತಿರಲಿಲ್ಲವೆಂದು ಘಂಟಾಘೋಷವಾಗಿ ಹೇಳುವೆನು. ನೀನಾಗುವ ಹೊತ್ತಿಗೆ ನನ್ನನ್ನು ಬಹು ಚಮತ್ಕಾರ ಬುದ್ಧಿಯನ್ನುಪಯೋಗಿಸಿ ಹಿಡಿದಿರುವೆ. ನಿನ್ನ ಯುಕ್ತಿ ಕೌಶಲ್ಯವನ್ನು ಎಷ್ಟು ಹೊಗಳಿದರೂ ಅಲ್ಪವೇ. ಇನ್ನೂ ಹಲವಾರು ಕಾರ್ಯಗಳನ್ನು ಮಾಡಿ ಮುಗಿಸಬೇಕಿತ್ತು. ಎಲ್ಲಾ ನಿನ್ನ ದೆಶೆಯಿಂದ ಮಣ್ಣುಪಾಲಾಯಿತು"

"ಈಗ ಹೇಗೂ ಸೆರೆ ಸಿಕ್ಕಿರುವೆ. ನಿನಗೆ ಮರಣದಂಡನೆ, ನಿನ್ನವರಿಗೆ ಹತ್ತಾರು ವರ್ಷಗಳ ಶಿಕ್ಷೆಯು ತಪ್ಪದು. ನಿನಗೆ ಬಲವಾದ ಕಾವಲಿರುವುದಲ್ಲದೆ ತಪ್ಪಿಸಿಕೊಳ್ಳಲೂ ಸಾಧ್ಯವಾಗದು. ಆದ್ದರಿಂದ ಮುಂದಿನ ಕಾರ್ಯವೇನೂ ನಡೆಯದು. ಅದನ್ನು ಮನದಲ್ಲಿಟ್ಟುಕೊಳ್ಳುವುದೂ ಸರಿಯಲ್ಲ. ಮುಂದೇನು ಮಾಡಬೇಕೆಂದಿದ್ದೆ, ಮುಚ್ಚುಮರೆಯಿಲ್ಲದೆ ಹೇಳು."

"ನೀನು ಹೇಳುವುದು ವಾಸ್ತವ್ಯವೇ. ನನ್ನ ಸಾಹಸವನ್ನು ಈ ಸಮಯದಲ್ಲಲ್ಲದೆ ಬೇರೆ ಯಾವಾಗ ಹೇಳಲಿ? ನನಗೆ ಹೆಣ್ಣು ಕೊಟ್ಟ ಮಾವನು ಆಸ್ತಿಯನ್ನು ನನ್ನ ಹೆಸರಿಗೆ ಬರೆದನಂತರ ಆ ಸತಿಪತಿಯರನ್ನೂ ಮತ್ತು ಸರಸಳನ್ನೂ ವಿಷಪ್ರಾಶನದಿಂದ ಸಾಯಿಸುತ್ತಿದ್ದೆ. ಬಳಿಕ ನನ್ನ ಕೈ ಹಿಡಿದ ಸತಿ, ಅವಳನ್ನು ಸಾಯಿಸಿ, ಹಿಂದಿನಂತೆ ಸವಾಲು ಹಾಕಿ ಬೇರೊಂದು ವಿವಾಹವಾಗುತ್ತಿದ್ದೆ. ಅಲ್ಲಿಗೆ ಹತ್ತಾರು ಲಕ್ಷ ರೂಪಾಯಿಗಳ ಆಸ್ತಿಯು ನನ್ನ ಸ್ವಾಧೀನವಾಗುತ್ತಿತ್ತು. ಆಮೇಲೆ ಈ ವೆಂಕಟರತ್ನಂ ಮತ್ತು ಇವರ ಸತಿಗೆ ಪರಲೋಕಯಾತ್ರೆಯ ಚೀಟಿ ಕೊಟ್ಟು ಕಳುಹಿಸುತ್ತಿದ್ದೆ. ತದನಂತರ ನನ್ನವರಿಗೆ ತೃಪ್ತಿಯಾಗುವಂತೆ ಹಣವನ್ನು ಕೊಟ್ಟು, ಬಳಿಕ ಇಂಗ್ಲೇಂಡಿಗೋ, ಅಮೇರಿಕಾಕ್ಕೋ ಹೋಗಿ ಅಲ್ಲಿ ನೆಲೆಯಾಗುತ್ತಿದೆ. ನನ್ನ ಆಸೆಯೆಲ್ಲಾ ಅರ್ಧದಲ್ಲಿಯೇ ಉಳಿಯಿತು."

ಮೋಹನ್‌ಸಿಂಗನು ನಡೆಯಿಸಬೇಕೆಂದಿದ್ದ ಕಾರ್ಯವನ್ನು ಕೇಳಿ ಸರ್ವರೂ ಬೆರಗಾಗಿ, ಈತನು ಪಿಶಾಚಿಕುಲದ ಮಾನವನೆಂದುಕೊಂಡರು.

"ರಾಜಗೋಪಾಲನ ಶವದ ಮುಖವನ್ನು ವಿರೂಪಗೊಳಿಸಿ ನನ್ನಲ್ಲಿಗೆ ಕಳುಹಿಸಿದ್ದೇಕೆ?"

—ಎಂದು ಪ್ರಶ್ನಿಸಿದ ಪುರುಷೋತ್ತಮ.

"ನಾನು ಈ ನಗರಕ್ಕೆ ಬಂದನಂತರ ರಾಜಗೋಪಾಲನ ಪೂರ್ಣ ಪರಿಚಯವಿದ್ದವರು ನನ್ನನ್ನು ನೋಡಿ ಸಂದೇಹಗೊಳ್ಳಬಹುದು. ಅವರು ಆ ವಿಷಯವನ್ನು ಮನದಲ್ಲಿಟ್ಟುಕೊಳ್ಳದೆ ತಮ್ಮ ಸ್ನೇಹಿತರ ಸಂಗಡ ಹೇಳಬಹುದು. ವಿಷಯವು ಒಬ್ಬರಿಂದೊಬ್ಬರಿಗೆ ಹರಡಿ ನಿನ್ನ ಕಿವಿಗೆ ಬಿದ್ದರೆ, ನನ್ನ ಶೋಧನೆಗೆ ತೊಡಗಿ, ಹಿಂದಿನ ಇತಿಹಾಸವನ್ನರಿಯಬಹುದು. ಆಗ ನನಗೆ ತೊಂದರೆ ತಪ್ಪದೆಂದು ಯೋಚಿಸಿ, ಆ ರೀತಿ ಮಾಡಿದೆ. ನಿನಗೆ ಕೊಲೆಗಾರನಾರೆಂಬುದನ್ನು ಪತ್ತೇಮಾಡಿ ಹಿಡಿಯಬೇಕೆಂಬುದೊಂದೇ ಒಂದು ದೃಷ್ಟಿಯಿರುವುದಲ್ಲದೆ, ನನ್ನ ಮೇಲೆ ಅಷ್ಟಾಗಿ ಗಮನ ಬೀಳಲಾರದೆಂದು ಭಾವಿಸಿ, ಶವವನ್ನು ಪಾರ್ಸಲ್ ಮೂಲಕ ಕಳುಹಿಸಬೇಕಾಯಿತು."

ವೆಂಕಟರತ್ನಂರವರ ಕಣ್ಣುಗಳಿಂದ ನೀರು ಧಾರಾಕಾರವಾಗಿ ಬೀಳುತ್ತಿತ್ತು. ಅವರ ಆಗಿನ ಸ್ಥಿತಿಯನ್ನು ನೋಡಿದವರಿಗಾರಿಗೇ ಆಗಲಿ ಮರುಕ ಬಾರದಿರುತ್ತಿರಲಿಲ್ಲ.

ಕೊಲೆಗಾರನು ಬರೆದಿದ್ದ ಕಾಗದದ ವಿಷಯಗಳನ್ನು ಜ್ಞಾಪಿಸಿಕೊಂಡ ರಾಮನಾಥನು, ಸಿಟ್ಟಿನಿಂದ ಅವನ ಮುಖವನ್ನೇ ನೋಡುತ್ತಾ ಕುಳಿತಿದ್ದನು.

ಆ ವೇಳೆಯಲ್ಲಿ ಪುರುಷೋತ್ತಮನಿಲ್ಲದೇ ಹೋಗಿದ್ದರೆ, ಮೋಹನ್ ಸಿಂಗನ ಅವಸ್ಥೆಯೇನಾಗುತ್ತಿತ್ತೋ ತಿಳಿಯದು.

ಪಶುವೈದ್ಯಶಾಲೆಯ ಸುತ್ತಲೂ ಗುಪ್ತ ಪೋಲೀಸ್‌ದಳವು ಶಸ್ತ್ರಸಜ್ಜಿತರಾಗಿ ಕಾವಲಿರುವರು.

ಚಂದ್ರನಾಥನು ಅವರಲ್ಲಿ ಇಬ್ಬರನ್ನು ಕಳುಹಿಸಿ ಜೀಪನ್ನು ತರುವಂತೆ ಹೇಳಿದ.

ಪುರುಷೋತ್ತಮನು ಮೋಹನ್‌ಸಿಂಗನು ಬರೆದಿದ್ದ ಒಂದೊಂದು ವಿಷಯವನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿ ಆನಾಕಿಸಲು, ಕೊಲೆಗಾರನು ಅದಕ್ಕೆ ಪ್ರತಿಮಾತನಾಡದೆ ಗಂಭೀರಭಾವದಿಂದಲೇ ಕುಳಿತ.

ಸಂತಾಪಸೂಚಕ ಸಭೆಗೆ ಹಾಜರಾಗಿದ್ದವರು ಒಬ್ಬೊಬ್ಬರಾಗಿ ಹಿಂದಿರು ಗಿದರು.

ಕೆಲಹೊತ್ತಿನಲ್ಲಿಯೇ ಪೋಲೀಸ್ ಜೀಪ್ ಬರಲು ಮೋಹನ್‌ಸಿಂಗನನ್ನು ಆದರಲ್ಲಿ ಕೂರಿಸಿಕೊಂಡು ಪೋಲೀಸ್‌ಠಾಣೆಗೆ ಹೊರಟರು.

ತಮ್ಮ ದೇಹದ ಮೇಲೆ ಪ್ರಜ್ಞೆಯಿಲ್ಲದವರಂತೆ ಕುಳಿತಿದ್ದ ವೆಂಕಟರತ್ನಂ ರವರು ಭಾರವಾದ ಮನಸ್ಸಿನಿಂದ ತಮ್ಮ ಮನೆಗೆ ಹಿಂದಿರುಗಿದರು.

೨೧

ಅಪ್ರತಿಮ ಚೋರಾಗ್ರಗಣ್ಯನಾದ ಮೋಹನ್‌ಸಿಂಗ್‌ನನ್ನು ಪ್ರಖ್ಯಾತ ಪತ್ತೇದಾರನಾದ ಪುರುಷೋತ್ತಮನು ದಸ್ತಗಿರಿ ಮಾಡಿದ ವಿಷಯವು ಒಂದು ಘಂಟೆಯೊಳಗಾಗಿ ನಗರನಿವಾಸಿಗಳಿಗೆಲ್ಲಾ ತಿಳಿದು ಪ್ರತಿಯೊಬ್ಬರೂ ವಿಸ್ಮಯ ಚಕಿತರಾದರು.

ವರದರಾಜು, ಸರೋಜ, ಅನ್ನದಾನಪ್ಪ ಮತ್ತು ಇನ್ನಿತರರು ದಿಗ್ಭ್ರಾಂತರಾದರು.

ತಮ್ಮ ಮಗಳಿಗೆ ರಾಜಗೋಪಾಲನು ತಪ್ಪಿ, ವರದರಾಜನು ಪತಿಯಾಗಲು ತಾಯಿತದ ಸಾಮರ್ಥ್ಯವೇ ಕಾರಣವೆಂದು ಅನ್ನದಾನಪ್ಪನವರು ಭಾವಿಸಿದರು.

ಸರೋಜಳು ತಂದೆಯೊಡನೆ--

"ಅಪ್ಪಾ! ಎಂತಹವನನ್ನು ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದಿದ್ದೆ. ಈಗ ನೋಡಿದಿರಾ? ಒಂದು ವೇಳೆ ಮದುವೆಯಾಗಿದ್ದರೆ ನನ್ನ ಅವಸ್ಥೆಯೇನಾಗುತ್ತಿತ್ತು?" ಎಂದು ಕೇಳಿದಳು.

"ನಿನಗೆ ಆ ವಿಷಯವು ತಿಳಿಯದು. ವಿರಾಮವಿದ್ದಾಗ ಹೇಳುವೆನು. ಈಗ ಸುಮ್ಮನಿರು."

--ಎಂದು ಉತ್ತರವಿತ್ತ ಅನ್ನದಾನಪ್ಪನವರು ಮಗಳ ಬಾಯಿ ಮುಚ್ಚಿಸಿದರು

ಟೆಲಿಗ್ರಾಂ ಮೂಲಕ ವರ್ತಮಾನ ತಿಳಿದ ಗೋವಿಂದರಾಜುರವರು ಪತ್ನೀಸಮೇತ ಕಾಂಚೀನಗರಕ್ಕೆ ಬಂದು ವೆಂಕಟರತ್ನಂರವರಿಂದ ವಿಷಯವನ್ನೆಲ್ಲಾ ಕೇಳಿ ತಿಳಿದು ತಮ್ಮ ದುರದೃಷ್ಟವನ್ನು ಹಳಿದುಕೊಂಡರು.

ಇನ್ನು ಮುಂದೆ ಯಾವ ಸುಖಕ್ಕಾಗಿ ಬಾಳಿ ಬದುಕಬೇಕೆಂದು ಬೇಸರವುಳ್ಳವರಾಗಿ ತಮ್ಮ ವಿಶಿಷ್ಟ ಆಸ್ತಿಯನ್ನೆಲ್ಲಾ ಅನಾಥಾಶ್ರಮಕ್ಕೆ ಬರೆದು ವೆಂಕಟರತ್ನಂ ಮತ್ತು ಗೋವಿಂದರಾಜುರವರಿಬ್ಬರೂ ತಮ್ಮ ತಮ್ಮ ಪತ್ನಿಯರ ಸಮೇತ ಕಾಶಿಗೆ ಹೊರಟುಹೋದರು.

ಗೋವಿಂದರಾಜುರವರು ತಮ್ಮ ಸೊಸೆ ಮತ್ತು ಮಗಳಿಗೆ ಮುಂದಿನ ಜೀವನೋಪಾಯಕ್ಕೆ ಬೇಕಾದ ಏರ್ಪಾಡು ಮಾಡದಿರಲಿಲ್ಲ.

ವರದರಾಜನಿಗಾಗಿ ದೇವನಗರದಿಂದ ಬಂದಿದ್ದ ವಸಂತಳ ವಿವಾಹವು ಹರಿದಾಸನೊಡನೆ ಅತ್ಯಂತ ವೈಭವದಿಂದಲೇ ನಡೆಯಿತು. ಅವರ ವಿವಾಹವು ನಡೆಯಲು ಹೆಚ್ಚಿನ ಕಾರ್ಯಶ್ರದ್ಧೆ ವಹಿಸಿ ಮುಂದಾಳಾಗಿ ನಿಂತವರು ವರದರಾಜು ಮತ್ತು ಸರೋಜ.

ಆ ವಿವಾಹಕ್ಕೆ ಪತ್ತೇದಾರರಾದಿಯಾಗಿ ಇತರ ಮಹನೀಯರು ಆಗಮಿಸಿ ವಧೂವರರಿಗೆ ಮನಃಪೂರ್ವಕವಾಗಿ ಆಶೀರ್ವದಿಸಿದರು.

ದರೋಡೆಕೋರ ಮತ್ತು ಅವರ ಸಹಾಯಕರ ವಿಚಾರಣೆಯು ನಡೆದು, ಆತನಿಗೆ ಮರಣದಂಡನೆಯು ಶಿಕ್ಷೆಯಾಗಿ, ಉಳಿದವರು ಅವರವರ ತಪ್ಪಿತಕ್ಕನುಸಾರವಾಗಿ ಶಿಕ್ಷೆಗೆ ಗುರಿಯಾದರು.

ವಿಷಯವು ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಯಿತಲ್ಲದೆ, ಯಾರ ಬಾಯಲ್ಲಿ ನೋಡಿದರೂ ಆ ವಿಷಯವೇ ತುಂಬಿಹೋಯಿತು.

ಅಪರಾಧಿಗೆ ಯಾವ ದಿನ ಮರಣದಂಡನೆಯೆಂದು ನ್ಯಾಯಾಧೀಶರು ತೀರ್ಪಿತ್ತಿದ್ದರೋ ಆ ದಿನ ಬೆಳಗಿನ ಝಾವ ಐದು ಘಂಟೆಯ ವೇಳೆಗೆ ಗಲ್ಲಿನ ಮರಕ್ಕೆ ಹಾಕಿ ಪ್ರಾಣವನ್ನು ಕಳೆದರಲ್ಲದೆ, ಸಂಬಂಧಪಟ್ಟವರು ಅಂತ್ಯಸಂಸ್ಕಾರವನ್ನೂ ಮಾಡಿ ಮುಗಿಸಿದರು.

ಚಿಕ್ಕ ಪ್ರಾಯದಲ್ಲಿಯೇ ವಿಧವೆಯರಾಗಿ, ಸಂಸಾರಸುಖವಿಲ್ಲದೆ ಜೀವನದಲ್ಲಿ ಜಿಗುಪ್ಸೆ ಹೊಂದಿದ ಸರಸ, ಸೌದಾಮಿನಿಯವರು ಕಾಗದಗಳನ್ನು ಬರೆದಿಟ್ಟು ಒಂದೇ ಸಾರಿಗೆ ವಿಷ ಕುಡಿದು ಈ ಲೋಕ ವ್ಯಾಪಾರವನ್ನು ಮರೆತರು.

ಅವರಿಬ್ಬರ ಅಂತ್ಯಕ್ರಿಯೆಗಳನ್ನು ವರದರಾಜನೇ ಮಾಡಿ ಮುಗಿಸಿದ.

ಎರಡು ಶ್ರೀಮಂತ ಕುಟುಂಬಗಳ ಸಂಪೂರ್ಣ ನಾಶಕ್ಕೆ ಕಾರಣನಾದ ದರೋಡೆಕೋರನ ಇತಿಹಾಸವನ್ನು ಜಾಗ್ರತೆ ಮರೆಯಲು ಯಾರಿಂದಲೂ

ಸಾಧ್ಯವಾಗಲಿಲ್ಲ. ಜ್ಞಾಪಕ ಬಂದಾಗಲೆಲ್ಲಾ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಲೇ ಇದ್ದರು.

ತಾಯಿತವನ್ನು ತಮ್ಮ ಅದೃಷ್ಟ ಪರೀಕ್ಷೆಯ ಯಂತ್ರವೆಂದು ಭಾವಿಸಿ ಅದನ್ನು ಜೋಪಾನವಾಗಿ ಕಾಪಾಡಿಕೊಂಡಿರುವರು.

ವರದರಾಜು, ಸರೋಜ ಮತ್ತು ಮರಿದಾಸ, ವಸಂತರ ಸಂಸಾರ ಚಕ್ರವು ಸುಖಮಯವಾಗಿ ಸಾಗುತ್ತಿದೆಯಲ್ಲದೆ, ಒಬ್ಬರಿಗೊಬ್ಬರು ಅನನ್ಯ ಪ್ರೇಮದಿಂದ ಹಿಂದಿನ ಘಟನಾವಳಿಗಳನ್ನೆಲ್ಲಾ ಮರೆತು ಆನಂದಮಯರಾಗಿ ಕಾಲಹರಣ ಮಾಡಿಕೊಂಡಿರುವರು.

'ಹಣವಿದ್ದವನನ್ನು ಮದುವೆಯಾದರೂ ಋಣವಿದ್ದಷ್ಟೇ ದಕ್ಕುವುದು.'

ಸಂಪೂರ್ಣಂ